ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಘೇಂಡಾಮೃಗ ಸಂರಕ್ಷಣೆಗೆ 'ಭಾರತ ಮಾದರಿ'



ಅನುಭವ ಮಂಟಪ
ಒಳ ಮೀಸಲಾತಿ 'ದತ್ತಾಂಶ'ಕ್ಕೆ ದಾರಿ ಯಾವುದು?

'ಕಲ್ಯಾಣ ಕರ್ನಾಟಕದಲ್ಲಿ ಶೀಘ್ರ 5,000 ಶಿಕ್ಷಕರ ನೇಮಕಾತಿ' 5

'ಯುಪಿಎಸ್‌ಸಿ ಮಾದರಿ ಪಾಲಿಸಿ' 2B

ಎಫ್‌ಐಆರ್ ದಾಖಲಿಸಲು ಆದೇಶ • ಮೈಸೂರು 'ಲೋಕಾ' ಎಸ್‌ಪಿಗೆ ಹೊಣೆ

ಸಿ.ಎಂ.ಗೆ ತನಿಖೆಯ ಬಿಸಿ


ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆಯ ಪ್ರಕ್ರಿಯೆಯಲ್ಲಿ ಮುಖ್ಯಮಂತ್ರಿ ಪ್ರಭಾವವಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಹಾಗೂ ಅವರ ಪತ್ನಿ ಪಾರ್ವತಿ ಸೇರಿ ಐವರು ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಿ' ಎಂದು ಜನ ಪ್ರತಿನಿಧಿಗಳ ವಿಶೇಷ ನ್ಯಾಯಾಲಯ, ಮೈಸೂರು ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿಗೆ ಆದೇಶಿಸಿದೆ.

ಈ ಸಂಬಂಧ ಮೈಸೂರಿನ ಸ್ನೇಹಮಯಿ ಕೃಷ್ಣ ದಾಖಲಿಸಿದ್ದ ಖಾಸಗಿ ದೂರಿನ ವಿಚಾರಣೆ ಆಲಿಸಿ ಕಾಯ್ದಿರಿಸಿದ್ದ ಆದೇಶವನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಬುಧವಾರ ಮಧ್ಯಾಹ್ನ ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮೂಲಕ ದಾಖಲಿಸಿದರು.

'ಪ್ರಕರಣಕ್ಕೆ ಸಂಬಂಧಿಸಿದಂತೆ ಅಪರಾಧ ದಂಡ ಪ್ರಕ್ರಿಯಾ ಸಂಹಿತೆ-1973ರ (ಸಿಆರ್‌ಪಿಸಿ) ಕಲಂ 156 (3)ರ ಅಡಿಯಲ್ಲಿ ಎಫ್‌ಐಆರ್ ದಾಖಲಿಸಬೇಕು' ಎಂದು ಸೂಚಿಸಿದರು.

6ನೇ ಪುಟ ನೋಡಿ



ಮುಂದಿನ ಪ್ರಕ್ರಿಯೆ ಏನು?

'ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಎಫ್‌ಐಆರ್ ದಾಖಲಿಸುವ ಮುನ್ನ ಪೊಲೀಸರು ಪ್ರಕರಣದ ಪ್ರಾಥಮಿಕ ವಿಚಾರಣೆ ನಡೆಸಬೇಕಾಗುತ್ತದೆ. ಆದರೆ, ಈ ಪ್ರಕರಣದಲ್ಲಿ ಪ್ರಾಥಮಿಕ ವಿಚಾರಣೆಯ ಪ್ರಮೇಯವೇ ಬರುವುದಿಲ್ಲ. ಯಾಕೆಂದರೆ ನ್ಯಾಯಾಲಯವೇ ಎಫ್‌ಐಆರ್ ದಾಖಲಿಸಿ ಎಂದಿರುವುದರಿಂದ ಎಫ್‌ಐಆರ್ ಮಾಡಲೇಬೇಕಾಗುತ್ತದೆ. ಈ ಸಮಯದಲ್ಲಿ ಸಾಕ್ಷ್ಯಾಧಾರ ಕಂಡುಬಂದರೆ ಆರೋಪಿಗಳನ್ನು ಬಂಧಿಸಬಹುದಾಗಿದೆ. ಈ ವೇಳೆ ಆರೋಪಿಗಳು ನಿರೀಕ್ಷಣಾ ಜಾಮೀನನ್ನೂ ಕೋರಬಹುದು' ಎಂದು ಹೈಕೋರ್ಟ್‌ನ ಹಿರಿಯ ಕ್ರಿಮಿನಲ್ ವಕೀಲ ಸಿ.ಎಚ್.ಹನುಮಂತರಾಯ ಅಭಿಪ್ರಾಯ ಪಡುತ್ತಾರೆ.

ಪ್ರಕರಣದ ಆರೋಪಿಗಳು • ಎ–1 ಸಿದ್ದರಾಮಯ್ಯ • ಎ–2 ಬಿ.ಎಂ.ಪಾರ್ವತಿ • ಎ–3 ಬಿ.ಎಂ. ಮಲ್ಲಿಕಾರ್ಜುನ ಸ್ವಾಮಿ • ಎ–4 ಜೆ.ದೇವರಾಜು • ಎ–5 ಇತರರು

ತನಿಖೆಗೆ ಹೆದರುವುದಿಲ್ಲ: ಸಿದ್ದರಾಮಯ್ಯ

'ನಾನು ಯಾವುದೇ ತನಿಖೆಯನ್ನು ಎದುರಿಸಲು ತಯಾರಿದ್ದೇನೆ. ತನಿಖೆಗೆ ಹೆದರುವುದಿಲ್ಲ. ಕಾನೂನು ರೀತಿ ಹೋರಾಟ ನಡೆಸುತ್ತೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಎಫ್‌ಐಆರ್ ದಾಖಲಿಸಬಹುದು' ಎಂದು ಆದೇಶ ನೀಡಿದ ಬೆನ್ನಲ್ಲೇ ಪ್ರತಿಕ್ರಿಯೆ ನೀಡಿದ ಅವರು, 'ಮಂಗಳವಾರ ಹೈಕೋರ್ಟ್ ನೀಡಿದ ಆದೇಶದ ಅನ್ವಯ 17 ಎ ಪ್ರಕಾರ ತನಿಖೆ ಮಾಡಲು ಅನುಮತಿ ನೀಡಲಾಗಿದೆ. ಆದೇಶದ ಪ್ರತಿ ನನಗೆ ಸಿಕ್ಕಿಲ್ಲ. ಆದೇಶದ ಪ್ರತಿಯನ್ನು ಪೂರ್ತಿ ಓದಿದ ನಂತರ ಕಾನೂನು ತಜ್ಞರ ಜತೆ ಚರ್ಚಿಸಿ ಗುರುವಾರ ಪ್ರತಿಕ್ರಿಯೆ ನೀಡುತ್ತೇನೆ' ಎಂದರು.

'ಮೈಸೂರು ಲೋಕಾಯುಕ್ತಕ್ಕೆ ಪ್ರಕರಣವನ್ನು ಶಿಫಾರಸು ಮಾಡಲಾಗಿದೆ. ಮೈಸೂರಿನಲ್ಲಿಯೇ ದೂರು ನೀಡಲಾಗಿದ್ದು, ದೂರುದಾರರೂ ಮೈಸೂರಿನವರೇ. ಮುಡಾ ಕೂಡ ಅಲ್ಲಿಯೇ ಇರುವುದರಿಂದ ಮೈಸೂರಿಗೆ ಶಿಫಾರಸು ಮಾಡಿರಬೇಕು ಎಂದು ಭಾವಿಸಿದ್ದೇನೆ' ಎಂದು ಹೇಳಿದರು. 'ಮುಡಾ ಪ್ರಕರಣದ ತನಿಖೆಗೆ ಸರ್ಕಾರ ರಚಿಸಿದ್ದ ನಿವೃತ್ತ ನ್ಯಾಯಮೂರ್ತಿ ಪಿ.ಎನ್.ದೇಸಾಯಿಯವರ ಆಯೋಗದ ತನಿಖೆ ಮುಂದುವರಿಯಲಿದೆಯೇ' ಎಂಬ ಪ್ರಶ್ನೆಗೆ, 'ನ್ಯಾಯಾಂಗ ತನಿಖೆ ಮುಂದುವರಿಯುತ್ತದೆ' ಎಂದು ಹೇಳಿದರು.

ಯಾವ ಕಲಂಗಳ ಅಡಿ ತನಿಖೆ?

ಭಾರತೀಯ ದಂಡ ಸಂಹಿತೆ (ಐಪಿಸಿ)

ಕಲಂ 120ಬಿ - ಕ್ರಿಮಿನಲ್ ಪಿತೂರಿ, ಒಳ ಸಂಚು, ಜೀವಾವಧಿ ಶಿಕ್ಷೆ (ಮೂಲ ಆರೋಪ ಸಾಬೀತಾದರೆ)
ಕಲಂ 166 - ಸರ್ಕಾರಿ ಸೇವಕರಿಂದ ಕಾನೂನು ಉಲ್ಲಂಘನೆ
ಕಲಂ 403 - ಅಪ್ರಾಮಾಣಿಕವಾಗಿ ಆಸ್ತಿಯ ದುರ್ಬಳಕೆ
ಕಲಂ 406 - ಅಪರಾಧಿಕ ನಂಬಿಕೆಯ ದ್ರೋಹಕ್ಕೆ ಶಿಕ್ಷೆ (3 ವರ್ಷ ಜೈಲು ಅಥವಾ ದಂಡ)
ಕಲಂ 420 - ವಂಚನೆ (ಮೋಸದಿಂದ ಲಾಭ ಪಡೆಯುವುದು)
ಕಲಂ 426 - ಕಿಡಿಗೇಡಿತನಕ್ಕೆ ಶಿಕ್ಷೆ (3 ತಿಂಗಳ ಶಿಕ್ಷೆ ಅಥವಾ ದಂಡ)
ಕಲಂ 465 - ಫೋರ್ಜರಿ
ಕಲಂ 468 - ಫೋರ್ಜರಿ ಮಾಡಿದ್ದಕ್ಕೆ ಶಿಕ್ಷೆ (5 ವರ್ಷ ಜೈಲು & ದಂಡ)
ಕಲಂ 340 - ವ್ಯಕ್ತಿಯೊಬ್ಬನನ್ನು ನಿರ್ಬಂಧಿಸುವುದು (ತಡೆಯುವುದು) ಅವನ ಚಟುವಟಿಕೆ ನಿಯಂತ್ರಿಸುವುದು
ಕಲಂ 351 - ಮುಂದುವರಿದರೆ ದಾಳಿ ಮಾಡುವ ಭಯ ಹುಟ್ಟಿಸುವುದು

ಭ್ರಷ್ಟಾಚಾರ ನಿಗ್ರಹ ಕಾಯ್ದೆ

ಪಿಸಿ ಕಾಯ್ದೆ ಕಲಂ 9 - ಲಂಚ ಪಡೆಯುವುದು ಅಥವಾ ಲಂಚ ನೀಡಲು ಶಿಕ್ಷೆ, ವೈಯಕ್ತಿಕ ಪ್ರಭಾವ ಬೀರುವುದು
ಪಿಸಿ ಕಾಯ್ದೆ ಕಲಂ 13 - ಸರ್ಕಾರಿ ನೌಕರನಿಂದ ಅಪರಾಧಿಕ ದುರ್ನಡತೆ,

ಆಸ್ತಿ ಬೇನಾಮಿ ವಹಿವಾಟು ನಿಷೇಧ ಕಾಯ್ದೆ:

ಕಲಂ 53 - ಬೇನಾಮಿ ಆಸ್ತಿ ಗಳಿಕೆ ಮತ್ತು ಅದಕ್ಕೆ ದಂಡ ವಿಧಿಸುವುದು
ಕಲಂ 54 - ಬೇನಾಮಿ ಆಸ್ತಿ ಗಳಿಕೆಗಾಗಿ ಸುಳ್ಳು ಮಾಹಿತಿ ನೀಡುವುದು

ಕರ್ನಾಟಕ ಭೂ ಕಬಳಿಕೆ ನಿಷೇಧ ಕಾಯ್ದೆ

ಕಲಂ 3 - ಅಕ್ರಮವಾಗಿ ಸರ್ಕಾರದ ಭೂಮಿ ಕಬಳಿಕೆ
ಕಲಂ 4 - ಅಕ್ರಮವಾಗಿ ಸರ್ಕಾರಿ ಭೂ ಕಬಳಿಕೆಗೆ ಶಿಕ್ಷೆ

ಜಿಲ್ಲೆಗಳಲ್ಲೂ ಜಾಲ • 25,543 ಪ್ರಕರಣ ದಾಖಲು • 8,882 ಆರೋಪಿಗಳಿಗೆ ಶಿಕ್ಷೆ

ರಾಜ್ಯದಲ್ಲಿ 'ಗಾಂಜಾ' ಘಾಟು ಜೋರು

• ಆದಿತ್ಯ ಕೆ.ಎ.

ಬೆಂಗಳೂರು: ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಗಾಂಜಾ ಘಾಟು ಜೋರಾಗಿದೆ. ಬೆಂಗಳೂರು ನಗರ ಅಲ್ಲದೇ ಇತರೆ ಜಿಲ್ಲಾ ಕೇಂದ್ರಗಳಿಗೂ ಡ್ರಗ್ಸ್ ಪೂರೈಕೆ ಆಗುತ್ತಿದೆ. ವರ್ಷದಿಂದ ವರ್ಷಕ್ಕೆ ಡ್ರಗ್ಸ್ ಮಾರಾಟ, ಪೂರೈಕೆಯ ಜಾಲ ವಿಸ್ತಾರ ಆಗಿರುವುದು ಪೊಲೀಸ್ ಇಲಾಖೆ ಸಂಗ್ರಹಿಸಿರುವ ಮಾಹಿತಿಯಿಂದಲೇ ಗೊತ್ತಾಗಿದೆ.

'5 ವರ್ಷಗಳಲ್ಲಿ ಮಾದಕ ದ್ರವ್ಯ ನಿಗ್ರಹ ಕಾಯ್ದೆಯ ಅಡಿ (ಎನ್‌ಡಿಪಿಎಸ್) ರಾಜ್ಯದಲ್ಲಿ 25,543 ಪ್ರಕರಣಗಳು ದಾಖಲಾಗಿವೆ. ಇದೇ ಅವಧಿಯಲ್ಲಿ ಪತ್ತೆಯಾದ ಡ್ರಗ್ಸ್ ಪೂರೈಕೆ ಪ್ರಕರಣಗಳಲ್ಲಿ 8,882 ಆರೋಪಿಗಳಿಗೆ ಶಿಕ್ಷೆ ಆಗಿದ್ದು 1,036 ಪ್ರಕರಣಗಳು ತನಿಖಾ ಹಂತದಲ್ಲಿವೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬೆಂಗಳೂರು ನಗರದಲ್ಲೇ ಅತಿಹೆಚ್ಚು ಡ್ರಗ್ಸ್ ವಹಿವಾಟು ನಡೆಯುತ್ತಿದ್ದು, ಇಲ್ಲಿ ಎನ್‌ಡಿಪಿಎಸ್ ಕಾಯ್ದೆಯಡಿ 15,114 ಪ್ರಕರಣಗಳು ದಾಖಲಾಗಿವೆ. ನಂತರದ ಸ್ಥಾನದಲ್ಲಿ ಮಂಗಳೂರು ನಗರ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು ಜಿಲ್ಲೆಗಳು ಇವೆ.

'ಚಿತ್ರದುರ್ಗ, ಮೈಸೂರು, ಹಾವೇರಿ, ವಿಜಯಪುರ, ಗದಗ, ಬಾಗಲಕೋಟೆ, ಕಲಬುರಗಿ, ಯಾದಗಿರಿ, ಕೊಪ್ಪಳ, ರಾಯಚೂರು, ವಿಜಯನಗರದಲ್ಲಿ ಕಡಿಮೆ ಪ್ರಕರಣಗಳು ದಾಖಲಾಗಿವೆ. ಈ ಜಿಲ್ಲೆಗಳಲ್ಲಿ ಗ್ರಾಹಕರ ಸಂಖ್ಯೆ ಕಡಿಮೆ ಇರುವ ಕಾರಣಕ್ಕೆ ಡ್ರಗ್ಸ್ ಪೂರೈಕೆಗೆ ಹೊರರಾಜ್ಯಗಳ ಪೆಡ್ಲರ್‌ಗಳು ಆಸಕ್ತಿ ತೋರುತ್ತಿಲ್ಲ. ಆದರೂ, ಆ ಜಿಲ್ಲೆಗಳಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದೇವೆ' ಎಂದು ಪೊಲೀಸರು ಹೇಳಿದರು.

ಡ್ರಗ್ಸ್ ಪೆಡ್ಲರ್‌ಗಳು ಹೊಸ ಮಾರ್ಗಗಳ ಮೂಲ ಡ್ರಗ್ಸ್ ಅನ್ನು ಗ್ರಾಹಕರು, ವಿದ್ಯಾರ್ಥಿಗಳಿಗೆ ಹಾಗೂ ಪಬ್‌ಗಳಿಗೆ ಪೂರೈಸುತ್ತಿದ್ದಾರೆ. ಚಾಕೊಲೇಟ್, ಸೋಪ್, ಬಿಸ್ಕತ್ತು ಮತ್ತಿತರ ವಸ್ತುಗಳ ಬಾಕ್ಸ್‌ಗಳಲ್ಲಿ ಡ್ರಗ್ಸ್ ಬಚ್ಚಿಟ್ಟು ಹೊರ ರಾಜ್ಯಗಳಿಂದ ಕರ್ನಾಟಕದ ಜಿಲ್ಲಾ ಕೇಂದ್ರಗಳಿಗೆ ಡ್ರಗ್ಸ್ ಸಾಗಿಸುತ್ತಾರೆ. ಮೊಬೈಲ್, ದೂರವಾಣಿ, ಇ-ಮೇಲ್, ಆ್ಯಪ್, ಸಾಮಾಜಿಕ ಮಾಧ್ಯಮಗಳ ಜತೆಗೆ 'ಡಾರ್ಕ್‌ನೆಟ್' ಮೂಲಕ ದೊಡ್ಡ ಮೊತ್ತದ ಡ್ರಗ್ಸ್ ದಂಧೆ ನಡೆಯುತ್ತಿದೆ ಎಂದು ತನಿಖಾಧಿಕಾರಿಯೊಬ್ಬರು ಹೇಳಿದರು.

ನೈಸರ್ಗಿಕವಾಗಿ ಬೆಳೆಯುವ ಗಾಂಜಾ, ಅಫೀಮು ಜೊತೆಯಲ್ಲೇ 'ಸಿಂಥೆಟಿಕ್' ಡ್ರಗ್ಸ್ ಸಹ ರಾಜ್ಯದ ಐದು ಜಿಲ್ಲೆಗಳಿಗೆ ಹೆಚ್ಚು ಪೂರೈಕೆ ಆಗುತ್ತಿದೆ.

7ನೇ ಪುಟ ನೋಡಿ



ಪೆಡ್ಲರ್‌ಗಳಿಂದ ಜಪ್ತಿ ಮಾಡಲಾಗಿದ್ದ ವಿವಿಧ ಮಾದರಿಯ ಡ್ರಗ್ಸ್ ಅನ್ನು ದಾಬಸ್ ಪೇಟೆಯ ಕೈಗಾರಿಕಾ ಪ್ರದೇಶದ ತ್ಯಾಜ್ಯ ವಿಲೇವಾರಿ ಘಟಕದಲ್ಲಿ ನಾಶ ಪಡಿಸಲಾಗಿತ್ತು

ಐದು ವರ್ಷಗಳಲ್ಲಿನ ಬಂಧಿತರ ವಿವರ

ವರ್ಷ	ಸ್ಥಳೀಯರು	ವಿದೇಶಿಗರು	ಒಟ್ಟು
2020	5,584	186	5,770
2021	7,664	185	7,849
2022	8,138	129	8,267
2023	8,542	106	8,648
2024 (ಸೆ.17ರ ವರೆಗೆ)	3,943	45	3,988

ಗಾಂಜಾ ಜಪ್ತಿ ವಿವರ

ವರ್ಷ	ಜಪ್ತಿ ಪ್ರಮಾಣ (ಕೆ.ಜಿಗಳಲ್ಲಿ)	ಮೌಲ್ಯ (ಕೋಟಿಗಳಲ್ಲಿ)
2020	11,043	₹23.8
2021	9,233	₹19.9
2022	8,917	₹25.3
2023	10,551	₹57.4
2024 (ಸೆ.17ರ ವರೆಗೆ)	3,135	₹19.9
ಒಟ್ಟು	42,879	₹146.3

ಒಳಪುಟಗಳಲ್ಲಿ

'ಟ್ರಂಪ್ ಮೇಲೆ ಗುಂಡಿನ ದಾಳಿಗೆ ಗುಪ್ತಚರ ಸಂಸ್ಥೆ ವೈಫಲ್ಯ ಕಾರಣ' 12

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಐಐಟಿ ಸೀಟು ವಂಚಿತ ದಲಿತ ಯುವಕನಿಗೆ 'ಸುಪ್ರೀಂ' ನೆರವು



ನವದೆಹಲಿ (ಪಿಟಿಐ): ಗಡುವಿನೊಳಗೆ ₹17,500 ಶುಲ್ಕವನ್ನು ಠೇವಣಿ ಇಡಲು ವಿಫಲ ನಾಗಿದ್ದಕ್ಕೆ ಐಐಟಿ-ಧನಬಾದ್‌ನಲ್ಲಿ ಸೀಟು ಕಳೆದುಕೊಂಡಿರುವ ದಲಿತ ಯುವಕನಿಗೆ ನೆರವು ನೀಡುವುದಾಗಿ ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

'ಸಾಧ್ಯವಿರುವಷ್ಟು ನೆರವು ನೀಡುತ್ತೇವೆ. ಆದರೆ, ಶುಲ್ಕವನ್ನು ಠೇವಣಿ ಇಡುವುದಕ್ಕೆ ಜೂನ್ 24 ಕೊನೆಯ ದಿನವಾಗಿದ್ದಾಗ, ಈ ಹಿಂದಿನ 3 ತಿಂಗಳು ಏನು ಮಾಡುತ್ತಿದ್ದಿರಿ' ಎಂದು ಯುವಕನನ್ನು ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ.

ಅತುಲ್ ಕುಮಾರ್ ಎಂಬುವವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ನ್ಯಾಯಪೀಠ ನಡೆಸಿತು.

ಅತುಲ್ ಕುಮಾರ್ ಅವರ ಬಡ ಕುಟುಂಬ ಉತ್ತರ ಪ್ರದೇಶದ ಮುಜಫ್ಫರ ನಗರ ಜಿಲ್ಲೆಯ ಟಿಟೋರಾ ಗ್ರಾಮದಲ್ಲಿ ನೆಲಸಿದ್ದು, ತಂದೆ ದಿನಗೂಲಿಯಾಗಿದ್ದಾರೆ. ಹಂಚಿಕೆಯಾದ ಸೀಟನ್ನು 'ಬ್ಲಾಕ್' ಮಾಡಲು ಜೂನ್ 24ರ ಒಳಗಾಗಿ ₹17,500 ಶುಲ್ಕವನ್ನು ಠೇವಣಿಯಾಗಿ ಇಡಲು ಕುಮಾರ್ ಪಾಲಕರು ವಿಫಲರಾಗಿದ್ದರು.

ಅತುಲ್ ಕುಮಾರ್ ಅವರ ಪೋಷಕರು ಸೀಟು ಉಳಿಸಿಕೊಳ್ಳಲು ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗ, ಜಾರ್ಖಂಡ್ ಕಾನೂನು ಸೇವಾ ಪ್ರಾಧಿಕಾರ ಮತ್ತು ಮದ್ರಾಸ್ ಹೈಕೋರ್ಟ್ ಸಂಪರ್ಕಿಸಿದ್ದರು.

ಪರೀಕ್ಷೆ ನಡೆಸಿದ್ದು ಐಐಟಿ ಮದ್ರಾಸ್. ಹೀಗಾಗಿ, ನೆರವು ಕೋರಿ ಮದ್ರಾಸ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸುವಂತೆ ಪ್ರಾಧಿಕಾರ ತಿಳಿಸಿತ್ತು. ಅರ್ಜಿ ವಿಚಾರಣೆ ನಡೆಸಿದ್ದ ಮದ್ರಾಸ್ ಹೈಕೋರ್ಟ್, ಈ ವಿಚಾರವಾಗಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವಂತೆ ಸೂಚಿಸಿತ್ತು.

ಅರ್ಜಿ ವಿಚಾರಣೆ ವೇಳೆ, 'ಅತುಲ್ ಕುಮಾರ್, ಎರಡನೇ ಮತ್ತು ಕೊನೆಯ ಪ್ರಯತ್ನದಲ್ಲಿ ಜೆಇಇ-ಅಡ್ವಾನ್ಸ್ಡ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. ಸುಪ್ರೀಂ ಕೋರ್ಟ್ ಅವರ ನೆರವಿಗೆ ಬರದಿದ್ದಲ್ಲಿ, ಈ ಪರೀಕ್ಷೆ ತೆಗೆದುಕೊಳ್ಳಲು ಮತ್ತೊಂದು ಅವಕಾಶ ಅವರಿಗೆ ಸಿಗುವುದಿಲ್ಲ' ಎಂದು ಪೀಠಕ್ಕೆ ಅತುಲ್ ಕುಮಾರ್ ಪರ ವಕೀಲರು ತಿಳಿಸಿದರು.

'ಐಐಟಿ-ಧನಬಾದ್‌ನಲ್ಲಿ ಸೀಟು ಹಂಚಿಕೆಯಾಗಿರುವ ಕುರಿತು ತಿಳಿಸಿದ ನಾಲ್ಕು ದಿನಗಳ ಒಳಗಾಗಿ, ಅಂದರೆ ಜೂನ್ 24ರೊಳಗೆ ₹17,500 ಶುಲ್ಕ ಪಾವತಿಸುವುದು ಕಷ್ಟದ ಕೆಲಸವಾಗಿತ್ತು' ಎಂದು ಯುವಕನ ಹಣಕಾಸು ಪರಿಸ್ಥಿತಿಯ ಬಗ್ಗೆ ವಕೀಲರು ಪೀಠಕ್ಕೆ ತಿಳಿಸಿದರು.

ವಾದಗಳನ್ನು ಆಲಿಸಿದ ನ್ಯಾಯಪೀಠ, ಐಐಟಿ ಪ್ರವೇಶ ಪರೀಕ್ಷೆ ನಡೆಸುವ ಐಐಟಿ ಮದ್ರಾಸ್ ಹಾಗೂ ಜಂಟಿ ಸೀಟು ಹಂಚಿಕೆ ಪ್ರಾಧಿಕಾರಕ್ಕೆ ನೋಟಿಸ್‌ಗಳನ್ನು ಜಾರಿ ಮಾಡಿತು.

ಬ್ಯಾಟರಾಯನಪುರದ 'ಹಿರಿಯ ಪ್ರಾಥಮಿಕ ಶಾಲೆ' ಇಂದು ಲೋಕಾರ್ಪಣೆ

ಹೈಟೆಕ್ ಆದ ಸರ್ಕಾರಿ ಶಾಲೆ

• ಬಾಲಕೃಷ್ಣ ಪಿ.ಎಚ್.



ಬ್ಯಾಟರಾಯನಪುರದ 'ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ'ಯ ಕಟ್ಟಡ — ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಬೆಂಗಳೂರು: ಎಂಟು ದಶಕಗಳ ಹಿಂದೆ ಸ್ಥಾಪನೆಯಾದ ಬ್ಯಾಟರಾಯನಪುರದ 'ನಮ್ಮೂರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯು' ಕಾರ್ಪೊರೇಟ್‌ಗಳನ್ನು ಮೀರಿಸುವಂತೆ ಹೈಟೆಕ್ ಆಗಿ ನಿರ್ಮಾಣಗೊಂಡಿದೆ. ದಾನಿಗಳ ನೆರವಿನಿಂದ ಪುನರ್‌ನಿರ್ಮಾಣಗೊಂಡಿರುವ ಈ ಶಾಲೆ ಸೆ.26ರಂದು ಲೋಕಾರ್ಪಣೆಗೊಳ್ಳಲಿದೆ.

ಸ್ಥಳೀಯ ಶಾಸಕರೂ ಆಗಿರುವ ಕಂದಾಯ ಸಚಿವ ಕೃಷ್ಣ ಬೈರೇಗೌಡ ಉದ್ಘಾಟಿಸಲಿದ್ದಾರೆ.

ಸ್ವಾತಂತ್ರ್ಯಪೂರ್ವದ ಶಾಲೆ: ಊರಿನ ಹಿರಿಯರ ಮುತುವರ್ಜಿಯಿಂದ 1945ರಲ್ಲಿ ಶಾಲೆ ಆರಂಭವಾಗಿತ್ತು. ಆಗ 22 ಮಕ್ಕಳು ಇದ್ದರು. ಬ್ಯಾಟರಾಯನಪುರದ ಸುತ್ತಮುತ್ತ ಬೇರೆ ಯಾವುದೇ ಶಾಲೆ ಇಲ್ಲದ ಕಾರಣ ವರ್ಷದಿಂದ ವರ್ಷಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಏರುತ್ತಾ ಹೋಗಿತ್ತು. ಈ ಶಾಲೆಯಲ್ಲಿ ವರ್ಷಕ್ಕೆ 600ರಿಂದ 700 ಮಕ್ಕಳು ಕಲಿಯುತ್ತಿದ್ದರು. ಸುತ್ತಮುತ್ತ ಖಾಸಗಿ ಶಾಲೆಗಳು ಆರಂಭವಾದ ಮೇಲೆ, ಮಕ್ಕಳ ಸಂಖ್ಯೆ ಇಳಿಮುಖವಾಗತೊಡಗಿತ್ತು. ಕಟ್ಟಡ ಹಳತಾಗಿ ಶಿಥಿಲವಾಗಿತ್ತು.

ದತ್ತು ಸ್ವೀಕಾರ: ವಿದ್ಯಾಶಿಲ್ಪ್ ಕಲ್ಯಾಣನಿಧಿ ಟ್ರಸ್ಟ್ 2022ರಲ್ಲಿ ಈ ಶಾಲೆಯನ್ನು ದತ್ತು ತೆಗೆದುಕೊಂಡಿತ್ತು. ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆಯಡಿ (ಸಿಎಸ್‌ಆರ್) ₹6 ಕೋಟಿ ವೆಚ್ಚದಲ್ಲಿ ಕಟ್ಟಡವನ್ನು ನವೀಕರಿಸಲು ಮುಂದಾಯಿತು. ಅದೇ ವರ್ಷದ ಜೂನ್‌ನಲ್ಲಿ ನೂತನ ಕಟ್ಟಡ ನಿರ್ಮಾಣ ಕಾರ್ಯವೂ ಆರಂಭವಾಗಿತ್ತು. ನೆಲ ಅಂತಸ್ತು, ಎರಡು ಮಹಡಿ ಕಟ್ಟಡಗಳಲ್ಲಿ ಕಲಿಕಾ ಕೊಠಡಿಗಳು, ಪ್ರೊಜೆಕ್ಟರ್, ಕಂಪ್ಯೂಟರ್, ನಲಿಕಲಿ ಕೊಠಡಿಗಳು ಸೇರಿ ಅತ್ಯಾಧುನಿಕ ಸೌಲಭ್ಯಗಳಿರುವ 17 ಕೊಠಡಿಗಳು ನಿರ್ಮಾಣಗೊಂಡಿವೆ. ಪ್ರತಿ ಮಹಡಿಯಲ್ಲಿ 12 ಶೌಚಾಲಯಗಳಂತೆ ಒಟ್ಟು 36 ಆಧುನಿಕ ಶೌಚಾಲಯಗಳು ನಿರ್ಮಾಣಗೊಂಡಿವೆ. ಅಮೃತಹಳ್ಳಿ ಕಡೆಗೆ ಒಂದು, ಬ್ಯಾಟರಾಯನಪುರ ಕಡೆಗೆ ಒಂದು ಪ್ರವೇಶದ್ವಾರಗಳು ನಿರ್ಮಾಣವಾಗಿವೆ.

270 ವಿದ್ಯಾರ್ಥಿಗಳು: 1ರಿಂದ 8ನೇ ತರಗತಿವರೆಗೆ ಸದ್ಯ 140 ಬಾಲಕರು, 130 ಬಾಲಕಿಯರು ಸೇರಿ 270 ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. 'ಕಾಮಗಾರಿ ಆರಂಭವಾದ ನಂತರ ವಿದ್ಯಾರ್ಥಿಗಳನ್ನು ಆಡಿಟೋರಿಯಂ ಮತ್ತು ಹಿಂದೆ ಇರುವ ಹೆಚ್ಚುವರಿ ಕೊಠಡಿಗಳಲ್ಲಿ ಕೂರಿಸಿ ಪಾಠ ಮಾಡಲಾಗುತ್ತಿತ್ತು. ಗುರುವಾರ ಹೊಸ ಕಟ್ಟಡ ಉದ್ಘಾಟನೆಗೊಂಡ ಬಳಿಕ ಮಕ್ಕಳು ನೂತನ ಕೊಠಡಿಗಳಿಗೆ ಸ್ಥಳಾಂತರಗೊಳ್ಳಲಿದ್ದಾರೆ' ಎಂದು ಮುಖ್ಯಶಿಕ್ಷಕ (ಪ್ರಭಾರ) ರವಿಕುಮಾರ್ ಮಾಹಿತಿ ನೀಡಿದರು.

ಸದ್ಯ ಬಹುತೇಕ ವಿದ್ಯಾರ್ಥಿಗಳು ಹೊರಜಿಲ್ಲೆ, ಹೊರರಾಜ್ಯದವರು. ವಿಜಯಪುರ, ರಾಯಚೂರು, ಚಿಕ್ಕಬಳ್ಳಾಪುರ, ತುಮಕೂರು ಸೇರಿದಂತೆ ವಿವಿಧ ಜಿಲ್ಲೆಗಳಿಂದ ಹಾಗೂ ಉತ್ತರ ಪ್ರದೇಶ, ಆಂಧ್ರ ಪ್ರದೇಶ ಸೇರಿ ವಿವಿಧ ರಾಜ್ಯಗಳಿಂದ ದುಡಿಯಲು ಬಂದ ಕಾರ್ಮಿಕರ ಮಕ್ಕಳೇ ಇಲ್ಲಿ ವಿದ್ಯಾರ್ಥಿಗಳಾಗಿದ್ದಾರೆ ಎಂದು ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕ ಲಕ್ಷ್ಮಣಮೂರ್ತಿ ತಿಳಿಸಿದರು.

ಮೇಲಧಿಕಾರಿಗಳ ಮುತುವರ್ಜಿ, ಜನಪ್ರತಿನಿಧಿಗಳ ಸಹಕಾರ, ದಾನಿಗಳ ಕೊಡುಗೆಯಿಂದ ಅತ್ಯುತ್ತಮ ಕಟ್ಟಡ ನಿರ್ಮಾಣಗೊಳ್ಳುತ್ತಿದ್ದು, ವಿದ್ಯಾರ್ಥಿಗಳಿಗೆ ಆಧುನಿಕ ಸೌಲಭ್ಯ ದೊರೆಯಲಿದೆ ಎಂದು ತಾಲ್ಲೂಕು ದೈಹಿಕ ಪರಿವೀಕ್ಷಕ ಗಂಗಪ್ಪ ಮಲಗಣ್ಣ ವಿವರ ನೀಡಿದರು.

ದಿವಂಗತ ಕಮಲಾಕರ್ ಮುತುವರ್ಜಿ

ಬ್ಯಾಟರಾಯನಪುರ ಸೇರಿದಂತೆ ಸುತ್ತಲಿನ ಎಲ್ಲ ಸರ್ಕಾರಿ ಶಾಲೆಗಳಿಗೆ ಮೂಲ ಸೌಕರ್ಯಗಳನ್ನು ಕಲ್ಪಿಸಬೇಕು ಎಂಬ ಕನಸು ಹೊತ್ತಿದ್ದ ಕಮಲಾಕರ್ ಯಲಹಂಕ ಕ್ಷೇತ್ರದ ಶಿಕ್ಷಣಾಧಿಕಾರಿಯಾಗಿ ಬಂದಿದ್ದರು. ವಿದ್ಯಾಶಿಲ್ಪ್ ಕಲ್ಯಾಣನಿಧಿ ಟ್ರಸ್ಟ್ ಅನ್ನು ಸಂಪರ್ಕಿಸಿದ್ದರು. ಅದರ ಮುಖ್ಯಸ್ಥರಾದ ದಯಾನಂದ ಪೈ ಅವರ ಮನವರಿಕೆ ಮಾಡಿ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆಯಡಿ ಈ ಶಾಲೆಯನ್ನು ಟ್ರಸ್ಟ್‌ನವರು ದತ್ತು ತೆಗೆದುಕೊಳ್ಳುವಂತೆ ಮಾಡಿದ್ದರು. ಅದರ ಫಲ ನೋಡುವ ಮೊದಲೇ ಇಹಲೋಕ ತ್ಯಜಿಸಿದರು ಕಮಲಾಕರ್ ಅವರನ್ನು ಶಿಕ್ಷಕರು, ಪೋಷಕರು, ವಿದ್ಯಾಭಿಮಾನಿಗಳು ತುಂಬು ಹೃದಯದಿಂದ ಸ್ಮರಿಸಿಕೊಳ್ಳುತ್ತಿದ್ದಾರೆ ಎಂದು ಕ್ಷೇತ್ರ ಸಂಪನ್ಮೂಲ ಅಧಿಕಾರಿ ಪ್ರಕಾಶ್ ಬಿ.ಕೆ. ನೆನಪು ಮಾಡಿಕೊಂಡರು.

ಇಂಗ್ಲಿಷ್ ಮಾಧ್ಯಮ

'ನಮ್ಮೂರ ಹಿರಿಯ ಪ್ರಾಥಮಿಕ ಶಾಲೆ'ಯನ್ನು 'ನಮ್ಮೂರ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ'ಯಾಗಿ ಮೇಲ್ದರ್ಜೆಗೆ ಏರಿಸಲಾಗಿದೆ. ಮುಖ್ಯೋಪಾಧ್ಯಾಯರ ಹುದ್ದೆ ಖಾಲಿ ಇದೆ. 9 ಶಿಕ್ಷಕರು ಇದ್ದಾರೆ. ಈ ವರ್ಷ 'ಇಂಗ್ಲಿಷ್' ಮಾಧ್ಯಮ ಆರಂಭಿಸಲಾಗಿದ್ದು, 30 ಮಕ್ಕಳು ಕಲಿಯುತ್ತಿದ್ದಾರೆ. 'ಇಂಗ್ಲಿಷ್ ಮಾಧ್ಯಮ ಆರಂಭಿಸಿದ ಬಳಿಕ ಸ್ಥಳೀಯರೂ ಮಕ್ಕಳನ್ನು ಶಾಲೆಗೆ ಕಳುಹಿಸಲು ಆರಂಭಿಸಿದ್ದಾರೆ' ಎಂದು ಪ್ರಭಾರ ಮುಖ್ಯೋಪಾಧ್ಯಾಯ ರವಿಕುಮಾರ್ ಹೇಳಿದರು.

ಜ್ಞಾನ, ಆರೋಗ್ಯ ನಗರ: ಕಾಮಗಾರಿಗೆ ಇಂದು ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜ್ಞಾನ, ಆರೋಗ್ಯ ಮತ್ತು ಸಂಶೋಧನಾ ನಗರದ (ಕೆಎಚ್‌ಐಆರ್ ಸಿಟಿ) ಮೊದಲ ಹಂತದ ಕಾಮಗಾರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೆ. 26ರಂದು ಚಾಲನೆ ನೀಡಲಿದ್ದಾರೆ.

ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಗುರುವಾರ ಬೆಳಿಗ್ಗೆ 11ಕ್ಕೆ ನಡೆಯಲಿರುವ ಸಮಾರಂಭದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಹಲವು ಸಚಿವರು ಭಾಗವಹಿಸಲಿದ್ದಾರೆ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದ್ದಾರೆ.

'ದಾಬಸ್‌ಪೇಟೆ-ದೊಡ್ಡಬಳ್ಳಾಪುರ ನಡುವೆ ಸ್ಯಾಟಲೈಟ್ ಟೌನ್ ವರ್ತುಲ ರಸ್ತೆಗೆ ಹೊಂದಿಕೊಂಡಿರುವ, 500 ಎಕರೆಯಲ್ಲಿ ಮೊದಲ ಹಂತದ ವಿನೂತನ ನಗರ ಅಸ್ತಿತ್ವಕ್ಕೆ ಬರಲಿದೆ. ಇದನ್ನು ಕ್ರಮೇಣ ಐದು ಸಾವಿರ ಎಕರೆವರೆಗೂ ವಿಸ್ತರಿಸಲಾಗುವುದು' ಎಂದಿದ್ದಾರೆ.

'ಇಲ್ಲಿ ಜ್ಞಾನ, ಆರೋಗ್ಯ ಮತ್ತು ನಾವೀನ್ಯಕ್ಕೆ ಒತ್ತು ಕೊಡಲಾಗುವುದು. ಜಾಗತಿಕವಾಗಿ ಹೆಸರು ಮಾಡಿರುವ ಉತ್ಕೃಷ್ಟ ಶಿಕ್ಷಣ ಸಂಸ್ಥೆಗಳ ಸಹಭಾಗಿತ್ವ, ವೈದ್ಯಕೀಯ ಸಂಸ್ಥೆಗಳು ಮತ್ತು ಆರೋಗ್ಯ ಸೇವೆಗಳ ಸಂಸ್ಥೆಗಳು ನೆಲೆಯೂರಲಿವೆ. ಅದಕ್ಕಾಗಿ ₹40 ಸಾವಿರ ಕೋಟಿ ಹೂಡಿಕೆ ಮಾಡಲಾಗುತ್ತಿದೆ' ಎಂದು ಮಾಹಿತಿ ನೀಡಿದ್ದಾರೆ.

ನಗರದಲ್ಲಿ ಇಂದು

'ದ್ರಾವಿಡ ಭಾಷಾ ಅನುವಾದ ಪ್ರಶಸ್ತಿ' ಪ್ರದಾನ: ಹಂ.ಪ. ನಾಗರಾಜಯ್ಯ, ಪ್ರಶಸ್ತಿ ಪುರಸ್ಕೃತರು: ಗೌರಿ ಕಿರುಬನಂದನ್, ಅತಿಥಿ: ಲಕ್ಷ್ಮಿ ಚಂದ್ರಶೇಖರ್, ನಾ.ದಾ. ಶೆಟ್ಟಿ, ಸುಶ್ಮಾ ಶಂಕರ್, ಶಾರದಾ ಕೆ., ಆಯೋಜನೆ: ದ್ರಾವಿಡ ಭಾಷಾ ಅನುವಾದಕರ ಸಂಘ, ಸ್ಥಳ: ನಯನಾ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಸರ್ಫೇಸ್ ಎಕ್ಸ್‌ಪೊ–2024: ಅತಿಥಿಗಳು: ಶೋಭಾ ಕರಂದ್ಲಾಜೆ, ಸಚಿನ್ ಸಬ್ನಿಸ್, ಕೆ.ಬಿ. ಕೊಟ್ರೇಶ್, ಅಧ್ಯಕ್ಷತೆ: ಸಂಜಯ್ ಪಿ. ಭಟ್, ಆಯೋಜನೆ: ಲಘು ಉದ್ಯೋಗ ಭಾರತಿ, ಸ್ಥಳ: ದಿ ಗ್ರ್ಯಾಂಡ್ ಕ್ಯಾಸಲ್ ಗೇಟ್ ಸಂಖ್ಯೆ-6, ಅರಮನೆ ಮೈದಾನ, ಬೆಳಿಗ್ಗೆ 10.30

ಸಾಲುಮರದ ತಿಮ್ಮಕ್ಕ ಅವರ ಜನ್ಮದಿನದ ಸಂಭ್ರಮ, ಸಾಲುಮರದ ತಿಮ್ಮಕ್ಕ ನ್ಯಾಷನಲ್ ಗ್ರೀನರಿ ಅವಾರ್ಡ್, ಪರಿಸರ ಜಾತ್ರೆ, ಇತಿಹಾಸ ಸೃಷ್ಟಿಸಿದ ಸಾಲುಮರದ ತಿಮ್ಮಕ್ಕ ಧ್ವನಿಸುರುಳಿ ಬಿಡುಗಡೆ: ಸಾನ್ನಿಧ್ಯ: ಡಿ. ವೀರೇಂದ್ರ ಹೆಗ್ಗಡೆ, ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ಜಿ. ಪರಮೇಶ್ವರ, ಧ್ವನಿ ಸುರುಳಿ ಬಿಡುಗಡೆ: ಎಚ್.ಸಿ. ಮಹದೇವಪ್ಪ, ಪ್ರಶಸ್ತಿ ಪ್ರದಾನ: ಈಶ್ವರ್ ಖಂಡ್ರೆ, ಆಯೋಜನೆ: ಆಯೋಜನೆ: ಸಮಾಜ ಕಲ್ಯಾಣ ಇಲಾಖೆ, ಸಿದ್ಧಾರ್ಥ ಎಜುಕೇಷನ್ ಸೊಸೈಟಿ, ಸಾಲುಮರದ ತಿಮ್ಮಕ್ಕ ಇಂಟರ್‌ನ್ಯಾಷನಲ್ ಫೌಂಡೇಶನ್, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಳಿಗ್ಗೆ 10.30

'ಊರು ಕೇರಿ' ನಾಟಕ ಪ್ರದರ್ಶನ: ನಿರ್ದೇಶನ: ನವೀನ್ ಭೂಮಿ, ಆಯೋಜನೆ: ಅಡವಿ ಫೌಂಡೇಶನ್, ಮಧುರಿಮ ಥಿಯೇಟರ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11

ಕಾಲೇಜು ವಿದ್ಯಾರ್ಥಿಗಳ ನಾಟಕ ಶಿಬಿರದ ಉದ್ಘಾಟನೆ: ಜಗದೀಶ್ ಜಾಲ, ಅಧ್ಯಕ್ಷತೆ: ಜಯರಾಮ್, ಅತಿಥಿಗಳು: ಎನ್. ರಮೇಶ್, ಸುಧೀಂದ್ರಕುಮಾರ್ ಎಚ್.ಎಸ್., ನಿರ್ಮಲಾ ನಾದನ್, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್, ರಂಗಮಂಡಲ ಸಾಂಸ್ಕೃತಿಕ ಸಂಘ, ಸ್ಥಳ: ಸೆಮಿನಾರ್ ಹಾಲ್, ಶೇಷಾದ್ರಿಪುರಂ ಕಾಲೇಜು, ಕೆಂಗೇರಿ ಉಪನಗರ, ಮಧ್ಯಾಹ್ನ 1.30

ಶಂ.ಬಾ. ಜೋಶಿ ದತ್ತಿ 'ಜೀವನ ಸೌಂದರ್ಯ–ಒಂದು ಶ್ರೇಷ್ಠ ಪರಿಕಲ್ಪನೆ' ಉಪನ್ಯಾಸ: ಭಾರತಿ ಕಾಸರಗೋಡು, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನದ ಎಂ.ವಿ.ಸೀ. ಸಭಾಂಗಣ, ಎನ್.ಆರ್. ಕಾಲೊನಿ, ಸಂಜೆ 5

'ಪ್ರಸ್ತುತ ನಾರಾಯಣ ಗುರುಗಳ ತತ್ವ ಸಿದ್ಧಾಂತ ಮತ್ತು ಗುರು ನಾರಾಯಣ ವೈಭವ ಚಿತ್ರದ ಒಂದು ಪ್ರಯತ್ನ' ಕುರಿತು ವಿಚಾರಸಂಕಿರಣ: ಟಿ.ವಿ. ಸಂಪಂಗಿ, ಪೂರ್ಣಿಮಾ ಜೋಗಿ, ಗುಣವಂತ ಮಂಜು, ದಿವಾಕರ್, ಎಸ್. ತಿಮ್ಮಯ್ಯ, ಆಯೋಜನೆ: ಕಲಾ ಸಾಗರ, ಸ್ಥಳ: ಪುನೀತ್ ರಾಜಕುಮಾರ್ ಕಲಾಭವನ, ಶಾಂತಿನಗರ, ಸಂಜೆ 6

ಯಕ್ಷಗಾನ ಕವಿ ಶಿರೂರು ಫಣಿಯಪ್ಪಯ್ಯ ಸಂಸ್ಮರಣಾ 'ಫಣಿಗಿರಿ ಪ್ರಶಸ್ತಿ' ಪ್ರದಾನ: ಪ್ರಶಸ್ತಿ ಪುರಸ್ಕೃತರು: ಮೃತ್ಯುಂಜಯ ಗಿಂಡೀಮನೆ, ಅತಿಥಿಗಳು: ಆನಂದರಾಮ ಉಪಾಧ್ಯ, ಅಜಿತ್ ಕಾರಂತ, 'ಯೌವನಾಶ್ವ ಕಾಳಗ' ಯಕ್ಷಗಾನ ಪ್ರದರ್ಶನ, ಸ್ಥಳ: ಗುರು ಶನೀಶ್ವರ ಸ್ವಾಮಿ ಮಹಾಕ್ಷೇತ್ರದ ಸಭಾಭವನ, ಕೆಂಪೇಗೌಡನಗರ, ಸಂಜೆ 6

ಹರಿದಾಸ ವಾಣಿ: ಗಾಯನ: ರಾಮ್ ರಕ್ಷಿತ್, ಪಿಟೀಲು: ಗಿರೀಶ್ ಕೋಳಾಲ, ತಬಲಾ: ಶರಣು ಗೋಗಿ, ತಾಳ: ಗುರುಪ್ರಸಾದ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಒಂದನೇ ಮುಖ್ಯರಸ್ತೆ ಪವಮಾನಪುರ, ಸಂಜೆ 7

ದಾಸರ ಪದಗಳ ಗಾಯನ: ಅಭಿಜ್ಞ ಕಶ್ಯಪ್, ಪಿಟೀಲು: ಭಾರ್ಗವಿ, ಮೃದಂಗ: ನಟರಾಜ್, ಸ್ಥಳ: , 5ನೇ ಬಡಾವಣೆ ಜಯನಗರ, ಸಂಜೆ 7.30

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

Srishyla Educational Trust®

GM UNIVERSITY

P.B Road, Davanagere-577006

Innovating Minds



2024-25 Admissions Open



Our GMIT student has secured a pay package of ₹34.4 LAKHS per annum

Recruited by **Product based company**

Ms. Shashti D B
CSE, 2024 Batch, Software Engineer

Join us by choosing the right program in GM University

GM School of Advanced Studies

M.Tech. in
Data Engineering
Deep Learning
Artificial Intelligence in Healthcare
Computer Aided Structural Engineering (CASE)

Faculty of Basic & Applied Sciences

M.Sc. in
Physics
Chemistry
Mathematics

Faculty of Engineering & Technology

School of Computer Science & Technology

B. Tech. in
E303BW Computer Science & Engg. (CSE)
E303CU Information Science & Engg. (ISE)
E303LE Computer Science-AI & ML (CS-AIML)
E303LD Computer Science-Data Science (CS-DS)
E303LG Computer Science-Cyber Security (CS-CY)
E303LF Computer Science-Cloud Computing (CS-CC)
E303LH Computer Science-Information Security (CS-IS)
E303LJ Computer Science-Business Systems (CS-BS)
E303LK Computer Science-IOT (CS-IO)

School of Engineering

B. Tech. in
E303BB Electronics & Communication Engg. (E & CE)
E303BJ Electrical & Electronics Engg. (EEE)
E303RA Robotics & Automation (RA)
E303YH Engineering Design (ED)
E303CE Civil Engineering (CE)
E303BT Biotechnology (BT)

Faculty of Commerce & Management

B.Com Accounting & Finance (PD-AF)
B.Com Banking & Insurance (PD-BINS)
B.Com Accounting & Taxation (PD-ATAX)
B.Com General (PD-Gen)
BBA Digital Marketing and Social Media (PD-DMSM)
BBA Business Analytics (PD-BA)
BBA Logistics & Supply Chain Management (PD-LSCM)
BBA Innovation & Entrepreneurship (PD-IE)
BBA Human Resource Management (PD-HRM)
BBA General Management (PD-GM)
BBA Marketing & Sales (PD-MS)

Faculty of Computing & IT

BCA-Computer Applications
MCA-Computer Applications
MSc-Data Science
MSc-AI & Data Analytics
MSc-Cyber Security

Faculty of Commerce & Management

MBA General Management
MBA Innovation & Entrepreneurship
MBA International Business
MBA Agricultural Marketing
M.Com (Accounting & Taxation with Forensic Accouting)

Faculty of Basic & Applied Sciences

School of Mathematical & Physical Sciences
BSc-Major (M, CS), Minor (P/ S/E)
BSc-Major (S, CS), Minor (P/M/E)
BSc-Major (P, M), Minor (CS/ S/E)

School of Applied Sciences
BSc- Major (BT), Minor (CS/BC)
BSc- Major (FST) Minor (Z/BC/CS)
BSc- Major (MB) Minor (Z/C/BC/CS)

School of Chemical & Biological Sciences
BSc-Major (P, C), Minor (CS/ M/E)
BSc-Major (C, CS), Minor (P/ M/E)
BSc-Major (B, Z), Minor (C/ EC/CS/S)
BSc-Major (C, Z), Minor (B/ EC/CS/S)
BSc -Major (C, B), Minor (BC/MB/CS/S)

Faculty of Computing & IT

BCA-Computer Applications (PD-BCA)
B.Sc-Data Science (PD-DS)
B.Sc-AI & Data Analytics (PD-AI & DA)
B.Sc-Computer Science (PD-CS)

Ph.D in Faculties of

Engineering & Technology
Computing & IT
Basic & Applied Sciences
Commerce & Management

GMU
E303 — B.Tech CET Code
B086 — MBA PGCET Code
C568 — MCA PGCET Code

GMIT
E114 — CET Code
B176 — MBA PGCET Code

For More Details Contact

admissions@gmu.ac.in
www.gmu.ac.in
9364099720, 9364099712, 6364259993

‘ಯುಪಿಎಸ್‌ಸಿ ಮಾದರಿ ಪಾಲಿಸಿ’

ವಿವಿಧ ಇಲಾಖೆಗಳ ನೇಮಕಾತಿ ಪ್ರಗತಿ ಪರಿಶೀಲನೆ ವೇಳೆ ಕೆಪಿಎಸ್‌ಸಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಗದಿತ ವೇಳಾಪಟ್ಟಿಯಡಿ ಯುಪಿಎಸ್‌ಸಿ ನೇಮಕಾತಿ ನಡೆಸುವ ಮಾದರಿಯಲ್ಲಿ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಕಾರ್ಯನಿರ್ವಹಣೆ ಮಾಡುವ ಕುರಿತು ಸುಧಾರಣಾ ಕ್ರಮಗಳನ್ನು ಕೈಗೊಳ್ಳುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸರ್ಕಾರದ ವಿವಿಧ ನೇಮಕಾತಿಗಳ ಪ್ರಗತಿ ಪರಿಶೀಲನೆ ನಡೆಸಿ ಅವರು ಮಾತನಾಡಿದರು. ನೇಮಕಾತಿ ಪ್ರಕ್ರಿಯೆಗಳ ವಿಳಂಬ, ಕಾನೂನು ತೊಡಕುಗಳು ಮತ್ತು 371 ಜೆ ಅಡಿ ಮೀಸಲಾತಿಗೆ ಸಂಬಂಧಿಸಿದ ಸವಾಲುಗಳ ಕುರಿತು ವಿಸ್ತೃತ ಚರ್ಚೆ ನಡೆಯಿತು.

ಪ್ರತಿ ವರ್ಷ ಎಲ್ಲ ಇಲಾಖೆಗಳ ನೇಮಕಾತಿಗೆ ಏಕಕಾಲಕ್ಕೆ ಅಧಿಸೂಚನೆ ಹೊರಡಿಸಲು ಅನುಕೂಲವಾಗುವಂತೆ ಇಲಾಖೆಗಳು ನಿಗದಿತ ಗಡುವಿನೊಳಗೆ ನೇಮಕಾತಿ ಕುರಿತು ಪ್ರಸ್ತಾವಗಳನ್ನು ಸಲ್ಲಿಸಬೇಕು ಮತ್ತು ಪರೀಕ್ಷಾ ವೇಳಾಪಟ್ಟಿಯಲ್ಲಿ ಫಲಿತಾಂಶ ಪ್ರಕಟಣೆಯ ದಿನಾಂಕವನ್ನೂ ನಿಗದಿಪಡಿಸಬೇಕು ಎಂದರು.


ಕಲ್ಯಾಣ ಕರ್ನಾಟಕ ಅಭ್ಯರ್ಥಿಗಳ ನೇಮಕಾತಿಗೆ ಸಂಬಂಧಿಸಿದಂತೆ ಇರುವ ಗೊಂದಲಗಳ ಕುರಿತು ಸವಿಸ್ತಾರವಾಗಿ ಪರಿಶೀಲಿಸಿ, ಸಚಿವ ಸಂಪುಟ ಉಪಸಮಿತಿಯ ಆದೇಶಗಳ ಪಾಲನೆ ಕುರಿತು ಸಚಿವ ಸಂಪುಟದ ಮುಂದೆ ವಿಷಯ ಮಂಡಿಸಲು ಸಿದ್ದರಾಮಯ್ಯ ಸೂಚಿಸಿದರು.

ಸಚಿವ ಸಂಪುಟದ ಉಪಸಮಿತಿಯ ಸೂಚನೆಗಳನ್ನು ಇಲಾಖೆ ಮುಖ್ಯಸ್ಥರು ಪಾಲಿಸಬೇಕು. ತಪ್ಪಿದಲ್ಲಿ ಕ್ರಮಕೈಗೊಳ್ಳಲಾಗುವುದು. ಪ್ರತಿ ನೇಮಕಾತಿ ಪ್ರಕ್ರಿಯೆಯು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಕಲ್ಯಾಣ ಕರ್ನಾಟಕ ಕೋಶದ ಸಹಮತಿಯೊಂದಿಗೆ ಅಧಿಸೂಚನೆ ಹೊರಡಿಸಬೇಕೆಂದು ಅವರು ಹೇಳಿದರು.

ಅಂತಿಮ ಆಯ್ಕೆ ಪಟ್ಟಿ ಪ್ರಕಟವಾದ ನಂತರ ಸಿಂಧುತ್ವ ಪ್ರಮಾಣ ಪತ್ರ ನೀಡುವುದು ತಡವಾಗುವುದರಿಂದ ನೇಮಕಾತಿ ಆದೇಶ ನೀಡುವುದೂ ತಡವಾಗುತ್ತಿದೆ. ಈ ಹಿನ್ನೆಲೆಯಲ್ಲಿ ನೇಮಕಾತಿ ಬಗ್ಗೆ ಇಲಾಖಾ ಮುಖ್ಯಸ್ಥರು, ಪ್ರತಿ ವಾರ ಪರಿಶೀಲನೆ ಮಾಡಬೇಕು. ಸುತ್ತೋಲೆಗಳ ಕೈಪಿಡಿಗಳನ್ನು ಸಂಬಂಧಿಸಿದ ಅಧಿಕಾರಿಗಳಿಗೆ ಕಳುಹಿಸಬೇಕು ಎಂದು ಸೂಚಿಸಿದರು.

ಮುಂದಿನ ವಾರ ಮತ್ತೊಮ್ಮೆ ಸಭೆ ಕರೆದು ಸಂಪೂರ್ಣ ಮಾಹಿತಿ ಪಡೆದು ಚರ್ಚಿಸುವುದಾಗಿ ಮುಖ್ಯಮಂತ್ರಿ ಹೇಳಿದರು. ಸಚಿವರಾದ ಜಿ.ಪರಮೇಶ್ವರ, ಎಚ್.ಕೆ.ಪಾಟೀಲ, ಈಶ್ವರ ಖಂಡ್ರೆ, ಡಿ. ಸುಧಾಕರ್, ಡಾ.ಎಂ.ಸಿ.ಸುಧಾಕರ್, ಎನ್.ಎಸ್. ಬೋಸರಾಜು, ರಹೀಂ ಖಾನ್ ಸಭೆಯಲ್ಲಿ ಭಾಗವಹಿಸಿದ್ದರು.

‘2023 ರ ಸುತ್ತೋಲೆಯಂತೆ ಕಲ್ಯಾಣ ಕರ್ನಾಟಕದ ನೇಮಕಾತಿ’



ಈಶ್ವರ ಖಂಡ್ರೆ

ಅಧಿಸೂಚನೆಯಾಗಿ ಭರ್ತಿ ಆಗದೇ ಉಳಿದಿರುವ ಹುದ್ದೆಗಳೂ ಸೇರಿ ಎಲ್ಲ ಸರ್ಕಾರಿ ಹುದ್ದೆಗಳ ನೇಮಕಾತಿಗೆ ನಡೆಯುವ ಆಯ್ಕೆಯಲ್ಲಿ 2023ರ ಫೆಬ್ರುವರಿಯ ಸುತ್ತೋಲೆಯನ್ನೇ ಅನುಸರಿಸಬೇಕು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಸಭೆಯಲ್ಲಿ ಮನವಿ ಮಾಡಿದರು.

ಸಿದ್ದರಾಮಯ್ಯ ಅವರ ಮೊದಲ ಅವಧಿಯಲ್ಲಿ 371 ಜೆ ಅನ್ವಯ 2016ರ ನವೆಂಬರ್‌ನಲ್ಲಿ ಹೊರಡಿಸಿದ್ದ ಸುತ್ತೋಲೆಯೇ ಸಮರ್ಪಕವಾಗಿತ್ತು. ಮೆರಿಟ್ ಆಯ್ಕೆ ಪಟ್ಟಿ ತಯಾರಿಸುವಾಗ ಮೊದಲಿಗೆ ಮಿಕ್ಕುಳಿದ ವೃಂದದಲ್ಲಿ ಲಭ್ಯವಿರುವ ಹುದ್ದೆಗಳನ್ನು ಪರಿಗಣಿಸಿ ತದ ನಂತರ ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಹುದ್ದೆಗಳಿಗೆ ಎದುರಾಗಿ ಅರ್ಹ ಸ್ಥಳೀಯ ಅಭ್ಯರ್ಥಿಗಳ ಆಯ್ಕೆ ಪಟ್ಟಿ ಸಿದ್ಧಪಡಿಸಲಾಗುತ್ತಿತ್ತು ಎಂದು ವಿವರಿಸಿದರು.

‘ಈ ಹಿಂದಿನ ಬಿಜೆಪಿ ಸರ್ಕಾರ 2020ರ ಜೂನ್‌ನಲ್ಲಿ ಹೊರಡಿಸಿದ್ದ ಸುತ್ತೋಲೆ ಇದಕ್ಕೆ ತದ್ವಿರುದ್ಧವಾಗಿತ್ತು. ಕಲ್ಯಾಣ ಕರ್ನಾಟಕದ ನೂರಾರು ಯುವಕರ ಭವಿಷ್ಯವನ್ನೇ ನಾಶ ಮಾಡಿತ್ತು. ಜೊತೆಗೆ ಸಂವಿಧಾನ 371 (ಜೆ) ತಿದ್ದುಪಡಿ ಮೂಲ ಉದ್ದೇಶವೇ ಈಡೇರದಂತೆ ಆಗಿತ್ತು. ನಮ್ಮ ಭಾಗದ ಜನಪ್ರತಿನಿಧಿಗಳ ಹೋರಾಟದ ಫಲವಾಗಿ 2023ರ ಫೆಬ್ರುವರಿಯಲ್ಲಿ ಹೊಸ ಸುತ್ತೋಲೆ ಹೊರಡಿಸಲಾಗಿದ್ದು, ಇದು ಸೂಕ್ತವಾಗಿದೆ’ ಎಂದು ಖಂಡ್ರೆ ಹೇಳಿದರು.

ಕೆಇಎ ಪರೀಕ್ಷಾ ಶುಲ್ಕ ದುಬಾರಿ: ಪ್ರಿಯಾಂಕ್ ಖರ್ಗೆ



ವಿವಿಧ ನೇಮಕಾತಿ ಪ್ರಾಧಿಕಾರಗಳು ಇಡೀ ನೇಮಕಾತಿ ಪ್ರಕ್ರಿಯೆಯನ್ನು ಒಂದು ವರ್ಷದೊಳಗೆ ಪೂರ್ಣಗೊಳಿಸಬೇಕು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಸಭೆಯಲ್ಲಿ ಒತ್ತಾಯಿಸಿದರು.

ಎಲ್ಲಾ ಗ್ರೂಪ್ ‘ಸಿ’ ಪರೀಕ್ಷೆಗಳು ಒಂದೇ ಪಠ್ಯಕ್ರಮವನ್ನು ಹೊಂದಿರುವುದರಿಂದ ಎಲ್ಲಾ ಗ್ರೂಪ್ ಸಿ ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಪ್ರಾಧಿಕಾರಗಳು ಒಂದೇ ಪರೀಕ್ಷೆ ನಡೆಸಬೇಕು. ಒಎಂಆರ್ ಆಧಾರಿತ ಲಿಖಿತ ಪರೀಕ್ಷೆಯ ಬದಲಿಗೆ ಕಂಪ್ಯೂಟರ್ ಆಧಾರಿತ ಪರೀಕ್ಷೆ ಪರಿಚಯಿಸಬೇಕು ಎಂದು ಹೇಳಿದರು. ಇತರ ನೇಮಕಾತಿ ಏಜೆನ್ಸಿಗಳಿಗೆ ಹೋಲಿಸಿದರೆ ಕೆಇಎ ನಡೆಸುವ ಎಲ್ಲಾ ಪರೀಕ್ಷೆಗಳಿಗೆ ಪರೀಕ್ಷಾ ಶುಲ್ಕಗಳು ದುಬಾರಿ ಆಗಿವೆ. ಇದರಿಂದ ಅಭ್ಯರ್ಥಿಗಳಿಗೆ ಹೆಚ್ಚಿನ ಆರ್ಥಿಕ ಹೊರೆಯಾಗುತ್ತಿದೆ ಎಂದರು.

278 ಮಂದಿಯಿಂದ ದೂರು ₹13.51 ಕೋಟಿ ವಂಚನೆ

ಹೊಸಪೇಟೆ (ವಿಜಯನಗರ): ‘ಕತ್ತೆ ನೀಡಿ ಅದರ ಹಾಲು ಖರೀದಿಸುವ ವ್ಯವಹಾರದಲ್ಲಿ ತೊಡಗಿದ್ದ ‘ಜೆನ್ನಿ ಮಿಲ್ಕ್’ ಕಂಪನಿ ವಿರುದ್ಧ 278 ಮಂದಿ ದೂರು ನೀಡಿದ್ದು, ₹13.51 ಕೋಟಿ ವಂಚನೆಯಾಗಿರುವ ಸಾಧ್ಯತೆ ಇದೆ, ಹೀಗಾಗಿ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಲು ಕೋರಿಕೆ ಸಲ್ಲಿಸಲಾಗುವುದು’ ಎಂದು ಜಿಲ್ಲಾ ಪೊಲೀಸ್ ವರಿಷ್ಠ ಶ್ರೀಹರಿಬಾಬು ಬಿ.ಎಲ್. ಮಾಧ್ಯಮದವರಿಗೆ ಬುಧವಾರ ತಿಳಿಸಿದರು.

‘ಮುಖ್ಯ ಆರೋಪಿ ನೂತಲಪತಿ ಮುರಳಿ, ಇತರ ನಾಲ್ವರ ಪತ್ತೆಗಾಗಿ 3 ತಂಡಗಳನ್ನು ರಚಿಸಲಾಗಿದೆ. ಸಿಐಡಿ ತನಿಖೆ ಕುರಿತಂತೆ ಮೇಲಧಿಕಾರಿಗಳೊಂದಿಗೆ ಚರ್ಚೆ ನಡೆಸಲಾಗಿದೆ’ ಎಂದರು.



‘ಯುವ ಸಂಭ್ರಮ’ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಜಿಲ್ಲಾಡಳಿತದಿಂದ ಮಾನಸಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ಬುಧವಾರ ರಾತ್ರಿ ಆಯೋಜಿಸಿದ್ದ ‘ಯುವ ಸಂಭ್ರಮ’ ಕಾರ್ಯಕ್ರಮದಲ್ಲಿ ಬೆಟ್ಟದಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ‘ಕರ್ನಾಟಕ ಜಾನಪದ ಪರಂಪರೆ’ ಬಿಂಬಿಸುವ ನೃತ್ಯ ಪ್ರದರ್ಶನ ನೀಡಿದರು –ಪ್ರಜಾವಾಣಿ ಚಿತ್ರ: ಅನೂಪ್ ರಾಘ.ಟಿ.

ಮೂರ್ತಿ ವಿಸರ್ಜನಾ ಮೆರವಣಿಗೆಯಲ್ಲಿ ಪಿಎಸ್‌ಐ ನೃತ್ಯ

ಪ್ರಜಾವಾಣಿ ವಾರ್ತೆ

ಕಲಬುರಗಿ: ಜೇವರ್ಗಿ ತಾಲ್ಲೂಕಿನ ಜೇರಟಗಿ ಗ್ರಾಮದಲ್ಲಿ ಗಣೇಶ ಮೂರ್ತಿ ವಿಸರ್ಜನೆ ಮೆರವಣಿಗೆ ವೇಳೆ ಡಿ.ಜೆ. ಹಾಡಿಗೆ ಪಿಎಸ್‌ಐ ನೃತ್ಯ ಮಾಡಿದ್ದಾರೆ ಎನ್ನಲಾದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಜೇರಟಗಿಯಲ್ಲಿ ಸೆಪ್ಟೆಂಬರ್ 23ರ ರಾತ್ರಿ ನಡೆದ ಗಣೇಶ ಮೂರ್ತಿ ವಿಸರ್ಜನೆ ಮೆರವಣಿಗೆಯಲ್ಲಿ ನೇಲೋಗಿ ಪಿಎಸ್‌ಐ ಚಿದಾನಂದ ಸವದಿ ನೃತ್ಯ ಮಾಡಿದ್ದಾರೆ. ‘ಭಜರಂಗಿ’ ಹಾಡಿಗೆ ಯುವಕರು ಚಿದಾನಂದ ಅವರನ್ನು ತಮ್ಮ ಭುಜದ ಮೇಲೆ ಹೊತ್ತುಕೊಂಡು ಕುಣಿದಿರುವುದು ಹಾಗೂ ಚಿದಾನಂದ ಅವರೂ ನೃತ್ಯ ಮಾಡಿರುವ ದೃಶ್ಯಗಳು ವಿಡಿಯೊದಲ್ಲಿ ಸೆರೆಯಾಗಿವೆ.

ಭದ್ರತೆ ನೀಡಬೇಕಿದ್ದ ಅಧಿಕಾರಿ ಯುವಕರೊಂದಿಗೆ ನೃತ್ಯ ಮಾಡಿರುವುದಕ್ಕೆ ಸಾರ್ವಜನಿಕ ವಲಯದಲ್ಲಿ ಆಕ್ಷೇಪ ವ್ಯಕ್ತವಾಗಿದೆ.

ಇದೇ ಮೊದಲಿಗೆ ಪ್ರವೇಶ ದರ: ₹8ಸಾವಿರ, ₹5 ಸಾವಿರ ನಿಗದಿ

‘ಯುವ ದಸರಾ’ಗೆ ಇನ್ನು ಟಿಕೆಟ್


ಪ್ರಜಾವಾಣಿ ವಾರ್ತೆ



ಅಶ್ವಿನಿ ಪುನೀತ್ ರಾಜ್‌ಕುಮಾರ್




ಶ್ರೇಯಾ ಘೋಷಾಲ್



ಇಳಯರಾಜ



ಎ.ಆರ್. ರೆಹಮಾನ್



ರವಿ ಬಸ್ರೂರ್

ಮೈಸೂರು: ಈ ಬಾರಿ ಹೊರವಲಯದ ಉತ್ತನಹಳ್ಳಿ ಸಮೀಪ ಆಯೋಜಿಸಿರುವ ‘ಯುವದಸರಾ’ ಕಾರ್ಯಕ್ರಮ ವೀಕ್ಷಣೆಗೆ ಇದೇ ಮೊದಲ ಬಾರಿಗೆ ಟಿಕೆಟ್‌ಗಳ ಮಾರಾಟಕ್ಕೆ ಜಿಲ್ಲಾಡಳಿತ ಕ್ರಮ ಕೈಗೊಂಡಿದೆ.

‘ಟಿಕೆಟ್‌ಗಳನ್ನು ಸೆ.27ರಿಂದ ಆನ್‌ಲೈನ್‌ನಲ್ಲಿ ದಸರೆಯ ಅಧಿಕೃತ ಜಾಲತಾಣವಾದ https://www.mysoredasara.gov.in/ ಹಾಗೂ BookMyShow ಮೂಲಕ ಖರೀದಿಸಬಹುದು. ವೀಕ್ಷಕರ ಗ್ಯಾಲರಿ-1 (ವೇದಿಕೆ ಸಮೀಪ) ಟಿಕೆಟ್ ಮುಖಬೆಲೆ ₹8 ಸಾವಿರ ಹಾಗೂ ವೀಕ್ಷಕರ ಗ್ಯಾಲರಿ-2ರ ಟಿಕೆಟ್‌ಗಳ ಮುಖಬೆಲೆ ₹5 ಸಾವಿರ ನಿಗದಿಪಡಿಸಲಾಗಿದೆ. ಒಂದು ಟಿಕೆಟ್‌ನಲ್ಲಿ ಒಬ್ಬರಿಗೆ ಒಂದು ಕಾರ್ಯಕ್ರಮಕ್ಕೆ ಮಾತ್ರ ಪ್ರವೇಶ (ನಿಗದಿತ ಗ್ಯಾಲರಿಯಲ್ಲಿ) ಅವಕಾಶವಿರುತ್ತದೆ’ ಎಂದು ದಸರಾ ವಿಶೇಷಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದ್ದಾರೆ.

‘ದಸರೆಯನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದ್ದು, ಅ.6ರಿಂದ 10ರವರೆಗೆ ನಿತ್ಯ ಸಂಜೆ 6ರಿಂದ 10ರವರೆಗೆ ಯುವ ದಸರಾ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಅ.6ರಂದು ಚಲನಚಿತ್ರ ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಉದ್ಘಾಟಿಸಲಿದ್ದಾರೆ’ ಎಂದು ತಿಳಿಸಿದ್ದಾರೆ.

‘ಸಾರ್ವಜನಿಕರಿಗೆ ಮುಕ್ತ ಅವಕಾಶವಿದೆ. ಒಂದು ಲಕ್ಷ ಜನ ವೀಕ್ಷಿಸಲು ವ್ಯವಸ್ಥೆ ಮಾಡಲಾಗುತ್ತಿದೆ. ‘ಟಿಕೆಟ್ ಆಧರಿಸಿ ಕುರ್ಚಿ ವ್ಯವಸ್ಥೆ’ಯನ್ನೂ ಮಾಡಲಾಗಿದೆ. ಕಾಯ್ದಿರಿಸಲು ಆನ್‌ಲೈನ್ ಮೂಲಕ ಮಾರಾಟಕ್ಕೆ ಕ್ರಮ ವಹಿಸಲಾಗಿದೆ’ ಎಂದು ಅವರು ಮಾಹಿತಿ ನೀಡಿದ್ದಾರೆ.

‘ಅ.6ರಂದು ಖ್ಯಾತ ಬಾಲಿವುಡ್ ಗಾಯಕಿ ಶ್ರೇಯಾ ಘೋಷಾಲ್, ಅ.7ರಂದು ಖ್ಯಾತ ಸಂಗೀತ ಸಂಯೋಜಕ ರವಿ ಬಸ್ರೂರ್, ಅ.8ರಂದು ಖ್ಯಾತ ರ್‍ಯಾಪರ್ ಬಾದ್‌ಷಾ, ಅ.9ರಂದು ಖ್ಯಾತ ಸಂಗೀತ ನಿರ್ದೇಶಕ ಎ.ಆರ್. ರೆಹಮಾನ್ ಹಾಗೂ ಅ.10ರಂದು ಹೆಸರಾಂತ ಸಂಗೀತ ನಿರ್ದೇಶಕ ಹಾಗೂ ಗಾಯಕ ಇಳಯರಾಜ ಹಾಗೂ ತಂಡದವರು ರಸಸಂಜೆ ಕಾರ್ಯಕ್ರಮ ನೀಡಲಿದ್ದಾರೆ’ ಎಂದು ತಿಳಿಸಿದ್ದಾರೆ.

ವಿವಿಧ ಕ್ಷೇತ್ರದ ‘ಕವಿ ಮನಸ್ಸಿನವರಿಗೂ’ ಈ ಬಾರಿ ಅವಕಾಶ

‘ಪಂಚ ಕಾವ್ಯೋತ್ಸವ’, ವಿದೇಶಿ ಕವಿಗಳು

• ಎಂ. ಮಹೇಶ

ಮೈಸೂರು: ನಾಡಹಬ್ಬ ಮೈಸೂರು ದಸರಾ ಮಹೋತ್ಸವದಲ್ಲಿ ಪ್ರಾಜ್ಞರು ಹಾಗೂ ಸಾಹಿತ್ಯ ಆಸಕ್ತರನ್ನು ಆಕರ್ಷಿಸುವ ‘ಕವಿಗೋಷ್ಠಿ’ಗೆ ಈ ಬಾರಿ ಹೊಸತನದ ಸ್ಪರ್ಶ ನೀಡಲು ನಿರ್ಧರಿಸಲಾಗಿದೆ. ‘ಪಂಚ ಕಾವ್ಯೋತ್ಸವ’ ಶೀರ್ಷಿಕೆಯಲ್ಲಿ, ರಾಜ್ಯದೊಂದಿಗೆ ಹೊರ ರಾಜ್ಯ ಮತ್ತು ವಿದೇಶಿ ಕವಿಗಳನ್ನೂ ಆಹ್ವಾನಿಸಿ, ಇದೇ ಮೊದಲ ಬಾರಿಗೆ ‘ಜಾಗತಿಕ ವ್ಯಾಪ್ತಿ’ ಒದಗಿಸಲಾಗುತ್ತಿದೆ.

ಹಿಂದಿನ ದಸರೆಯಲ್ಲಿ ಪ್ರಧಾನ ಕವಿಗೋಷ್ಠಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಕವಿಗಳೊಂದಿಗೆ ‘ಸಹೋದರ ಭಾಷೆ’ಗಳ ಕವಿಗಳ ಕವಿತೆ ವಾಚನಕ್ಕೆ ಅವಕಾಶ ಕೊಡಲಾಗುತ್ತಿತ್ತು. ಈ ಬಾರಿ ಇತರ ರಾಜ್ಯಗಳ ಭಾಷೆಗಳ ಕವಿಗಳನ್ನು ಆಹ್ವಾನಿಸಲಾಗುತ್ತಿದ್ದು, ವಿಭಿನ್ನವಾಗಿ ವಿನ್ಯಾಸಗೊಳಿಸಲಾಗಿದೆ.

‘ಪ್ರಾದೇಶಿಕ’, ‘ವಿಶಿಷ್ಟ’, ‘ವಿನೋದ’, ‘ವೈವಿಧ್ಯ’ ಹಾಗೂ ‘ಸಮಗ್ರ’ ಎಂಬ ಶೀರ್ಷಿಕೆಯಲ್ಲಿ ಐದು ಕವಿಗೋಷ್ಠಿಗಳನ್ನು ನಡೆಸಲು ತೀರ್ಮಾನಿಸಲಾಗಿದೆ. ಈ ಬಾರಿ ‘ಉರ್ದು ಕವಿಗೋಷ್ಠಿ’ ಪ್ರತ್ಯೇಕವಾಗಿರುವುದಿಲ್ಲ. ಮಕ್ಕಳು, ಯುವಕರು ಹಾಗೂ ಮಹಿಳೆಯರಿಗೂ ಪ್ರತ್ಯೇಕವಾಗಿ ನಡೆಸದಿರಲು ನಿರ್ಧರಿಸಲಾಗಿದೆ. ಹಿಂದಿನ ವರ್ಷ ದಸರಾ ಕಾವ್ಯ ಸಂಭ್ರಮ, ಚಿಗುರು, ಮಹಿಳಾ, ಪ್ರಾದೇಶಿಕ, ಯುವ ಹಾಗೂ ಉರ್ದು ಕವಿಗೋಷ್ಠಿಗಳನ್ನು ಆಯೋಜಿಸಲಾಗಿತ್ತು.

ಮುಖ್ಯಾಂಶಗಳು

- ಈ ಬಾರಿ ‘ಪ್ರತ್ಯೇಕ ಉರ್ದು ಕವಿಗೋಷ್ಠಿ’ ಇಲ್ಲ
- ಪ್ರಧಾನ ಕವಿಗೋಷ್ಠಿಯ ಹೆಸರು ಬದಲು
- ಚಿಗುರು, ಯುವಕರು, ಮಹಿಳಾ ಕವಿಗೋಷ್ಠಿ ಪ್ರತ್ಯೇಕವಿಲ್ಲ

ಕವಿಗಳ ಪಟ್ಟಿ ಶೀಘ್ರ: ಈ ಬಾರಿ ಪ್ರತಿ ಕವಿಗೋಷ್ಠಿಯಲ್ಲೂ ಮಕ್ಕಳು, ಮಹಿಳೆಯರು, ಕನ್ನಡದ ಸಹೋದರ ಭಾಷೆಗಳವರು ಹಾಗೂ ಪ್ರಾದೇಶಿಕ ಸಮತೋಲನ ಆಧರಿಸಿ ಕವಿಗಳನ್ನು ಆಯ್ಕೆ ಮಾಡಲಾಗುತ್ತಿದೆ. ಶೀಘ್ರದಲ್ಲೇ ಕವಿಗಳ ಪಟ್ಟಿ ಹೊರಬೀಳಲಿದೆ. ಮಕ್ಕಳು, ಯುವಕರು ಹಾಗೂ ಮಹಿಳಾ ಕವಿಗಳಿಗೆ ವಿವಿಧ ವೇದಿಕೆಗಳಲ್ಲಿ ವೇದಿಕೆ ಒದಗಿಸಲಾಗುತ್ತಿದೆ.

ಹಿಂದೆ ಪ್ರಧಾನ ಕವಿಗೋಷ್ಠಿ’ ಎಂದು ಕರೆಯುತ್ತಿದ್ದುದನ್ನು ಈ ಬಾರಿ ‘ಸಮೃದ್ಧ ಕವಿಗೋಷ್ಠಿ’ ಎಂದು ಹೆಸರಿಡಲಾಗಿದೆ. ಕನ್ನಡದೊಂದಿಗೆ ಇತರ ಭಾಷೆಗಳ ಕಾವ್ಯಲೋಕಕ್ಕೆ ಸಮೃದ್ಧ ಕೊಡುಗೆ ನೀಡಿದವರನ್ನು ಆಹ್ವಾನಿಸಲಾಗುವುದು. ಆದ್ದರಿಂದ ಅದು ಬಹುಭಾಷಾ ಕವಿಗೋಷ್ಠಿಯೂ ಆಗಲಿದೆ. ಹಿಂದಿ, ಇಂಗ್ಲಿಷ್, ತಮಿಳು, ತೆಲುಗು, ಅಸ್ಸಾಮಿ, ಬಂಗಾಳಿ, ಮಲಯಾಳ ಮೊದಲಾದ ಕವಿತೆಗಳನ್ನು ಕೇಳುವ ಅವಕಾಶ ಸಾಹಿತ್ಯಾಸಕ್ತರಿಗೆ ದೊರೆಯಲಿದೆ.

ಹಲವು ಭಾಷೆಯವರಿಗೆ...

‘ಬೇರೆ ರಾಜ್ಯದ 12 ಕವಿಗಳು, ವಿದೇಶದ ಮೂವರು ಕವಿಗಳನ್ನು ಆಹ್ವಾನಿಸಲಾಗುತ್ತಿದೆ. ರಾಜ್ಯದಲ್ಲಿರುವ ಸಹೋದರ ಭಾಷೆಗಳಾದ ಕೊಡವ, ತುಳು, ಕೊಂಕಣಿ, ಉರ್ದು, ಸಂಸ್ಕೃತ, ಬಂಜಾರ ಮತ್ತಿತರ ಕವಿಗಳನ್ನೂ ಕರೆಸಲಾಗುತ್ತಿದೆ’ ಎಂದು ಕವಿಗೋಷ್ಠಿ ಉಪ ಸಮಿತಿಯ ಉಪ ವಿಶೇಷಾಧಿಕಾರಿ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

ಪ್ರಾದೇಶಿಕ ಕವಿಗೋಷ್ಠಿಯಲ್ಲಿ ವಿವಿಧ ಪ್ರದೇಶದವರಿಗೆ ಅವಕಾಶವಿರಲಿದೆ. ‘ವಿಶಿಷ್ಟ’ದಲ್ಲಿ ಸಾಹಿತ್ಯ ಹೊರತುಪಡಿಸಿದ ಪತ್ರಿಕೋದ್ಯಮ, ರೈತ... ಹೀಗೆ ವಿಭಿನ್ನ ಕ್ಷೇತ್ರದಲ್ಲಿ ಕಾವ್ಯ ಬರೆಯುವವರು ಪಾಲ್ಗೊಳ್ಳಲಿದ್ದಾರೆ. ಕೈದಿಗಳಲ್ಲೂ ಕಾವ್ಯ ಬರೆಯುವ ಹವ್ಯಾಸ ಇರುತ್ತದೆ; ಅಂತಹ ವಿಶೇಷ ವ್ಯಕ್ತಿಗಳಿಗೆ ವೇದಿಕೆ ಒದಗಿಸಲಾಗುವುದು. ವಿನೋದ ವಿಭಾಗದಲ್ಲಿ ಹಾಸ್ಯ- ಕಾವ್ಯ ಜುಗಲ್‌ಬಂದಿ ನಡೆಯಲಿದೆ. ಖ್ಯಾತ ಹಾಸ್ಯ ಭಾಷಣಕಾರರು ಪಾಲ್ಗೊಳ್ಳಲಿದ್ದಾರೆ’ ಎಂದು ತಿಳಿಸಿದರು.

‘ದಸರಾ ಕವಿಗೋಷ್ಠಿಯನ್ನು ಸಾಹಿತಿ, ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಉದ್ಘಾಟಿಸಲಿದ್ದಾರೆ. ಚಲನಚಿತ್ರ ಗೀತ ರಚನೆಕಾರ ವಿ. ನಾಗೇಂದ್ರ ಪ್ರಸಾದ್ ಅವರನ್ನು ಮುಖ್ಯ ಅತಿಥಿಯಾಗಿ ಆಹ್ವಾನಿಸಲಾಗಿದೆ. ಪ್ರಾದೇಶಿಕ ಕವಿಗೋಷ್ಠಿಯನ್ನು ಕವಿ ಎಚ್.ಎಸ್. ಶಿವಪ್ರಕಾಶ್ ಉದ್ಘಾಟಿಸಲಿದ್ದಾರೆ. ವಿನೋದ ಕವಿಗೋಷ್ಠಿಗೆ ಹಂಪಾ ನಾಗರಾಜಯ್ಯ ಅವರನ್ನು ಉದ್ಘಾಟಕರನ್ನಾಗಿ ಆಹ್ವಾನಿಸಲಾಗಿದೆ’ ಎಂದು ತಿಳಿಸಿದರು.

ಗುರುವಾರ, ಸೆಪ್ಟೆಂಬರ್ 26, 2024 | ₹ 7.00


www.prajavani.net

prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಾತು
ಮುಂಬೈನಲ್ಲಿ ನಡೆದ ‘ಸ್ಪೆಕ್ಟಾಕ್ಯುಲರ್ ಸೌದಿ’ ಕಾರ್ಯಕ್ರಮದಲ್ಲಿ ನಟ ಸೋನಾಕ್ಷಿ ಸಿನ್ಹಾ ಅವರು ಕಾಣಿಸಿಕೊಂಡಿದ್ದು ಹೀಗೆ...



ಜಿಡಿಪಿ ಶೇ 7ರಷ್ಟು ಪ್ರಗತಿ: ಎಡಿಬಿ 12

‘ಕರ್ನಾಟಕ ಕಾಂಗ್ರೆಸ್‌ನಲ್ಲಿ ಆಂತರಿಕ ಕಲಹ’ 13

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
85,169	26,004	₹77,550 (ಬೆಂಗಳೂರು)	₹93,200 (ಬೆಂಗಳೂರು)	83.58

ಹೈಕೋರ್ಟ್ ನ್ಯಾಯಮೂರ್ತಿ ವಿ.ಶ್ರೀಶಾನಂದ ಆಕ್ಷೇಪಾರ್ಹ ಹೇಳಿಕೆಗೆ ಸುಪ್ರೀಂ ಕೋರ್ಟ್ ಚಾಟಿ

‘ದೇಶದ ಭಾಗಕ್ಕೆ ಪಾಕ್ ಎನ್ನುವಂತಿಲ್ಲ’

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಹೈಕೋರ್ಟ್‌ನ ನ್ಯಾಯಮೂರ್ತಿ ವಿ.ಶ್ರೀಶಾನಂದ ಆಕ್ಷೇಪಾರ್ಹ ಹೇಳಿಕೆಗಳಿಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿ ಗಳ ಪೀಠವು, ‘ಭಾರತದ ಭೂಪ್ರದೇಶದ ಯಾವುದೇ ಭಾಗವನ್ನು ಪಾಕಿಸ್ತಾನ ಎಂದು ಕರೆಯುವಂತಿಲ್ಲ. ಏಕೆಂದರೆ, ಅಂತಹ ಹೇಳಿಕೆ ಮೂಲಭೂತವಾಗಿ ರಾಷ್ಟ್ರದ ಪ್ರಾದೇಶಿಕ ಸಮಗ್ರತೆಗೆ ವಿರುದ್ಧವಾದುದು’ ಎಂದು ಅಭಿಪ್ರಾಯಪಟ್ಟಿತು.



ವೈಯಕ್ತಿಕ ಪೂರ್ವಗ್ರಹಗಳು ತಮ್ಮ ಕರ್ತವ್ಯದಲ್ಲಿ ಪ್ರತಿಫಲಿಸದಂತೆ ವಕೀಲರು ಮತ್ತು ನ್ಯಾಯಮೂರ್ತಿಗಳು ಎಚ್ಚರ ವಹಿಸಬೇಕು ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯ-ಮೂರ್ತಿಗಳಾದ ಸಂಜೀವ್ ಖನ್ನಾ, ಬಿ.ಆರ್. ಗವಾಯಿ, ಸೂರ್ಯಕಾಂತ್ ಹಾಗೂ ಹೃಷಿಕೇಶ್ ರಾಯ್ ಅವರಿದ್ದ ಪೀಠವು ಕಿವಿಮಾತು ಹೇಳಿತು.

ಸ್ತ್ರೀ ದ್ವೇಷ ಹರಡುವ ಅಥವಾ ನಿರ್ದಿಷ್ಟ ಲಿಂಗ ಅಥವಾ ಸಮುದಾಯಗಳ ಕುರಿತು ಪೂರ್ವಗ್ರಹ ಪೀಡಿತ ಹೇಳಿಕೆಗಳನ್ನು ನೀಡಬಾರದು ಎಂದೂ ತಾಕೀತು ಮಾಡಿತು. ಆದರೆ, ತಮ್ಮ ಹೇಳಿಕೆಗೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಶ್ರೀಶಾನಂದ ಬಹಿರಂಗವಾಗಿ ಕ್ಷಮೆ ಯಾಚಿಸಿದ್ದಾರೆ ಎಂಬುದನ್ನು ಗಮನಿಸಿದ ನ್ಯಾಯಪೀಠವು ಪ್ರಕರಣದ ಸ್ವಯಂಪ್ರೇರಿತ ವಿಚಾರಣೆಯನ್ನು ಮುಕ್ತಾಯ-ಗೊಳಿಸಿತು.

‘ಇದು ಸಾಮಾಜಿಕ ಮಾಧ್ಯಮದ ಯುಗ. ಈ ಕಾಲ-ಘಟ್ಟದಲ್ಲಿ ನ್ಯಾಯಮೂರ್ತಿಗಳ ಯಾವುದೇ ಅಭಿಪ್ರಾಯ ಅಥವಾ ಹೇಳಿಕೆ ವ್ಯಾಪಕ ಪರಿಣಾಮ ಬೀರುತ್ತದೆ. ನಕಾರಾತ್ಮಕ ಪ್ರಚಾರವು ನ್ಯಾಯಾಂಗ ವ್ಯವಸ್ಥೆ ಮೇಲೂ ಪರಿಣಾಮ ಬೀರುತ್ತದೆ. ಈ ಬಗ್ಗೆ ನ್ಯಾಯಮೂರ್ತಿಗಳು ಎಚ್ಚರಿಕೆ ವಹಿಸಬೇಕು’ ಎಂದು ಪೀಠ ತಿಳಿಸಿತು.

‘ಕಲಾಪವು ನ್ಯಾಯಾಲಯದ ಭೌತಿಕ ಎಲ್ಲೆ ಮೀರಿದ ಪ್ರೇಕ್ಷಕರನ್ನು ತಲುಪುತ್ತದೆ ಎಂಬುದನ್ನು ಎಲ್ಲ ಕಕ್ಷಿದಾರರು, ನ್ಯಾಯಾಧೀಶರು, ವಕೀಲರು ತಿಳಿದಿರಬೇಕು. ತಮ್ಮ ಅವಲೋಕನ ಅಥವಾ ಅಭಿಪ್ರಾಯದಿಂದ ಸಮಾಜದ ಮೇಲೆ ಬೀರುವ ವ್ಯಾಪಕ ಪ್ರಭಾವದ ಬಗ್ಗೆ ಎಲ್ಲರೂ ಅರಿತು ಕಾರ್ಯನಿರ್ವಹಿಸಬೇಕು’ ಎಂದು ಪೀಠ ಕಿವಿಮಾತು ಹೇಳಿತು.

ಪ್ರಕರಣದ ಸಂಬಂಧ ಹೈಕೋರ್ಟ್‌ನ ರಿಜಿಸ್ಟ್ರಾರ್ ಜನರಲ್ ಸಲ್ಲಿಸಿರುವ ವರದಿಯನ್ನು ಗಮನಿಸಿದ ಪೀಠವು, ‘ಹೈಕೋರ್ಟ್ ನ್ಯಾಯಮೂರ್ತಿ ಅವರು ಈ ಪ್ರಕರಣದಲ್ಲಿ ಪ್ರತಿವಾದಿಯಾಗಿಲ್ಲ. ಜತೆಗೆ, ಅವರು ತಮ್ಮ ಹೇಳಿಕೆ ಉದ್ದೇಶಪೂರ್ವಕ ಅಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಹೀಗಾಗಿ, ಈ ವಿಷಯದಲ್ಲಿ ಪೀಠವು ಇನ್ನಷ್ಟು ಅಭಿಪ್ರಾಯಗಳನ್ನು ನೀಡುವುದಿಲ್ಲ. ನ್ಯಾಯದ ಹಿತಾಸಕ್ತಿ ಹಾಗೂ ನ್ಯಾಯಾಲಯದ ಘನತೆಯನ್ನು ಪರಿಗಣಿಸಿ ಈ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಲು ಒಲವು ಹೊಂದಿದೆ’ ಎಂದು ಹೇಳಿತು. ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ‘ನ್ಯಾಯಮೂರ್ತಿಯವರು ಕ್ಷಮೆಯಾಚಿಸಿರುವ ಕಾರಣ ಈ ಪ್ರಕರಣವನ್ನು ಇನ್ನಷ್ಟು ವಿಸ್ತರಿಸುವುದು ಬೇಡ. ಸಾಮಾಜಿಕ ಜಾಲತಾಣಗಳನ್ನು ನಿಯಂತ್ರಿಸಲು ಸಾಧ್ಯವಿಲ್ಲ’ ಎಂದು ಪ್ರತಿಪಾದಿಸಿದರು.

ಕಲಾಪ ನೇರ ಪ್ರಸಾರ ಸ್ಥಗಿತ ಇಲ್ಲ

‘ಕೋರ್ಟ್‌ಗಳ ಕಲಾಪದ ನೇರಪ್ರಸಾರವನ್ನು ರದ್ದುಗೊಳಿಸಬೇಕು ಎಂಬ ಒತ್ತಾಯ ಆರಂಭವಾಗಿದೆ. ಇಂತಹ ವಿವಾದಗಳು ಈ ಬೇಡಿಕೆಯನ್ನು ಪ್ರಚೋದಿಸಬಾರದು. ಸಾಮಾಜಿಕ ಮಾಧ್ಯಮಗಳನ್ನು ನಿಯಂತ್ರಿಸಲು ಆಗುವುದಿಲ್ಲ. ಸೂರ್ಯನ ಬೆಳಕಿಗೆ ಪ್ರಖರವಾದ ಸೂರ್ಯನ ಬೆಳಕೇ ಉತ್ತರ. ಏನಾಯಿತು ಎಂಬುದನ್ನು ನಾವು ನಿರ್ಲಕ್ಷಿಸುತ್ತಿಲ್ಲ. ಏಕೆಂದರೆ, ಇದು ಎಲ್ಲರಿಗೂ ಮುಖ್ಯವಾದ ಎಚ್ಚರಿಕೆ ಗಂಟೆ. ಬಾಗಿಲುಗಳನ್ನು ಮುಚ್ಚುವುದು ಅಥವಾ ಎಲ್ಲವನ್ನೂ ಮುಚ್ಚಿಡುವುದು ಇದಕ್ಕೆ ಪರಿಹಾರ ಅಲ್ಲ’ ಎಂದು ಪೀಠ ತಿಳಿಸಿತು.

‘ಕೋವಿಡ್- 19 ಸಾಂಕ್ರಾಮಿಕದ ಸಂದರ್ಭದಲ್ಲಿ ಅಗತ್ಯವಾಗಿ ಹೊರಹೊಮ್ಮಿದ ನೇರ ಪ್ರಸಾರವು ಇಂದು ದೇಶದ ಬಹುತೇಕ ಹೈಕೋರ್ಟ್‌ಗಳಲ್ಲಿದೆ. ಜನರು ಎಲ್ಲಿಂದಲಾದರೂ ನ್ಯಾಯ ಪಡೆಯುವಂತೆ ಅವರಿಗೆ ಸವಲತ್ತು ಒದಗಿಸುವ ಮಹತ್ವದ ಉಪಕ್ರಮ ಇದಾಗಿದೆ’ ಎಂದು ತಿಳಿಸಿತು.

ಪೂರ್ವಗ್ರಹದ ಹೇಳಿಕೆ ಸಲ್ಲ

‘ಲಿಂಗ ಅಥವಾ ಸಮುದಾಯಕ್ಕೆ ಸಂಬಂಧಿಸಿದಂತೆ ನೀಡುವ ಸಾಂದರ್ಭಿಕ ಹೇಳಿಕೆಗಳು ಪೂರ್ವಾಗ್ರಹದಿಂದ ಕೂಡಿರುವಂತಹವು ಎಂದು ಜನರು ಗ್ರಹಿಸುವ ಸಾಧ್ಯತೆ ಇದೆ. ಹೀಗಾಗಿ, ನ್ಯಾಯಮೂರ್ತಿಗಳು ಅಭಿಪ್ರಾಯ ವ್ಯಕ್ತ-ಪಡಿಸುವ ಸಂದರ್ಭದಲ್ಲಿ ಜಾಗರೂಕರಾಗಿರಬೇಕು. ನಿರ್ದಿಷ್ಟ ಲಿಂಗ ಅಥವಾ ಸಮುದಾಯಗಳ ಕುರಿತ ಅವಲೋಕನಗಳ ಬಗ್ಗೆ ನಮಗೆ ಗಂಭೀರ ಕಳವಳ ಇದೆ. ಅಂತಹ ಅವಲೋಕನಗಳನ್ನು ನಕಾರಾತ್ಮಕವಾಗಿ ಅರ್ಥೈಸಿಕೊಳ್ಳಬಹುದಾಗಿದೆ. ನ್ಯಾಯಿಕ ಪ್ರಕ್ರಿಯೆಯ ವೇಳೆ ವಕೀಲರು ಹಾಗೂ ನ್ಯಾಯಮೂರ್ತಿಗಳು ತಮಗೆ ವಹಿಸಲಾದ ಜವಾಬ್ದಾರಿಗಳನ್ನು ಪಕ್ಷಪಾತವಿಲ್ಲದೆ, ಎಚ್ಚರಿಕೆಯಿಂದ ನಿರ್ವಹಿಸು-ತ್ತಾರೆ ಎಂದು ನಾವು ನಿರೀಕ್ಷಿಸಿದ್ದೇವೆ’ ಎಂದು ಪೀಠ ಅಭಿಪ್ರಾಯಪಟ್ಟಿತು.



ಮತದಾನ ಜಮ್ಮು ಮತ್ತು ಕಾಶ್ಮೀರದಲ್ಲಿ ಬುಧವಾರ ನಡೆದ 2ನೇ ಹಂತದ ಮತದಾನದ ವೇಳೆ ಪೂಂಛ್ ಜಿಲ್ಲೆಯ ಸುರಾನ್‌ಕೋಟ್‌ನ ಮತಗಟ್ಟೆಯಲ್ಲಿ ಕಂಡುಬಂದ ಚಿತ್ರಣ –ಪಿಟಿಐ ಚಿತ್ರ

ಇನ್ನಷ್ಟು ಸುದ್ದಿಗಳು 13

‘ಡಿನೋಟಿಫೈ: ಅಧಿಕಾರಿಗಳಿಗೆ ನೋಟಿಸ್’

ಪೀಣ್ಯ ಜಾಲಹಳ್ಳಿಯಲ್ಲಿ ಎಚ್‌ಎಂಟಿ ವಶದಲ್ಲಿರುವ ಅರಣ್ಯ ಪ್ರದೇಶಕ್ಕೆ ಸಚಿವ ಈಶ್ವರ ಖಂಡ್ರೆ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಯಮಗಳನ್ನು ಗಾಳಿಗೆ ತೂರಿ ಪೀಣ್ಯ-ಜಾಲಹಳ್ಳಿ ಸರ್ವೆ ನಂಬರ್ 1 ಮತ್ತು 2ರಲ್ಲಿ 599 ಎಕರೆ ಅರಣ್ಯ ಭೂಮಿಯನ್ನು (ಎಚ್‌ಎಂಟಿ ಪ್ರದೇಶ) ಡಿನೋಟಿಫೈ ಮಾಡಲು ಸುಪ್ರೀಂ ಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಿದ್ದ ಅಧಿಕಾರಿಗಳಿಗೆ ಕಾರಣ ಕೇಳಿ ನೋಟಿಸ್ ನೀಡುವಂತೆ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚನೆ ನೀಡಿದ್ದಾರೆ.

ಈ ಕುರಿತು ಟಿಪ್ಪಣಿ ನೀಡಿರುವ ಖಂಡ್ರೆ, ‘ಅರಣ್ಯ ಸಚಿವರ ಅಥವಾ ಸಚಿವ ಸಂಪುಟದ ಪೂರ್ವಾನುಮತಿ ಪಡೆಯದೆ ಸಾವಿರಾರು ಕೋಟಿ ರೂಪಾಯಿ ಮೌಲ್ಯದ ಅರಣ್ಯ ಭೂಮಿಯನ್ನು ಡಿನೋಟಿಫೈ ಮಾಡಲು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿರುವ ಪ್ರಕರಣದಲ್ಲಿ ಭಾಗಿಯಾಗಿರುವ ಎಲ್ಲ ಅಧಿಕಾರಿಗಳಿಗೆ ಕಾರಣ ಕೇಳಿ ನೋಟಿಸ್ ನೀಡಿ ಏಳು ದಿನಗಳ ಒಳಗೆ ಉತ್ತರ ಪಡೆಯಬೇಕು. ನಂತರ ಮುಂದಿನ ಕ್ರಮ ತೆಗೆದುಕೊಳ್ಳಲು ಪ್ರಸ್ತಾವ ಸಲ್ಲಿಸಬೇಕು’ ಎಂದು ನಿರ್ದೇಶನ ನೀಡಿದ್ದಾರೆ.



> ತಮ್ಮ ಹಂತದಲ್ಲಿಯೇ ಅರಣ್ಯ ಭೂಮಿ ಡಿನೋಟಿಫೈ ಮಾಡಿ ಸುಪ್ರೀಂ ಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಿರುವ ಅಧಿಕಾರಿಗಳ ನಡೆ ಅನುಮಾನ ಹುಟ್ಟಿಸುವಂತಿದೆ
>
> **ಈಶ್ವರ ಖಂಡ್ರೆ,** ಅರಣ್ಯ ಸಚಿವ

ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 17ರಡಿ ‘ಮೀಸಲು ಅರಣ್ಯ’ ಎಂದು ಅಧಿಸೂಚಿತ ಭೂಮಿಯನ್ನು ‘ಅರಣ್ಯ ಅಲ್ಲ’ ಎಂದು ಘೋಷಿಸಬೇಕಾದರೆ ವಿಧಾನಮಂಡಲದ ಉಭಯ ಸದನಗಳಲ್ಲಿ ನಿರ್ಣಯ ಆಗಬೇಕು. ಅಲ್ಲದೆ, ಯಾವುದೇ ಇತರ ಸರ್ಕಾರಿ ಇಲಾಖೆಗೆ ಸರ್ಕಾರಿ ಭೂಮಿ ವರ್ಗಾವಣೆ ಮಾಡಬೇಕಾದ ಸಂದರ್ಭದಲ್ಲಿ, ಅದರ ಮೌಲ್ಯ ₹5 ಕೋಟಿಗಿಂತ ಹೆಚ್ಚಾಗಿದ್ದರೆ ಸಚಿವ ಸಂಪುಟದ ಪೂರ್ವಾನುಮತಿ ಪಡೆಯಬೇಕು ಎಂದು ಕರ್ನಾಟಕ ಸರ್ಕಾರದ ಕಾರ್ಯ ಕಲಾಪಗಳನಿರ್ವಹಣಾ ನಿಯಮಾವಳಿ 1977ರಲ್ಲಿ ತಿಳಿಸಲಾಗಿದೆ.

3ನೇ ಪುಟ ನೋಡಿ


ಭರಚುಕ್ಕಿ: ಕಿರು ಜಲವಿದ್ಯುತ್ ಯೋಜನೆಗೆ ಮರು ಪ್ರಸ್ತಾವ

• ಎಸ್. ರವಿಪ್ರಕಾಶ್

ಬೆಂಗಳೂರು: ಕಾವೇರಿ ವನ್ಯಜೀವಿ ಧಾಮದ ಪರಿಸರ ಸೂಕ್ಷ್ಮ ವಲಯದ ವ್ಯಾಪ್ತಿಯಲ್ಲಿ 5 ಮೆಗಾ ವಾಟ್ 'ಭರಚುಕ್ಕಿ ಕಿರು ಜಲ ವಿದ್ಯುತ್ ಯೋಜನೆ' ಸ್ಥಾಪನೆಗಾಗಿ ‘ಮಧ್ಯರಂಗ ಎನರ್ಜಿ ಲಿಮಿಟೆಡ್’ ಸರ್ಕಾರಕ್ಕೆ ಎರಡನೇ ಬಾರಿ ಪ್ರಸ್ತಾವ ಸಲ್ಲಿಸಿದೆ.

ಈ ಹಿಂದೆ 2015ರಲ್ಲಿ 4.41 ಹೆಕ್ಟೇರ್ ಅರಣ್ಯ ಭೂಮಿಯನ್ನು ಜಲವಿದ್ಯುತ್ ಯೋಜನೆಗೆ ನೀಡಬೇಕು ಎಂದು ಪ್ರಸ್ತಾವ ಸಲ್ಲಿಸಿತ್ತು. ಭರಚುಕ್ಕಿ ಮೀಸಲು ಅರಣ್ಯ, ಪರಿಸರ ಸೂಕ್ಷ್ಮ ಪ್ರದೇಶ ಮತ್ತು ಆನೆಗಳು ಓಡಾಡುವ ಪ್ರದೇಶವಾಗಿದ್ದರಿಂದ ಪ್ರಸ್ತಾವ ತಿರಸ್ಕರಿಸಲು ಅರಣ್ಯ ಇಲಾಖೆ ಶಿಫಾರಸು ಮಾಡಿತ್ತು. ಇದೀಗ ವಿದ್ಯುತ್ ಯೋಜನೆಗೆ ಅಗತ್ಯವಿರುವ ಭೂಮಿಯ ವಿಸ್ತೀರ್ಣವನ್ನು ಕಡಿಮೆ ಮಾಡಿ ಮಧ್ಯರಂಗ ಸಂಸ್ಥೆ ಹೊಸದಾಗಿ ಪ್ರಸ್ತಾವ ಸಲ್ಲಿಸಿದ್ದು, ಅದು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮೂಲಗಳು ತಿಳಿಸಿವೆ.

ಹಿಂದೆ ತಿರಸ್ಕೃತಗೊಂಡಿದ್ದು ಏಕೆ?: 2015ರಲ್ಲಿ ಮಧ್ಯರಂಗ ಪ್ರಸ್ತಾವ ಸಲ್ಲಿಸಿದ್ದ ಕಾರಣ 2016ರಲ್ಲಿ ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಡಿಸಿಎಫ್, ಕ್ಷೇತ್ರ ಪರಿಶೀಲನೆ ನಡೆಸಿ ಚಾಮರಾಜನಗರ ಸಿಸಿಎಫ್ ಅವರಿಗೆ ವರದಿ ಸಲ್ಲಿಸಿದ್ದರು.



‘ಯೋಜನೆಗೆ ಗುರುತಿಸಿರುವ ಸ್ಥಳವು ಭರಚುಕ್ಕಿ ಜಲಪಾತದ ನದಿ ಪಾತ್ರ-ದಲ್ಲಿದ್ದು, ಇದು ಆನೆಗಳ ಸಂಚಾರದ ಕಾರಿಡಾರ್ ವ್ಯಾಪ್ತಿಯಲ್ಲಿದೆ. ಒಂದು ವೇಳೆ ಯೋಜನೆ ಜಾರಿಯಾದರೆ, ಇಲ್ಲಿ ಆನೆಗಳ ಸರಾಗ ಸಂಚಾರಕ್ಕೆ ಅಡ್ಡಿ ಉಂಟಾಗುತ್ತದೆ. ಇದರಿಂದ ಮಾನವ–ಆನೆ ಸಂಘರ್ಷಕ್ಕೂ ಕಾರಣವಾಗುತ್ತದೆ. ಆದ್ದರಿಂದ ಈ ಯೋಜನೆ ಅನುಷ್ಠಾನ ಒಪ್ಪಿಕೊಳ್ಳಲು ಸಾಧ್ಯವಿಲ್ಲ’ ಎಂದು ವರದಿ ಸ್ಪಷ್ಟವಾಗಿ ಹೇಳಿತ್ತು.

ಅಲ್ಲದೇ, ಉದ್ದೇಶಿತ ವೆಸ್ಲಿ ಪಕ್ಷಿ ಧಾಮದ ಜೀವ ವೈವಿಧ್ಯದ ಮೇಲೂ ಪರಿಣಾಮ ಬೀರುತ್ತದೆ.

6ನೇ ಪುಟ ನೋಡಿ

‘ಪೌರ ಕಾರ್ಮಿಕರಿಗೆ ಅಗೌರವ: ಶಿಕ್ಷಾರ್ಹ ಅಪರಾಧ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪೌರ ಕಾರ್ಮಿಕರ ಜೊತೆ ಸೌಹಾರ್ದದಿಂದ ನಡೆದುಕೊಳ್ಳಬೇಕು. ಅಗೌರವದಿಂದ ಕಾಣುವುದು ಶಿಕ್ಷಾರ್ಹ ಅಪರಾಧ’ ಎಂದು ಪೌರಾಡಳಿತ ನಿರ್ದೇಶನಾಲಯ ಹೇಳಿದೆ.

ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಪತ್ರವನ್ನು ಉಲ್ಲೇಖಿಸಿ ಪ್ರಕಟಣೆ ಹೊರಡಿಸಲಾಗಿದ್ದು, ‘ಸ್ವಚ್ಛತಾ ಕಾರ್ಯನಿರ್ವಹಿಸುವ ಪೌರ ಕಾರ್ಮಿಕರ ಮೇಲೆ ಹಲ್ಲೆ ನಡೆಸುವುದು, ಜಾತಿ ಹೆಸರಿನಲ್ಲಿ ನಿಂದಿಸುವುದು ಶಿಕ್ಷಾರ್ಹ ಅಪರಾಧ’ ಎಂದು ತಿಳಿಸಲಾಗಿದೆ.

‘ಅಸ್ಪೃಶ್ಯತೆಯನ್ನು ನಿಷೇಧಿಸ-ಲಾಗಿದ್ದು, ಯಾವುದೇ ರೂಪದಲ್ಲಿ ಅದರ ಆಚರಣೆ ಅಪರಾಧ. ಸ್ವಚ್ಛತಾ ಕಾರ್ಮಿಕರನ್ನು ಗೌರವಿಸುವುದು ನೈತಿಕ ಬಾಧ್ಯತೆ ಅಷ್ಟೇ ಅಲ್ಲ, ಸಮಾಜದ ಕರ್ತವ್ಯವೂ ಆಗಿದೆ. ಹೀಗಾಗಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಸದಸ್ಯರನ್ನು ಜಾತಿ ಹೆಸರಿನಲ್ಲಿ ನಿಂದಿಸುವುದು, ಅವಮಾನಿಸುವುದು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ (ದೌರ್ಜನ್ಯ ತಡೆ) ತಿದ್ದುಪಡಿ ಕಾಯ್ದೆಯಡಿ ಶಿಕ್ಷಾರ್ಹ ಅಪರಾಧ’ ಎಂದೂ ಎಚ್ಚರಿಸಿದೆ.

ದೇಹ ಕತ್ತರಿಸಿ ಫ್ರಿಜ್‌ನಲ್ಲಿಟ್ಟಿದ್ದ ಪ್ರಕರಣ: ಕೃತ್ಯದ ಬಳಿಕ ಒಡಿಶಾಗೆ ಪರಾರಿಯಾಗಿದ್ದ ಸಹೋದ್ಯೋಗಿ, ಲ್ಯಾಪ್‌ಟಾಪ್ ಜಪ್ತಿ

ಮಹಾಲಕ್ಷ್ಮಿ ಕೊಲೆ: ಆರೋಪಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಟ್ಟೆ ಷೋರೂಂನಲ್ಲಿ ಕೆಲಸ ಮಾಡುತ್ತಿದ್ದ ಮಹಾಲಕ್ಷ್ಮಿ ಅವರನ್ನು ಆಕೆಯ ಪ್ರಿಯಕರ ಒಡಿಶಾದ ಮುಕ್ತಿ ರಂಜನ್ ಎಂಬಾತನೇ ಕೊಲೆ ಮಾಡಿದ್ದಾನೆಂದು ಪೊಲೀಸ್ ತನಿಖೆಯಿಂದ ಗೊತ್ತಾಗಿದ್ದು, ಆತ ಒಡಿಶಾದಲ್ಲಿ ಮರಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

'ನಗರದ ಮಲ್ಲೇಶ್ವರದ ಬಟ್ಟೆ ಷೋರೂಂವೊಂದರಲ್ಲಿ ಮಹಾಲಕ್ಷ್ಮಿ ಅವರು ಕೆಲಸ ಮಾಡುತ್ತಿದ್ದರು. ಅಲ್ಲೇ ಕೆಲಸ ಮಾಡುತ್ತಿದ್ದ ಮುಕ್ತಿ ರಂಜನ್ ರಾಯ್ ಪರಿಚಯವಾಗಿತ್ತು. ಇಬ್ಬರೂ ಪ್ರೀತಿಸುತ್ತಿದ್ದರು. ಈ ಮಧ್ಯೆ ಮಹಾಲಕ್ಷ್ಮಿ ಬೇರೊಬ್ಬ ಯುವಕನ ಜತೆಯೂ ಆತ್ಮೀಯವಾಗಿದ್ದರು. ಆ ಯುವಕ ಮಹಾಲಕ್ಷ್ಮಿ ಅವರನ್ನು ಕೆಲಸದ ಸ್ಥಳಕ್ಕೆ ಕರೆದೊಯ್ಯುವುದು, ಮನೆಗೆ ವಾಪಸ್ ತಂದು ಬಿಡುವುದು ಮಾಡುತ್ತಿದ್ದ. ಇದರಿಂದ ಸಿಟ್ಟಿಗೆದ್ದಿದ್ದ ಮುಕ್ತಿ ರಂಜನ್ ಕೊಲೆಗೆ ಸಂಚು ರೂಪಿಸಿ ಮನೆಗೆ ನುಗ್ಗಿ ಮಹಾಲಕ್ಷ್ಮಿ ಅವರನ್ನು ಕೊಲೆ ಮಾಡಿದ್ದ. ನಂತರ, ಹ್ಯಾಕ್‌ಸಾ ಬ್ಲೇಡ್‌ನಿಂದ ದೇಹವನ್ನು 50ಕ್ಕೂ ಹೆಚ್ಚು ತುಂಡುಗಳನ್ನಾಗಿ ಕತ್ತರಿಸಿ ಫ್ರಿಜ್‌ನಲ್ಲಿ ಇಟ್ಟಿದ್ದ. ಆಮೇಲೆ ರೈಲಿನ ಮೂಲಕ ಒಡಿಶಾದ ಭದ್ರಕ್ ಜಿಲ್ಲೆಯ ಭುನಿಪುರಕ್ಕೆ ತೆರಳಿದ್ದ' ಎಂದು ಮೂಲಗಳು ತಿಳಿಸಿವೆ.

'ಕೊಲೆ ಮಾಡಿ ಪರಾರಿಯಾಗಿದ್ದವನು ಭುನಿಪುರದ ಮನೆಯಲ್ಲೇ ಇದ್ದ. ಕೃತ್ಯ ಎಸಗಿದ್ದ ಬಗ್ಗೆ ಮನೆಯವರಿಗೆ ಮಾಹಿತಿ ನೀಡಿರಲಿಲ್ಲ. ಕರ್ನಾಟಕದ ಪೊಲೀಸರು ಹುಡುಕಾಟ ನಡೆಸುತ್ತಿರುವ ಮಾಹಿತಿ ತಿಳಿದು, ಮಂಗಳವಾರ ಮಧ್ಯಾಹ್ನ ಸ್ಮಶಾನಕ್ಕೆ ತೆರಳಿ ಮರಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ' ಎಂದು ತಿಳಿಸಿವೆ.

ಈ ಸಂಬಂಧ ಧುಸುರಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಆರೋಪಿ ಆತ್ಮಹತ್ಯೆ ಮಾಡಿಕೊಂಡ ಮಾಹಿತಿಯನ್ನು ಧುಸುರಿ ಪೊಲೀಸರು, ಬೆಂಗಳೂರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಮುಕ್ತಿ ರಂಜನ್ ಬಳಸುತ್ತಿದ್ದ ಲ್ಯಾಪ್‌ಟಾಪ್ ಜಪ್ತಿ ಮಾಡಿಕೊಳ್ಳಲಾಗಿದೆ.



ಮುಕ್ತಿ ರಂಜನ್ ರಾಯ್



ಮಹಾಲಕ್ಷ್ಮಿ

ಅದರಲ್ಲಿ ಕೆಲವು ಫೋಟೊ ಹಾಗೂ ವಿಡಿಯೊಗಳಿವೆ ಎಂದು ತಿಳಿಸಿವೆ.

ಹೆಬ್ಬಗೋಡಿಯಲ್ಲಿ ಸಹೋದರನ ಜತೆ ವಾಸವಾಗಿದ್ದ ಮುಕ್ತಿ ರಂಜನ್ ನಿತ್ಯ ಅಲ್ಲಿಂದಲೇ ಮಲ್ಲೇಶ್ವರದ ಬಟ್ಟೆ ಷೋರೂಂಗೆ ಕೆಲಸಕ್ಕೆ ಬರುತ್ತಿದ್ದ. ಕೊಲೆ ಮಾಡಿದ ಬಳಿಕ ಸಹೋದರನಿಗೆ ಕರೆ ಮಾಡಿ, ಮಹಾಲಕ್ಷ್ಮಿ ಅವರನ್ನು ಕೊಲೆ ಮಾಡಿರುವುದಾಗಿ ತಿಳಿಸಿದ್ದ. ಬಳಿಕ ಮನೆಗೂ ತೆರಳಿ, ಸಹೋದರನ ಜತೆ ಮಾತನಾಡಿ, ಒಡಿಶಾಗೆ ಪರಾರಿಯಾಗಿದ್ದ. ನಂತರ, ಮೊಬೈಲ್ ಫೋನ್ ಅನ್ನು ಸ್ವಿಚ್ ಮಾಡಿಕೊಂಡಿದ್ದ. ಫೋನ್ ಬಳಸದೆ ಒಡಿಶಾದಲ್ಲಿ ಓಡಾಡುತ್ತಿದ್ದ ಎಂದು ಮೂಲಗಳು ತಿಳಿಸಿವೆ.

ಸಹೋದರ ವಶಕ್ಕೆ: ಪ್ರಕರಣದಲ್ಲಿ ಮುಕ್ತಿ ರಂಜನ್ ಕೈವಾಡ ಸ್ಪಷ್ಟವಾಗುತ್ತಿದ್ದಂತೆಯೇ ಆತನ ಸಹೋದರರನ್ನು ವೈಯಾಲಿಕಾವಲ್ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದರು. ಆರೋಪಿ ಪತ್ತೆಗೆ ಕೇಂದ್ರ ವಿಭಾಗದ ಪೊಲೀಸರ ಆರು ವಿಶೇಷ ತಂಡಗಳನ್ನು ರಚಿಸಿದ್ದರು. ಮೂರು ತಂಡಗಳು, ಒಡಿಶಾ ಹಾಗೂ ಪಶ್ಚಿಮ ಬಂಗಾಳದಲ್ಲಿ ಎರಡು ದಿನಗಳಿಂದ ಬೀಡುಬಿಟ್ಟು ಹುಡುಕಾಟ ನಡೆಸುತ್ತಿದ್ದವು.

'ಮದುವೆಗೂ ಮೊದಲು ಮಹಾಲಕ್ಷ್ಮಿ ಅವರು ತಂದೆ–ತಾಯಿ ಜತೆಗೆ ನೆಲಮಂಗಲದಲ್ಲೇ ನೆಲಸಿದ್ದರು. ಹೇಮಂತ್‌ದಾಸ್ ಅವರ ಜತೆಗೆ ಆರು ವರ್ಷಗಳ ಹಿಂದೆ ಮದುವೆ ಆಗಿತ್ತು. ಈ ದಂಪತಿಗೆ ನಾಲ್ಕು ವರ್ಷದ ಹೆಣ್ಣು ಮಗುವಿತ್ತು. ಪತಿ–ಪತ್ನಿಯರ ನಡುವೆ ವೈಮನಸ್ಸು ಉಂಟಾಗಿ, ಪ್ರತ್ಯೇಕವಾಗಿ ವಾಸಿಸಲು ನಿರ್ಧರಿಸಿದ್ದರು.

2023ರ ಅಕ್ಟೋಬರ್‌ನಲ್ಲಿ ಮಹಾಲಕ್ಷ್ಮಿ ಅವರು ವೈಯಾಲಿಕಾವಲ್‌ನ ಬಸಪ್ಪ ಗಾರ್ಡನ್‌ನ ಪೈಪ್‌ಲೈನ್ ರಸ್ತೆಯಲ್ಲಿ ಬಾಡಿಗೆ ಮನೆಯಲ್ಲಿ ಒಂಟಿಯಾಗಿ ಜೀವನ ಸಾಗಿಸುತ್ತಿದ್ದರು. ಹೇಮಂತ್‌ದಾಸ್ ಅವರು ನೆಲಮಂಗಲದಲ್ಲೇ ಮೊಬೈಲ್ ಫೋನ್ ಬಿಡಿಭಾಗಗಳ ಮಾರಾಟ ಮುಂದುವರೆಸಿದ್ದರು. ಮಗುವನ್ನೂ ಹೇಮಂತ್ ಅವರೇ ಸಾಕುತ್ತಿದ್ದರು. ಈ ಮಧ್ಯೆ ಮಹಾಲಕ್ಷ್ಮಿ ಅವರು ಮಲ್ಲೇಶ್ವರದ ಬಟ್ಟೆ ಷೋರೂಂನಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದರು. ಆಗ ಆರೋಪಿಯ ಪರಿಚಯವಾಗಿತ್ತು' ಎಂದು ಮೂಲಗಳು ತಿಳಿಸಿವೆ.

ಕೃತ್ಯಕ್ಕೆ ಕೆಲವರ ಸಹಕಾರ

ಕೊಲೆಯಾದ ಮಹಾಲಕ್ಷ್ಮಿ ವಾಸಿಸುತ್ತಿದ್ದ ಮನೆಯಲ್ಲಿ ವಿಧಿ ವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ತಜ್ಞರು ಆರೋಪಿ ಗುರುತು ಪತ್ತೆಗೆ ಶೋಧ ನಡೆಸಿದ್ದರು. ಆಗ ಹಲವರ ಬೆರಳಚ್ಚು ಗುರುತು ಪತ್ತೆಯಾಗಿವೆ. ಕೃತ್ಯ ಎಸಗಲು ಆರೋಪಿ, ಕೆಲವರ ಸಹಕಾರ ಪಡೆದಿರುವ ಅನುಮಾನವಿದೆ. ಆ ನಿಟ್ಟಿನಲ್ಲೂ ತನಿಖೆ ಮುಂದುವರೆಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಸೆ. 2ರಂದೇ ಕೊಲೆ

ಸೆ.1ರಂದು ಮಹಾಲಕ್ಷ್ಮಿ ಹಾಗೂ ಮುಕ್ತಿ ರಂಜನ್ ಕೆಲಸಕ್ಕೆ ಹಾಜರಾಗಿದ್ದರು. ಸೆ.2ರಂದು ಮಹಾಲಕ್ಷ್ಮಿ ವಾರದ ರಜೆ ತೆಗೆದುಕೊಂಡಿದ್ದರು. ಅಂದು ನೆಲಮಂಗಲದಲ್ಲಿರುವ ತಾಯಿ ಮನೆಗೆ ಬರುವುದಾಗಿ ಹೇಳಿದ್ದರು. ಅಲ್ಲಿಗೆ ಹೋಗಿರಲಿಲ್ಲ. ಅಂದು ರಾತ್ರಿಯಿಂದಲೇ ಮಹಾಲಕ್ಷ್ಮಿ ಅವರ ಮೊಬೈಲ್ ಸ್ವಿಚ್ ಆಫ್ ಬರುತ್ತಿತ್ತು. ಅಂದೇ ದಿನ ಆರೋಪಿ ಕೃತ್ಯ ಎಸಗಿದ್ದಾನೆ ಎನ್ನಲಾಗಿದೆ.

ಸುದ್ದಿ 2 ನಿಮಿಷ

ಶ್ರೀರಂಗಪಟ್ಟಣ ದಸರಾ ಉದ್ಘಾಟನೆಗೆ ಶಿವರಾಜ್‌ಕುಮಾರ್

ಶ್ರೀರಂಗಪಟ್ಟಣ (ಮಂಡ್ಯ): 'ಅಕ್ಟೋಬರ್ 4ರಿಂದ ನಾಲ್ಕು ದಿನಗಳ ಕಾಲ ನಡೆಯಲಿರುವ ಶ್ರೀರಂಗಪಟ್ಟಣ ದಸರಾ ಉತ್ಸವವನ್ನು ಚಿತ್ರನಟ ಶಿವರಾಜಕುಮಾರ್ ಉದ್ಘಾಟಿಸಲಿದ್ದಾರೆ' ಎಂದು ಜಿಲ್ಲಾಧಿಕಾರಿ ಕುಮಾರ ತಿಳಿಸಿದರು.



ಪಟ್ಟಣದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಅಂದು ಮಧ್ಯಾಹ್ನ ಕಿರಂಗೂರು ದಸರಾ ಬನ್ನಿ ಮಂಟಪದ ಬಳಿ ಜಂಬೂ ಸವಾರಿಗೆ ಶಿವರಾಜಕುಮಾರ್ ಚಾಲನೆ ನೀಡಲಿದ್ದು, ಮೂರು ಆನೆಗಳು ಪಾಲ್ಗೊಳ್ಳಲಿವೆ' ಎಂದು ತಿಳಿಸಿದರು.

'ಸಂಜೆ ಶ್ರೀರಂಗನಾಥಸ್ವಾಮಿ ದೇವಾಲಯ ಮೈದಾನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಚಾಲನೆ ನೀಡಲಿದ್ದಾರೆ. ಗಾಯಕ ವಿಜಯ್ ಪ್ರಕಾಶ್, ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಕಾರ್ಯಕ್ರಮ ನೀಡಲಿದ್ದಾರೆ. ಸ್ಥಳೀಯ ಕಲಾವಿದರೂ ಪಾಲ್ಗೊಳ್ಳಲಿದ್ದಾರೆ' ಎಂದು ತಿಳಿಸಿದರು.

₹500 ಕೋಟಿ ಬಿಲ್ ಅಕ್ರಮ ಪಾವತಿ: ತನಿಖೆಗೆ ತಂಡ

ಬೆಂಗಳೂರು: ರಾಜರಾಜೇಶ್ವರಿ ನಗರ ವಿಧಾನಸಭೆ ಕ್ಷೇತ್ರದಲ್ಲಿ ಕಾಮಗಾರಿಗಳಿಗೆ ₹500 ಕೋಟಿ ಬಿಲ್ ಪಾವತಿಯಲ್ಲಿ ಅಕ್ರಮ ನಡೆದಿರುವ ಬಗ್ಗೆ ಪರಿಶೀಲಿಸಲು ಬಿಬಿಎಂಪಿ ಐವರು ಅಧಿಕಾರಿಗಳ ಸಮಿತಿ ರಚಿಸಿದೆ.

'2020ರ ಸೆಪ್ಟೆಂಬರ್ 18ರಿಂದ 2022ರ ಜುಲೈ 19ರವರೆಗೆ ರಾಜರಾಜೇಶ್ವರಿ ನಗರ ವಿಧಾನಸಭೆ ಕ್ಷೇತ್ರದಲ್ಲಿ ಕಾಮಗಾರಿಗಳಿಗೆ ಬಿಲ್ ಬಿಡುಗಡೆಯಲ್ಲಿ ಅಕ್ರಮವಾಗಿದೆ ಎಂಬ ದೂರುಗಳು ಬಂದಿದ್ದವು. ಆದ್ದರಿಂದ ಈ ಬಗ್ಗೆ ತನಿಖೆ ನಡೆಸಲು ಸಮಿತಿ ರಚಿಸಲಾಗಿದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಸುದ್ದಿಗಾರರಿಗೆ ಬುಧವಾರ ತಿಳಿಸಿದರು.

'ಕಾಮಗಾರಿಗಳ ಬಗ್ಗೆ ಈಗಾಗಲೇ ಹಲವು ತನಿಖೆಗಳು ನಡೆಯುತ್ತಿವೆ. ಅದೇ ಕಾಮಗಾರಿಗಳಿಗೆ ಹಣ ಬಿಡುಗಡೆಯಲ್ಲೂ ಅಕ್ರಮವಾಗಿದೆಯೇ ಎಂಬುದನ್ನು ಅರಿತುಕೊಳ್ಳಲು ತನಿಖೆ ನಡೆಸಲಾಗುತ್ತಿದೆ' ಎಂದು ಹೇಳಿದರು.

ಸಮಿತಿ: ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಅಧ್ಯಕ್ಷತೆಯ ಸಮಿತಿಯಲ್ಲಿ ಯೋಜನೆ ಹಾಗೂ ಹಣಕಾಸು ವಿಭಾಗದ ವಿಶೇಷ ಆಯುಕ್ತರು, ಗುಣ ಭರವಸೆ ಮತ್ತು ಗುಣ ನಿಯಂತ್ರಣ ವಿಭಾಗದ ಮುಖ್ಯ ಎಂಜಿನಿಯರ್ ಸದಸ್ಯರಾಗಿದ್ದಾರೆ. ಟಿವಿಸಿಸಿ ಮುಖ್ಯ ಎಂಜಿನಿಯರ್ ಸದಸ್ಯ ಕಾರ್ಯದರ್ಶಿಯಾಗಿದ್ದಾರೆ.

'ಹಣ ಪಡೆದು ವಿಶೇಷ ಆತಿಥ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಲೆ ಪ್ರಕರಣದ ಆರೋಪಿಗಳಾದ ನಟ ದರ್ಶನ್, ರೌಡಿಶೀಟರ್ ವಿಲ್ಸನ್ ಗಾರ್ಡನ್ ನಾಗ ಅಲಿಯಾಸ್ ನಾಗ ಹಾಗೂ ಸಹಚರರಿಗೆ ಪರಪ್ಪನ ಅಗ್ರಹಾರ ಕಾರಾಗೃಹದ ಅಧಿಕಾರಿಗಳು ಹಾಗೂ ಸಿಬ್ಬಂದಿಯೇ ಹಣದಾಸೆಗೆ ವಿಶೇಷ ಆತಿಥ್ಯ ನೀಡಿದ್ದಾರೆ ಎಂಬುದು ಪೊಲೀಸ್ ತನಿಖೆಯಿಂದ ಗೊತ್ತಾಗಿದೆ.

ವಿಶೇಷ ಆತಿಥ್ಯ ಪ್ರಕರಣದ ಸಂಬಂಧ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಮೂರು ಎಫ್‌ಐಆರ್‌ಗಳು ದಾಖಲಾಗಿದ್ದವು. ಆಗ್ನೇಯ ವಿಭಾಗದ ಪೊಲೀಸರು ತನಿಖೆ ನಡೆಸಿದ್ದರು. ಒಂದೆರಡು ದಿನಗಳಲ್ಲೇ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರಿಗೆ ವರದಿ ಸಲ್ಲಿಕೆ ಆಗಲಿದೆ ಎಂದು ಮೂಲಗಳು ತಿಳಿಸಿವೆ.

ಜೈಲಿನ ಹಿಂದಿನ ಮುಖ್ಯ ಅಧೀಕ್ಷಕರಿಂದ ವಾರ್ಡನ್‌ವರೆಗಿನ ಸುಮಾರು 10ಕ್ಕೂ ಅಧಿಕ ಅಧಿಕಾರಿ, ಸಿಬ್ಬಂದಿ, ಕೈದಿಗಳಿಗೆ ವಿಶೇಷ ಆತಿಥ್ಯ ನೀಡಿದ್ದ ಪ್ರಕರಣದಲ್ಲಿ ಭಾಗಿ ಆಗಿದ್ದಾರೆ. ಇದಕ್ಕಾಗಿ ಹಣವನ್ನೂ ಸಂದಾಯ ಮಾಡಲಾಗಿತ್ತು. ವಿಲ್ಸನ್ ಗಾರ್ಡನ್ ನಾಗ ಮತ್ತು ತಂಡ ಈ ಹಣವನ್ನು ನೀಡಿತ್ತು ಎಂದು ಮೂಲಗಳು ತಿಳಿಸಿವೆ.

ಜನರ ನಿದ್ದೆಗೆಡಿಸಿದ್ದ ಚಿರತೆ ಸೆರೆ

ಪ್ರಜಾವಾಣಿ ವಾರ್ತೆ

ಆನೇಕಲ್: ಕಳೆದ ಒಂದು ವಾರದಿಂದ ಎಲೆಕ್ಟ್ರಾನಿಕ್ ಸಿಟಿ ಜನರ ನಿದ್ದೆಗೆಡಿಸಿದ್ದ ಚಿರತೆಯನ್ನು ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿದೆ.

ಬನ್ನೇರುಘಟ್ಟ ಕಾಡಿನಿಂದ ಎಲೆಕ್ಟ್ರಾನಿಕ್‌ಸಿಟಿಯ ಕಡೆ ಬಂದಿದ್ದ ಚಿರತೆಯ ಓಡಾಟ ಸಿಸಿಕ್ಯಾಮರದಲ್ಲಿ ಸೆ.17ರಂದು ದಾಖಲಾಗಿತ್ತು. ಅಂದಿನಿಂದಲೂ ಅರಣ್ಯ ಇಲಾಖೆಯ ಸತತ ಪ್ರಯತ್ನ ನಡೆಸಿದರೂ ಕೈಗೆ ಸಿಗದೇ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಮಾತ್ರ ಕಾಣಿಸಿಕೊಳ್ಳುತ್ತಿದ್ದ ಚಿರತೆ ಸೆರೆಹಿಡಿಯಲು ಆನೇಕಲ್ ಮತ್ತು ಕೆ.ಆರ್. ಪುರಂ ವಲಯ ಅರಣ್ಯ ಇಲಾಖೆಯ ಅಧಿಕಾರಿಗಳ ವಿಶೇಷ ತಂಡ ರಚನೆ ಮಾಡಲಾಗಿತ್ತು.



ಅಧಿಕಾರಿಗಳಿಂದ ಖಾಸಗಿ ಸಿಬ್ಬಂದಿ ನೇಮಕ

ಅಬಕಾರಿ ಕಚೇರಿ ಮೇಲಿನ 'ಲೋಕಾ' ದಾಳಿಯಲ್ಲಿ ಪತ್ತೆ– ಮದ್ಯ, ಗಾಂಜಾ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಬಕಾರಿ ಕಚೇರಿಗಳಿಗೆ ದಾಳಿ ಮಾಡಿರುವ ಲೋಕಾಯುಕ್ತವು ಪರಿಶೀಲನೆ ಮುಂದುವರಿಸಿದಾಗ ಹಲವು ಕಚೇರಿಗಳಲ್ಲಿ ಅಬಕಾರಿ ಇನ್‌ಸ್ಪೆಕ್ಟರ್‌ಗಳು ಖಾಸಗಿ ವ್ಯಕ್ತಿಗಳನ್ನು ಸಹಾಯಕರಾಗಿ ಅನಧಿಕೃತವಾಗಿ ನೇಮಿಸಿಕೊಂಡಿರುವುದು ಪತ್ತೆಯಾಗಿದೆ.

ಚಂದಾಪುರದ ನಾಲ್ವರು ಅಬಕಾರಿ ಇನ್‌ಸ್ಪೆಕ್ಟರ್‌ಗಳು ನಾಲ್ವರು ಖಾಸಗಿ ವ್ಯಕ್ತಿಗಳನ್ನು ನೇಮಿಸಿಕೊಂಡು ತಿಂಗಳಿಗೆ ₹18 ಸಾವಿರದಿಂದ ₹20 ಸಾವಿರದವರೆಗೆ ಪಾವತಿಸುತ್ತಿದ್ದರು. ಒಬ್ಬ ಚಾಲಕನನ್ನು ಕೂಡ ನೇಮಿಸಿಕೊಂಡು, ತಿಂಗಳಿಗೆ ₹18 ಸಾವಿರ ನೀಡುತ್ತಿದ್ದರು ಎಂಬುದು ಶೋಧದಲ್ಲಿ ಕಂಡುಬಂದಿದೆ ಎಂದು ಲೋಕಾಯುಕ್ತದ ಪ್ರಕಟಣೆ ತಿಳಿಸಿದೆ.

ಕೋರಮಂಗಲ ಅಬಕಾರಿ ಇನ್‌ಸ್ಪೆಕ್ಟರ್‌ಗಳು ಖಾಸಗಿ ವ್ಯಕ್ತಿಯನ್ನು ನೇಮಿಸಿಕೊಂಡು ಪ್ರತಿ ತಿಂಗಳು ₹20 ಸಾವಿರವನ್ನು ಫೋನ್ ಪೇ ಮೂಲಕ ಪಾವತಿಸುತ್ತಿದ್ದರು. ಯಲಹಂಕ–ಗೋಕುಲ ಅಬಕಾರಿ ಕಚೇರಿಯಲ್ಲಿಯೂ ಖಾಸಗಿ ವ್ಯಕ್ತಿಯನ್ನು ಇನ್‌ಸ್ಪೆಕ್ಟರ್‌ಗಳು ನೇಮಿಸಿಕೊಂಡಿದ್ದರು. ಬನಶಂಕರಿ ಅಬಕಾರಿ ಕಚೇರಿಯಲ್ಲಿ ಖಾಸಗಿ ವ್ಯಕ್ತಿಗಳನ್ನು ಕಂಪ್ಯೂಟರ್ ಆಪರೇಟರ್‌ಗಳನ್ನಾಗಿ ನೇಮಿಸಿಕೊಂಡು ಅಬಕಾರಿ ಇನ್‌ಸ್ಪೆಕ್ಟರ್ ವೇತನ ನೀಡುತ್ತಿದ್ದರು ಎಂದು ತನಿಖಾ ಸಂಸ್ಥೆ ಹೇಳಿದೆ.

ಮುಖ್ಯಾಂಶಗಳು

- 30ಗಳಿಗೆ ₹18 ಸಾವಿರದಿಂದ ₹20 ಸಾವಿರದವರೆಗೆ ಪಾವತಿ
- ಚಂದಾಪುರ, ಕೋರಮಂಗಲ ಕಚೇರಿಗಳಲ್ಲಿ ನೇಮಕ

ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್, ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ. ವೀರಪ್ಪ ಅವರ ನೇತೃತ್ವದಲ್ಲಿ ತನಿಖಾ ಸಂಸ್ಥೆಯ ತಂಡಗಳು ಏಕಕಾಲಕ್ಕೆ ದಾಳಿ ಮಾಡಿ, ಶೋಧ ನಡೆಸಿದಾಗ ವೇಳೆ ಇವೆಲ್ಲ ಪತ್ತೆಯಾಗಿವೆ.

ಚಂದಾಪುರದಲ್ಲಿ ಸಿಬ್ಬಂದಿಯೊಬ್ಬರು ₹500 ಇರುವುದನ್ನು ನಗದು ಘೋಷಣಾ ಪುಸ್ತಕದಲ್ಲಿ ಬರೆದಿದ್ದು, ತಪಾಸಣೆ ಮಾಡಿದಾಗ ₹9,500 ಪತ್ತೆಯಾಗಿದೆ. ಈ ಕಚೇರಿಯಲ್ಲಿ 100ಕ್ಕೂ ಅಧಿಕ ಟೆಟ್ರಾ ಪ್ಯಾಕ್ ಮದ್ಯದ ಪ್ಯಾಕೆಟ್‌ಗಳು ದೊರೆತಿವೆ.

ಇರುವುದಕ್ಕಿಂತ ಹೆಚ್ಚು ನಗದು ಘೋಷಣೆ

ವಲಯ–23,25 ಹಾಗೂ ಉಪ ಅಧೀಕ್ಷಕರ ಕಚೇರಿಯಲ್ಲಿ ಒಬ್ಬ ಅಬಕಾರಿ ಕಾನ್‌ಸ್ಟೆಬಲ್, ಒಬ್ಬ ಹೆಡ್ ಕಾನ್‌ಸ್ಟೆಬಲ್ ಬಿಟ್ಟು ಬೇರೆ ಯಾರೂ ಇರಲಿಲ್ಲ. ನಗದು ಘೋಷಣಾ ಪುಸ್ತಕದಲ್ಲಿ ₹2000 ಇರುವುದನ್ನು ಘೋಷಿಸಿದ್ದರೂ ಅವರಲ್ಲಿ ಹಣವೇ ಇರಲಿಲ್ಲ. ಉಪ ಅಧೀಕ್ಷಕರನ್ನು ಕರೆಸಿದಾಗ ಅವರು ₹2,100 ನಗದು ಘೋಷಿಸಿದರೂ ಅವರಲ್ಲಿ ₹290 ಮಾತ್ರ ಇತ್ತು.

ಬಾಣಸವಾಡಿ ಅಬಕಾರಿ ಕಚೇರಿಯಲ್ಲಿಯೂ ಸಿಬ್ಬಂದಿ ತಮ್ಮಲ್ಲಿ ಕಡಿಮೆ ಹಣವಿದ್ದರೂ ಹೆಚ್ಚಿಗೆ ಹಣ ಇರುವುದಾಗಿ ಘೋಷಿಸಿದ್ದರು. ಸಾರ್ವಜನಿಕರಿಂದ ವಸೂಲಿ ಮಾಡುವ ಹಣವನ್ನು ಹೊರಗುತ್ತಿಗೆ ನೌಕರರ ಬಳಿ ಇರಿಸುವುದು ಕಂಡುಬಂದಿದೆ ಎಂದು ಲೋಕಾಯುಕ್ತ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಅಧಿಕಾರಿಗಳು ನಾಪತ್ತೆ: ಯಲಹಂಕ–ಗೋಕುಲ ಅಬಕಾರಿ ಕಚೇರಿಯಲ್ಲಿ ಅಬಕಾರಿ ಇನ್‌ಸ್ಪೆಕ್ಟರ್ ಚಂದ್ರಮೂರ್ತಿ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಿದ್ದು, ಕಚೇರಿಯಲ್ಲಿ ಇರಲಿಲ್ಲ. ಕರೆ ಮಾಡಿದರೂ ಸ್ವೀಕರಿಸದೇ ಸಂಜೆ 5.15ಕ್ಕೆ ಕಚೇರಿಗೆ ಬಂದಿದ್ದಾರೆ. ಚಲನಾ ಪುಸ್ತಕವನ್ನು ನಿರ್ವಹಿಸಿರಲಿಲ್ಲ. ಬನಶಂಕರಿ ಅಬಕಾರಿ ಕಚೇರಿಗೆ ಅಬಕಾರಿ ಇನ್‌ಸ್ಪೆಕ್ಟರ್ ಹಾಜರಾಗಿಲ್ಲ. ಮೊಬೈಲ್ ಸ್ವಿಚ್ ಆಫ್ ಮಾಡಿದ್ದರು. ಇಂದಿರಾನಗರ ಅಬಕಾರಿ ಕಚೇರಿಯಲ್ಲಿ ಕಡತಗಳ ನಿರ್ವಹಣೆಯೇ ಮಾಡಿರಲಿಲ್ಲ.

ರಾಮಮೂರ್ತಿನಗರ ಅಬಕಾರಿ ಕಚೇರಿಯಲ್ಲಿ ಗಾಂಜಾ ತುಂಬಿದ ಬ್ಯಾಗ್, ಮದ್ಯದ ಬಾಟಲ್‌ಗಳು ದೊರೆತಿದ್ದವು. ಅದಕ್ಕೆ ಸಂಬಂಧಿಸಿದ ಯಾವುದೇ ಪ್ರಕರಣ ಸಂಖ್ಯೆ, ದಾಖಲೆಗಳು ಇರಲಿಲ್ಲ. ಉಪ ಅಬಕಾರಿ ಅಧೀಕ್ಷಕ ಗೈರು ಹಾಜರಾಗಿದ್ದರು. ಸಹಾಯಕ ಅಬಕಾರಿ ಇನ್‌ಸ್ಪೆಕ್ಟರ್ ಹಾಜರಿದ್ದರೂ ಸಹಿ ಮಾಡಿರಲಿಲ್ಲ. ಹೆಬ್ಬಾಳ ಅಬಕಾರಿ ಕಚೇರಿಯ ಅಲ್ಮೆರಾದಲ್ಲಿ ದಾಖಲೆ ಇಲ್ಲದ ಅನಧಿಕೃತ ಮದ್ಯದ ಬಾಟಲ್‌ಗಳು ಕಂಡುಬಂದಿವೆ. ಕಚೇರಿ ನೌಕರ ತಪಾಸಣೆಗೆ ಸಹಕರಿಸಿಲ್ಲ. ದಾಖಲೆಗಳನ್ನು ನಿರ್ವಹಿಸಿಲ್ಲ ಎಂದು ಲೋಕಾಯುಕ್ತದ ಅಧಿಕಾರಿಗಳು ತಿಳಿಸಿದ್ದಾರೆ.


ಇಂದು ವಿದ್ಯುತ್ ವ್ಯತ್ಯಯ

ಬೆಂಗಳೂರು: ನಗರದ ಮೂರು ವಿವಿಧ ಉಪಕೇಂದ್ರಗಳಲ್ಲಿ ತುರ್ತು ನಿರ್ವಹಣಾ ಕೆಲಸಗಳು ನಡೆಯುತ್ತಿರುವುದರಿಂದ ಗುರುವಾರ ಬೆಳಿಗ್ಗೆ 10.30ರಿಂದ ಸಂಜೆ 4 ಗಂಟೆಯವರೆಗೆ ಈ ಕೆಳಗೆ ನೀಡಿರುವ ಉಪಕೇಂದ್ರಗಳ ವ್ಯಾಪ್ತಿಯಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಯೆಲ್ಲಾರ್ ಬಂಡೆ ಉಪಕೇಂದ್ರ: ಎ.ಕೆ.ಆಶ್ರಮ ರಸ್ತೆ, ದೇವೆಗೌಡ ರಸ್ತೆ, ಆರ್. ಟಿ.ನಗರ, 1ನೇ ಬ್ಲಾಕ್, ತಿಮ್ಮಯ್ಯ ಗಾರ್ಡನ್, ಮೋದಿ ಗಾರ್ಡನ್, ಮಿಲಿಟರಿ ಪ್ರದೇಶ, ವೀರಣ್ಣಪಾಳ್ಯ, ಲುಂಬಿನಿ ಗಾರ್ಡನ್, ಬಿಡಬ್ಲ್ಯುಎಸ್‌ಎಸ್‌ಬಿ ಸೀವೇಜ್ ಪ್ಲಾಂಟ್, ಮರಿಯಣ್ಣಪಾಳ್ಯ, ಕಾಫಿ ಬೋರ್ಡ್ ಲೇಔಟ್, ಕೆಂಪಾಪುರ, ದಾಸರಹಳ್ಳಿ, ಮಾರುತಿ ಲೇಔಟ್ ಭುವನೇಶ್ವರಿನಗರ, ಬಿಇಎಲ್ ಕಾರ್ಪೊರೇಟ್ ಆಫೀಸ್, ಚಾಣಕ್ಯ ಲೇಔಟ್, ನಾಗವಾರ, ಎಂ.ಎಸ್. ರಾಮಯ್ಯ ಉತ್ತರ ಸಿಟಿ, ತಣಿಸಂದ್ರ ಮುಖ್ಯರಸ್ತೆ, ಆಶೀರ್ವಾದ ನಗರ, ಅಮರಜ್ಯೋತಿ ಲೇಔಟ್, ರಾಚೇನಹಳ್ಳಿ ಮುಖ್ಯ ರಸ್ತೆ, ಮೇಸ್ತ್ರಿ ಪಾಳ್ಯ, ರಾಯಲ್ ಎನ್‌ಕ್ಲೇವ್, ಶ್ರೀರಾಂಪುರ ವಿಲೇಜ್, ವಿಎಚ್‌ಬಿಸಿಎಸ್ ಲೇಔಟ್ ವೀರಣ್ಣಪಾಳ್ಯ, ಜೋಜಪ್ಪ ಲೇಔಟ್, 17 ನೇ ಕ್ರಾಸ್, ಗೋವಿಂದಪುರ, ವೀರಣ್ಣಪಾಳ್ಯ ಮುಖ್ಯರಸ್ತೆ, ಬೈರಪ್ಪ ಲೇಔಟ್ ಮತ್ತು ಸುತ್ತಲಿನ ಪ್ರದೇಶಗಳು.

ರಾಜಾನುಕುಂಟೆ ವಿದ್ಯುತ್ ಉಪಕೇಂದ್ರ(ಹೆಬ್ಬಾಳ ವಿಭಾಗದ ಸಿ7 ಉಪ ವಿಭಾಗದ ವ್ಯಾಪ್ತಿ): ಹೊನ್ನೇನಹಳ್ಳಿ, ಸಿಂಗನಾಯಕನಹಳ್ಳಿ, ರಾಜಾನುಕುಂಟೆ, ಆದಿವಿಶ್ವನಾಥಪುರ, ಮಾರಸಂದ್ರ, ಶ್ರೀರಾಮನಹಳ್ಳಿ, ನೆಲಕುಂಟೆ, ಹನಿಯೂರು, ಚೆಲ್ಲಹಳ್ಳಿ, ಕರ್ಲಾಪುರ, ಕೆಎಂಎಫ್, ಇಟಗಲ್‌ಪುರ, ಅರಕೇರಿ, ಬೈರಾಪುರ, ಬೂದಮನಹಳ್ಳಿ, ದಿಬ್ಬೂರು, ಕಾಕೋಳು, ಸೊಣ್ಣೆನಹಳ್ಳಿ, ಸೆಂಚುರಿ ಲೇಔಟ್, ಪಿಜಿಎಲ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಎಲ್.ಆರ್.ಬಂಡೆ ವಿದ್ಯುತ್ ಉಪಕೇಂದ್ರ: ಕಾವಲ್ ಬೈರಸಂದ್ರ, ಎಲ್.ಆರ್.ಬಂಡೆ ಮುಖ್ಯರಸ್ತೆ, ಗಾಂಧಿನಗರ, ಚಿನ್ನಣ್ಣ ಲೇಔಟ್, ಅಂಬೇಡ್ಕರ್ ಲೇಔಟ್, ಅನ್ವರ್ ಲೇಔಟ್, ಕಾವೇರಿ ನಗರ, ಅಂಬೇಡ್ಕರ್ ವೈದ್ಯಕೀಯ ಕಾಲೇಜು, ಸುಲ್ತಾನ್ ಪಾಳ್ಯ, ರಂಕಾನಗರ, ಕನಕನಗರ, ಕೆ.ಎಚ್.ಬಿ ಮುಖ್ಯರಸ್ತೆ, ಭುವನೇಶ್ವರಿ ನಗರ, ಡಿ.ಜೆ. ಹಳ್ಳಿ, ಕೆ.ಜೆ.ಹಳ್ಳಿ, ಕೆ.ಜೆ. ಕಾಲೊನಿ, ಆದರ್ಶ ನಗರ, ವಿ.ನಾಗೇನಹಳ್ಳಿ, ಪೆರಿಯಾರ್ ನಗರ, ಪೆರಿಯಾರ್ ಸರ್ಕಲ್, ಶಾಂಪುರ, ಕುಶಾಲನಗರ, ಮೋದಿ ರಸ್ತೆ, ಮೋದಿ ಗಾರ್ಡನ್, ದೊಡ್ಡಣ್ಣ ನಗರ, ಮುನಿವೀರಪ್ಪ ಲೇಔಟ್, ಸುಗರ್ ಮಂಡಿ, ಸಾಲ್ಟ್ ಮಂಡಿ, ಮುನೇಶ್ವರ ನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳು.



ಗೇಟ್ ದುರಂತ: ₹10 ಲಕ್ಷ ಪರಿಹಾರ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರದಲ್ಲಿ ಆಟದ ಮೈದಾನದ ಗೇಟ್ ಬಿದ್ದು ಮೃತಪಟ್ಟ ನಿರಂಜನ್ ನಿವಾಸಕ್ಕೆ ಬುಧವಾರ ಭೇಟಿ ನೀಡಿದ್ದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ₹10 ಲಕ್ಷ ಮೊತ್ತದ ಪರಿಹಾರದ ಚೆಕ್ ಅನ್ನು ಕುಟುಂಬದವರಿಗೆ ನೀಡಿದರು.

'ಬಾಲಕನ ಕಣ್ಣುಗಳನ್ನು ಕುಟುಂಬದವರು ದಾನ ಮಾಡಿ ನಮಗೆ ಮಾದರಿಯಾಗಿದ್ದಾರೆ. ಬಡತನವಿದ್ದರೂ ಸಮಾಜಕ್ಕೆ ಕಾಣಿಕೆ ನೀಡುವ ಅವರ ತೀರ್ಮಾನ ಮೆಚ್ಚುವಂತಹದ್ದು. ಮಗನನ್ನು ಕಳೆದುಕೊಂಡ ನೋವನ್ನು ಭರಿಸುವ ಶಕ್ತಿ ಅವರಿಗೆ ಸಿಗಲಿ' ಎಂದು ಶಿವಕುಮಾರ್ ಅವರು ಸುದ್ದಿಗಾರರಿಗೆ ತಿಳಿಸಿದರು.

'ಸಚಿವರಾದ ದಿನೇಶ್ ಗುಂಡೂರಾವ್ ಅವರೊಂದಿಗೆ ನಿವಾಸಕ್ಕೆ ತೆರಳಿ ಬಾಲಕನ ತಂದೆ–ತಾಯಿಗೆ ಸಾಂತ್ವನ ಹೇಳಲಾಗಿದೆ.



ಬಿಬಿಎಂಪಿ ಹಾಗೂ ಬ್ಲಾಕ್ ಕಾಂಗ್ರೆಸ್ ವತಿಯಿಂದ ತಲಾ ₹5 ಲಕ್ಷ ಪರಿಹಾರ ನೀಡಲಾಗಿದೆ. ಮೃತ ಬಾಲಕನ ತಂಗಿಯ ವಿದ್ಯಾಭ್ಯಾಸಕ್ಕೆ ದಿನೇಶ್ ಗುಂಡೂರಾವ್ ಅವರ ಫೌಂಡೇಷನ್ ವತಿಯಿಂದ ನೆರವು ನೀಡಲಾಗುವುದು' ಎಂದು ಹೇಳಿದರು.

'ಗೇಟ್ ಬಿದ್ದಿರುವ ಪ್ರಕರಣ ಹಾಗೂ ಕಾಮಗಾರಿಯ ಬಗ್ಗೆ ವರದಿ ಕೇಳಿದ್ದೇನೆ. ವರದಿ ಬಂದ ಬಳಿಕ ಕ್ರಮ ಕೈಗೊಳ್ಳಲಾಗುವುದು. ನಗರದ ಇತರೆಡೆಗಳಲ್ಲೂ ಗೇಟ್ ಪರಿಶೀಲನೆ ಕಾರ್ಯ ಆರಂಭವಾಗಿದೆ' ಎಂದು ಶಿವಕುಮಾರ್ ತಿಳಿಸಿದರು.

'ಸಮಸ್ಯೆ ಎದುರಿಸುವುದನ್ನು ಕಲಿಯಿರಿ'

ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಪದವಿ ಪ್ರದಾನ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಲೇಜು ಶಿಕ್ಷಣದಷ್ಟೇ ಬದುಕಿನ ಅನುಭವದ ಶಿಕ್ಷಣವನ್ನು ಪಡೆಯುವ ಮೂಲಕ ವಿದ್ಯಾರ್ಥಿಗಳು ಮುಂದೆ ಎದುರಾಗುವ ನೈಜ ಸಮಸ್ಯೆಗಳನ್ನು ಎದುರಿಸಲು ಸಿದ್ಧರಾಗಬೇಕು' ಎಂದು ಟ್ಯಾಕ್ಸಿಫಾರ್‌ಶ್ಯೂರ್ ಮತ್ತು 'ಕೂ' ಸಂಸ್ಥೆಯ ಸ್ಥಾಪಕ ಅಪ್ರಮೇಯ ರಾಧಾಕೃಷ್ಣ ಸಲಹೆ ನೀಡಿದರು.

ಬುಧವಾರ ನಡೆದ ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ 28ನೇ ವರ್ಷದ ಪದವಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಗೊಂದಲ ಮತ್ತು ಅನಿಶ್ಚಿತತೆಯಿಂದ ಕೂಡಿದ ಜಗತ್ತಿನಲ್ಲಿ ಎದುರಾಗುವ ಸಮಸ್ಯೆಗಳ ಬಗ್ಗೆ ತರಗತಿಗಳಲ್ಲಿ ಹೇಳಿಕೊಡುವುದಿಲ್ಲ. ಅಂಥ ಪರಿಸ್ಥಿತಿಯನ್ನು ಎದುರಿಸಿ ಮುನ್ನುಗ್ಗುವ ಛಾತಿಯನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

'ನಾನು ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡು ಟ್ಯಾಕ್ಸಿಫಾರ್‌ಶ್ಯೂರ್ ಆರಂಭಿಸಿರಲಿಲ್ಲ. ಏರೋಪ್ಲೇನ್, ಬಸ್ ಮತ್ತು ಟ್ರೈನ್‌ಗಳಿಗೆ ಅಗ್ರಿಗೇಟರ್ ಗಳಿದ್ದ ಹಾಗೆಯೇ ಕಾರ್‌ಗಳಿಗೂ ಮಾಡೋಣ ಎಂದು ಪ್ರಾರಂಭಿಸಿದ್ದೆ. ನಮ್ಮ ಯೋಜನೆ ಗ್ಲಾಮರಸ್ ಆಗಿರಲಿಲ್ಲ, ಆದರೆ ಜನರ ಸಾರಿಗೆ ಸಮಸ್ಯೆಯನ್ನು ಪರಿಹರಿಸುವ ಉದ್ದೇಶ ಹೊಂದಿತ್ತು. ನಮ್ಮ ಮೇಲೆ ನಮಗೆ ನಂಬಿಕೆ ಇದ್ದಾಗ ಯೋಜನೆಗಳು ಯಶಸ್ವಿಯಾಗುತ್ತದೆ ಎಂಬುದಕ್ಕೆ ಸಾಕ್ಷಿಯಾಗಿ ನಿಮ್ಮ ಮುಂದೆ ನಿಂತಿದ್ದೇನೆ' ಎಂದು ವಿದ್ಯಾರ್ಥಿಗಳನ್ನು ಹುರಿದುಂಬಿಸಿದರು.

'ಸೋಷಿಯಲ್ ಮೀಡಿಯಾವನ್ನು ಅಮೆರಿಕದ ಕಂಪನಿಗಳು ಆಳುತ್ತಿವೆ. ಅದರಿಂದ ಪ್ರೇರಣೆ ಪಡೆದು ನಾವು ಭಾರತ ಮೂಲದ ಕೂ ಸಂಸ್ಥೆಯನ್ನು ಸ್ಥಾಪಿಸಿದೆವು. ಇದೊಂದು ಸವಾಲಿನ ಪ್ರಯಾಣ. ಉದ್ಯಮಶೀಲತೆ ಎಂದಾಗ ವ್ಯವಹಾರ ಮಾತ್ರ ಮುಖ್ಯವಲ್ಲ, ಉದ್ದೇಶವೂ ಅಗತ್ಯ' ಎಂದರು.

ಗೋಕುಲ ಎಜುಕೇಶನ್ ಫೌಂಡೇಶನ್‌ನ ಮುಖ್ಯ ಶೈಕ್ಷಣಿಕ ಸಲಹೆಗಾರ ಕರಿಸಿದ್ದಪ್ಪ ಮಾತನಾಡಿ, 'ಪ್ರತಿ ವಿದ್ಯಾರ್ಥಿಯು ವಿಭಿನ್ನವಾಗಿ ರೂಪುಗೊಳ್ಳಬೇಕು. ದೇಶಕ್ಕೆ ಹೆಮ್ಮೆ ತರುವ ಪ್ರಜೆಯಾಗಿ ಬಾಳಬೇಕು' ಎಂದು ಹೇಳಿದರು.

292 ವಿದ್ಯಾರ್ಥಿಗಳಿಗೆ ಬ್ಯುಸಿನೆಸ್ ಮ್ಯಾನೇಜ್‌ಮೆಂಟ್‌ನಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಪದವಿ ಪ್ರದಾನ ಮಾಡಲಾಯಿತು.

ಗೋಕುಲ ಎಜುಕೇಶನ್ ಫೌಂಡೇಶನ್‌ನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಎಚ್.ವಿ. ಪಾರ್ಶ್ವನಾಥ , ಜೆಐಎಫ್ ಡಾಕ್ಟರಲ್ ಕಾರ್ಯಕ್ರಮಗಳ ನಿರ್ದೇಶಕ ಎ.ಎಚ್. ರಾಜಾಸಾಬ್, ಸಂಸ್ಥೆಯ ನಿರ್ದೇಶಕಿ ಮಾನಸಾ ನಾಗಭೂಷಣಂ, ರಿಜಿಸ್ಟ್ರಾರ್ (ಮೌಲ್ಯಮಾಪನ) ಸವಿತಾ ರಾಣಿ ರಾಮಚಂದ್ರನ್ ಉಪಸ್ಥಿತರಿದ್ದರು.



ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ 28ನೇ ಪದವಿ ಪ್ರದಾನ ಕಾರ್ಯಕ್ರಮದಲ್ಲಿ ಟ್ಯಾಕ್ಸಿಫಾರ್‌ಶ್ಯೂರ್ ಮತ್ತು 'ಕೂ 'ಸಂಸ್ಥೆಯ ಸ್ಥಾಪಕ ಅಪ್ರಮೇಯ ರಾಧಾಕೃಷ್ಣ ಅವರು ಮನಿಷಾ ಎ. ಗೌಡ ಅವರಿಗೆ ಚಿನ್ನದ ಪದಕ ಮತ್ತು ಮೆರಿಟ್ ಪ್ರಮಾಣಪತ್ರ ಪ್ರದಾನ ಮಾಡಿದರು. ಕುಲಸಚಿವೆ (ಮೌಲ್ಯಮಾಪನ) ಸವಿತಾ ರಾಣಿ ರಾಮಚಂದ್ರನ್, ನಿರ್ದೇಶಕ ರಾಜಾಸಾಬ್ ಎ.ಎಚ್. ಮುಖ್ಯ ಶೈಕ್ಷಣಿಕ ಸಲಹೆಗಾರ ಕರಿಸಿದ್ದಪ್ಪ, ಬೆಳ್ಳಿ ಪದಕ ವಿಜೇತರಾದ ಶ್ರೇಯಾ ಮೆರಿನ್ (3ನೇ ಸ್ಥಾನ), ಶಂಕರ್ ಆರ್. (2ನೇ ಸ್ಥಾನ), ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಚ್.ವಿ. ಪಾರ್ಶ್ವನಾಥ್, ನಿರ್ದೇಶಕಿ ಮಾನಸಾ ನಾಗಭೂಷಣಂ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ವಕೀಲ ಶಿವಕುಮಾರ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ • ಮುಖ್ಯ ನ್ಯಾಯಮೂರ್ತಿ ಪೀಠದಲ್ಲಿ ವಿಚಾರಣೆ

ಲಿವಿಂಗ್ ವಿಲ್ ಮಾರ್ಗಸೂಚಿ ಕೋರಿ ಪಿಐಎಲ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ಗಂಭೀರ ಕಾಯಿಲೆಗಳಿಗೆ ತುತ್ತಾಗಿ ಅದು ವಾಸಿಯಾಗದ ಹಂತ ತಲುಪಿ ವ್ಯಕ್ತಿಯೊಬ್ಬ ಮರಣ ಶಯ್ಯೆಯಲ್ಲಿ ಇದ್ದಾಗ ಆತನಿಗೆ ಘನತೆಯ ಸಾವನ್ನು ಸಾಧ್ಯವಾಗಿಸುವ 'ಮರಣ ಇಚ್ಛೆಯ ಉಯಿಲು' (ಲಿವಿಂಗ್ ವಿಲ್) ಬರೆಯುವ ಕುರಿತಂತೆ ಸುಪ್ರೀಂ ಕೋರ್ಟ್ 2023ರಲ್ಲಿ ಜಾರಿಗೊಳಿಸಿರುವ 'ಸುಧಾರಿತ ವೈದ್ಯಕೀಯ ನಿರ್ದೇಶನಗಳನ್ನು' ರಾಜ್ಯದಲ್ಲಿಯೂ ಜಾರಿಗೊಳಿಸಲು ನಿರ್ದೇಶನ ನೀಡಬೇಕು ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಹೈಕೋರ್ಟ್ ವಕೀಲರೂ ಆದ ನಗರದ 76 ವರ್ಷ ವಯಸ್ಸಿನ ಶಿವಕುಮಾರ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಕೀಲೆ ಸ್ನೇಹ ನಾಗರಾಜ್ ಅವರ ವಾದ ಆಲಿಸಿದ ನ್ಯಾಯಪೀಠ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮುಖ್ಯ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಿ ಎಂದು ಪ್ರತಿವಾದಿಗಳಿಗೆ ಸೂಚಿಸಿ ವಿಚಾರಣೆಯನ್ನು ಅಕ್ಟೋಬರ್ 29ಕ್ಕೆ ಮುಂದೂಡಿತು.

ಏನಿದು ಅರ್ಜಿ?: 'ಮನುಷ್ಯ ಗೌರವಯುತವಾಗಿ ಸಾಯುವ ಹಕ್ಕು ಹೊಂದಿದ್ದು, ಆತನಿಗೆ ಮಾರ್ಗಸೂಚಿಗಳ ಅನ್ವಯ ದಯಾಮರಣಕ್ಕೆ ಅನುಮತಿ ನೀಡಬಹುದು. ಪುನಶ್ಚೇತನಗೊಳ್ಳುವ ಯಾವುದೇ ಸಾಧ್ಯತೆಗಳು ಇಲ್ಲದ ಪರಿಸ್ಥಿತಿ ಇದ್ದಾಗ, ಬದುಕಿರಲು ಇಚ್ಛಿಸದ ವ್ಯಕ್ತಿಗೆ ಸಂಕಷ್ಟದಲ್ಲಿ ಜೀವನ ಮುಂದುವರಿಸುವ ಸ್ಥಿತಿ ಇರಬಾರದು. ಒಂದು ವೇಳೆ ವ್ಯಕ್ತಿ ಅಥವಾ ರೋಗಿಯು ತಾನು ಭವಿಷ್ಯದಲ್ಲಿ ಕೋಮಾ ಸ್ಥಿತಿಗೆ ತಲುಪಿದರೆ ಜೀವರಕ್ಷಕದ ಸಹಾಯದಿಂದ ನನ್ನನ್ನು ಬದುಕಿಸದಿರಿ ಎಂದು ಲಿವಿಂಗ್ ವಿಲ್ (ಮರಣ ಇಚ್ಛೆಯ ಉಯಿಲು) ಬರೆಯಲು ಅವಕಾಶ ನೀಡಿ' ಎಂದು ಸುಪ್ರೀಂ ಕೋರ್ಟ್ 2018ರಲ್ಲಿ ಐತಿಹಾಸಿಕ ತೀರ್ಪು ನೀಡಿತ್ತು.

ಗಂಭೀರ ರೋಗದಿಂದ ಬಳಲುತ್ತಿರುವ ವ್ಯಕ್ತಿಗೆ ಅಳವಡಿಸಿರುವ ಜೀವರಕ್ಷಕ ಸಾಧನ ತೆಗೆಯುವುದಕ್ಕೆ ಪ್ರಥಮ ದರ್ಜೆ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ (ಜೆಎಂಎಫ್‌ಸಿ) ಅನುಮತಿಯನ್ನು ಈ ಮೊದಲು ಕಡ್ಡಾಯಗೊಳಿಸಲಾಗಿತ್ತು. ಆದರೆ, ಈ ಆದೇಶವನ್ನು 2023ರಲ್ಲಿ ಮಾರ್ಪಾಡು ಮಾಡಿದ್ದ ಸುಪ್ರೀಂ ಕೋರ್ಟ್ ಮಾರ್ಗ-ಸೂಚಿಯನ್ನು ಸರಳೀಕರಿಸಿತ್ತು.

'ಸುಧಾರಿತ ವೈದ್ಯಕೀಯ ನಿರ್ದೇಶನಗಳ ಅನ್ವಯ ಮರಣ ಇಚ್ಛೆಯ ಉಯಿಲು ಬರೆಯುವ ವ್ಯಕ್ತಿಯು ಇಬ್ಬರು ಸಾಕ್ಷಿಗಳ ಸಮ್ಮುಖದಲ್ಲಿ ದಾಖಲೆಗಳಿಗೆ ಸಹಿ ಹಾಕಬೇಕು. ಅದನ್ನು ನೋಟರಿ ಅಥವಾ ಗೆಜೆಟೆಡ್ ಅಧಿಕಾರಿ ದೃಢೀಕರಿಸಬೇಕು' ಎಂದು ಹೇಳಲಾಗಿತ್ತು. ಈ ಸುಧಾರಿತ ವೈದ್ಯಕೀಯ ನಿರ್ದೇಶನಗಳನ್ನು ಜಾರಿಗೊಳಿಸುವಂತೆ ಅರ್ಜಿಯಲ್ಲಿ ಕೋರಲಾಗಿದೆ.

ಎಆರ್‌ಒಗಳಿಗೆ ಬಡ್ತಿಗೆ ಸೂಚನೆ

ಬೆಂಗಳೂರು: ಬಿಬಿಎಂಪಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಾಲ್ವರು ಸಹಾಯಕ ಕಂದಾಯ ಅಧಿಕಾರಿಗಳಿಗೆ (ಎಆರ್‌ಒ) ತಿಂಗಳೊಳಗೆ ಬಡ್ತಿ ನೀಡಿ, ಸ್ಥಳ ನಿಯೋಜನೆ ಮಾಡಬೇಕು ಎಂದು ಹೈಕೋರ್ಟ್ ಆದೇಶಿಸಿದೆ.

ಎಆರ್‌ಒಗಳಾದ ಬಿ.ವಿ.ವೀಣಾ, ಎಸ್.ಎನ್. ವೆಂಕಟೇಶ್, ವಿ. ಮಂಜುನಾಥ ಹಾಗೂ ಟಿ.ಶ್ರೀನಿವಾಸ್ ಮೂರ್ತಿ ಅವರಿಗೆ ವೃಂದ ಮತ್ತು ನೇಮಕಾತಿ (ಸಿಅ್ಯಂಡ್ ಆರ್) ನಿಯಮದಂತೆ ಸಹಾಯಕ ಆಯುಕ್ತ ಹುದ್ದೆಗೆ ಬಡ್ತಿ ನೀಡಲಾಗಿತ್ತು. ಬಡ್ತಿ ದೊರೆತು 11 ತಿಂಗಳಾದರೂ ಅವರಿಗೆ ಹುದ್ದೆ– ಸ್ಥಳ ನಿಯೋಜನೆ ಮಾಡಿರಲಿಲ್ಲ. ಇದನ್ನು ಪ್ರಶ್ನಿಸಿ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದರು.

ನ್ಯಾಯಮೂರ್ತಿ ಆರ್. ನಟರಾಜ್ ಅವರು ವಿಚಾರಣೆ ನಡೆಸಿ, ನಾಲ್ಕು ಅಧಿಕಾರಿಗಳಿಗೆ ಒಂದು ತಿಂಗಳಲ್ಲಿ ಬಡ್ತಿ ನೀಡಿ, ಹುದ್ದೆ– ಸ್ಥಳ ನಿಯೋಜಿಸಬೇಕು ಎಂದು ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ, ಬಿಬಿಎಂಪಿ ಮುಖ್ಯ ಆಯುಕ್ತ, ಪಾಲಿಕೆ ಆಡಳಿತದ ಉಪ ಆಯುಕ್ತ ಅವರಿಗೆ ನಿರ್ದೇಶನ ನೀಡಿದ್ದಾರೆ.

'ಗುತ್ತಿಗೆ ಒಪ್ಪಂದ: ಅಹವಾಲು ಆಲಿಸಿ'

ಬೆಂಗಳೂರು: 'ಗುತ್ತಿಗೆ ನೌಕರರ ಜೊತೆಗಿನ ಒಪ್ಪಂದವನ್ನು ಅಂತಿಮಗೊಳಿಸುವ ಮುನ್ನ ಸ್ವಾಭಾವಿಕ ನ್ಯಾಯ ಪರಿಕಲ್ಪನೆಯ ತತ್ವಕ್ಕೆ ಅನುಗುಣವಾಗಿ ಅವರ ಅಹವಾಲುಗಳನ್ನು ಆಲಿಸಬೇಕು' ಎಂದು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಎಚ್‌ಎಎಲ್ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅನು ಶಿವರಾಮನ್ ಮತ್ತು ನ್ಯಾಯಮೂರ್ತಿ ಜಿ.ಬಸವರಾಜ ಅವರಿದ್ದ ವಿಭಾಗೀಯ ನ್ಯಾಯಪೀಠ, 'ಏಕಸದಸ್ಯ ನ್ಯಾಯಪೀಠದ ಆದೇಶ ಸೂಕ್ತವಾಗಿಯೇ ಇದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

ಅಂತೆಯೇ, 'ಕಾನೂನಿನ ಪ್ರಕಾರ ಸಮಗ್ರ ಒಪ್ಪಂದವನ್ನು ಪರಿಷ್ಕರಿಸಿ ಅದರ ಪ್ರತಿಯನ್ನು ಎಚ್‌ಎಎಲ್ ಗುತ್ತಿಗೆ ನೌಕರರ ಸಂಘಕ್ಕೆ ನೀಡಬೇಕು' ಎಂದು ಮೇಲ್ಮನವಿದಾರ ಕರ್ನಾಟಕ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಕಂಪನಿಗೆ ಆದೇಶಿಸಿದೆ.

'ಎಚ್‌ಎಎಲ್, ಗುತ್ತಿಗೆಗೆ ಸಂಬಂಧಿಸಿದ ಒಪ್ಪಂದದ ಪ್ರಾಥಮಿಕ ಅಧಿಸೂಚನೆ ಹೊರಡಿಸಬೇಕು. ಅದರಿಂದ ಬಾಧಿತರಾಗುವವರು ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡಬೇಕು. ಆಕ್ಷೇಪಣೆ ಪರಿಗಣಿಸಿದ ನಂತರ ಅಂತಿಮ ಅಧಿಸೂಚನೆಗೆ ನಿರ್ಧಾರ ಕೈಗೊಳ್ಳಬೇಕು' ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

ಪ್ರಕರಣವೇನು?: ಹಿಂದೂಸ್ಥಾನ್ ಏರೋನಾಟಿಕ್ಸ್ ಹೆಚ್ಚಿನ ಬೇಡಿಕೆ ಗಳಿದ್ದಾಗ ಪ್ರಮುಖವಲ್ಲದ ಕೆಲಸಗಳನ್ನು ನಿರ್ವಹಿಸಲು ಗುತ್ತಿಗೆ ಆಧಾರದಡಿ ಕಾರ್ಮಿಕರನ್ನು ನಿಯೋಜಿಸಿಕೊಳ್ಳುತ್ತದೆ.

ಈ ರೀತಿ ನಿಯೋಜನೆಗೊಂಡ ಕಾರ್ಮಿಕರು, 'ಗುತ್ತಿಗೆ ಒಪ್ಪಂದವನ್ನು ಆಖೈರುಗೊಳಿಸುವ ಮುನ್ನ ನಮ್ಮೊಂದಿಗೆ ಚರ್ಚಿಸಿ ನಮ್ಮ ಅಹವಾಲು ಕೇಳಿಲ್ಲ' ಎಂದು ಕಂಪನಿಯ ನಡೆಯನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಈ ಅರ್ಜಿ ವಿಚಾರಣೆ ನಡೆಸಿದ್ದ ಏಕಸದಸ್ಯ ನ್ಯಾಯಪೀಠ ಗುತ್ತಿಗೆ ಕಾರ್ಮಿಕರ ಪರ ತೀರ್ಪು ನೀಡಿತ್ತು. ಇದನ್ನು ಪ್ರಶ್ನಿಸಿ ಕಂಪನಿ ಮೇಲ್ಮನವಿ ಸಲ್ಲಿಸಿತ್ತು.


ಭ್ರಷ್ಟಾಚಾರ: ನೇರ ಚರ್ಚೆಗೆ ಬನ್ನಿ ಪ್ರಧಾನಿಗೆ ಸಿ.ಎಂ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭ್ರಷ್ಟಾಚಾರ ಆರೋಪದ ಕಳಂಕ ಮೆತ್ತಿಕೊಂಡಿಲ್ಲದ ಒಬ್ಬನೇ ಒಬ್ಬ ನಾಯಕನನ್ನು ಕರ್ನಾಟಕದ ಬಿಜೆಪಿಯಲ್ಲಿ ನೀವು ತೋರಿಸಿದರೆ ನಿಮ್ಮನ್ನು ಕರ್ನಾಟಕಕ್ಕೆ ಗೌರವದಿಂದ ಕರೆಸಿ ಸಾರ್ವಜನಿಕವಾಗಿ ಸನ್ಮಾನಿಸುತ್ತೇವೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಕೆಣಕಿದ್ದಾರೆ.

'ನಮ್ಮ ಸರ್ಕಾರದ ವಿರುದ್ಧ ಭ್ರಷ್ಟಾಚಾರದ ಆರೋಪ ಹೊರಿಸಿ ಭಾಷಣ ಮಾಡುತ್ತಿರುವ ಮೋದಿಯವರೇ, ದೂರದ ಊರಲ್ಲಿ ಕುಳಿತು ಗಾಳಿಯಲ್ಲಿ ಗುಂಡು ಹೊಡೆಯಬೇಡಿ, ನೇರಾನೇರ ಚರ್ಚೆಗೆ ಬನ್ನಿ' ಎಂದು 'ಎಕ್ಸ್'ನಲ್ಲಿ ಸವಾಲು ಹಾಕಿದ್ದಾರೆ.

'ಗಣಿಗಾರಿಕೆಗೆ ಕಾನೂನುಬಾಹಿರವಾಗಿ ಭೂಮಿ ಮಂಜೂರು ಮಾಡಿರುವ, ನೂರಾರು ಕೋಟಿ ರೂಪಾಯಿ ಹಗರಣದ ಆರೋಪವುಳ್ಳ ಎಚ್.ಡಿ. ಕುಮಾರಸ್ವಾಮಿ ಅವರನ್ನು ಸಂಪುಟಕ್ಕೆ ಸೇರಿಸಿಕೊಂಡಿರುವ ನಿಮಗೆ ಇತರರ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡುವಾಗ ಆತ್ಮಸಾಕ್ಷಿ ಚುಚ್ಚುವುದಿಲ್ಲವೇ? ಈ ಹಗರಣ ಕುರಿತು ಕೋರ್ಟ್‌ಗೆ ಆರೋಪಪಟ್ಟಿ ಸಲ್ಲಿಸಲು ಕರ್ನಾಟಕ ಲೋಕಾಯುಕ್ತರು ಅನುಮತಿ ಕೋರಿದ್ದರೂ ರಾಜ್ಯಪಾಲರು ಕಣ್ಣು ಮುಚ್ಚಿಕೊಂಡಿರು-ವುದೇಕೆ' ಎಂದು ಪ್ರಶ್ನಿಸಿದ್ದಾರೆ.



ಸಿದ್ದರಾಮಯ್ಯ

'ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಹುದ್ದೆಯನ್ನು ಎರಡೂವರೆ ಸಾವಿರ ಕೋಟಿ ರೂಪಾಯಿಗೆ ಹರಾಜು ಹಾಕಿ ಹಣ ಪೀಕಿದ್ದಾರೆ ಎಂಬ ಆರೋಪವನ್ನು ಸ್ವಪಕ್ಷದ ನಾಯಕರಿಂದಲೇ ಎದುರಿಸುತ್ತಿರುವ ಮೋದಿ ಅವರಿಗೆ ಭ್ರಷ್ಟಾಚಾರದ ಬಗ್ಗೆ ಮಾತನಾಡುವ ನೈತಿಕತೆ ಇದೆಯೇ' ಎಂದು ಪ್ರಶ್ನಿಸಿದ್ದಾರೆ.

'ಹಿಮಂತಾ ಶರ್ಮಾ, ಸುವೇಂದು ಅಧಿಕಾರಿ, ಕುಮಾರಸ್ವಾಮಿ ಅವರಿಂದ ಹಿಡಿದು ಇತ್ತೀಚಿನ ಏಡ್ಸ್ ಟ್ರ್ಯಾಪ್ ಗಿರಾಕಿ ಮುನಿರತ್ನವರೆಗೆ ಎಷ್ಟು ಭ್ರಷ್ಟರನ್ನು ವಾಷಿಂಗ್ ಮಷಿನ್‌ನಿಂದ ನೀವು ಕ್ಲೀನ್ ಮಾಡಿಲ್ಲ?... ನನ್ನ ವಿರುದ್ಧ ಭ್ರಷ್ಟಾಚಾರದ ಸುಳ್ಳು ಆರೋಪ ಮಾಡಿ ಕುಣಿದಾಡುತ್ತಿರುವ ಪಾತ್ರಧಾರಿಗಳನ್ನಷ್ಟೇ ರಾಜ್ಯದ ಜನರು ನೋಡಿದ್ದಾರೆ. ಈಗ ಇದರ ಹಿಂದಿರುವ ಸೂತ್ರಧಾರಿ ಯಾರು ಎನ್ನುವುದೂ ಅವರಿಗೆ ಗೊತ್ತಾಗಲಿ' ಎಂದಿದ್ದಾರೆ.

ಸೊಳ್ಳೆ ಔಷಧ ಸಿಂಪಡಣಾ ಕಾರ್ಮಿಕರ ಸಮಸ್ಯೆಗೆ ಸ್ಪಂದಿಸುವಂತೆ ಒತ್ತಾಯ

ಬಾಕಿ ವೇತನಕ್ಕೆ ಒತ್ತಾಯಿಸಿ ಮೌನ ಪ್ರತಿಭಟನೆ

ಪ್ರಜಾವಾಣಿ ವಾರ್ತೆ



ಬ್ಯಾಟರಾಯನಪುರದಲ್ಲಿರುವ ಬಿಬಿಎಂಪಿ ಯಲಹಂಕ ವಲಯ ಕಚೇರಿ ಎದುರು ದಲಿತ ಸಂಘರ್ಷ ಸಮಿತಿಯ(ಕೆಂಪು ಸೇನೆ) ರಾಜ್ಯ ಕಾರ್ಯದರ್ಶಿ ಡಿ.ವಿ.ವೀರಭದ್ರೇ ಗೌಡ ನೇತೃತ್ವದಲ್ಲಿ ಕಾರ್ಮಿಕರು ಹಾಗೂ ಕುಟುಂಬಸದಸ್ಯರು ಮೌನ ಪ್ರತಿಭಟನೆ ನಡೆಸಿದರು.

ಯಲಹಂಕ: ಬಿಬಿಎಂಪಿಯಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸೊಳ್ಳೆ ಔಷಧ ಸಿಂಪಡಣಾ ಕಾರ್ಮಿಕರ (ಎಂ.ಸಿ-ಗ್ಯಾಂಗ್‌ಮೆನ್) ಬಾಕಿ ವೇತನ ತಕ್ಷಣ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿ, ಬ್ಯಾಟರಾಯನಪುರದಲ್ಲಿ ಇರುವ ಬಿಬಿಎಂಪಿ ಯಲಹಂಕ ವಲಯ ಕಚೇರಿ ಮುಂಭಾಗದಲ್ಲಿ ದಲಿತ ಸಂಘರ್ಷ ಸಮಿತಿಯ (ಕೆಂಪು ಸೇನೆ) ರಾಜ್ಯ ಕಾರ್ಯದರ್ಶಿ ಡಿ.ವಿ. ವೀರಭದ್ರೇಗೌಡ ನೇತೃತ್ವದಲ್ಲಿ ಕಾರ್ಮಿಕರು ಹಾಗೂ ಕುಟುಂಬ ಸದಸ್ಯರು ಮೌನ ಪ್ರತಿಭಟನೆ ನಡೆಸಿದರು.

ಗುತ್ತಿಗೆದಾರರು 11 ತಿಂಗಳಿಂದ ಸರಿಯಾಗಿ ವೇತನ ಪಾವತಿಸಿಲ್ಲ. ಇದರಿಂದ ಮಕ್ಕಳ ಶಾಲಾ ಶುಲ್ಕ, ಮನೆ ಬಾಡಿಗೆ ಮತ್ತು ಜೀವನ ನಿರ್ವಹಣೆಗೆ ಹಣವಿಲ್ಲದೆ ತುಂಬಾ ತೊಂದರೆಯಾಗಿದೆ. ವೇತನಕ್ಕಾಗಿ ನಿತ್ಯ ಬಿಬಿಎಂಪಿ ಕಚೇರಿಗೆ ಅಲೆದಾಡುತ್ತಿ-ದ್ದೇವೆ' ಎಂದು ಕಾರ್ಮಿಕರು ಅಳಲು ತೋಡಿಕೊಂಡರು.

'ಒಮ್ಮೊಮ್ಮೆ ಆರು ತಿಂಗಳಾದರೂ ವೇತನ ಪಾವತಿಸುವುದಿಲ್ಲ. ಕೇಳಿದಾಗ ಮಾತ್ರ ಎರಡ್ಮೂರು ತಿಂಗಳ ವೇತನ ಕೊಟ್ಟು, ಪೂರ್ತಿ ವೇತನ ನೀಡದೆ ಗುತ್ತಿಗೆದಾರರು ಸತಾಯಿಸುತ್ತಾರೆ. ಅಲ್ಲದೆ ಗುತ್ತಿಗೆದಾರರು ಇ.ಎಸ್.ಐ ಕಚೇರಿಗೆ ಹಣ ಪಾವತಿಸದ ಕಾರಣ, ನಮಗೆ ಆರೋಗ್ಯ ಸಮಸ್ಯೆಯಾದರೆ ಇಎಸ್‌ಐ ಆಸ್ಪತ್ರೆಯಲ್ಲಿ ಚಿಕಿತ್ಸೆ ಸಿಗದಂತಾಗಿದೆ'ಎಂದು ದೂರಿದರು.

ಈ ವೇಳೆ ಮಾತನಾಡಿದ ವೀರಭದ್ರೇಗೌಡ, 'ಬಿಬಿಎಂಪಿ ಯಲಹಂಕ ವಲಯ ಕಚೇರಿ ವ್ಯಾಪ್ತಿಯಲ್ಲಿ 24 ಮಂದಿ ಸೊಳ್ಳೆ ಔಷಧ ಸಿಂಪಡಣಾ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರಸಾದ್ ಮತ್ತು ಇತರರು ಬಿಬಿಎಂಪಿಯಿಂದ ಔಷಧ ಸಿಂಪಡಣಾ ಕಾರ್ಯದ ಗುತ್ತಿಗೆ ಪಡೆದಿದ್ದಾರೆ. ಬಿಬಿಎಂಪಿ ಆರೋಗ್ಯ ಇಲಾಖೆಯ ಅಧಿಕಾರಿಗಳು, ಕಾರ್ಮಿಕರ ಸಮಸ್ಯೆಗೆ ಸರಿಯಾಗಿ ಸ್ಪಂದಿಸುತ್ತಿಲ್ಲ' ಎಂದು ಆರೋಪಿಸಿದರು.

ಕಾರ್ಮಿಕರ ಕನಿಷ್ಠ ವೇತನ ನಿಯಮದಡಿ ತಿಂಗಳಿಗೆ ₹18 ಸಾವಿರ ವೇತನ ನೀಡಬೇಕು. ಆದರೆ ಗುತ್ತಿಗೆದಾರರು ಕೇವಲ ₹12 ಸಾವಿರ ನೀಡುತ್ತಿದ್ದು, ಅದನ್ನೂ ಸರಿಯಾಗಿ ಕೊಡದೇ ಸತಾಯಿಸುತ್ತಿದ್ದಾ-ರೆ. ಕಾರ್ಮಿಕರಿಗೆ ಮಾಸ್ಕ್, ಗ್ಲೌಸ್, ಸಮವಸ್ತ್ರ, ಶೂ ಸೇರಿದಂತೆ ಮೂಲ-ಸೌಕರ್ಯಗಳನ್ನು ಒದಗಿಸಿಲ್ಲ ಎಂದು ದೂರಿದರು. ತಕ್ಷಣ ಬಾಕಿ ವೇತನ ಬಿಡುಗಡೆ ಮಾಡದಿದ್ದರೆ ಬಿಬಿಎಂಪಿ ಕೇಂದ್ರ ಕಚೇರಿಯ ಎದುರು ಹೋರಾಟ ನಡೆಸಲಾಗುವುದು ಎಂದು ಅವರು ಎಚ್ಚರಿಕೆ ನೀಡಿದರು.

'ಕಾರ್ಮಿಕರ ಬಾಕಿ ವೇತನ ಬಿಡುಗಡೆ ಮಾಡದೆ, ಇ.ಎಸ್.ಐ ಕಚೇರಿಗೂ ನಿಯಮಾನುಸಾರ ಹಣ ಪಾವತಿಸದ ಕಾರಣ ಗುತ್ತಿಗೆದಾರರಿಗೆ ಪಾಲಿಕೆಯಿಂದ ಹಣ ಬಿಡುಗಡೆ ಮಾಡಿಲ್ಲ. ಕಪ್ಪುಪಟ್ಟಿಗೆ ಸೇರಿಸಲು ಈಗಾಗಲೇ ಬಿಬಿಎಂಪಿ ಕೇಂದ್ರ ಕಚೇರಿಗೆ ಪತ್ರ ಬರೆಯಲಾಗಿದೆ. ಗುತ್ತಿಗೆದಾರರಿಗೆ ದೂರವಾಣಿ ಮೂಲಕ ಬಾಕಿ ವೇತನ ತಕ್ಷಣ ಪಾವತಿಸಬೇಕೆಂದು ತಿಳಿಸಲಾಗಿದೆ. ನಾಳೆ ವೇತನ ಪಾವತಿಸುವುದಾಗಿ ಒಪ್ಪಿಕೊಂ-ಡಿದ್ದಾರೆ. ಇದನ್ನು ನೋಡಿಕೊಂಡು ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಬಿಬಿಎಂಪಿ ಯಲಹಂಕ ವಲಯದ ಆರೋಗ್ಯ ಅಧಿಕಾರಿ ಸಿದ್ದಪ್ಪಾಜಿ ತಿಳಿಸಿದರು.

ಐಐಎಂ– ಬೆಂಗಳೂರಿಗೆ ಅಗ್ರ 100ರಲ್ಲಿ ಸ್ಥಾನ

ನವದೆಹಲಿ (ಪಿಟಿಐ): ಉನ್ನತ ಶಿಕ್ಷಣ ಸಂಸ್ಥೆಗಳ ಗುಣಮಟ್ಟ ಕುರಿತ 2025ರ 'ಕ್ಯೂಎಸ್ ಗ್ಲೋಬಲ್ ಎಂಬಿಎ ರ‍್ಯಾಂಕಿಂಗ್ಸ್' ಪಟ್ಟಿ ಬುಧವಾರ ಪ್ರಕಟವಾ-ಗಿದ್ದು, ಮೊದಲ 100 ಅಗ್ರ ಸಂಸ್ಥೆಗಳಲ್ಲಿ ಮೂರು 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್' (ಐಐಎಂ) ಮತ್ತು ಹೈದರಾಬಾದಿನ 'ಇಂಡಿಯನ್ ಸ್ಕೂಲ್ ಆಫ್ ಬ್ಯುಸಿನೆಸ್' ಸ್ಥಾನ ಪಡೆದಿವೆ.

ಐಐಎಂ– ಬೆಂಗಳೂರು, ಐಐಎಂ– ಅಹಮದಾಬಾದ್ ಮತ್ತು ಐಐಎಂ– ಕಲ್ಕತ್ತ, ಉದ್ಯೋಗವಕಾಶ ಕಲ್ಪಿಸಿಕೊಡುವ ಸಂಸ್ಥೆಗಳ ಪೈಕಿ ಅಗ್ರ 50ರಲ್ಲಿ ಸ್ಥಾನ ಪಡೆದಿವೆ.

ಉನ್ನತ ಶಿಕ್ಷಣ ವ್ಯವಸ್ಥೆಯ ವಿಶ್ಲೇಷಣೆ ನಡೆಸಿ, ರ‍್ಯಾಂಕಿಂಗ್ ನೀಡುವ ಲಂಡನ್ ಮೂಲದ ಕ್ವಾಕ್ವರೇಲಿ ಸೈಮಂಡ್ಸ್ (ಕ್ಯೂಎಸ್) ಎಂಬ ಸಂಸ್ಥೆ ಈ ಜಾಗತಿಕ ಪಟ್ಟಿಯನ್ನು ಬಿಡುಗಡೆ ಮಾಡಿದ್ದು, ಭಾರತದಲ್ಲಿ ಪೂರ್ಣ ಕಾಲಿಕ ಎಂಬಿಎ ಕೋರ್ಸ್‌ಗಳನ್ನು ನಡೆಸುವ 14 ಪ್ರತಿಷ್ಠಿತ ಸಂಸ್ಥೆಗಳು ಸ್ಥಾನ ಪಡೆದಿವೆ.

ಅಮೆರಿಕದ ಸ್ಟ್ಯಾನ್‌ಫೋರ್ಡ್ ಗ್ರಾಜುಯೇಟ್ ಸ್ಕೂಲ್ ಆಫ್ ಬ್ಯುಸಿನೆಸ್ ಸತತ ಐದನೇ ವರ್ಷವೂ ಮೊದಲ ಸ್ಥಾನದಲ್ಲಿ ಮುಂದುವರಿದಿದೆ.



ಬೆಂಗಳೂರು, ಅಹಮದಾಬಾದ್, ಕಲ್ಕತ್ತ, ಇಂದೋರ್, ಲಖನೌ, ಉದಯಪುರ, ಕೋಯಿಕ್ಕೋಡ್‌ನ ಐಐಎಂಗಳು, ಗಾಜಿಯಾಬಾದ್‌ನ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಟೆಕ್ನಾಲಜಿ (ಐಎಂಟಿ), ಗುರುಗ್ರಾಮದ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ ಇನ್‌ಸ್ಟಿಟ್ಯೂಟ್ (ಎಂಡಿಐ) ದೆಹಲಿಯ ಕ್ಸೇವಿಯರ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್, ಕೋಲ್ಕತ್ತದ ಇಂಟರ್‌ನ್ಯಾಷನಲ್ ಮ್ಯಾನೇಜ್‌ಮೆಂಟ್ ಇನ್‌ಸ್ಟಿಟ್ಯೂಟ್ ಮತ್ತು ಮುಂಬೈನ ಸೋಮಯ್ಯ ವಿದ್ಯಾವಿಹಾರ ವಿಶ್ವವಿದ್ಯಾಲಯಗಳು ಈ ಪಟ್ಟಿಯಲ್ಲಿ ಸ್ಥಾನ ಪಡೆದಿವೆ.

'ರಾಯಣ್ಣ –ಚನ್ನಮ್ಮ ಬ್ರಿಗೇಡ್‌ಗೆ ದೊಡ್ಡ ಮಟ್ಟದಲ್ಲಿ ಚಾಲನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದೂಗಳ ಪರ ಹೋರಾಟ ನಡೆಸಲು ರಾಯಣ್ಣ – ಚನ್ನಮ್ಮ ಬ್ರಿಗೇಡ್‌ಗೆ ದೊಡ್ಡ ಮಟ್ಟದಲ್ಲಿ ಚಾಲನೆ ನೀಡಲಾಗುವುದು. ಇದಕ್ಕಾಗಿ ಸದ್ಯವೇ ಬೆಂಗಳೂರಿನಲ್ಲಿ ಸಭೆ ನಡೆಸಲಾಗುವುದು ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಹೇಳಿದರು.

ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ, ರಮೇಶ ಜಾರಕಿಹೊಳಿ ಅವರ ಜತೆ ಮಂಗಳವಾರ ರಾತ್ರಿ ನಡೆದ ಮಾತುಕತೆಯಲ್ಲಿ ಈ ವಿಷಯದ ಕುರಿತು ಚರ್ಚೆ ನಡೆಯಿತು ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಚನ್ನಮ್ಮ-ರಾಯಣ್ಣ ಬ್ರಿಗೇಡ್‌ಗೆ ಚಾಲನೆ ನೀಡಲು ಸದ್ಯವೇ ಬೆಂಗಳೂರಿನಲ್ಲಿ ಸಭೆ ನಡೆಸಲಾಗುವುದು. ಇದಕ್ಕೆ ರಾಜ್ಯದ ವಿವಿಧ ಭಾಗಗಳಿಂದ ಆಯ್ದ 1,500 ರಿಂದ 2,000 ಪ್ರಮುಖರನ್ನು ಆಹ್ವಾನಿಸಿ ಚರ್ಚಿಸಲಾಗುವುದು ಎಂದು ಈಶ್ವರಪ್ಪ ಹೇಳಿದರು.

ರಾತ್ರಿ ನಡೆದ ಸಭೆಯಲ್ಲಿ ರಾಜಕೀಯ ವಿಚಾರವೂ ಚರ್ಚೆಗೆ ಬಂದಿತು. ಪಕ್ಷಕ್ಕೆ ಸೇರಿಸಿಕೊಳ್ಳುವುದು ಪಕ್ಷದ ವರಿಷ್ಠರಿಗೆ ಬಿಟ್ಟ ವಿಚಾರ ಎಂದು ಅವರು ತಿಳಿಸಿದರು.

ಮುಂಬೈ: ಭಾರಿ ಮಳೆ, ಜನಜೀವನ ಅಸ್ತವ್ಯಸ್ತ

ಮುಂಬೈ (ಪಿಟಿಐ): ಮುಂಬೈ ನಗರದಲ್ಲಿ ಬುಧವಾರ ಧಾರಾಕಾರ ಮಳೆಯಾಗಿದ್ದು, ಹಲವು ರಸ್ತೆಗಳು ಹಾಗೂ ತಗ್ಗು ಪ್ರ-ದೇಶಗಳಲ್ಲಿ ನೀರು ನಿಂತು ಜನಜೀವನ ಅಸ್ತವ್ಯಸ್ತಗೊಂಡಿತು. ಸ್ಥಳೀಯ ರೈಲುಗಳ ಸಂಚಾರ ಸ್ಥಗಿತಗೊಂಡಿತ್ತು. ಕುರ್ಲಾ ಮತ್ತು ಠಾಣೆ ನಿಲ್ದಾಣಗಳ ನಡುವೆ ಸಂಚಾರ ಸ್ಥಗಿತಗೊಂಡಿತು.

ಮುಂಬೈನ ವಿಮಾನ ನಿಲ್ದಾಣದಲ್ಲಿ ಇಳಿಯಬೇಕಿದ್ದ 14 ವಿಮಾನಗಳ ಮಾರ್ಗ ಬದಲಾವಣೆ ಮಾಡಲಾಯಿತು.

ಸತತ ಐದು ಗಂಟೆ ಮಳೆ ಸುರಿದಿದ್ದು, ಕೆಲವೆಡೆ 100 ಮಿ.ಮೀ. ಮಳೆ ಆಗಿದೆ. ರಸ್ತೆಗಳು ನದಿಯ ಸ್ವರೂಪ ತಳೆದಿದ್ದವು. ವಾಹನಗಳ ಸಂಚಾರ ಮಂದಗತಿಯ-ಲ್ಲಿತ್ತು.

ಮುಂಜಾಗ್ರತೆಯಾಗಿ ನಗರದ ವ್ಯಾಪ್ತಿಯಲ್ಲಿ ಶಾಲೆ–ಕಾಲೇಜುಗಳಿಗೆ ಗುರುವಾರ (ಸೆ.26) ರಜೆ ಘೋಷಿಸಲಾಗಿದೆ.



ಮುಂಬೈನಲ್ಲಿ ಭಾರಿ ಮಳೆ ಕಾರಣ ಬುಧವಾರ ಸ್ಥಳೀಯ ರೈಲು ಸಂಚಾರ ವಿಳಂಬಗೊಂಡಿದ್ದು, ಸಾವಿರಾರು ಪ್ರಯಾಣಿಕರು ಛತ್ರಪತಿ ಶಿವಾಜಿ ಟರ್ಮಿನಲ್‌ನಲ್ಲೇ ಜಮಾವಣೆಗೊಳ್ಳುವಂತಾಯಿತು. –ಪಿಟಿಐ ಚಿತ್ರ

ತಿದ್ದುಪಡಿ

ಸೆ.21ರಂದು ಪ್ರಕಟವಾ-ಗಿದ್ದ 'ವಿದ್ಯಾರ್ಥಿನಿಯರ ಶೌಚಾಲಯದಲ್ಲಿ ವಿಡಿಯೊ: ಆರೋಪಿ ಬಂಧನ' ಸುದ್ದಿಯ ಚಿತ್ರ ಶೀರ್ಷಿಕೆಯಲ್ಲಿ ಎಸಿಎಸ್ ಎಂಜಿನಿಯರಿಂಗ್ ಕಾಲೇಜಿನ ಹೆಸರು ಎಪಿಎಸ್ ಎಂಜಿನಿಯರಿಂಗ್ ಕಾಲೇಜು ಎಂದು ತಪ್ಪಾಗಿ ಪ್ರಕಟವಾಗಿದೆ. ಅದಕ್ಕಾಗಿ ವಿಷಾದಿಸುತ್ತೇವೆ.

'ಡಿನೋಟಿಫೈ: ಅಧಿಕಾರಿಗಳಿಗೆ ನೋಟಿಸ್'

2ನೇ ಮುಖಪುಟದಿಂದ...

ಆದರೆ, ಸಚಿವರ ಗಮನಕ್ಕೂ ತಾರದೆ, ಸಂಪುಟದ ಒಪ್ಪಿಗೆಯನ್ನೂ ಪಡೆಯದೆ ಕೆಲವು ಅಧಿಕಾರಿಗಳು ತಮ್ಮ ಮಟ್ಟದಲ್ಲೇ ಆದೇಶ ಹೊರಡಿಸಿ ದ್ದಾರೆ' ಎಂದು ಸಚಿವರು ಉಲ್ಲೇಖಿಸಿದ್ದಾರೆ.

'ಅರಣ್ಯ ಭೂಮಿಯನ್ನು ಸರ್ಕಾರಿ ಮತ್ತು ಖಾಸಗಿಯವರಿಗೆ ಪರಭಾರೆ ಮಾಡಲು ಎಚ್‌ಎಂಟಿ ಸಂಸ್ಥೆಗೆ ಇಲಾಖೆ ನಿರಾಕ್ಷೇಪಣಾ ಪತ್ರವನ್ನೂ ನೀಡಿದೆ. ಹೀಗಾಗಿ, ಎಚ್‌ಎಂಟಿ ಸಂಸ್ಥೆ ಈವರೆಗೆ 165 ಎಕರೆ ಜಮೀನನ್ನು ₹313.65 ಕೋಟಿಗೆ ಖಾಸಗಿ ಮತ್ತು ಸರ್ಕಾರಿ ಸಂಸ್ಥೆಗಳಿಗೆ ಮಾರಾಟ ಮಾಡಿದೆ' ಎಂದು ಖಂಡ್ರೆ ತಿಳಿಸಿದ್ದಾರೆ.

'2015ರಲ್ಲಿ ಅಂದಿನ ಎಪಿಸಿಸಿಎಫ್ ವೆಂಕಟಸುಬ್ಬಯ್ಯ ಅವರು ಎಚ್‌ಎಂಟಿ ವಶದಲ್ಲಿದ್ದ ಅರಣ್ಯ ಭೂಮಿ ತೆರವಿಗೆ 64ಎ ಪ್ರಕ್ರಿಯೆ ನಡೆಸಿ ಆದೇಶ ನೀಡಿದ್ದರು. ಆ ಆದೇಶದ ವಿರುದ್ಧ ಎಚ್‌ಎಂಟಿ ನಿಗದಿತ ಕಾಲಮಿತಿಯಲ್ಲಿ ಮೇಲ್ಮನವಿ ಸಲ್ಲಿಸಿಲ್ಲ' ಎಂದೂ ಸಚಿವರು ಹೇಳಿದ್ದಾರೆ.

'ಸುಪ್ರೀಂ ಕೋರ್ಟ್‌ನಲ್ಲಿ ಅರಣ್ಯ ಇಲಾಖೆ ಸಲ್ಲಿಸಿರುವ ಮಧ್ಯಂತರ ಅರ್ಜಿಯನ್ನು ಹಿಂಪಡೆಯಲು ಅರ್ಜಿ ಸಲ್ಲಿಸಲಾಗಿದೆ. ಈ ಭೂಮಿಯನ್ನು ಅರಣ್ಯ ಇಲಾಖೆಗೆ ಪಡೆದು ಲಾಲ್ ಬಾಗ್ ಅಥವಾ ಕಬ್ಬನ್ ಉದ್ಯಾನದ ಮಾದರಿಯಲ್ಲಿ ಸಸ್ಯೋದ್ಯಾನ ಅಭಿವೃದ್ಧಿ ಪಡಿಸಲಾಗುವುದು' ಎಂದೂ ಖಂಡ್ರೆ ತಿಳಿಸಿದ್ದಾರೆ.

ಎಚ್‌ಎಂಟಿ ವಶದಲ್ಲಿರುವ ಅರಣ್ಯ ಪ್ರದೇಶಕ್ಕೆ ಈಶ್ವರ ಖಂಡ್ರೆ ಬುಧವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

'ಮೆಡಿಕವರ್ ಆಸ್ಪತ್ರೆಯಲ್ಲಿ ಅತ್ಯಾಧುನಿಕ ವ್ಯವಸ್ಥೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೆಡಿಕವರ್ ಆಸ್ಪತ್ರೆಯು ದಕ್ಷಿಣ ಭಾರತದಲ್ಲಿ ತನ್ನ ಜಾಲ ವಿಸ್ತರಿಸಿದ್ದು, ಅತ್ಯಾಧುನಿಕ ಚಿಕಿತ್ಸಾ ವ್ಯವಸ್ಥೆ ಹೊಂದಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ನಗರದ ವೈಟ್‌ಫೀಲ್ಡ್‌ನಲ್ಲಿ ಸಮಗ್ರ ಆರೋಗ್ಯ ಸೇವಾ ಸೌಲಭ್ಯ ಹೊಂದಿರುವ ಮೆಡಿಕವರ್ ಆಸ್ಪತ್ರೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಮೆಡಿಕವರ್ ಸಂಸ್ಥೆಯು 24 ಆಸ್ಪತ್ರೆಗಳನ್ನು ಹೊಂದಿದ್ದು, 14 ಸಾವಿರಕ್ಕೂ ಹೆಚ್ಚು ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ. ಇದು ಕರ್ನಾಟಕ, ಮಹಾರಾಷ್ಟ್ರ ಹಾಗೂ ಆಂಧ್ರ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿದೆ' ಎಂದರು.



ನಗರದ ವೈಟ್‌ಫೀಲ್ಡ್‌ನಲ್ಲಿ ನೂತನ ಪ್ರಾರಂಭವಾಗಿರುವ ಮೆಡಿಕವರ್ ಆಸ್ಪತ್ರೆಯನ್ನು ಡಿ.ಕೆ. ಶಿವಕುಮಾರ್ ಅವರು ಶನಿವಾರ ಉದ್ಘಾಟಿಸಿದರು. ಪಿ. ಹರಿಕೃಷ್ಣಾ, ಮಂಜುಳಾ ಅರವಿಂದ ಲಿಂಬಾವಳಿ, ಡಾ.ಜಿ. ಅನಿಲ್ ಕೃಷ್ಣಾ, ಎನ್‌.ಎ. ಹ್ಯಾರಿಸ್, ದಿನೇಶ್ ಗುಂಡೂರಾವ್ ಭಾಗವಹಿಸಿದ್ದರು

ಮೆಡಿಕವರ್ ಹಾಸ್ಪಿಟಲ್ಸ್‌ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಡಾ.ಅನಿಲ್ ಕೃಷ್ಣಾ ಮಾತನಾಡಿ, 'ಆಸ್ಪತ್ರೆಯು ಸಾರ್ವಜನಿಕರಿಗೆ ಉತ್ತಮ ಗುಣಮಟ್ಟದ ಆರೋಗ್ಯ ಸೇವೆ ಒದಗಿಸುವ ಉದ್ದೇಶ ಹೊಂದಿದೆ. ಹೃದಯ ಸಂಬಂಧಿ ಕಾಯಿಲೆ, ಅಂಗಾಂಗ ಬದಲಾವಣೆ, ಮೂತ್ರಪಿಂಡ ಸೇರಿದಂತೆ ಸಮಗ್ರ ಆರೋಗ್ಯ ಸೇವೆಗಳನ್ನು ನೀಡಲಿದೆ. ನೂತನ ಆಸ್ಪತ್ರೆಯು 45 ಒಪಿಡಿ ಕೊಠಡಿಗಳು, 100 ಐಸಿಯು ಬೆಡ್‌ಗಳನ್ನು ಹೊಂದಿದೆ' ಎಂದರು.

ಸಚಿವರಾದ ಸತೀಶ್ ಜಾರಕಿಹೊಳಿ, ದಿನೇಶ್ ಗುಂಡೂರಾವ್, ಸಂಸದ ಬಸವರಾಜ ಬೊಮ್ಮಾಯಿ, ಶಾಸಕರಾದ ಎನ್.ಎ. ಹ್ಯಾರಿಸ್ ಮತ್ತು ಮಂಜುಳಾ ಅರವಿಂದ ಲಿಂಬಾವಳಿ ಉಪಸ್ಥಿತರಿದ್ದರು.



ಹತ್ಯೆಗೆ ಸುಪಾರಿ ನೀಡಿದ್ದ ಉದ್ಯಮಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಕಾರವಾರ: ತಾಲ್ಲೂಕಿನ ಹಣಕೋಣ ಗ್ರಾಮದ ಉದ್ಯಮಿ ವಿನಾಯಕ ನಾಯ್ಕ ಅವರನ್ನು ಹತ್ಯೆಗೈಯ್ಯಲು ಸುಪಾರಿ ನೀಡಿದ್ದ ಬೋಳಶಿಟ್ಟಾ ಮೂಲದ ಗೋವಾ ಉದ್ಯಮಿ ಗುರುಪ್ರಸಾದ ರಾಣೆ (52) ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಗುರುಪ್ರಸಾದ ಅವರ ಮೃತದೇಹವು ಗೋವಾದ ಬೇತುಲ್‌ನಲ್ಲಿ ಮಾಂಡೊವಿ ನದಿ ತೀರದಲ್ಲಿ ಪತ್ತೆಯಾಗಿದೆ ಎಂದು ಅಲ್ಲಿನ ಪೊಲೀಸರು ಖಚಿತಪಡಿಸಿದ್ದಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ನಾರಾಯಣ ತಿಳಿಸಿದ್ದಾರೆ.

'ವೈಯಕ್ತಿಕ ದ್ವೇಷದಿಂದ ವಿನಾಯಕ ಅವರ ಹತ್ಯೆಗೆ ಗುರುಪ್ರಸಾದ್ ಸುಪಾರಿ ನೀಡಿದ್ದರು. ಇಬ್ಬರೂ ಸಂಬಂಧಿಗಳೂ ಆಗಿದ್ದರು. ಗೋವಾದ ಪೊಂಡಾದಲ್ಲಿರುವ ತಮ್ಮ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರಾದ ಅಸ್ಸಾಂ ಮೂಲದ ಲಕ್ಷ್ಮಿಜ್ಯೋತಿ ನಾಥ, ಬಿಹಾರ ಮೂಲದ ಮಾಸುಮ ಮಹೇಂದ್ರಾಪುರ ಮತ್ತು ಅಜ್ಮಲ್ ಪಯರನಿಯಾ ಎಂಬುವವರನ್ನು ಬಳಸಿಕೊಂಡಿದ್ದರು. ಈ ಮೂವರು ಸೇರಿ ಸೆ.22 ರಂದು ವಿನಾಯಕ ಅವರ ಹತ್ಯೆ ಮಾಡಿದ್ದರು' ಎಂದೂ ವಿವರಿಸಿದ್ದಾರೆ.

ವೈದ್ಯಕೀಯ ಸೀಟು ರದ್ದು: ಇಂದೇ ಕಡೆ ದಿನ

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹಂಚಿಕೆ ಮಾಡಿದ್ದ ರಾಜ್ಯ ಕೋಟಾದ ವೈದ್ಯಕೀಯ ಸೀಟುಗಳ ರದ್ದತಿಗೆ ಸೆ. 26ರವರೆಗೂ ಅವಕಾಶ ನೀಡಲಾಗಿದೆ. ಅಖಿಲ ಭಾರತ ಮಟ್ಟದಲ್ಲಿನ ವೈದ್ಯಕೀಯ ಸೀಟು ಉಳಿಸಿಕೊಳ್ಳಲು ನಿರ್ಧರಿಸಿದ 107 ವಿದ್ಯಾರ್ಥಿಗಳೂ ಸೇರಿ ವಿವಿಧ ಕೋರ್ಸ್‌ಗಳ 206 ವಿದ್ಯಾರ್ಥಿಗಳು ಎರಡನೇ ಸುತ್ತಿನ ಸೀಟು ಹಂಚಿಕೆ ವೇಳೆ ರದ್ದು ಮಾಡಿಕೊಂಡಿದ್ದರು.

'ಸೀಟು ರದ್ದು ಮಾಡಿಕೊಳ್ಳುವವರು ಕೆಇಎ ಕಚೇರಿಗೆ ಹಾಜರಾಗಬೇಕು. ಸೀಟು ರದ್ದು ಮಾಡಿಕೊಳ್ಳುವವರಿಗೆ ಮೊದಲು ಒಂದು ವರ್ಷದ ಶುಲ್ಕ ಹಾಗೂ ₹10 ಸಾವಿರ ದಂಡ ವಿಧಿಸಲಾಗುತ್ತಿತ್ತು. ಇದೇ ಮೊದಲ ಬಾರಿ ₹10 ಸಾವಿರ ದಂಡ ಮಾತ್ರ ಪಡೆಯಲಾಗುತ್ತಿದೆ' ಎಂದು ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ಕಾಂಗ್ರೆಸ್‌ಗೆ ಜೆಡಿಎಸ್ ಸದಸ್ಯರ ಬೆಂಬಲ

ಪ್ರಜಾವಾಣಿ ವಾರ್ತೆ

ಕುಶಾಲನಗರ (ಕೊಡಗು ಜಿಲ್ಲೆ): ಇಲ್ಲಿನ ಪಟ್ಟಣ ಪಂಚಾಯಿತಿಯ ಎರಡನೇ ಅವಧಿಯ ಅಧ್ಯಕ್ಷ, ಉಪಾಧ್ಯಕ್ಷರ ಸ್ಥಾನಕ್ಕೆ ಬುಧವಾರ ನಡೆದ ಚುನಾವಣೆಯಲ್ಲಿ ಬಿಜೆಪಿ- ಜೆಡಿಎಸ್ ನಡುವಿನ ಬಿರುಕು ಬಹಿರಂಗವಾಯಿತು.

'ಚುನಾವಣಾ ಪ್ರಕ್ರಿಯೆ ಕಾನೂನು ಬಾಹಿರವಾಗಿ ನಡೆಯುತ್ತಿದೆ' ಎಂದು ಆರೋಪಿಸಿ ಬಿಜೆಪಿ ಸದಸ್ಯರು ಸಭೆ ಬಹಿಷ್ಕರಿಸಿ ಹೊರ ನಡೆದರೆ, ಜೆಡಿಎಸ್‌ನ ಎಲ್ಲ ಸದಸ್ಯರು ಭಾಗಿಯಾದರು. ಅಂತಿಮವಾಗಿ ಕಾಂಗ್ರೆಸ್‌ನ ಜಯಲಕ್ಷ್ಮಿ ಚಂದ್ರು ಅಧ್ಯಕ್ಷರಾಗಿ ಹಾಗೂ ಉಪಾಧ್ಯಕ್ಷೆಯಾಗಿ ಪುಟ್ಟಲಕ್ಷ್ಮಮ್ಮ ಅವಿರೋಧವಾಗಿ ಆಯ್ಕೆಯಾದರು.

ಒಟ್ಟು 16 ಸ್ಥಾನಬಲದ ಪಟ್ಟಣ ಪಂಚಾಯಿತಿಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ತಲಾ 6 ಸ್ಥಾನ ಪಡೆಯುವ ಮೂಲಕ ಸಮಬಲ ಸಾಧಿಸಿದ್ದವು. 4 ಸ್ಥಾನ ಗಳಿಸಿದ್ದ ಜೆಡಿಎಸ್ ನಿರ್ಣಾಯಕ ಪಾತ್ರ ವಹಿಸಿತ್ತು. ಚುನಾವಣೆ ವೇಳೆ ಜೆಡಿಎಸ್‌ನ ಸರ್ವಸದಸ್ಯರೂ ಕಾಂಗ್ರೆಸ್ ಜೊತೆ ಕೈಜೋಡಿಸಿದ್ದರಿಂದ ನಿರಾಯಾಸವಾಗಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಎರಡೂ ಸ್ಥಾನಗಳು ಕಾಂಗ್ರೆಸ್ ಪಾಲಾದವು.

रजिस्ट्री सं. डी.एल.- 33004/99 REGD. NO. D. L.-33004/99

भारत का राजपत्र
The Gazette of India

सी.जी.-डी.एल.-अ.- 23092024-257371
CG-DL-E- 23092024-257371
असाधारण
EXTRAORDINARY
भाग II-खण्ड 3-उप-खण्ड (ii)
PART II—Section 3—Sub-section (ii)
प्राधिकार से प्रकाशित
PUBLISHED BY AUTHORITY

No. 3650] NEW DELHI, WEDNESDAY, SEPTEMBER18, 2024/BHADRA 27, 1946

ಭಾರತ ಸರ್ಕಾರದ
ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ
ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಇಲಾಖೆ

ಸಾರ್ವಜನಿಕ ಪ್ರಕಟಣೆ
ನವದೆಹಲಿ, ದಿನಾಂಕ: 18 ಸೆಪ್ಟಂಬರ್ 2024

ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956 ರ 48) ಮತ್ತು ತಿದ್ದುಪಡಿ ಕಾಯ್ದೆ 1997ರ ಸೆಕ್ಷನ್ 3ಡಿ(1) ಮತ್ತು (2) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಭಾರತ ಸರಕಾರವು ಕರ್ನಾಟಕ ರಾಜ್ಯದ ಗದಗ ಜಿಲ್ಲೆಯ ಗಜೇಂದ್ರಗಡ ತಾಲೂಕಿನಲ್ಲಿ ಹಾಯ್ದು ಹೋಗುವ ರಾಷ್ಟ್ರೀಯ ಹೆದ್ದಾರಿ ನಂ-367 ರಲ್ಲಿ (ಬಾಣಾಪೂರ-ಗದ್ದನಕೇರಿ ಸೆಕ್ಷನ್)ಕಿ.ಮೀ 40.384 ರಿಂದ ಕಿ.ಮೀ 46.876 ರವರೆಗೆ ಗಜೇಂದ್ರಗಡ ನಗರಕ್ಕೆ ದ್ವಿಪಥ ಬೈಪಾಸ್ ರಸ್ತೆ ನಿರ್ಮಾಣ (ಅಗಲಗೊಳಿಸುವುದು/ 4 ಲೇನ್ ಇತ್ಯಾದಿ) ಸಂರಕ್ಷಣೆ, ಕಾರ್ಯನಿರ್ವಹಣೆ ಮತ್ತು ಕಾರ್ಯ ಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನಪಡಿಸಿಕೊಳ್ಳಲು 3ಡಿ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಈ ಅಧಿಸೂಚನೆಯು ಭಾರತ ರಾಜ ಪತ್ರದ ಅಸಾಧಾರಣ, ಭಾಗ- 02, ಸೆಕ್ಷನ್ 3, ಸಬ್‌ಸೆಕ್ಷನ್ (2) ರಲ್ಲಿಎಸ್.ಓ. ಸಂ 3989 (ಇ) ದಿನಾಂಕ: 18-09-2024 ರಂದು ಪ್ರಕಟವಾಗಿರುತ್ತದೆ.

ಆದ ಕಾರಣ ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956 ರ 48) ಮತ್ತು ತಿದ್ದುಪಡಿ ಕಾಯ್ದೆ 1997ರ ಸೆಕ್ಷನ್ 3ಜಿ ಉಪಕಲಂ (1) (2) (3) ಮತ್ತು (4) ಹಾಗೂ 1997ರ ತಿದ್ದುಪಡಿಯಡಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಅಧಿಸೂಚನೆಯಲ್ಲಿ ನಮೂದಿಸಿದ ಭೂಮಿಯ ಮಾಲೀಕರು ಹಾಗೂ ಸದರಿ ಭೂಮಿಗಳಲ್ಲಿ ಹಿತಾಸಕ್ತಿ ಉಳ್ಳವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಅಧಿಸೂಚನೆಯಲ್ಲಿ ನಮೂದಿಸಿರುವ ಜಮೀನುಗಳನ್ನು ಕೇಂದ್ರ ಸರ್ಕಾರವು ಭೂಸ್ವಾಧೀನ ಪಡಿಸಿಕೊಂಡಿರುವುದರಿಂದ ಸದರಿ ಜಮೀನುಗಳಿಗೆ ಪರಿಹಾರ ನಿಗಧಿಪಡಿಸಿ ಪಾವತಿಸಲು ಜಮೀನಿಗೆ ಸಂಬಂಧಿಸಿದ ಅಧಿಕೃತ ದಾಖಲೆಗಳನ್ನು ಅಂದರೆ (1) ಮೂಲ ದಾಖಲೆ ಪತ್ರಗಳು (2) ಕ್ರಯ ಪತ್ರ, ವಿಭಾಗ ಪತ್ರ, ಇತರೆ ಹಕ್ಕು ಪತ್ರಗಳು, (3) ಪಹಣಿ ಪತ್ರಿಕೆಗಳು (ಆರ್.ಟಿ.ಸಿ) (4) ಹಕ್ಕು ಬದಲಾವಣೆ ದಾಖಲೆ (ಮ್ಯುಟೇಶನ್) (5) ಕಂದಾಯ ಪಾವತಿಸಿದ ರಶೀದಿ (6) ಋಣಭಾರ ರಹಿತ ದೃಢೀಕರಣ ಪತ್ರ (ಇ.ಸಿ) (7) ಗ್ರಾಮ ಪಂಚಾಯತಿ ಸ್ವತ್ತಿಗೆ ಸಂಬಂದಿಸಿದಂತೆ ಇ-ಸ್ವತ್ತುದಾಖಲೆ (ನಿವೇಶನಗಳಿಗೆ), ಇತರ ಅನ್ವಯವಾಗುವ ದಾಖಲೆಗಳು ಹಾಗೂ ಅಪೇಕ್ಷಿಸುವ ಪರಿಹಾರಧನ (ಸೂಕ್ತ ಸಮರ್ಥನೆಗಳೊಂದಿಗೆ) ದಾಖಲೆಗಳನ್ನು ಪ್ರಕಟಣೆಗೊಂಡ ದಿನಾಂಕದಿಂದ 21 ದಿನಗಳೊಳಗಾಗಿ ಕಛೇರಿ ವೇಳೆಯಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿಗಳು ಹಾಗೂ ಸಕ್ಷಮ ಪ್ರಾಧಿಕಾರಿಗಳು, ರಾಷ್ಟ್ರೀಯ ಹೆದ್ದಾರಿಗಳು, ಮಿನಿ ವಿಧಾನಸೌಧ, ಧಾರವಾಡ ಇವರಿಗೆ ಸಲ್ಲಿಸತಕ್ಕದ್ದು ತಪ್ಪಿದಲ್ಲಿ ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ ಪರಿಹಾರಧನ ನಿಗದಿಪಡಿಸಿ ವಿತರಿಸಲಾಗುವುದು.

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ, ನವದೆಹಲಿ ಅಧಿಸೂಚನೆ
ನವದೆಹಲಿ ದಿನಾಂಕ: 18ನೇ ಸೆಪ್ಟಂಬರ್ 2024

ಎಸ್.ಓ. 3989 (ಇ) ಕೇಂದ್ರ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದ ಮೂಲಕ ಪ್ರಕಟಿಸಲಾದ ಅಧಿಸೂಚನೆ ಸಂಖ್ಯೆ ಎಸ್.ಓ 2951 (ಇ) ದಿನಾಂಕ 24-07-2024 ರಂದು ಭಾರತ ರಾಜ ಪತ್ರದ ಅಸಾಧಾರಣ, ಭಾಗ-2, ಸೆಕ್ಷನ್ 3, ಸಬ್‌ಸೆಕ್ಷನ್ (2) ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956ರ 48) ಪ್ರಕಾರ ಸೆಕ್ಷನ್ 3(ಎ) ರ ಸಬ್ ಸೆಕ್ಷನ್ (1) ರಲ್ಲಿದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಕೇಂದ್ರ ಸರ್ಕಾರವು ಇದರೊಂದಿಗೆ ಲಗತ್ತಿಸಿರುವ ಅನುಸೂಚಿ (ಶೆಡ್ಯೂಲ್) ಯಂತೆ ಜಮೀನುಗಳನ್ನು ಕರ್ನಾಟಕ ರಾಜ್ಯದಲ್ಲಿರುವ ಗದಗ ಜಿಲ್ಲೆಯ ಗಜೇಂದ್ರಗಡ ತಾಲೂಕಿನಲ್ಲಿ ಹಾಯ್ದು ಹೋಗುವ ರಾಷ್ಟ್ರೀಯ ಹೆದ್ದಾರಿ ನಂ-367 ರಲ್ಲಿ (ಬಾಣಾಪೂರ-ಗದ್ದನಕೇರಿ ಸೆಕ್ಷನ್) ಕಿ) ಕಿ.ಮೀ 40.384 ರಿಂದ ಕಿ.ಮೀ 46.876 ರವರೆಗೆ ಗಜೇಂದ್ರಗಡ ನಗರಕ್ಕೆ ದ್ವಿ-ಪಥ ಬೈಪಾಸ್ ರಸ್ತೆ ನಿರ್ಮಾಣ (ಅಗಲಗೊಳಿಸುವುದು/ 4 ಲೇನ್ ಇತ್ಯಾದಿ) ಸಂರಕ್ಷಣೆ ಕಾರ್ಯನಿರ್ವಹಣೆ ಮತ್ತು ಕಾರ್ಯಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿದೆ.

ಸದರಿ ಅಧಿಸೂಚನೆಯನ್ನು "ವಿಜಯವಾಣಿ" ಮತ್ತು "ವಿಜಯಕರ್ನಾಟಕ" ದಿನಪತ್ರಿಕೆಗಳಲ್ಲಿ ದಿನಾಂಕ: 27-07-2024ರಂದು ಪ್ರಚುರಪಡಿಸಿ, ರಾಷ್ಟ್ರೀಯ ಹೆದ್ದಾರಿ ಕಾಯ್ದೆ ಸೆಕ್ಷನ್ 3(ಎ)ರ ಸಬ್‌ಸೆಕ್ಷನ್ (3) ರ ಪ್ರಕಾರ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು.

ಅದರಂತೆ ಆಕ್ಷೇಪಣೆಗಳನ್ನು ಸ್ವೀಕರಿಸಿ ಮತ್ತು ಪರಿಶೀಲನೆ ನಡೆಸಿ ಸಕ್ಷಮ ಪ್ರಾಧಿಕಾರಿಯವರು ಅಂಗೀಕರಿಸಿರುತ್ತಾರೆ /ತಿರಸ್ಕರಿಸಿರುತ್ತಾರೆ. ಅಂತಹ ಆಕ್ಷೇಪಣೆಗಳಿಗೆ ಕಾಯಿದೆಯ ಸೆಕ್ಷನ್ 3(ಡಿ)ರ ಸಬ್-ಸೆಕ್ಷನ್ (1) ರ ಪ್ರಕಾರ ಸಕ್ಷಮ ಪ್ರಾಧಿಕಾರವು ತನ್ನ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದೆ.

ಆದ್ದರಿಂದ ಈಗ ಸಕ್ಷಮ ಪ್ರಾಧಿಕಾರಿಯವರಿಂದ ಬಂದ ವರದಿ ಪ್ರಕಾರ ಮತ್ತು ಸೆಕ್ಷನ್ 3(ಡಿ) ರ ಸಬ್‌ಸೆಕ್ಷನ್ (1) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಅನುಸೂಚಿಯಲ್ಲಿ ತೋರಿಸಿದ ಭೂಮಿಯನ್ನು ಮೇಲೆ ತಿಳಿಸಿದ ಉಪಯೋಗಕ್ಕಾಗಿ ಸ್ವಾಧೀನ ಮಾಡಿಕೊಳ್ಳಲು ಕೇಂದ್ರ ಸರಕಾರವು ಘೋಷಿಸುತ್ತದೆ ಮತ್ತು ಈಗ ಸೆಕ್ಷನ್ 3(ಡಿ) ರ ಸಬ್‌ಸೆಕ್ಷನ್ (2) ರ ಅನುಸಾರರಾಜ್ಯ ಪತ್ರದಲ್ಲಿ ಅಧಿಸೂಚನೆ ಪ್ರಕಟಣೆಗೊಂಡ ಮೇಲೆ ಅನುಸೂಚಿಯಲ್ಲಿ ವಿವರಿಸಿರುವ ಭೂಮಿಯು ಯಾವುದೇ ಋಣಭಾರವಿಲ್ಲದೇ ಕೇಂದ್ರ ಸರಕಾರದ ಸಂಪೂರ್ಣ ಸ್ವಾಧೀನಕ್ಕೆ ಒಳಪಟ್ಟಿರುತ್ತದೆ ಎಂದು ಕೇಂದ್ರ ಸರ್ಕಾರವು ಘೋಷಿಸಿದೆ.

ಸಹಿ/- ಕ್ಯಾಪ್ಟನ್ ಶ್ರೀನಿವಾಸಗೌಡ ಕೆ.ಎ.ಎಸ್.
ವಿಶೇಷ ಭೂ ಸ್ವಾಧೀನಾಧಿಕಾರಿಗಳು ಮತ್ತು ಸಕ್ಷಮ ಪ್ರಾಧಿಕಾರಿ
ರಾಷ್ಟ್ರೀಯ ಹೆದ್ದಾರಿಗಳು, ಧಾರವಾಡ -1

ಅನುಸೂಚಿ

ಕರ್ನಾಟಕ ರಾಜ್ಯದ ಗದಗ ಜಿಲ್ಲೆಯ ಗಜೇಂದ್ರಗಡ ತಾಲೂಕಿನಲ್ಲಿ ಹಾಯ್ದು ಹೋಗುವ ರಾಷ್ಟ್ರೀಯ ಹೆದ್ದಾರಿ ನಂ-367 ರಲ್ಲಿ (ಬಾಣಾಪೂರ-ಗದ್ದನಕೇರಿ ಸೆಕ್ಷನ್) ಕಿ.ಮೀ 40.384 ರಿಂದ ಕಿ.ಮೀ 46.876 ರವರೆಗೆ ಗಜೇಂದ್ರಗಡ ನಗರಕ್ಕೆ ದ್ವಿಪಥ ಬೈಪಾಸ್ ರಸ್ತೆ ನಿರ್ಮಾಣಕ್ಕಾಗಿ ಅವಶ್ಯಕವಾಗಿರುವ ಕಟ್ಟಡ ಸಹಿತ / ಕಟ್ಟಡ ರಹಿತವಾಗಿರುವ ಜಮೀನುಗಳ ಸಂಕ್ಷಿಪ್ತ ವಿವರಣೆ-ಇಪಿಸಿ ಮೋಡ್.

ರಾಜ್ಯ: ಕರ್ನಾಟಕ — ಜಿಲ್ಲೆ: ಗದಗ

ಕ್ರ. ಸಂ	ಸರ್ವೆ/ಪ್ಲಾಟ್ ಸಂಖ್ಯೆ	ಜಮೀನಿನ ವಿವರಣೆ (ಟೈಪ್ ಆಫ್ ಲ್ಯಾಂಡ್)	ಜಮೀನಿನ ತರಹೆ	ಜಮೀನಿನ ವಿಸ್ತೀರ್ಣ (ಹೆಕ್ಟರ್‌ಗಳಲ್ಲಿ)	ಭೂಮಾಲಿಕರ/ ಹಿತಾಸಕ್ತಿವುಳ್ಳವರ ಹೆಸರು ಮತ್ತು ಸರ್ವೇ ನಂಬರಿನ ಭಾಗ
1	2	3	4	5	6
ತಾಲೂಕ: ಗಜೇಂದ್ರಗಡ					ಗ್ರಾಮ: ಉಣಚಗೇರಿ
1	100	ಖಾಸಗಿ	ಖುಷ್ಕಿ	0.662661	ಪಾಟೀಲ್ ಕಸ್ತೂರವ್ವ ಗಂಡ ಲಕ್ಕನಗೌಡ, ಪಾಟೀಲ್, ಬಸವನಗೌಡ ಲಕ್ಕನಗೌಡ, ಪೂಜಾರ್ ಲಲಿತಾ ಗಂಡ ಅಶೋಕ್, ಪಾಟೀಲ್ ತಮ್ಮನಗೌಡ ತಂದೆ ಲಕ್ಕನಗೌಡ, ಪಾಟೀಲ್ ರೇಣವ್ವ ತಂದೆ ತಮ್ಮನಗೌಡ 100/*
2	102	ಖಾಸಗಿ	ಖುಷ್ಕಿ	0.087256	ಬಂಡಿ ಚನ್ನವ್ವ ಗಂಡ ಮಲ್ಲೇಶಪ್ಪ, ಪರಸಪ್ಪ ತಂದೆ ಮಲ್ಲೇಶಪ್ಪ, ಕಳಕಪ್ಪ ತಂದೆ ಮಲ್ಲೇಶಪ್ಪ 102/2
3	159	ಖಾಸಗಿ	ಖುಷ್ಕಿ	0.865003	ಭೂಮರೆಡ್ಡಿ ಸುಶೀಲಾ ಗಂಡ ಮನೋಹರ್ 159/1
4	225	ಖಾಸಗಿ	ಖುಷ್ಕಿ	0.0067	ಗೋಲಗೇರಿ ಜನ್ನತ್‌ಬಿ ಗಂಡ ಮೆಹಬೂಬ್ ಸಾಬ್ 225/2
5	226	ಖಾಸಗಿ	ಖುಷ್ಕಿ	0.571608	226/1 ಗೋಲಗೇರಿ ಜನ್ನತ್ ಬಿ ಗಂಡ ಮೆಹಬೂಬ್ ಸಾಬ್, 226/2) ಬಳ್ಳೂಟಗಿ ಮಕ್ತುಂಬಿ ಗಂಡ ಹುಸೇನ್ ಸಾಬ್, ಗೋಲಗೇರಿ ರಸೂಲ್ ಸಾಬ್ ತಂದೆ ರಾಜೇಸಾಬ್, ಗೋಲಗೇರಿ ಮೈಬುಬ್ ಸಾಬ್ ತಂದೆ ರಾಜೇಸಾಬ್, ಗೋಲಗೇರಿ ಹುಸೇನ್ ಸಾಬ್ ತಂದೆ ಸುಬಾನ್ ಸಾಬ್. 226/*
6	228	ಖಾಸಗಿ	ಖುಷ್ಕಿ	0.060702	ಗೋಲಗೇರಿ ಮೊಹಮ್ಮದ್ ಶರೀಫ್ ತಂದೆ ರಾಜೇಸಾಬ್ 228/1
7	228	ಖಾಸಗಿ	ಖುಷ್ಕಿ	0.612076	ಗೋಲಗೇರಿ ಜಾಫರ್ ತಂದೆ ರಾಜೇಸಾಬ್ 228/2
8	235	ಖಾಸಗಿ	ಖುಷ್ಕಿ	0.644955	ಕಟ್ಟಿಮನಿ ಮಹಮದ ಹನಿಫ್ ತಂದೆ ಖಾಜೇಸಾಬ್, ಕಟ್ಟಿಮನಿ ಮುಹಮ್ಮದ್ ಯೂಸುಫ್ ತಂದೆ ಖಜೇಸಾಬ್ 235/4
9	235	ಖಾಸಗಿ	ಖುಷ್ಕಿ	0.242808	ಗೋರ್ಪಡೆ ದುರ್ಗೋಜಿ ತಂದೆ ರಾಮಪ್ಪ, ಗೋರ್ಪಡೆ ಶಾರದಾಬಾಯಿ ಗಂಡ ರಾಮಪ್ಪ 235/8
10	235	ಖಾಸಗಿ	ಖುಷ್ಕಿ	0.123933	ಗೋರ್ಪಾಡೆ ಮಾರುತಿ ತಂದೆ ಹನಮಂತರಾವ್ 235/9
11	235	ಖಾಸಗಿ	ಖುಷ್ಕಿ	0.020234	ಗೋರ್ಪಡೆ ದುರ್ಗೋಜಿ ತಂದೆ ರಾಮರಾವ್ 235/10
12	236	ಖಾಸಗಿ	ಖುಷ್ಕಿ	0.728424	ರಾಜಪುರೋಹಿತ್ ಸುಮಂಗಲಾ ಗಂಡ ವಿನಾಯಕ್ 236/4
13	237	ಖಾಸಗಿ	ಖುಷ್ಕಿ	0.698073	237/1ಎ1) ಕುಲಕರ್ಣಿ ನರಸಿಂಹ ತಂದೆ ಗುರುನಾಥ್, 237/1ಎ2) ಕುಲಕರ್ಣಿ ಆಶಾ ಗಂಡ ದತ್ತಾತ್ರೇಯ, ಕುಲಕರ್ಣಿ ಆದಿತ್ಯ ತಂದೆ ದತ್ತಾತ್ರೇಯ, ಕೃಷ್ಣಜಿ ತಂದೆ ರಾಮಚಂದ್ರ, 237/1ಬಿ) ಶಿವಕುಮಾರ್ ತಂದೆ ವೀರಣ್ಣ ಅಂಗಡಿ, 237/1ಕೆ) ಆನಂದ ಕುಮಾರ್ ತಂದೆ ರೇಖಪ್ಪ ರಾಥೋಡ್, 237/1 (1ಆ1) ಕುಲಕರ್ಣಿ ನರಸಿಂಹ ತಂದೆ ಗುರುನಾಥ್, 237/1ಡಿ1) ಕುಲಕರ್ಣಿ ನರಸಿಂಹ ತಂದೆ ಗುರುನಾಥ್, 237/1ಡಿ1) ಕುಲಕರ್ಣಿ ನರಸಿಂಹ ತಂದೆ ಗುರುನಾಥ್, 237/1ಡಿ2) ಕುಲಕರ್ಣಿ ನರಸಿಂಹ ತಂದೆ ಗುರುನಾಥ್, ಕುಲಕರ್ಣಿ ಆಶಾ ಗಂಡ ದತ್ತಾತ್ರೇಯ, ಕುಲಕರ್ಣಿ ಆದಿತ್ಯ ತಂದೆ ದತ್ತಾತ್ರೇಯ, ಕೃಷ್ಣಜಿ ತಂದೆ ರಾಮಚಂದ್ರ, 237/1237/2ಬಿ) ತಳವಗೇರಿ ಬಸವ್ವ ಗಂಡ ಬಸಪ್ಪ 237/*
14	241	ಖಾಸಗಿ	ಖುಷ್ಕಿ/ಬಿನಶೇತ್ಕಿ	0.472969	241/1) ರಾಥೋಡ್ ಲೋಕಪ್ಪ ಲಾಲಪ್ಪ, 241/2ಬಿಪಿ3) ಧಾಟೆ ಕೃಷ್ಣಾಜಿ ಶ್ರೀಪಾದರಾವ್, ಧಾಟೆ ವಂದನಾಗಂಡ ನಾರಾಯಣರಾವ್, ಧಾಟೆಗಿರೀಶ್ ತಂದೆ ನಾರಾಯಣ ರಾವ್, ಧಾಟೆ ಉದಯ್‌ತಂದೆ ನಾರಾಯಣರಾವ್, ಹೊಂಕಣ ಉಜ್ವಲಾ ಗಂಡ ಗಿರೀಶ್ ಧಾಟೆ, ಜೋಗ ಕವಿತಾ ಗಂಡ ವಿವೇಕ್, ಗಾಡಗೀಲ್ ನೇಹಾ ಗಂಡ ಜಿತೇಂದ್ರ, ಅರುಣ್ ತಂದೆ ಪಂಡಿತ ರಾವ್, ಧಾಟೆ ಸ್ಮಿತಾ ಗಂಡ ಸುಧೀರ್, ಶಾರದ ಉರ್ಫ್ ವರ್ಷ ಗಂಡ ವಿಶ್ವಾಸ್ ದೇಸಾಯಿ, ಶ್ಯಾಮ್ ತಂದೆ ಸುಧೀರ್‌ಧಾಟೆ, ಶ್ರದ್ಧಾ ತಂದೆ ಬಾಲಚಂದ್ರರಾವ್, ಧನಂಜಯ್ ತಂದೆ ಬಾಲಚಂದ್ರರಾವ್, ರವಿ ತಂದೆ ಬಾಲಚಂದ್ರರಾವ್, ರಾಜಶ್ರೀ ತಂದೆ ಬಾಲಚಂದ್ರರಾವ್, ಧಾಟೆ ಸಂಧ್ಯಾ ಗಂಡ ಗಂಗಾಧರ್, ದೇಶಪಾಂಡೆ ರಶ್ಮಿ ಗಂಡ ಜಯಂತ್, ನಾಯಕ್ ದೀಪಾ ಗಂಡ ಅವಿನಾಶ್, 241/1) ಶ್ರೇಯಾಂಸ ಉರ್ಫ್ ಶ್ರೀಹಂಸ ತಂದೆ ರಿಕಭಚಂದ್ ಬಾಗಮಾರ್-ಭೂ ಪ, 241/3) ಸಂಗಮದ್ ಪರಸಪ್ಪ ತಂದೆ ಕೊಡ್ಲೆಪ್ಪ, 241/4) ಸುಳ್ಳದ್ ಈರಪ್ಪ ತಂದೆ ಗುರಪ್ಪ, 241/5) ಚವಳವ್ವ ಗಂಡ ಲೋಕಪ್ಪ ರಾಠೋಡ್, 241/6) ಜಾಟೊತ್ತರ ಸೋಮವ್ವ ಗಂಡ ಏನಪ್ಪ, ರಾಠೋಡ್. ದಾನಪ್ಪ ತಂದೆ ಪರಮೇಶಪ್ಪ, ರಾಠೋಡ್ ಕೃಷ್ಣಪ್ಪ ತಂದೆ ಬಿಕ್ಕಪ್ಪ, ರಾಠೋಡ್ ಗೋಪಾಲ್ ತಂದೆ ಬಿಕ್ಕೆಪ್ಪ, ರಾಠೋಡ್ ನಾರಾಯಣಪ್ಪ ತಂದೆ ಬಿಕ್ಕೆಪ್ಪ, ಚೌಹಾಣ್ ಭೀಮವ್ವ ಗಂಡ ಪರಶುರಾಮ್, ರಾಠೋಡ್ ಈರಮ್ಮ ಗಂಡ ಹಾಲಪ್ಪ, ರಾಠೋಡ್ ದೇವಪ್ಪ ತಂದೆ ಹಾಲಪ್ಪ, ರಾಥೋಡ್ ಪರಸಪ್ಪ ತಂದೆ ಹಾಲಪ್ಪ, ರಾಥೋಡ್ ಗಂಗವ್ವ ಗಂಡ ಚನ್ನಪ್ಪ, ರಾಥೋಡ್ ಕಸ್ತೂರೆವ್ವ ಗಂಡ ದುರಗಪ್ಪ, ರಾಥೋಡ್ ಹೊನ್ನವ್ವ ಗಂಡ ಶಂಕ್ರಪ್ಪ, ರಾಠೋಡ್ ಪರಶುರಾಮ್ ತಂದೆ ಶಂಕ್ರಪ್ಪ, ರಾಥೋಡ್ ಚಂದ್ರಶೇಖರ್ ತಂದೆ ಶಂಕ್ರಪ್ಪ, ರಾಥೋಡ್ ದಾನಪ್ಪ ತಂದೆ ಶಂಕ್ರಪ್ಪ, ರಾಥೋಡ್ ಗಣೇಶ್ ತಂದೆ ಶಂಕ್ರಪ್ಪ, ರಾಥೋಡ್ ಭೀಮಪ್ಪ ತಂದೆ ಶಂಕ್ರಪ್ಪ, ರಾಥೋಡ್ ಮಂಜುನಾಥ್ ತಂದೆ ಶಂಕ್ರಪ್ಪ, ಚೌಹಾಣ್ ಪರಶುರಾಮ್ ತಂದೆ ತಾವರೆಪ್ಪ, ಚೌಹಾಣ್ ಮಂಜುನಾಥ್ ತಂದೆ ತಾವರೆಪ್ಪ, ರಾಥೋಡ್ ಲಲಿತವ್ವ ಗಂಡ ಗಣೇಶಪ್ಪ, ರಾಥೋಡ್ ಸುಮಿತ್ರಾ ತಂದೆ ಗಣೇಶಪ್ಪ, ರಾಥೋಡ್ ರವಿಚಂದ್ರ ತಂದೆ ಗಣೇಶಪ್ಪ, ರಾಠೋಡ್ ಅಬ್ದುಲ್ ತಂದೆ ಗಣೇಶಪ್ಪ, ರಾಠೋಡ್ ಗಿರೀಶ್ ತಂದೆ ಗಣೇಶಪ್ಪ, 241/7) ಚವಳವ್ವ ಗಂಡ ಲೋಕಪ್ಪ ರಾಠೋಡ್, 241/8) ಲಲಿತಾ ಗಂಡ ಬಸನಗೌಡ ಪೊಲೀಸ್ ಪಾಟೀಲ, 241/9) ಪೊಲೀಸ್ ಪಾಟೀಲ್ ಸಂಗನಗೌಡ ಬಸನಗೌಡ, 241/ 10) ಸುಳ್ಳದ್ ಅವ್ವನ್ನೆಪ್ಪ ತಂದೆ ಗುರಪ್ಪ, 241/11) ಧಾಟೆ ಸ್ಮಿತಾ ಗಂಡ ಸುಧೀರ್, ದೇಸಾಯಿ ಶಾರದ ಉರ್ಫ್ ವರ್ಷಾ ಗಂಡ ವಿಶ್ವಾಸ್, ಧತೆ ಶ್ಯಾಮ್ ತಂದೆ ಸುಧೀರ್, 241/12) ಅಂಗಡಿ ಬಸವರಾಜ್, ಬಸವರಾಜ್ ಗೋಡಿನಾಳ್ ವಾಣಿಗಂಡ ಶಿವಪ್ರಕಾಶ್, ಅಂಗಡಿ ವೀರಣ್ಣ ತಂದೆ ಬಸವರಾಜ್, ಅಂಗಡಿ ಈಶ್ವರಪ್ಪ ತಂದೆ ಬಸವರಾಜ್, 241/13) ಮಾಗುಂಡಯ್ಯ ತಂದೆ ಬಸಯ್ಯ ನರಗುಂದ, 241/14) ಆನಂದ್ ತಂದೆ ಚನ್ನಪ್ಪ ಅರಳಿಕಟ್ಟಿ, ಮಲ್ಲಿ ಕಾರ್ಜುನ ತಂದೆ ಚನ್ನಪ್ಪ ಅರಳಿಕಟ್ಟಿ, ಅಶೋಕ್ ತಂದೆ ಚನ್ನಪ್ಪ ಅರಳಿಕಟ್ಟಿ 241/*
15	242	ಖಾಸಗಿ	ಖುಷ್ಕಿ	0.746128	242/3) ಗೋಡೇಕರ್ ಅಬ್ದುಲ್ ವಹಾಬ್ ತಂದೆ ಹುಸೇನ್ ಸಾಬ್, 242 / 1 + 2 / ಬಿ) ಗೊಡೇಕರ್ ಖುದಾನ್ ಸಾಬ್ ತಂದೆ ಇಮಾಮ್ ಸಾಬ್, ಅಬ್ದುಲ್ ವಹಾಬ್ ತಂದೆ ಹುಸೇನ್ ಸಾಬ್ 242/3,1+2/b
16	243	ಖಾಸಗಿ	ಖುಷ್ಕಿ	0.376858	ಕುಂಬಾರ ಮಾರುತೆಪ್ಪ ತಂದೆ ಶಿವಪ್ಪ 243/1
17	245/1	ಖಾಸಗಿ	ಖುಷ್ಕಿ	0.376857	ಜೋಶಿ ಧರ್ಮೇಂದ್ರ ಕುಮಾರ್ ತಂದೆ ಗೋವಿಂದ್ ಜೀ 245/1
18	245/2	ಖಾಸಗಿ	ಖುಷ್ಕಿ	0.333861	ಬಡಿಗೇರ್ ದೇವಕವ್ವ ಗಂಡ ಶಿವಪ್ಪ, ಲಕ್ಷ್ಮವ್ವ ಗಂಡ ಮಲ್ಲಪ್ಪ, ಸುನಂದಾ ಗಂಡ ಮಲ್ಲಪ್ಪ, ಕಾಳವ್ವ ಗಂಡ ನಾಗೇಶ್ 245/2
19	246	ಖಾಸಗಿ	ಖುಷ್ಕಿ	0.1915	ಬಡಿಗೇರಿ ಗುರುನಾಥ್ ತಂದೆ ಮಲ್ಲಪ್ಪ 246/*
20	248	ಖಾಸಗಿ	ಖುಷ್ಕಿ	0.480555	ಕಂಠಿ ಹನಮಂತಪ್ಪ ಹನಮಪ್ಪ ಬಿನ್ ಹನಮಪ್ಪ 248/4
21	248	ಖಾಸಗಿ	ಖುಷ್ಕಿ	0.650016	ಸುವರ್ಣ ಸಂಗನಬಸಪ್ಪ ನಂದಿಹಾಳ, ವೀರೇಶ್ ತಂದೆ ಸಂಗನ ಬಸಪ್ಪ ನಂದಿಹಾಳ್ ಬಿನ್ ಸಂಗನಬಸಪ್ಪ, ಸುನೀಲ್ ತಂದೆ ಸಂಗನಬಸಪ್ಪ ನಂದಿಹಾಳ್ ಬಿನ್ ಸಂಗನಬಸಪ್ಪ 248/1
22	248	ಖಾಸಗಿ	ಖುಷ್ಕಿ	0.096109	ಶರಣಪ್ಪ ತಂದೆ ಭೀಮಪ್ಪ ಜಟೊತ್ತರ್ 248/5
23	248	ಖಾಸಗಿ	ಖುಷ್ಕಿ	0.123932	ಹುಲಗವ್ವ ಗಂಡ ಹಿರೇತಮ್ಮಣ್ಣ ಬಳ್ಳೂಟಗಿ 248/6
24	248	ಖಾಸಗಿ	ಖುಷ್ಕಿ	0.035407	ಕಂಠಿ ಮಾರುತಿ ತಂದೆ ಹನಮಪ್ಪ ಬಿನ್ ಹನಮಪ್ಪ 248/8
25	263	ಖಾಸಗಿ	ಖುಷ್ಕಿ	0.976288	ಇಂಡಿ ಜಯಶ್ರೀ ಗಂಡ ಬಸವರಾಜ್, ಬಗೋಡಿ ಮಧು ತಂದೆ ಬಸವರಾಜ್, ಹೊರಕೇರಿ ಮಮತಾ ಗಂಡ ಶಿವ ಕುಮಾರ್, ಮಾಗನೂರು ವಿನುತಾ ಗಂಡ ಶಿವಕುಮಾರ್, ಇಂಡಿ ಮಂಜುನಾಥ್ ತಂದೆ ಬಸವರಾಜ್, ಇಂಡಿ ಸುಭಾಷ್ ತಂದೆ ಶೀಲವಂತಪ್ಪ, 263/*
26	264	ಖಾಸಗಿ	ಖುಷ್ಕಿ	0.0068	ಇಂಡಿ ಶಾಂತಾ ಗಂಡ ನಾಗಪ್ಪ, ಇಂಡಿ ಕಿರಣ್ ತಂದ ನಾಗಪ್ಪ, ಇಂಡಿ ವತ್ಸಲಾ ತಂದೆ ನಾಗಪ್ಪ, ಇಂಡಿ ಶೃತಿ ತಂದೆ ನಾಗಪ್ಪ, ಇಂಡಿ ರೇಖಾ ಗಂಡ ಅಶೋಕ್, ಇಂಡಿ ಉಲ್ಲಾಸ್ ತಂದೆ ಅಶೋಕ್. ಇಂಡಿ ಈಶ್ವರಯ್ಯ ತಂದೆ ಅಶೋಕ್. 263/*
27	272	ಖಾಸಗಿ	ಖುಷ್ಕಿ	0.0186	ನವಣಿ ಗೌರಾ ಗಂಡ. ಸುಭಾಷ್ಚಂದ್ರ ಉರ್ಫ್ ಕೊರಧಾನ್ಯ ಮಠ ಗೌರಾ ತಂದೆ ಮಲ್ಲಿನಾಥ ಸ್ವಾಮಿ 272ಬಿ/60
28	272	ಖಾಸಗಿ	ಖುಷ್ಕಿ	0.0158	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/61
29	272	ಖಾಸಗಿ	ಖುಷ್ಕಿ	0.0127	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/62
30	272	ಖಾಸಗಿ	ಖುಷ್ಕಿ	0.00002	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/59
31	272	ಖಾಸಗಿ	ಖುಷ್ಕಿ	0.0126	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/63
32	272	ಖಾಸಗಿ	ಖುಷ್ಕಿ	0.0126	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/57
33	272	ಖಾಸಗಿ	ಖುಷ್ಕಿ	0.0126	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/58
34	272	ಖಾಸಗಿ	ಖುಷ್ಕಿ	0.0108	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/55
35	272	ಖಾಸಗಿ	ಖುಷ್ಕಿ	0.0108	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/56
36	272	ಖಾಸಗಿ	ಖುಷ್ಕಿ	0.00148	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/49
37	272	ಖಾಸಗಿ	ಖುಷ್ಕಿ	0.00426	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/50
38	272	ಖಾಸಗಿ	ಖುಷ್ಕಿ	0.0108	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/51
39	272	ಖಾಸಗಿ	ಖುಷ್ಕಿ	0.0108	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/52
40	272	ಖಾಸಗಿ	ಖುಷ್ಕಿ	0.0108	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾತಂದೆ ಮಲ್ಲಿನಾಥಸ್ವಾಮಿ 272ಬಿ/53
41	272	ಖಾಸಗಿ	ಖುಷ್ಕಿ	0.0108	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/54
42	272	ಖಾಸಗಿ	ಖುಷ್ಕಿ	0.0118	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/68
43	272	ಖಾಸಗಿ	ಖುಷ್ಕಿ	0.0103	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/69
44	272	ಖಾಸಗಿ	ಖುಷ್ಕಿ	0.0126	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/64
45	272	ಖಾಸಗಿ	ಖುಷ್ಕಿ	0.0126	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/65
46	272	ಖಾಸಗಿ	ಖುಷ್ಕಿ	0.0126	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/66
47	272	ಖಾಸಗಿ	ಖುಷ್ಕಿ	0.0126	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/67
48	272	ಖಾಸಗಿ	ಖುಷ್ಕಿ	0.005	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/34
49	272	ಖಾಸಗಿ	ಖುಷ್ಕಿ	0.00205	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/35
50	272	ಖಾಸಗಿ	ಖುಷ್ಕಿ	0.00006	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/36
51	272	ಖಾಸಗಿ	ಖುಷ್ಕಿ	0.0108	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/33
52	272	ಖಾಸಗಿ	ಖುಷ್ಕಿ	0.0108	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/32
53	272	ಖಾಸಗಿ	ಖುಷ್ಕಿ	0.0108	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/27
54	272	ಖಾಸಗಿ	ಖುಷ್ಕಿ	0.0108	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/28
55	272	ಖಾಸಗಿ	ಖುಷ್ಕಿ	0.0108	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/29
56	272	ಖಾಸಗಿ	ಖುಷ್ಕಿ	0.0108	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/30
57	272	ಖಾಸಗಿ	ಖುಷ್ಕಿ	0.0108	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/31
58	272	ಖಾಸಗಿ	ಖುಷ್ಕಿ	0.000674	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/23
59	272	ಖಾಸಗಿ	ಖುಷ್ಕಿ	0.0156	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/21
60	272	ಖಾಸಗಿ	ಖುಷ್ಕಿ	0.0187	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/22
61	272	ಖಾಸಗಿ	ಖುಷ್ಕಿ	0.009	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/19
62	272	ಖಾಸಗಿ	ಖುಷ್ಕಿ	0.0122	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/20
63	272	ಖಾಸಗಿ	ಖುಷ್ಕಿ	0.015	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/1
64	272	ಖಾಸಗಿ	ಖುಷ್ಕಿ	0.00098	ನವಣಿ ಗೌರಾ ಗಂಡ ಸುಭಾಷ್ಚಂದ್ರ ಉರ್ಫ್ ಕೊರಧಾನ್ಯಮಠ ಗೌರಾ ತಂದೆ ಮಲ್ಲಿನಾಥಸ್ವಾಮಿ 272ಬಿ/2
65	274	ಖಾಸಗಿ	ಖುಷ್ಕಿ/ಬಿನಶೇತ್ಕಿ	0.106226	ಭೂಮರೆಡ್ಡಿ ಹೇಮಲತಾ ಗಂಡ ಅರುಣಕುಮಾರ್, ಸುಶಾಂತ್ ತಂದೆ ಅರುಣಕುಮಾರ್, ಸುಶೀಲಾ ತಂದೆ ಅರುಣಕುಮಾರ್ 2,3 ನೇ ಅಸಾದರ್ ತಾಯಿ ಹೇಮಲತಾ. 274/2
66	274	ಖಾಸಗಿ	ಖುಷ್ಕಿ/ಬಿನಶೇತ್ಕಿ	1.593425	ಮಾಳಗಿ ಕಸ್ತೂರಿದೇವಿ ಗಂಡಚನ್ನಪ್ಪ, ಬಸವರಾಜ್ ತಂದೆ ಚನ್ನಪ್ಪ, ವೀರಪ್ಪ ತಂದೆ ಚನ್ನಪ್ಪ, ಶಿವಾನಂದ ತಂದೆ ಚನ್ನಪ್ಪ 274/3
67	274	ಖಾಸಗಿ	ಖುಷ್ಕಿ/ಬಿನಶೇತ್ಕಿ	0.341445	ಹೇಮಲತಾ ಅರುಣ ಕುಮಾರ್, ಭೂಮರೆಡ್ಡಿ ಅರುಣ ಕುಮಾರ್ 274/5
68	98	ಖಾಸಗಿ	ಖುಷ್ಕಿ	0.359151	ಪಾಟೀಲ್ ಶಿವನಗೌಡ ತಂದೆ ಸಿದ್ದನಗೌಡ 98/*
69	99	ಖಾಸಗಿ	ಖುಷ್ಕಿ	0.060702	ಪಟ್ಟಣಶೆಟ್ಟಿ ಕಳಕಪ್ಪ ತಂದೆ ಸಂಗಪ್ಪ 99/1
70	99	ಖಾಸಗಿ	ಖುಷ್ಕಿ	0.440087	ಪಟ್ಟಣಶೆಟ್ಟಿ ಗುರಪ್ಪ ತಂದೆ ಸಂಗಪ್ಪ 99/2
ತಾಲೂಕ: ಗಜೇಂದ್ರಗಡ					ಗ್ರಾಮ: ಪುರ್ತಗೇರಿ
71	36/1+2	ಖಾಸಗಿ	ಖುಷ್ಕಿ	0.944041	ಇಂಡಿ ಶಾಂತಾ ಗಂಡ ನಾಗಪ್ಪ, ಇಂಡಿ ಕಿರಣ್ ತಂದೆ ನಾಗಪ್ಪ, ಇಂಡಿ ವತ್ಸಲಾ ತಂದೆ ನಾಗಪ್ಪ, ಇಂಡಿ ಶೃತಿ ತಂದೆ ನಾಗಪ್ಪ, ಇಂಡಿ ರೇಖಾ ಗಂಡ ಅಶೋಕ್, ಇಂಡಿ ಉಲ್ಲಾಸ್ ತಂದೆ ಅಶೋಕ್, ಇಂಡಿ ಈಶ್ವರಯ್ಯ ತಂದೆ ಅಶೋಕ್ 36/1+2
72	37/1	ಖಾಸಗಿ	ಖುಷ್ಕಿ	0.308566	ದಿವಾನದ ಮರಿಯಪ್ಪ ತಂದೆ ಮಲ್ಲಪ್ಪ, ಯಂಕಪ್ಪ ತಂದೆ ಮಲ್ಲಪ್ಪ 37/1A
73	37/1	ಖಾಸಗಿ	ಖುಷ್ಕಿ	0.017701	ದಿವಾನದ ಸುವರ್ಣ ಗಂಡ ಹನಮಪ್ಪ, ದಿವಾನದ ಜಯಶ್ರೀ ತಂದೆ ಹನಮಪ್ಪ, ದಿವಾನದ ಶಾಂತಾ ತಂದೆ ಹನಮಪ್ಪ, ದಿವಾನದ ಸಂತೋಷ್ ತಂದೆ ಹನಮಪ್ಪ ಆಸಾದರ್ ತಾಯಿ ಸುವರ್ಣ 37/1ಬಿ
74	37/2	ಖಾಸಗಿ	ಖುಷ್ಕಿ	0.371796	ದಿವಾನದ ಪ್ರಕಾಶ್ ತಂದೆ ಮರಿಯಪ್ಪ 37/2
75	38	ಖಾಸಗಿ	ಖುಷ್ಕಿ	0.040468	ಮೂಲಿಮನಿ ಬುಡ್ಡಪ್ಪ ತಾಯಿ ಗಂಗವ್ವ 38/2
76	50	ಖಾಸಗಿ	ಖುಷ್ಕಿ/ತರಿ	0.351562	ಪಮ್ಮಾರ್ ಈರವ್ವ ಗಂಡ ಪರಸಪ್ಪ 50/*
77	51	ಖಾಸಗಿ	ಖುಷ್ಕಿ	0.36674	ಕಿಲ್ಲೇದಾರ್ ಸಾಜಾಬಾಯಿ ಗಂಡ ಬಾಪು ಸಾಹೇಬ್ 51/1
78	52/1	ಖಾಸಗಿ	ಖುಷ್ಕಿ	0.252925	ಬಸವರಾಜ್ ತಂದೆ ತಿಪ್ಪಣ್ಣ ವಡಗೋಳ್ ಬಿನ್ ತಿಪ್ಪಣ್ಣ, ಪವಿತ್ರಾ ಗಂಡ ಕನಕಪ್ಪ ಹುಡೇದ್ ಗಂಡಕನಕಪ್ಪ 52/1ಬಿ
79	53	ಖಾಸಗಿ	ಖುಷ್ಕಿ/ತರಿ	0.472966	ಕಿಲ್ಲೇದಾರ್ ವಸಂತ್ ತಂದೆ ಬಾಪು ಸಾಹೇಬ್ 53/1
80	54	ಖಾಸಗಿ	ಖುಷ್ಕಿ	0.450204	54/1) ಮೋಹಿತೆ ವಸಂತರಾವ್ ತಂದೆ ಬಾಪು ಸಾಹೇಬ್, 54/2) ಮ್ಯಾಗೇರಿ ಹೊಳಿಯಮ್ಮ ಗಂಡ ಮರಿಯಪ್ಪ, ಗೊಲ್ಲರ ದುರಗವ್ವ ಗಂಡ ಹನಮಪ್ಪ 54/*
81	55	ಖಾಸಗಿ	ಖುಷ್ಕಿ	0.10117	ಮಂಜುಳಾದೇವಿ ಗಂಡ ಕಳಕಪ್ಪ ಗಜಕೋಶ್, ಅಣ್ಣ ರಾವ್ ತಂದೆ ನಾರಾಯಣ ರಾವ್ ಮಹೇಂದ್ರಕರ್, ಸುರೇಶ್ ತಂದೆ ನಾರಾಯಣರಾವ್ ಮಹೇಂದ್ರಕರ್, ಸಂತೋಷ್ ತಂದೆ ನಾರಾಯಣ ಮಹೇಂದ್ರಕರ್, ಲಕ್ಷ್ಮಿಗಂಡ ಮಂಜುನಾಥ ಹುಟಗಿ 55/5
82	55	ಖಾಸಗಿ	ಖುಷ್ಕಿ	0.317419	ರೇವಡಿ ರೇಣುಕಾ ಗಂಡ ಸಂಗಪ್ಪ, ಪಾಟೀಲ್ ಭಾರತಿ ಗಂಡ ರಮೇಶ್, ರೇವಡಿ ಆರತಿ ಗಂಡ ಸಂಗಪ್ಪ, ರೇವಡಿ ಸುನಿಲ್ ತಂದೆ ಸಂಗಪ್ಪ, ರೇವಡಿ ಅನಿಲ್ ಕುಮಾರ್ ತಂದೆ ಸಂಗಪ್ಪ, ರೇವಡಿ ಮಂಜುಳಾ ಗಂಡ ಈಶ್ವರಪ್ಪ, ರೇವಡಿ ಬಸವರಾಜ್ ತಂದೆ ಈಶ್ವರಪ್ಪ, ರೇವಡಿ ನಿವೇದಿತಾ ತಂದೆ ಈಶ್ವರಪ್ಪ, ರೇವಡಿ ಭಾವನಾ ಗಂಡ ಈಶ್ವರಪ್ಪ. 55/6
83	57	ಖಾಸಗಿ	ಖುಷ್ಕಿ	0.184634	ಪಲ್ಲೇದ್ ಬಸವಂತಪ್ಪ ತಂದೆ ಶಿವಣ್ಣ 57/1
84	57	ಖಾಸಗಿ	ಖುಷ್ಕಿ	0.18969	ಪಲ್ಲೇದ್ ಅಮರಪ್ಪ ತಂದೆ ಶಿವಪ್ಪ 57/2
85	58	ಖಾಸಗಿ	ಖುಷ್ಕಿ	0.489408	ಅಬ್ಬಿಗೇರಿ ಶಕುಂತಲಾ ಆರ್. 58/*
ತಾಲೂಕ: ಗಜೇಂದ್ರಗಡ					ಗ್ರಾಮ: ರಾಜೂರ
86	136	ಖಾಸಗಿ	ಖುಷ್ಕಿ/ತರಿ	0.0737	136/1) ಕಮತ್ರ ಫಕೀರಪ್ಪ ಮಲೇಶಪ್ಪ, 136/2) ಅಜಿತ ಕುಮಾರ ತಂದೆ ಅಶೋಕ ಕುಮಾರ ಬಾಗಮಾರ್, 136/3) ಅಜಿತ ಕುಮಾರ ತಂದೆ ಅಶೋಕ ಕುಮಾರ ಬಾಗಮಾರ್, 136/4) ಅಜಿತ ಕುಮಾರ ತಂದೆ ಅಶೋಕ ಕುಮಾರ ಬಾಗಮಾರ್, 136/5) ಕಮತ್ರ ಫಕೀರಪ್ಪ ಸ/ರೊ. ಮಲ್ಲೇಶಪ್ಪ, 136/6) ಕಮತ್ರ ಶರಣಪ್ಪ ತಂದೆ ಮಲ್ಲೇಶಪ್ಪ, 136/7) ಕಮತ್ರ ಬಸಪ್ಪ ತಂದೆ ಮಲ್ಲೇಶಪ್ಪ, 136/8) ಕಮತ್ರ ಗೂಳಪ್ಪ ದೇವಪ್ಪ, 136/9) ಅಜಿತ ಕುಮಾರ ತಂದೆ ಅಶೋಕ್ ಕುಮಾರ್ ಬಾಗಮಾರ್, 136/10) ಅಜಿತ ಕುಮಾರ ತಂದೆ ಅಶೋಕ್ ಕುಮಾರ್ ಬಾಗಮಾರ್, 136/11) ಕಮತ್ರ ತಿಪ್ಪಣ್ಣ ತಂದೆ ಕಳಕಪ್ಪ, ಕಮತ್ರ ಸೋಮಪ್ಪ ತಂದೆ ಕಳಕಪ್ಪ
87	150	ಖಾಸಗಿ	ಖುಷ್ಕಿ	0.465382	ಮುಗನೂರು ಸುಮಂಗಲಾ ಗಂಡ ಶಿವಲಿಂಗಪ್ಪ 150/3+4ಎ
88	150	ಖಾಸಗಿ	ಖುಷ್ಕಿ	0.091053	ವೆಂಕಟೇಶ್ ತಂದೆ ಶಿವಪ್ಪ ಮೂಲಿಮನಿ 150/4b
89	150	ಖಾಸಗಿ	ಖುಷ್ಕಿ	0.094845	ಶಾಂತಾಬಾಯಿ ಗಂಡ ಬಸವರಾಜ ಸವಣೂರು 150/5
90	150	ಖಾಸಗಿ	ಖುಷ್ಕಿ	0.05622	ಈರಪ್ಪ ತಂದೆ ಸಂಜೀವಪ್ಪ ಮೇದಾರ್ 150/6
91	151	ಖಾಸಗಿ	ಖುಷ್ಕಿ/ಬಿನಶೇತ್ಕಿ	1.026873	ದೇಶಮುಖ್ ಮಂಗಳಾ ಗಂಡ ಸಾಹೇಬರಾವ್, ಗೋರ್ಪಡೆ ಕೀರ್ತಿ ಮಾಲಿನಿ ತಂದೆ ಪ್ರತಾಪ ಸಿಂಹ, ಗೋರ್ಪಡೆ ಯಶ್‌ರಾಜ್ ತಂದೆ ಪ್ರತಾಪ ಸಿಂಹ 151/1
92	151	ಖಾಸಗಿ	ಖುಷ್ಕಿ/ಬಿನಶೇತ್ಕಿ	0.528612	ಗೋರ್ಪಡೆ ಕೀರ್ತಿ ತಂದೆ ಪ್ರತಾಪ ಸಿಂಹ 151/2
93	151	ಖಾಸಗಿ	ಖುಷ್ಕಿ/ಬಿನಶೇತ್ಕಿ	0.055641	ಅಶೋಕ್ ತಂದೆ ಹನಮಂತಪ್ಪ ವನ್ನಾಳ್ ಬಿನ್ ಹನುಮಪ್ಪ ಭೂ. ಪ 151/3
94	153	ಖಾಸಗಿ	ಖುಷ್ಕಿ/ಬಿನಶೇತ್ಕಿ	1.259566	ವಿಠ್ಠಲರಾವ್ ತಂದೆ ಯಶವಂತರಾವ್, ವಿಜಯಕುಮಾರ್ ತಂದೆ ಯಶವಂತರಾವ್, ಭೋಯಿಟೆ ಗುಂಜಾಬಾಯಿ ಗಂಡ ಬಾಳಾಸಾಹೇಬ್, ಶಿವಾಜಿ ರಾವ್ ತಂದೆ ಬಾಳಾ ಸಾಹೇಬ್, ಧನಾಜಿರಾವ್ ತಂದೆ ಬಾಳಾಸಾಹೇಬ್, ಶಿಂಧೆ ಭಾರತಿ ಬಾಯಿ ಗಂಡ ದೇವೇಂದ್ರ, ಪವಾರ್ ಸುನಂದಾ ಬಾಯಿ ಗಂಡ ರಾಜು, ಭೋಯ್ಟೆ ಅಶೋಕ್ ರಾವ್ ತಂದೆ ಬಾಳಾಸಾಹೇಬ್, ವಸಂತರಾವ್ ತಂದೆ ಬಾಳಾಸಾಹೇಬ್, ಪರಶುರಾಮ್ ತಂದೆ ಬಾಳಾಸಾಹೇಬ್, ಭೋಯಿಟೆ ದೌಲತರಾವ್ ತಂದೆ ಶಂಕರ್‌ರಾವ್, ಭೋಯಿಟೆ ಪಾಂಡುರಂಗ ತಂದೆ ಶಂಕರ್‌ರಾವ್, ಜೊಂಡಲ್ಲಗಟ್ಟಿ ರಾಧಾ ಬಾಯಿ, ಮೋಹಿತೆ ಸುವರ್ಣ ಗಂಡ ರಮೇಶ್, ಮೋಹಿತೆ ಆಕಾಶ್ ತಂದೆ ರಮೇಶ್, ಮೋಹಿತೆ ರಶ್ಮಿಕಾ ಉರ್ಫ್ ರಕ್ಷಿತಾ ತಂದೆ ರಮೇಶ್, ಭೋಯಿಟೆ ದೀಪಾ ಉರ್ಫ್ ಅನುರಾಧ ದಶರಥ್. 153/1
95	153	ಖಾಸಗಿ	ಖುಷ್ಕಿ/ಬಿನಶೇತ್ಕಿ	0.024026	ಘಾಟಗೆ ಶಾಂತವ್ವ ಗಂಡ ಬಾಲಪ್ಪ, ಘಾಟಗೆ ಗಣೇಶ್ ತಂದೆ ಬಾಲಪ್ಪ, ಘಾಟಗೆ ಮಹೇಶ್ ತಂದೆ ಬಾಲಪ್ಪ, ಘಾಟಗೆ ಹನುಮಂತಪ್ಪ ತಂದೆ ಬಾಲಪ್ಪ, ಘಾಟಗೆ ರವಿ ಚಂದ್ರ ತಂದೆ ಬಾಲಪ್ಪ, ಮರಾಠಾ ಮಂಜುಳಾ ಗಂಡ ಬಸವಂತರಾಯ 153/5
96	154	ಖಾಸಗಿ	ಖುಷ್ಕಿ	0.724627	ಗೂಳಿ ಶಂಕ್ರವ್ವ ಗಂಡ ತಿಪ್ಪಣ್ಣ, ಗೂಳಿ ಕಳಕಪ್ಪ ತಂದೆ ಪರಸಪ್ಪ, ಗೂಳಿ ಆನಂದಪ್ಪ ತಂದೆ ಹನಮಪ್ಪ, ಗೂಳಿ ನಿಂಗವ್ವ ಗಂಡ ಹನಮಪ್ಪ, ಗೂಳಿ ಯಲ್ಲವ್ವ ತಂದೆ ಹನಮಪ್ಪ, ಗೂಳಿ ಶಾಂತವ್ವ ಗಂಡ ಯಲ್ಲಪ್ಪ, ಗೂಳಿ ಬನ್ನಪ್ಪ ತಂದೆ ಯಲ್ಲಪ್ಪ, ಗೂಳಿ ಕಳಕಪ್ಪ ತಂದೆ ಯಲ್ಲಪ್ಪ, ಕಳಕಪ್ಪ ತಂದೆ ಪರಸಪ್ಪ, ಹನಮಪ್ಪ ತಂದೆ ಕಳಕಪ್ಪ, ಕಳಕಪ್ಪ ತಂದೆ ಹನಮಪ್ಪ, ಕಾತ್ರಾಳ ಯಲ್ಲವ್ವ ಗಂಡ ಕಳಕಪ್ಪ, ಗೂಳಿ ಯಲ್ಲವ್ವ ಗಂಡ ಕಳಕಪ್ಪ, ಬಾಳವ್ವ ತಂದೆ ಕಳಕಪ್ಪ 154/1
97	154	ಖಾಸಗಿ	ಖುಷ್ಕಿ	0.089784	ಲಕ್ಷ್ಮಣ್ ತಂದೆ ಚಂದಪ್ಪ ಗೂಳಿ, ಮಲ್ಲಪ್ಪ ತಂದೆ ಚಂದಪ್ಪ, ನಾಗಪ್ಪ ತಂದೆ ಚಂದಪ್ಪ 154/3
			ಒಟ್ಟು	22.825192	

[F. No. RW/NH/367/KNT/2022/3D]
ABHAY JAIN, Director.

ಬಾಲಗಂಗಾಧರನಾಥ ಶ್ರೀಗಳ 50ನೇ ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವ

‘ಶಿಕ್ಷಣಕ್ಕೆ ಒತ್ತು ನೀಡಿದ ಚುಂಚಶ್ರೀಗಳು’

ಪ್ರಜಾವಾಣಿ ವಾರ್ತೆ



ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿ ಮಠದಲ್ಲಿ ಬುಧವಾರ ಬಾಲಗಂಗಾಧರನಾಥ ಸ್ವಾಮೀಜಿ ಅವರ 50ನೇ ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವ ಅಂಗವಾಗಿ ಶ್ರೀಗಳ ಪುತ್ಥಳಿಗೆ ಗಣ್ಯರು ಪುಷ್ಪಾರ್ಚನೆ ಮಾಡಿ, ಪೂಜೆ ಸಲ್ಲಿಸಿದರು. ಶಾಸಕ ರಮೇಶ ಬಂಡಿಸಿದ್ದೇಗೌಡ, ನಿರ್ಮಲಾನಂದನಾಥ ಸ್ವಾಮೀಜಿ, ಕೃಷಿ ಸಚಿವ ಚಲುವರಾಯಸ್ವಾಮಿ ಹಾಗೂ ವಿವಿಧ ಮಠಾಧೀಶರು ಇದ್ದಾರೆ ಪ್ರಜಾವಾಣಿ ಚಿತ್ರ

ನಾಗಮಂಗಲ (ಮಂಡ್ಯ ಜಿಲ್ಲೆ): ‘ಸಂತ ಶ್ರೇಷ್ಠ, ಮಾತೃ ಹೃದಯಿ ಬಾಲಗಂಗಾಧರನಾಥ ಸ್ವಾಮೀಜಿಯ ದೂರದರ್ಶಿತ್ವ ಮತ್ತು ಜ್ಞಾನದ ಫಲವಾಗಿ ಆದಿಚುಂಚನಗಿರಿ ಮಠದಿಂದ ಸಾವಿರಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಸಾಧ್ಯವಾಗಿದೆ’ ಎಂದು ಕೃಷಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅಭಿಪ್ರಾಯಪಟ್ಟರು.

ತಾಲ್ಲೂಕಿನ ಆದಿಚುಂಚನಗಿರಿ ಮಠದ ಬಿ.ಜಿ.ಎಸ್ ಸಭಾಂಗದಲ್ಲಿ ಬುಧವಾರ ನಡೆದ ಬಾಲಗಂಗಾಧರನಾಥ ಸ್ವಾಮೀಜಿಯ 50ನೇ ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವ, ಗುರು ಸಂಸ್ಮರಣೋತ್ಸವ ಮತ್ತು ರಾಜ್ಯಮಟ್ಟದ 45ನೇ ಕಾಲಭೈರವೇಶ್ವರ ಜಾನಪದ ಕಲಾ ಮೇಳದ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಸ್ವಾಮೀಜಿಯು ಆಧುನಿಕ ಸೌಕರ್ಯಗಳುಳ್ಳ ಸುಸಜ್ಜಿತ ಆಸ್ಪತ್ರೆಗಳನ್ನು ಸ್ಥಾಪಿಸಿರುವುದು ಸಮಾಜದ ಮೇಲೆ ಅವರಿಗಿದ್ದ ಅಗಾಧವಾದ ಪ್ರೀತಿ, ಕಾಳಜಿಯನ್ನು ತೋರಿಸುತ್ತದೆ. ಆಧ್ಯಾತ್ಮಿಕ ಮೌಲ್ಯಗಳನ್ನು ಸಮಾಜಕ್ಕೆ ಬಿತ್ತರಿಸುವ ಕೆಲಸವನ್ನು ಮಾಡುತ್ತಲೇ ಎಲ್ಲವನ್ನೂ ಸಮರ್ಥವಾಗಿ ನಿರ್ಮಲಾನಂದನಾಥ ಸ್ವಾಮೀಜಿ ನಿರ್ವಹಿಸುತ್ತಿದ್ದಾರೆ. ಸನಾತನ ಸಂಸ್ಕೃತಿಯನ್ನು ಪಸರಿಸುವ ಜಾತ್ಯತೀತ ಮಠವಾಗಿ ವಿಶ್ವದೆಲ್ಲೆಡೆ ಹೆಸರಾಗಿದೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಚಿತ್ರದುರ್ಗದ ಕಬೀರಾನಂದ ಆಶ್ರಮದ ಶಿವಲಿಂಗಾನಂದ ಸ್ವಾಮೀಜಿ ಮಾತನಾಡಿ, ‘ಬಾಲಗಂಗಾಧರನಾಥ ಸ್ವಾಮೀಜಿ ಪೀಠವನ್ನು ಅಲಂಕರಿಸಿ ಐವತ್ತು ವರ್ಷಗಳ ಸುವರ್ಣ ಸಂಭ್ರಮವನ್ನು ಇಂದು ಆಚರಿಸುತ್ತಿದ್ದೇವೆ. ಅನ್ನ, ಅಕ್ಷರ, ಆರೋಗ್ಯದೊಂದಿಗೆ ಸಸ್ಯ ಸಂಪತ್ತಿನ ಸಂವರ್ಧನೆಗಾಗಿ ಐದು ಕೋಟಿಗೂ ಹೆಚ್ಚಿನ ಸಂಖ್ಯೆಯ ಗಿಡ ನೆಟ್ಟು ಬೆಳೆಸುವ ಸಂಕಲ್ಪ ತೊಟ್ಟು, ಬೆಳೆಸುವ ಕೆಲಸವನ್ನು ಮಾಡಿದ ಕೀರ್ತಿ ಶ್ರೀಗಳಿಗೆ ಸಲ್ಲುತ್ತದೆ. ಜೊತೆಗೆ ಗೋವಿನ ಸಂರಕ್ಷಣೆ ಜೊತೆಗೆ ಗೋವಿನ ಉತ್ಪನ್ನಗಳ ಪುನರ್ಜೀವನಗೊಳಿಸುವ ಕೆಲಸವನ್ನು ಮಾಡುವ ಮೂಲಕ ನಾಡಿನ ಜನರ ಮನಸ್ಸಿನಲ್ಲಿ ಶಾಶ್ವತವಾಗಿ ನೆಲಸಿದ್ದಾರೆ’ ಎಂದರು.

ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಆಶೀರ್ವಚನ ನೀಡಿದರು. ಮಠದ ಪ್ರಧಾನ ಕಾರ್ಯದರ್ಶಿ ಪ್ರಸನ್ನನಾಥ ಸ್ವಾಮೀಜಿ, ಶ್ರೀರಂಗಪಟ್ಟಣ ಶಾಸಕ ರಮೇಶ ಬಂಡಿಸಿದ್ದೇಗೌಡ, ಮಂಡ್ಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಪುಟ್ಟರಾಜು, ಶಾಖಾ ಮಠಗಳ ಪುರುಷೋತ್ತಮಾನಂದನಾಥ ಸ್ವಾಮೀಜಿ, ಪ್ರಕಾಶನಾಥ ಸ್ವಾಮೀಜಿ, ಅನ್ನದಾನೇಶ್ವರ ಸ್ವಾಮೀಜಿ, ಸೋಮೇಶ್ವರನಾಥ ಸ್ವಾಮೀಜಿ, ಶಂಭೂನಾಥ ಸ್ವಾಮೀಜಿ, ಸೌಮ್ಯನಾಥ ಸ್ವಾಮೀಜಿ, ಮಂಗಳನಾಥ ಸ್ವಾಮೀಜಿ, ಚಂದ್ರಶೇಖರನಾಥ ಸ್ವಾಮೀಜಿ ಇದ್ದರು.

‘ಕಲ್ಯಾಣ ಕರ್ನಾಟಕದಲ್ಲಿ ಶೀಘ್ರ 5,000 ಶಿಕ್ಷಕರ ನೇಮಕಾತಿ’

6 ದಿನ ಮೊಟ್ಟೆ ವಿತರಣೆಗೆ ಚಾಲನೆ ನೀಡಿದ ಸಚಿವರು

ಪ್ರಜಾವಾಣಿ ವಾರ್ತೆ



ಯಾದಗಿರಿ ತಾಲ್ಲೂಕಿನ ಅರಕೇರಾ (ಕೆ) ಗ್ರಾಮದ ಪ್ರೌಢಶಾಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ವಾರದಲ್ಲಿ 6 ದಿನ ಮೊಟ್ಟೆ ವಿತರಿಸುವ ಕಾರ್ಯಕ್ರಮಕ್ಕೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಚಾಲನೆ ನೀಡಿ, ವಿದ್ಯಾರ್ಥಿಗಳೊಂದಿಗೆ ಮಧ್ಯಾಹ್ನದ ಬಿಸಿಯೂಟ ಸವಿದರು. ಶಾಸಕರಾದ ಶರಣಗೌಡ ಕಂದಕೂರ, ಚನ್ನಾರೆಡ್ಡಿ ಪಾಟೀಲ ತುನ್ನೂರು, ಸಚಿವ ಶರಣಬಸಪ್ಪ ದರ್ಶನಾಪುರ ಪಾಲ್ಗೊಂಡಿದ್ದರು

ಯಾದಗಿರಿ: ‘ಕಲ್ಯಾಣ ಕರ್ನಾಟಕ ಭಾಗದಲ್ಲಿ ಶೀಘ್ರದಲ್ಲೇ 5,000 ಶಿಕ್ಷಕರ ನೇಮಕಾತಿ ಮಾಡಿಕೊಳ್ಳಲಾಗುವುದು. ನಮ್ಮ ಸರ್ಕಾರದಿಂದ ಕಲ್ಯಾಣ ಕರ್ನಾಟಕ ಭಾಗದಲ್ಲಿ ಶೇ 80ರಷ್ಟು ಶಿಕ್ಷಕರ ಹುದ್ದೆ ಭರ್ತಿ ಮಾಡಲಾಗುವುದು’ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಭರವಸೆ ನೀಡಿದರು.

ಶಾಲಾ ವಿದ್ಯಾರ್ಥಿಗಳಿಗೆ ವಾರದಲ್ಲಿ 6 ದಿನ ಮಧ್ಯಾಹ್ನದ ಬಿಸಿಯೂಟದ ಜೊತೆಗೆ ಮೊಟ್ಟೆ ವಿತರಿಸುವ ರಾಜ್ಯಮಟ್ಟದ ಕಾರ್ಯಕ್ರಮಕ್ಕೆ ತಾಲ್ಲೂಕಿನ ಅರಕೇರಾ (ಕೆ) ಗ್ರಾಮದ ಪ್ರೌಢಶಾಲೆಯಲ್ಲಿ ಬುಧವಾರ ವಿದ್ಯಾರ್ಥಿಗಳಿಗೆ ಮೊಟ್ಟೆ ವಿತರಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

‘ಕಲ್ಯಾಣ ಭಾಗದಲ್ಲಿ ಶಿಕ್ಷಕರ ಕೊರತೆ ಸಮಸ್ಯೆ ಅನೇಕ ವರ್ಷಗಳಿಂದ ಇದೆ. ಇದನ್ನು ನೀಗಿಸಲು ಹಿಂದಿನ ಸರ್ಕಾರಕ್ಕೆ ಆಗಿಲ್ಲ. ರಾಜ್ಯದಲ್ಲಿ 76 ಸಾವಿರ ಶಾಲೆಗಳಿದ್ದು, 57 ಲಕ್ಷ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ತಕ್ಕಂತೆ ಶಿಕ್ಷಕರ ನೇಮಕಾತಿ ಮಾಡಿಕೊಳ್ಳಲಾಗುವುದು’ ಎಂದು ಸಚಿವರು ಭರವಸೆ ನೀಡಿದರು.

‘ಈ ಮೊದಲು ವಾರದಲ್ಲಿ ಎರಡು ದಿನ ಮಾತ್ರ ಮೊಟ್ಟೆ ವಿತರಿಸಲಾಗುತ್ತಿತ್ತು. ಈಗ ವಾರದ ಆರು ದಿನ ಮೊಟ್ಟೆ ವಿತರಿಸಲಾಗುತ್ತಿದೆ. ರಾಜ್ಯದ ಎಲ್ಲಾ ಸರ್ಕಾರಿ ಪೂರ್ವ ಪ್ರಾಥಮಿಕ, ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ 57 ಲಕ್ಷ ವಿದ್ಯಾರ್ಥಿಗಳು ಈ ಸೌಲಭ್ಯ ಪಡೆಯುತ್ತಿದ್ದಾರೆ. ಇದಕ್ಕೆ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನವರು ಕೈ ಜೋಡಿಸಿದ್ದಾರೆ’ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪುರ, ಶಾಸಕರಾದ ಶಶೀಲ್ ಜಿ. ನಮೋಶಿ, ಚನ್ನಾರೆಡ್ಡಿ ಪಾಟೀಲ ತುನ್ನೂರು, ಶರಣಗೌಡ ಕಂದಕೂರ, ಜಿಲ್ಲಾ ಪಂಚಾಯಿತಿ ಸಿಇಒ ಲವೀಶ್ ಒರ್ಡಿಯಾ, ಅಜೀಂ ಪ್ರೇಮ್‌ಜಿ ಫೌಂಡೇಷನ್ ಮುಖ್ಯಸ್ಥ ರುದ್ರೇಶ್, ಡಿಡಿಪಿಐ ಮಂಜುನಾಥ ಪಾಲ್ಗೊಂಡಿದ್ದರು.



ಹಾನಗಲ್ ತಾಲ್ಲೂಕಿನ ಬಸಾಪುರ ಗ್ರಾಮದ ದೇವೇಂದ್ರಪ್ಪ ಗಾಣಿಗೇರ ಅವರ ಜಮೀನಿನಲ್ಲಿ ಬೆಳೆದಿದ್ದ ಅಡಿಕೆ ಗಿಡಗಳನ್ನು ಕಡಿದು ಹಾಕಲಾಗಿದೆ

ಮಾವನ ಮೇಲಿನ ಸಿಟ್ಟಿಗೆ ಅಡಿಕೆ ಗಿಡ ಕಡಿದ ಅಳಿಯ

ಪ್ರಜಾವಾಣಿ ವಾರ್ತೆ

ಹಾವೇರಿ: ತನ್ನ ಪತ್ನಿಯನ್ನು ಮನೆಗೆ ಕಳುಹಿಸಲಿಲ್ಲವೆಂಬ ಕಾರಣಕ್ಕೆ ಮಾವನ ಮೇಲೆ ಸಿಟ್ಟಾದ ಅಳಿಯನೊಬ್ಬ, ಮಾವನ ಜಮೀನಿನಲ್ಲಿ ಬೆಳೆದಿದ್ದ 106 ಅಡಿಕೆ ಗಿಡಗಳನ್ನು ಕಡಿದು ನಾಶಪಡಿಸಿದ್ದು ಆಡೂರು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಹಾನಗಲ್ ತಾಲ್ಲೂಕಿನ ಬಸಾಪುರ ಗ್ರಾಮದ ದೇವೇಂದ್ರಪ್ಪ ಫಕ್ಕೀರಪ್ಪ ಗಾಣಿಗೇರ ತಮ್ಮ ಅಳಿಯ ಬಸವರಾಜ ವಿರುದ್ಧ ದೂರು ನೀಡಿದ್ದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ತಿಳಿಸಿದರು.

‘ದೂರುದಾರ ದೇವೇಂದ್ರಪ್ಪ, ತಮ್ಮ ಮಗಳನ್ನು ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಬಸವರಾಜನಿಗೆ 10 ವರ್ಷಗಳ ಹಿಂದೆ ಮದುವೆ ಮಾಡಿಕೊಟ್ಟಿದ್ದರು. ಮದ್ಯ ವ್ಯಸನಿಯಾಗಿದ್ದ ಆರೋಪಿ ಪತ್ನಿ ಜೊತೆ ನಿತ್ಯವೂ ಜಗಳವಾಡುತ್ತಿದ್ದ. ತವರು ಮನೆಯವರು ಎಷ್ಟೇ ಎಚ್ಚರಿಕೆ ನೀಡಿದರೂ ಸುಧಾರಿಸಿರಲಿಲ್ಲ. ಇದರಿಂದ ಬೇಸತ್ತ ದೇವೇಂದ್ರಪ್ಪ ಅವರ ಮಗಳು, ಗಂಡನ ಮನೆ ಬಿಟ್ಟು ಬಂದು ತವರು ಮನೆಯಲ್ಲಿ ಉಳಿದುಕೊಂಡಿದ್ದರು. ಪತ್ನಿಯನ್ನು ಕಳುಹಿಸುವಂತೆ ಬಸವರಾಜ ಹಲವು ಬಾರಿ ಒತ್ತಾಯಿಸಿದ್ದ. ಆದರೆ ಮದ್ಯ ವ್ಯಸನ ಬಿಡುವಂತೆ ಬುದ್ಧಿ ಹೇಳಿದ್ದಕ್ಕೆ ಸಿಟ್ಟಾಗಿ ಅಡಿಕೆ ಗಿಡ ಕಡಿದು ಹಾಕಲು ಸಂಚು ರೂಪಿಸಿದ್ದ’ ಎಂದು ತಿಳಿಸಿದ್ದಾರೆ.

‘ಸೆ.23ರ ರಾತ್ರಿಯಿಂದ ಸೆ. 24ರ ಬೆಳಗಿನ ಅವಧಿಯಲ್ಲಿ ಜಮೀನಿಗೆ ನುಗ್ಗಿದ್ದ ಆರೋಪಿ ಸುಮಾರು 2 ಲಕ್ಷ ಮೌಲ್ಯದ 106 ಅಡಿಕೆ ಗಿಡಗಳನ್ನು ಕಡಿದು ಹಾಕಿದ್ದಾನೆ’ ಎಂದು ಹೇಳಿದ್ದಾರೆ.

ಲಂಚ: ಲೋಕಾಯುಕ್ತ ಬಲೆಗೆ ಪ್ರಾಚಾರ್ಯ, ಎಫ್‌ಡಿಎ

ಪ್ರಜಾವಾಣಿ ವಾರ್ತೆ

ಬೀರೂರು (ಚಿಕ್ಕಮಗಳೂರು): ಹಾಜರಾತಿ ನೀಡಲು ವಿದ್ಯಾರ್ಥಿಯಿಂದ ಲಂಚ ಪಡೆಯುತ್ತಿದ್ದ ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಎಂ.ಕೆ.ಪ್ರವೀಣ್ ಕುಮಾರ್ ಮತ್ತು ಎಫ್‌ಡಿಎ ಸದಾಶಿವಯ್ಯರನ್ನು ಬುಧವಾರ ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಅಂತಿಮ ವರ್ಷದ ಬಿಎಸ್‌ಸಿ ವಿದ್ಯಾರ್ಥಿಯೊಬ್ಬರು ಪರೀಕ್ಷೆಗೆ ಕುಳಿತುಕೊಳ್ಳಲು ಹಾಜರಾತಿ ಕೊರತೆ ಇತ್ತು.

ಹಾಜರಾತಿ ಕೊರತೆ ಸರಿದೂಗಿಸಲು ಪ್ರಾಚಾರ್ಯರು ಹಣಕ್ಕೆ ಬೇಡಿಕೆ ಇಟ್ಟಿದ್ದರು. ಈ ವಿಷಯವನ್ನು ವಿದ್ಯಾರ್ಥಿಯು ಅತಿಥಿ ಉಪನ್ಯಾಸಕ ಬಿ.ಟಿ.ಹರೀಶ್ ಅವರ ಗಮನಕ್ಕೆ ತಂದಿದ್ದರು. ಹಾಜರಾತಿ ನೀಡುವ ಸಲುವಾಗಿ ಪ್ರಥಮ ದರ್ಜೆ ಸಹಾಯಕ ಸದಾಶಿವಯ್ಯ ₹10 ಸಾವಿರ ಫೋನ್ ಪೇ ಮೂಲಕ ಹಾಕಿಸಿಕೊಂಡಿದ್ದರು. ಪ್ರಾಚಾರ್ಯ ಎಂ.ಕೆ.ಪ್ರವೀಣ್ ಕುಮಾರ್



ಎಂ.ಕೆ.ಪ್ರವೀಣ್ ಕುಮಾರ್

₹5 ಸಾವಿರಕ್ಕೆ ಬೇಡಿಕೆ ಇಟ್ಟದ್ದರು. ಅತಿಥಿ ಉಪನ್ಯಾಸಕ ಬಿ.ಟಿ.ಹರೀಶ್ ಅವರು ಲೋಕಾಯುಕ್ತ ಪೊಲೀಸರಿಗೆ ದೂರು ಸಲ್ಲಿಸಿದ್ದರು.

ಪ್ರಾಚಾರ್ಯರ ಕಚೇರಿಯಲ್ಲಿ ಹಣ ನೀಡುವ ವೇಳೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದರು. ಕಾರ್ಯಾಚರಣೆಯಲ್ಲಿ ಡಿವೈಎಸ್‌ಪಿ ತಿರುಮಲೇಶ್, ಇನ್‌ಸ್ಪೆಕ್ಟರ್‌ಗಳಾದ ಮಲ್ಲಿಕಾರ್ಜುನ, ಅನಿಲ್ ರಾಥೋಡ್, ಸಿಬ್ಬಂದಿ ವಿಜಯ ಭಾಸ್ಕರ್, ಲೋಕೇಶ್, ಸವಿನಯ ಇದ್ದರು.

ಅಪರಾಧ ಹಿನ್ನೆಲೆ: ಕಸಾಪ ತಾಲ್ಲೂಕು ಅಧ್ಯಕ್ಷ ವಜಾ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ‘ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಘಟಕದ ಅಧ್ಯಕ್ಷ ಸ್ಥಾನದಿಂದ ಕುಮಾರ ಎಂ.ಬಿ ಅವರನ್ನು ವಜಾಗೊಳಿಸಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ ಜೋಶಿ ಬುಧವಾರ ಆದೇಶ ಹೊರಡಿಸಿದ್ದಾರೆ.

‘ಕುಮಾರ ಅವರ ವಿರುದ್ಧ ನ್ಯಾಯಾಲಯದಲ್ಲಿ ಅಪರಾಧ ಹಿನ್ನೆಲೆಯ ಮೊಕದ್ದಮೆ ಇದ್ದು, ಪರಿಷತ್ತಿನ ಗೌರವ, ಘನತೆ ಮತ್ತು ಧ್ಯೇಯೋದ್ದೇಶಗಳಿಗೆ ವಿರುದ್ಧವಾಗಿರುವುದರಿಂದ ಅವರನ್ನು ವಜಾ ಮಾಡಲಾಗಿದೆ’ ಎಂದು ಆದೇಶ ಪತ್ರದಲ್ಲಿ ತಿಳಿಸಿದ್ದಾರೆ.

ತೆರವಾದ ಅಧ್ಯಕ್ಷ ಸ್ಥಾನಕ್ಕೆ, ಜಿಲ್ಲಾ ಕಾರ್ಯಕಾರಿ ಸಮಿತಿಯ ಶಿಫಾರಸಿನಂತೆ ತಾಲ್ಲೂಕು ಘಟಕದ ಮಾಜಿ ಅಧ್ಯಕ್ಷ ಸಿದ್ದಲಿಂಗ ಅವರನ್ನು ನಾಮನಿರ್ದೇಶನ ಮಾಡಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಳಿ ತಪ್ಪಿದ ರೈಲು: ಸಂಚಾರ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಇಲ್ಲಿನ ಶ್ರೀ ಸಿದ್ಧಾರೂಢ ಸ್ವಾಮಿ ರೈಲ್ವೆ ನಿಲ್ದಾಣ–ಸೊಲ್ಲಾಪುರ ಮಾರ್ಗದಲ್ಲಿ ಸಂಚರಿಸುತ್ತಿದ್ದ ಲೋಕೊ ರೈಲು (49488) ಗದಗ–ಹೊಟಗಿ ಭಾಗದ ಲಚ್ಯಾಣ ಹಾಗೂ ತದ್ವಾಲ ನಡುವೆ ಹಳಿ ತಪ್ಪಿದ್ದರಿಂದ ಬುಧವಾರ ವಿವಿಧ ರೈಲುಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಯಿತು.

ರೈಲಿನ ಚಕ್ರಗಳನ್ನು ಮರಳಿ ಹಳಿಗೆ ತರಲು ರೈಲ್ವೆ ಸಿಬ್ಬಂದಿ ಕಾರ್ಯಾಚರಣೆ ಕೈಗೊಂಡರು. ಅಧಿಕಾರಿಗಳು ಪರಿಶೀಲಿಸಿ ಬಳಿಕ ವಿಜಯಪುರ ರೈಲು ನಿಲ್ದಾಣದಿಂದ ಸಾವಿರಾರು ಪ್ರಯಾಣಿಕರಿಗೆ ಬಸ್‌ಗಳ ವ್ಯವಸ್ಥೆ ಮಾಡಿದರು.

ಸಂಚಾರ ರದ್ದು: ಸೆಪ್ಟೆಂಬರ್ 26ರಂದು ಪಂಢರಪುರ–ಮೈಸೂರು (16536) ರೈಲು ಸಂಚಾರ ಪಂಢರಪುರ–ವಿಜಯಪುರ ನಡುವೆ ರದ್ದಾಗಲಿದ್ದು, ವಿಜಯಪುರದಿಂದ ಹೊರಡಲಿದೆ. ಬಾಗಲಕೋಟೆ–ಮೈಸೂರು (17308) ರೈಲು ಸಂಚಾರ ಬಾಗಲಕೋಟೆ–ಸೊಲ್ಲಾಪುರದ ನಡುವೆ ರದ್ದಾಗಲಿದ್ದು, ಸೊಲ್ಲಾಪುರದಿಂದ ಹೊರಡಲಿದೆ. ಹುಬ್ಬಳ್ಳಿ–ಸೊಲ್ಲಾಪುರ ಡೈಲಿ ಪ್ಯಾಸೆಂಜರ್ ವಿಶೇಷ ರೈಲು (07332) ಸಂಚಾರ ವಿಜಯಪುರ–ಸೊಲ್ಲಾಪುರದ ನಡುವೆ ರದ್ದಾಗಲಿದೆ.


ವಿಜಯಪುರ–ರಾಯಚೂರು (07663/07664), ಸೊಲ್ಲಾಪುರ–ಹೊಸಪೇಟೆ (11305/11306), ಹೈದರಾಬಾದ್–ಹುಬ್ಬಳ್ಳಿ (17320), ಸೊಲ್ಲಾಪುರ–ಹುಬ್ಬಳ್ಳಿ (07331), ಸೊಲ್ಲಾಪುರ–ಧಾರವಾಡ (07321) ರೈಲು ಸಂಚಾರ ರದ್ದಾಗಲಿದೆ. ಸೆ.27 ರಂದು (11306) ಹೊಸಪೇಟೆ–ಸೊಲ್ಲಾಪುರ, ವಿಜಯಪುರ–ಹೈದರಾಬಾದ್ (17029) ರೈಲು ರದ್ದಾಗಲಿದೆ ಎಂದು ನೈರುತ್ಯ ರೈಲ್ವೆ ಪ್ರಕಟಣೆ ತಿಳಿಸಿದೆ.

ಮಾರ್ಗ ಬದಲಾವಣೆ: ಹೊಸಪೇಟೆ–ಸಿಎಸ್‌ಎಂಟಿ ಮುಂಬೈ ಡೈಲಿ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ (11140) ಗದಗ, ಹುಬ್ಬಳ್ಳಿ, ಬೆಳಗಾವಿ, ಮೀರಜ್, ಪುಣೆ ಮಾರ್ಗವಾಗಿ ಸಾಗಲಿದೆ. ಬಾದಾಮಿ, ಕುರ್ದುವಾಡಿಯಲ್ಲಿ ನಿಲ್ಲುವುದಿಲ್ಲ.

ಕೇಂದ್ರ ಪ್ರವಾಸೋದ್ಯಮ ಇಲಾಖೆ ಏರ್ಪಡಿಸಿದ ಸ್ಪರ್ಧೆ

ಕುತ್ಲೂರು ‘ಶ್ರೇಷ್ಠ ಪ್ರವಾಸಿ ಗ್ರಾಮ’

ಪ್ರಜಾವಾಣಿ ವಾರ್ತೆ



‘ಶ್ರೇಷ್ಠ ಪ್ರವಾಸಿ ಗ್ರಾಮ’ ಮನ್ನಣೆಗೆ ಪಾತ್ರವಾದ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಕುತ್ಲೂರು ಗ್ರಾಮದ ವಿಹಂಗಮ ನೋಟ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಕುತ್ಲೂರು ಗ್ರಾಮವು ಕೇಂದ್ರ ಪ್ರವಾಸೋದ್ಯಮ ಇಲಾಖೆ ನಡೆಸುವ ‘ಶ್ರೇಷ್ಠ ಪ್ರವಾಸಿ ಗ್ರಾಮ’ ಸ್ಪರ್ಧೆಯ 2024ನೇ ಆವೃತ್ತಿಯಲ್ಲಿ ‘ಸಾಹಸ ಪ್ರವಾಸೋದ್ಯಮ’ ವಿಭಾಗದಲ್ಲಿ ಆಯ್ಕೆಯಾಗಿದೆ.

‘ಕುತ್ಲೂರು ಗ್ರಾಮದ ಕುರಿತ ದಾಖಲೆಗಳನ್ನು ಸಲ್ಲಿಸಿರುವ ಇಬ್ಬರು ಗ್ರಾಮಸ್ಥರಿಗೆ, ವಿಶ್ವ ಪ್ರವಾಸೋದ್ಯಮ ದಿನಾಚರಣೆ ಅಂಗವಾಗಿ ಇಲಾಖೆಯು ಇದೇ 27ರಂದು ನವದೆಹಲಿಯಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮದಲ್ಲಿ ಅಭಿನಂದನೆ ಸಲ್ಲಿಸಲಾಗುತ್ತದೆ. ಪ್ರಮಾಣ ಪತ್ರವನ್ನೂ ಹಸ್ತಾಂತರಿಸಲಾಗುತ್ತದೆ’ ಎಂದು ಪ್ರವಾಸೋದ್ಯಮ ಇಲಾಖೆಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಕೇಂದ್ರ ಪ್ರವಾಸೋದ್ಯಮ ಇಲಾಖೆಯು 2024ರ ಫೆಬ್ರುವರಿಯಲ್ಲಿ ಈ ಸ್ಪರ್ಧೆಗೆ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಿತ್ತು. ಕುತ್ಲೂರು ಗ್ರಾಮದ ಹರೀಶ್ ಡಾಕಯ್ಯ, ಸಂದೀಪ್ ಪೂಜಾರಿ ಹಾಗೂ ಶಿವರಾಜ್ ಎಂಬುವರು ತಮ್ಮ ಗ್ರಾಮದ ಕುರಿತ ವಿವರಗಳನ್ನು ಸಲ್ಲಿಸಿದ್ದರು.

‘ಕೇಂದ್ರ ಸರ್ಕಾರವು ಎರಡು ವರ್ಷಗಳಿಂದ ಈ ಸ್ಪರ್ಧೆಯನ್ನು ಆಯೋಜಿಸುತ್ತಿದೆ. ಕಳೆದ ವರ್ಷವೂ ಈ ಸ್ಪರ್ಧೆಗೆ ನಮ್ಮ ಗ್ರಾಮದ ವಿವರಗಳನ್ನು ಸಲ್ಲಿಸಿದ್ದೆವು. ನಮ್ಮ ಗ್ರಾಮವು ಈ ರಾಷ್ಟ್ರೀಯ ಮಟ್ಟದ ಸ್ಪರ್ಧೆಗೆ ರಾಜ್ಯದಿಂದ ಆಯ್ಕೆಯಾಗಿತ್ತು. ಆದರೆ ‘ಶ್ರೇಷ್ಠ ಪ್ರವಾಸಿ ಗ್ರಾಮ’ ಮನ್ನಣೆ ಪಡೆಯುವ ಅವಕಾಶ ಸ್ವಲ್ಪದರಲ್ಲಿ ಕೈತಪ್ಪಿತ್ತು. ಸ್ಪರ್ಧೆಯ ಮಾನದಂಡಗಳಿಗೆ ಪೂರಕವಾದ ದಾಖಲೆಗಳನ್ನು ಮೊದಲೇ ಸಿದ್ಧಪಡಿಸಿ ಈ ಸಲವೂ ಆನ್‌ಲೈನ್‌ನಲ್ಲಿ ವಿವರಗಳನ್ನು ಸಲ್ಲಿಸಿದ್ದೆವು. ನಮ್ಮ ಗ್ರಾಮದ ಪ್ರವಾಸೋದ್ಯಮ ಅವಕಾಶಗಳನ್ನು ಆನ್‌ಲೈನ್‌ನಲ್ಲಿ ಪ್ರಸ್ತುತಿ ಪಡಿಸಲು ಇಲಾಖೆ ಜೂನ್ ತಿಂಗಳಲ್ಲಿ ಅವಕಾಶ ನೀಡಿತ್ತು’ ಎಂದು ಕುತ್ಲೂರಿನ ಹರೀಶ್ ಡಾಕಯ್ಯ ‘ಪ್ರಜಾವಾಣಿ’ಗೆ ತಿಳಿಸಿದರು.

‘ನಕ್ಸಲ್ ಪೀಡಿತ ಪ್ರದೇಶ ಎಂಬ ಹಣೆಪಟ್ಟಿ ಕಳಚಿ, ಒಳ್ಳೆಯ ಕಾರಣಕ್ಕೆ ನಮ್ಮೂರು ಹೆಸರುವಾಸಿಯಾಗಬೇಕು ಎಂಬುದು ನಮ್ಮ ಆಶಯ. ಅದು ಈಗ ಈಡೇರುತ್ತಿದೆ. ಪಶ್ಚಿಮ ಘಟ್ಟದ ತಪ್ಪಲಿನಲ್ಲಿರುವ ನಮ್ಮೂರಿನಲ್ಲಿ ರುದ್ರರಮಣೀಯ ಪರ್ವತ ಶ್ರೇಣಿಗಳಿವೆ, ಅರ್ಬಿ ಜಲಪಾತವಿದೆ. ಚಾರಣಕ್ಕೆ ಹೇಳಿ ಮಾಡಿಸಿದ ಅನೇಕ ತಾಣಗಳಿವೆ. ನಮ್ಮ ಊರೂ ದೇಶದ ಪ್ರಮುಖ ಪ್ರವಾಸಿ ತಾಣವಾಗಿ ಗುರುತಿಸಿಕೊಳ್ಳುವುದು ಹೆಮ್ಮೆಯ ವಿಷಯ’ ಎಂದು ಅವರು ತಿಳಿಸಿದರು.

ಗ್ರಾಮಸ್ಥರಾದ ಹರೀಶ್ ಡಾಕಯ್ಯ, ಶಿವರಾಜ್ ಹಾಗೂ ರಾಜ್ಯ ಪ್ರವಾಸೋದ್ಯಮ ಇಲಾಖೆಯ ಇಬ್ಬರು ಅಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಐ.ಟಿಯಿಂದ ದರ್ಶನ್ ವಿಚಾರಣೆ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಕೊಲೆ ಪ್ರಕರಣದ ಆರೋಪಿ ದರ್ಶನ್ ಅವರನ್ನು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಬಳ್ಳಾರಿ ಕೇಂದ್ರ ಕಾರಾಗೃಹದಲ್ಲಿ ಗುರುವಾರದಿಂದ ಎರಡು ದಿನ ವಿಚಾರಣೆ ನಡೆಸಲಿದ್ದಾರೆ.

ಕೊಲೆ ಪ್ರಕರಣದಲ್ಲಿನ ಹಣದ ವಹಿವಾಟಿಗೆ ಸಂಬಂಧಿಸಿದಂತೆ ದರ್ಶನ್ ವಿಚಾರಣೆಗೆ ಕೋರ್ಟ್ ಆದೇಶ ನೀಡಿದೆ. ಅದರಂತೆ ತನಿಖೆ ನಡೆಸಲು ಆದಾಯ ತೆರಿಗೆ ಇಲಾಖೆ ಮುಂದಾಗಿದೆ. ಸೆ.26 ಮತ್ತು 27ರಂದು ತನಿಖೆಗೆಂದು ಅಧಿಕಾರಿಗಳು ಬಳ್ಳಾರಿ ಜೈಲಿಗೆ ಬರಲಿದ್ದಾರೆ ಎಂದು ಜೈಲು ಅಧಿಕಾರಿಗಳು ತಿಳಿಸಿದ್ದಾರೆ.

‘ದರ್ಶನ್ ಅವರ ವಿಚಾರಣೆಗೆ ಅವಕಾಶ ನೀಡುವಂತೆ ಕೋರಿ ಕೋರ್ಟ್ ಆದೇಶದೊಂದಿಗೆ ಆದಾಯ ತೆರಿಗೆ ಇಲಾಖೆಯಿಂದ ನಮಗೆ ಇ–ಮೇಲ್ ಬಂದಿತ್ತು. ನಾವು ವಿಚಾರಣೆಗೆ ಅವಕಾಶ ನೀಡಿದ್ದೇವೆ’ ಎಂದು ಬಳ್ಳಾರಿ ಜೈಲು ಅಧೀಕ್ಷಕಿ ಲತಾ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ದರ್ಶನ್ ಅವರ ಪರ ವಕೀಲರು ಬುಧವಾರವೂ ಜೈಲಿಗೆ ಭೇಟಿ ನೀಡಿ 30 ನಿಮಿಷ ಚರ್ಚೆ ನಡೆಸಿದರು.

ವರದಿಗೆ ಹೆಚ್ಚಿನ ಸಮಯ ಕೋರಿದ ಕೇಂದ್ರ

ನವದೆಹಲಿ: ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯು ಮೇ 5ರಂದು ನಡೆಸಿದ ‘ನೀಟ್ ಯುಜಿ-2024’ ಪರೀಕ್ಷೆಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪ ಕೇಳಿಬಂದ ನಂತರ ರಚಿಸಿರುವ ಉನ್ನತ ಮಟ್ಟದ ಸಮಿತಿಯ ವರದಿ ಸಲ್ಲಿಸಲು ಹೆಚ್ಚಿನ ಸಮಯ ಬೇಕು ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದೆ.

ಇಸ್ರೊ ಮಾಜಿ ಅಧ್ಯಕ್ಷ ಡಾ.ಕೆ. ರಾಧಾಕೃಷ್ಣನ್ ನೇತೃತ್ವದಲ್ಲಿ ಸಮಿತಿ ರಚಿಸಿದ್ದು, ಸೆಪ್ಟೆಂಬರ್ 30ರಂದು ವರದಿ ಸಲ್ಲಿಸಬೇಕಿದೆ. ಪರೀಕ್ಷೆಯನ್ನು ಪಾರದರ್ಶಕವಾಗಿ ನಡೆಸಲು ತೆಗೆದುಕೊಳ್ಳಬೇಕಿರುವ ಕ್ರಮಗಳನ್ನು ಸಮಿತಿ ಸೂಚಿಸಬೇಕಿದೆ. ಹಾಗಾಗಿ ಮೂರು ವಾರಗಳ ಸಮಯ ಬೇಕು ಎಂದು ಕೋರಿದೆ.

ಸಂಕ್ಷಿಪ್ತ ಸುದ್ದಿ

ದಬ್ಬಾಳಿಕೆ ನಡೆಸಿದರೆ ಠಾಣೆಗಳಿಗೆ ಮುತ್ತಿಗೆ: ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಬಿಜೆಪಿ ಕಾರ್ಯಕರ್ತರ ಮೇಲೆ ಪೊಲೀಸರು ಪದೇ ಪದೇ ದಬ್ಬಾಳಿಕೆ ನಡೆಸುತ್ತಿದ್ದಾರೆ. ಪೊಲೀಸ್ ಅಧಿಕಾರಿಗಳು ಇದೇ ರೀತಿ ದೌಲತ್ತಿನಿಂದ ನಡೆದುಕೊಂಡರೆ ಎಲ್ಲ ಠಾಣೆಗಳಿಗೂ ಮುತ್ತಿಗೆ ಹಾಕುತ್ತೇವೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಎಚ್ಚರಿಕೆ ನೀಡಿದರು.



ಬಿ.ವೈ. ವಿಜಯೇಂದ್ರ

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಆಡಳಿತ ಪಕ್ಷವನ್ನು ತೃಪ್ತಿಪಡಿಸಲು ವಿನಾ ಕಾರಣ ನಮ್ಮ ಕಾರ್ಯಕರ್ತರ ಮೇಲೆ ಎಫ್‌ಐಆರ್ ದಾಖಲಿಸುತ್ತಿದ್ದಾರೆ. ಇದು ಅಕ್ಷಮ್ಯ ಅಪರಾಧ' ಎಂದರು.

ತಪ್ಪು ಮಾಡಿದ ಅಧಿಕಾರಿಗಳಿಗೆ ತಿಳಿ ಹೇಳುವ ಕೆಲಸವನ್ನು ಮಾಡಿ ಎಂದು ಅವರು ಗೃಹ ಸಚಿವ ಜಿ.ಪರಮೇಶ್ವರ ಅವರನ್ನು ಒತ್ತಾಯಿಸಿದರು.

'ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣದಲ್ಲಿ ನಮ್ಮ ಪಕ್ಷದ ಕಾರ್ಯಕರ್ತೆ ಛಾಯಾ ಅವರು ಸದಸ್ಯತ್ವ ನೋಂದಣಿ ಅಭಿಯಾನ ನಡೆಸಿದ್ದರು. ಪೊಲೀಸರು ಮಂಗಳವಾರ ರಾತ್ರಿ ಛಾಯಾ ಅವರನ್ನು ಠಾಣೆಗೆ ಕರೆದೊಯ್ದು ಕೂರಿಸಿದ್ದಾರೆ. ಎಫ್‌ಐಆರ್ ದಾಖಲಿಸುವುದಾಗಿ ಬೆದರಿಸಿದ್ದಾರೆ. ನಮ್ಮ ಕಾರ್ಯಕರ್ತರು ಮತ್ತು ಮುಖಂಡರು ಪೊಲೀಸ್ ಠಾಣೆಗೆ ಧಾವಿಸಿ ಹೋಗಿ ಕಾರಣ ಕೇಳಿದ್ದಾರೆ. ಆಗ ಒಟಿಪಿಗಳನ್ನು ಡೌನ್ ಲೋಡ್ ಮಾಡುತ್ತಿದ್ದಾರೆ ಎಂದು ಪೊಲೀಸರು ಕಥೆ ಕಟ್ಟಿದ್ದಾರೆ. ರಾತ್ರಿ 12 ರವರೆಗೆ ಛಾಯಾ ಅವರನ್ನು ಕೂರಿಸಿ ದಬ್ಬಾಳಿಕೆ ನಡೆಸಿದ್ದಾರೆ' ಎಂದು ವಿಜಯೇಂದ್ರ ದೂರಿದರು.

ಕುಲಾಂತರಿ ಆಹಾರ ವಿರೋಧಿಸಿ ಸತ್ಯಾಗ್ರಹ 29ರಿಂದ

ಬೆಂಗಳೂರು: 'ಕುಲಾಂತರಿ ಆಹಾರ ವಿರೋಧಿ ಒಕ್ಕೂಟದಿಂದ ಸೆಪ್ಟೆಂಬರ್ 29ರಿಂದ ಅಕ್ಟೋಬರ್ 2ರವರೆಗೂ ತುಮಕೂರು ಜಿಲ್ಲೆಯ ದೊಡ್ಡ ಹೊಸೂರಿನ ಗಾಂಧೀಜಿ ಸಹಜ ಬೇಸಾಯ ಆಶ್ರಮದಲ್ಲಿ ಕುಲಾಂತರಿ ಆಹಾರ ಮತ್ತು ಬಹು ರಾಷ್ಟ್ರೀಯ ಕಂಪನಿಗಳನ್ನು ಕೃಷಿ ಕ್ಷೇತ್ರದಿಂದ ಬಹಿಷ್ಕರಿಸುವಂತೆ ಆಗ್ರಹಿಸಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು' ಎಂದು ಆಶ್ರಮದ ಸಂಸ್ಥಾಪಕ ಎಚ್. ಮಂಜುನಾಥ್ ಹೇಳಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕುಲಾಂತರಿ ತಳಿಯ ಬೆಳೆಗಳಿಗೆ ಸಂಬಂಧಿಸಿದಂತೆ ನಾಲ್ಕು ತಿಂಗಳಲ್ಲಿ ಕಾಯ್ದೆ ರೂಪಿಸುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೂಚಿಸಿದೆ. ನಮ್ಮ ದೇಶಿ ಕೃಷಿ ಪದ್ಧತಿಗೆ, ಬೀಜ ಸ್ವಾವಲಂಬನೆಗೆ ಮಾರಕವಾಗಿರುವ ಈ ಕಾಯ್ದೆಯನ್ನು ಕೇಂದ್ರವೂ ರೂಪಿಸಬಾರದು' ಎಂದು ಆಗ್ರಹಿಸಿದರು. 'ಕೇಂದ್ರ ಸರ್ಕಾರವೂ ಕುಲಾಂತರಿಗೆ ಸಂಬಂಧಿಸಿದಂತೆ ಸಂಶೋಧನೆ ನಡೆಸುವುದನ್ನು ನಿಲ್ಲಿಸಬೇಕು. ಇದಕ್ಕಾಗಿ ಹಣಕಾಸು ಪೂರೈಕೆ ಮಾಡಕೂಡದೆಂದು ಒತ್ತಾಯಿಸಲಾಗು ವುದು' ಎಂದರು.

'ತುಮಕೂರಿನ ಸಿದ್ದಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಸತ್ಯಾಗ್ರಹಕ್ಕೆ ಚಾಲನೆ ನೀಡುವರು'ಎಂದರು.

'ರವಿಕುಮಾರ್ ವಿರುದ್ಧ ಮಾನನಷ್ಟ ಮೊಕದ್ದಮೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೈದ್ಯಕೀಯ ಉಪಕರಣಗಳ ಖರೀದಿಯಲ್ಲಿ ಅವ್ಯವಹಾರ ನಡೆದಿಲ್ಲ. ಆಧಾರರಹಿತ ಆರೋಪ ಮಾಡಿರುವ ವಿಧಾನಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಲಾಗುವುದು' ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ಹೇಳಿದರು.



ಶರಣಪ್ರಕಾಶ ಪಾಟೀಲ

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ವೈದ್ಯಕೀಯ ಉಪಕರಣಗಳ ಖರೀದಿ ಕುರಿತಂತೆ ಬಿಜೆಪಿ ಮಾಡಿದ ಆರೋಪ ನಿರಾಧಾರ. ಟೆಂಡರ್, ಖರೀದಿ ಪ್ರಕ್ರಿಯೆಗಳು ಸಾರ್ವಜನಿಕ ಸಂಗ್ರಹಣೆಗಳಲ್ಲಿ ಕರ್ನಾಟಕ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಯ ಪ್ರಕಾರವೇ ನಡೆದಿವೆ. ಪುರಾವೆಗಳಿಲ್ಲದೆ ಬಿಜೆಪಿ ಇಂತಹ ಆರೋಪಗಳು ಮಾಡುತ್ತಿದೆ ಎಂದರು.

ವೈದ್ಯಕೀಯ ಕಾಲೇಜುಗಳು ಸರ್ಕಾರದ ಆಡಳಿತಾತ್ಮಕ ಒಪ್ಪಿಗೆ ಪಡೆದು, ನಿವೃತ್ತ ನ್ಯಾಯಮೂರ್ತಿ ರತ್ನಕಲಾ ನೇತೃತ್ವದ ರಾಜ್ಯ ಟೆಂಡರ್ ಪೂರ್ವ ಪರಿಶೀಲನಾ ಸಮಿತಿಯಿಂದ ಅನುಮೋದನೆ ಪಡೆದು ಟೆಂಡರ್ ಪ್ರಕ್ರಿಯೆ ನಡೆಸಲಾಗಿದೆ. ಅಧಿಕಾರ ಕಳೆದುಕೊಂಡ ಹತಾಶೆಯಲ್ಲಿ ಬಿಜೆಪಿ ನಾಯಕರು ಸರ್ಕಾರ ವಿರುದ್ಧ ನಿರಂತರವಾಗಿ ದ್ವೇಷ ಸಾಧಿಸುತ್ತಿದ್ದಾರೆ ಎಂದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಬಿಜೆಪಿ ಮತ್ತು ಜೆಡಿಎಸ್ ಷಡ್ಯಂತ್ರ ಮಾಡುತ್ತಿವೆ ಎಂದು ಆರೋಪಿಸಿ ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ಪದಾಧಿಕಾರಿಗಳು ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ



ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಿ ತನಿಖೆ ಎದುರಿಸಬೇಕು ಎಂದು ಆಗ್ರಹಿಸಿ ಜೆಡಿಎಸ್ ಬೆಂಗಳೂರು ನಗರ ಜಿಲ್ಲಾ ಘಟಕದ ನೇತೃತ್ವದಲ್ಲಿ ಬುಧವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಯಿತು – ಪ್ರಜಾವಾಣಿ ಚಿತ್ರ



ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಧೀರಜ್ ಮುನಿರಾಜು ಮತ್ತು ಸಪ್ತಗಿರಿಗೌಡ ನೇತೃತ್ವದಲ್ಲಿ ಮುಖ್ಯಮಂತ್ರಿ ಅವರ ನಿವಾಸಕ್ಕೆ ಬಿಜೆಪಿ ಕಾರ್ಯಕರ್ತರು ಮುತ್ತಿಗೆ ಹಾಕಿದರು

ಮುಡಾ: ಆಡಳಿತ–ವಿಪಕ್ಷ ಏಟು ಎದುರೇಟು

ಮುಡಾ ನಿವೇಶನ ಹಂಚಿಕೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಪ್ರಭಾವ ಬಳಸಿ ಲಾಭ ಪಡೆದುಕೊಂಡಿದ್ದಾರೆಯೇ ಎಂಬುದು ತನಿಖಾರ್ಹ ಎಂದು ಹೈಕೋರ್ಟ್ ಹೇಳಿದ್ದು, ಜನಪ್ರತಿನಿಧಿಗಳ ನ್ಯಾಯಾಲಯವು ತನಿಖೆಗೂ ಆದೇಶಿಸಿದೆ. ಪರಿಣಾಮ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು ಎಂದು ವಿರೋಧ ಪಕ್ಷ ಬಿಜೆಪಿ ಪಟ್ಟು ಹಿಡಿದಿದೆ. ಪ್ರತಿಭಟನೆಗೂ ಇಳಿದಿದೆ. ಸಿದ್ದರಾಮಯ್ಯ ಪರವಾಗಿ ಕಾಂಗ್ರೆಸ್ ಪಕ್ಷವು ಗಟ್ಟಿಯಾಗಿ ನಿಂತಿದೆ:

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯ ಅವರು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ಬಿಜೆಪಿ ಕಾರ್ಯಕರ್ತರು ಮುಖ್ಯಮಂತ್ರಿಯವರ ಗೃಹ ಕಚೇರಿ 'ಕೃಷ್ಣಾ'ಗೆ ಬುಧವಾರ ಮುತ್ತಿಗೆ ಹಾಕಲು ಯತ್ನಿಸಿದರು.

ಬಿಜೆಪಿ ಯುವ ಮೋರ್ಚಾ ರಾಜ್ಯ ಅಧ್ಯಕ್ಷ ಧೀರಜ್ ಮುನಿರಾಜು ಮತ್ತು ಬೆಂಗಳೂರು ಉತ್ತರ ಜಿಲ್ಲೆ ಬಿಜೆಪಿ ಜಿಲ್ಲಾಧ್ಯಕ್ಷ ಸಪ್ತಗಿರಿಗೌಡ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಶಿವಾನಂದ ವೃತ್ತದಿಂದ ಮುಖ್ಯಮಂತ್ರಿಯವರ ವಿರುದ್ಧ ಫಲಕಗಳನ್ನು ಹಿಡಿದು ಘೋಷಣೆಗಳನ್ನು ಕೂಗುತ್ತಾ ಹೊರಟಿದ್ದ ಪ್ರತಿಭಟನಕಾರರನ್ನು ಪೊಲೀಸರು ಕುಮಾರಕೃಪಾ ಅತಿಥಿಗೃಹದ ಬಳಿ ವಶಕ್ಕೆ ತೆಗೆದುಕೊಂಡರು.

ಪ್ರತಿಭಟನೆಗೂ ಮುನ್ನ ಸುದ್ದಿಗಾರರ ಜತೆ ಮಾತನಾಡಿದ ಧೀರಜ್ ಮುನಿರಾಜು, 'ಈ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿ ಸ್ಥಾನದಲ್ಲಿ ನಿಂತಿದ್ದಾರೆ. ಆದ್ದರಿಂದ ನೈತಿಕ ಹೊಣೆ ಹೊತ್ತು ಅವರು ಕೂಡಲೇ ರಾಜೀನಾಮೆ ನೀಡಬೇಕು. ನ್ಯಾಯಾಂಗ ವ್ಯವಸ್ಥೆಯಲ್ಲಿ ನಂಬಿಕೆ ಇದ್ದರೆ ಅವರು ನ್ಯಾಯಾಲಯದ ತೀರ್ಪು ಹೊರಬೀಳುತ್ತಿದ್ದಂತೆ ಹುದ್ದೆಗೆ ರಾಜೀನಾಮೆ ನೀಡಬೇಕಿತ್ತು' ಎಂದರು.

'ಸಿದ್ದರಾಮಯ್ಯ ಅವರು ರಾಜೀನಾಮೆ ನೀಡುವವರೆಗೂ ಹೋರಾಟ ಮುಂದುವರೆಯುತ್ತದೆ. ಯಾವುದೇ ಕಾರಣಕ್ಕೂ ನಾವು ಹಿಂದಕ್ಕೆ ಸರಿಯುವ ಪ್ರಶ್ನೆಯೇ ಇಲ್ಲ. ರಾಜ್ಯ ವ್ಯಾಪಿ ಹೋರಾಟ ಆಯೋಜಿಸಲಾಗುವುದು. ಬೇರೆಯವರ ಬಗ್ಗೆ ಮಾತನಾಡುವ ಸಿದ್ದರಾಮಯ್ಯ ಮೊದಲು ನೈತಿಕತೆ ಪ್ರದರ್ಶಿಸಿ ಇನ್ನೊಬ್ಬರಿಗೆ ಮಾದರಿಯಾಗಲಿ' ಎಂದು ಅವರು ಹೇಳಿದರು.

'ಸಿದ್ದರಾಮಯ್ಯ ರಾಜೀನಾಮೆ ನೀಡಿ ತನಿಖೆ ಎದುರಿಸಲಿ'

ಬೆಂಗಳೂರು: 'ಮುಡಾ ಹಗರಣದ ತನಿಖೆಗೆ ಹೈಕೋರ್ಟ್ ಅವಕಾಶ ನೀಡಿರುವುದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಿ ತನಿಖೆ ಎದುರಿಸಬೇಕು' ಎಂದು ಆಗ್ರಹಿಸಿ ಜೆಡಿಎಸ್ ಬೆಂಗಳೂರು ನಗರ ಜಿಲ್ಲಾ ಘಟಕದ ನೇತೃತ್ವದಲ್ಲಿ ಬುಧವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಯಿತು.

ವಿಧಾನ ಪರಿಷತ್ ಸದಸ್ಯ ಕೆ.ಎ. ತಿಪ್ಪೇಸ್ವಾಮಿ ಮಾತನಾಡಿ, 'ಬಾಟ್ಲಿಂಗ್ ಹಗರಣದ ಆರೋಪ ಬಂದಾಗ ರಾಮಕೃಷ್ಣ ಹೆಗಡೆ ರಾಜೀನಾಮೆ ನೀಡಿದ್ದರು. ಡಿನೋಟಿಫಿಕೇಶನ್ ಆರೋಪ ಬಂದಾಗ ಬಿ.ಎಸ್. ಯಡಿಯೂರಪ್ಪ ರಾಜೀನಾಮೆ ನೀಡಿದ್ದರು. ಈಗ ಸಿದ್ದರಾಮಯ್ಯ ಕೂಡ ರಾಜೀನಾಮೆ ನೀಡಬೇಕು' ಎಂದರು.

ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ ಮಾತನಾಡಿ, 'ಸಿದ್ದರಾಮಯ್ಯ ವಿರುದ್ಧ ವಿಚಾರಣೆಗೆ ಅವಕಾಶ ನೀಡಿರುವ ರಾಜ್ಯಪಾಲರ ನಿರ್ಧಾರವನ್ನು ಹೈಕೋರ್ಟ್ ಎತ್ತಿ ಹಿಡಿದಿದೆ. ಸಿದ್ದರಾಮಯ್ಯ ತನ್ನ ಪ್ರಭಾವವನ್ನು ದುರ್ಬಳಕೆ ಮಾಡಿಕೊಂಡು ಕುಟುಂಬಕ್ಕೆ ನೆರವಾಗಿರುವುದು ಸ್ಪಷ್ಟವಾಗಿದೆ' ಎಂದರು.

ಜಿಲ್ಲಾ ಘಟಕದ ಅಧ್ಯಕ್ಷ ಎಚ್.ಎಂ. ರಮೇಶ್ ಗೌಡ, 'ಬೇರೆಯವರ ನೈತಿಕತೆಯನ್ನು ಪ್ರಶ್ನಿಸುವ ಸಿದ್ದರಾಮಯ್ಯ ಅವರು ನೈತಿಕ ಹೊಣೆ ಹೊತ್ತು ಕೂಡಲೇ ರಾಜೀನಾಮೆ ನೀಡಿ ತನಿಖೆಯನ್ನು ಎದುರಿಸಬೇಕು' ಎಂದು ಆಗ್ರಹಿಸಿದರು.

ಮೊದಲು ಎಚ್‌ಡಿಕೆ ರಾಜೀನಾಮೆ ಕೊಡಲಿ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡುವ ಅಗತ್ಯವಿಲ್ಲ. ಆರೋಪ ಹೊತ್ತ ಕೇಂದ್ರ ಸಚಿವರು ರಾಜೀನಾಮೆ ನೀಡಿದ್ದಾರಾ? ಮೊದಲು ಅವರು ರಾಜೀನಾಮೆ ನೀಡಲಿ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕುಮಾರಸ್ವಾಮಿ ಅವರನ್ನು ಉದ್ದೇಶಿಸಿ ಹೇಳಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, 'ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನ ಹಂಚಿಕೆ ವಿಚಾರದಲ್ಲಿ ಅಧಿಕಾರಿಗಳು ತಪ್ಪು ಮಾಡಿರಲೂಬಹುದು. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪಾತ್ರವಿಲ್ಲ' ಎಂದರು.



ಡಿ.ಕೆ. ಶಿವಕುಮಾರ್

'ನ್ಯಾಯಾಲಯದ ಸೂಚನೆಯಂತೆ ತನಿಖೆ ನಡೆಯಲಿದೆ. ಯಾವುದೇ ತನಿಖೆ ನಡೆದರೂ ಸಿದ್ದರಾಮಯ್ಯ ದೋಷಮುಕ್ತರಾಗಿ ಹೊರಬರುವ ವಿಶ್ವಾಸವಿದೆ' ಎಂದರು.

'ಸಿದ್ದರಾಮಯ್ಯ ಪ್ರಕರಣವನ್ನು ರಾಜಕೀಯ ಕಾರಣಗಳಿಗಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಹರಿಯಾಣದಲ್ಲಿ ನಡೆದ ಚುನಾವಣೆ ಪ್ರಚಾರ ಸಭೆಯಲ್ಲಿ ಪ್ರಸ್ತಾಪಿಸಿದ್ದಾರೆ. ನಮಗೆ ಕಾನೂನಿನ ಮೇಲೆ ನಂಬಿಕೆ ಇದೆ. ಆರೋಪಮುಕ್ತರಾಗಿ ಹೊರಬರುತ್ತಾರೆ' ಎಂದು ಹೇಳಿದರು.

'ಶೋಷಿತರ ಶಕ್ತಿಯ ಕುಗ್ಗಿಸಲು ಷಡ್ಯಂತ್ರ'

ಬೆಂಗಳೂರು: 'ಶೋಷಿತರ ಸಮುದಾಯಗಳ ಧ್ವನಿಯಾಗಿರುವ, ಸಿದ್ದರಾಮಯ್ಯ ಅವರ ವಿರುದ್ಧ ಬಿಜೆಪಿ ಮತ್ತು ಜೆಡಿಎಸ್ ಷಡ್ಯಂತ್ರ ಮಾಡಿವೆ' ಎಂದು ಆರೋಪಿಸಿ ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ಪದಾಧಿಕಾರಿಗಳು ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಕಪ್ಪು ಪಟ್ಟಿ ಧರಿಸಿ ಮೌನ ಪ್ರತಿಭಟನೆ ನಡೆಸಿದರು.

ಒಕ್ಕೂಟದ ಪ್ರಧಾನ ಸಂಚಾಲಕ ಕೆ.ಎಂ. ರಾಮಚಂದ್ರಪ್ಪ ಮಾತನಾಡಿ, 'ಗ್ಯಾರಂಟಿ ಯೋಜನೆಗಳ ಮೂಲಕ ಬಡವರಿಗೆ ಶಕ್ತಿ ತುಂಬಿರುವ ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಕೆಳಗಿಳಿಸಲು ಜೆಡಿಎಸ್–ಬಿಜೆಪಿ ಕುತಂತ್ರ ಮಾಡುತ್ತಿವೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಂಚಾಲಕರಾದ ಮಾವಳ್ಳಿ ಶಂಕರ್, ಅನಂತ ನಾಯಕ್ ಮಾತನಾಡಿ, 'ಎಚ್.ಡಿ.ಕುಮಾರಸ್ವಾಮಿ, ಬಿಜೆಪಿ ಮುಖಂಡರಾದ ಮುರುಗೇಶ ನಿರಾಣಿ, ಜನಾರ್ದನ ರೆಡ್ಡಿ ಹಾಗೂ ಶಶಿಕಲಾ ಜೊಲ್ಲೆ ವಿರುದ್ಧ ತನಿಖೆಗೆ ರಾಜ್ಯಪಾಲರು ಯಾಕೆ ಅನುಮತಿ ನೀಡುತ್ತಿಲ್ಲ? ಮೋದಿ ಮತ್ತು ಅಮಿತ್ ಶಾ ಅವರಿಗೆ ಸಿಂಹಸ್ವಪ್ನ ಆಗಿರುವ, ಸಿದ್ದರಾಮಯ್ಯ ಅವರನ್ನು ಹಣಿಯಲು ರಾಜ್ಯಪಾಲರನ್ನು ಬಳಸಿಕೊಳ್ಳಲಾಗುತ್ತಿದೆ. ಮೋದಿ–ಅಮಿತ್ ಶಾ ಜೋಡಿ ದೆಹಲಿ, ಜಾರ್ಖಂಡ್, ಕೇರಳ, ತಮಿಳುನಾಡು ಸರ್ಕಾರವನ್ನು ರಾಜ್ಯಪಾಲರ ಮೂಲಕ ಅಸ್ಥಿರಗೊಳಿಸಲು ಯತ್ನಿಸಿದ್ದರು. ಈಗ ಕರ್ನಾಟಕದಲ್ಲಿಯೂ ಅಂಥದ್ದೇ ಪ್ರಯತ್ನ ಮಾಡುತ್ತಿದ್ದಾರೆ' ಎಂದು ಆರೋಪಿಸಿದರು.

ಒಕ್ಕೂಟದ ಆದರ್ಶ ಯಲ್ಲಪ್ಪ, ಸಿ.ನಂಜಪ್ಪ, ಕೆ.ವೆಂಕಟಸುಬ್ಬರಾಜು, ಗುಂಜಾಲು ರಾಮಕೃಷ್ಣ, ಡಿ. ವೆಂಕಟೇಶ, ರಂಗಪ್ಪ ಅಲೆಮಾರಿ, ಮಂಜಪ್ಪ ಶಿಳ್ಳೆಕ್ಯಾತ, ಅಂಜಲಿ, ಸುಭಾಷ್, ಸತೀಶ್ ಭಾಗವಹಿಸಿದ್ದರು.

ಅಹಿಂದ ಸಂಘಟನೆ ಬೆಂಬಲ: ಅ.3, 4ರಂದು ಜಾಥಾ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಯಾವುದೇ ಕಾರಣಕ್ಕೂ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬಾರದು. ಅವರಿಗೆ ಬೆಂಬಲ ವ್ಯಕ್ತಪಡಿಸಲು ರಾಷ್ಟ್ರೀಯ ಅಹಿಂದ ಸಂಘಟನೆ ವತಿಯಿಂದ ಅಕ್ಟೋಬರ್ 3,4ರಂದು ಹುಬ್ಬಳ್ಳಿಯಿಂದ ಬೆಂಗಳೂರಿನ ವಿಧಾನಸೌಧದವರೆಗೆ 'ಅಹಿಂದ ನಾಯಕನ ಉಳಿಸಿ, ಸಂವಿಧಾನ ರಕ್ಷಿಸಿ' ಜಾಥಾ ನಡೆಸಲಾಗುವುದು' ಎಂದು ಸಂಘಟನೆ ಅಧ್ಯಕ್ಷ ಮುತ್ತಣ್ಣ ಶಿವಳ್ಳಿ ತಿಳಿಸಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅ.3ರಂದು ಮಧ್ಯಾಹ್ನ 12 ಗಂಟೆಗೆ ಹುಬ್ಬಳ್ಳಿಯ ಇಂದಿರಾ ಗಾಜಿನ ಮನೆಯಿಂದ ಜಾಥಾ ಆರಂಭಿಸಲಾಗುವುದು. ರಾಣಿ ಚನ್ನಮ್ಮ, ಸಂಗೊಳ್ಳಿ ರಾಯಣ್ಣ ಹಾಗೂ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಹಾವೇರಿ ದಾವಣಗೆರೆ ಮಾರ್ಗವಾಗಿ ವಾಹನಗಳ ಮೂಲಕ ತೆರಳಲಾಗುವುದು. ಚಿತ್ರದುರ್ಗದಲ್ಲಿ ವಾಸ್ತವ್ಯ ಮಾಡಿ, ಮರುದಿನ ಬೆಂಗಳೂರಿನ ವಿಧಾನಸೌಧಕ್ಕೆ ತಲುಪಿ ಜಾಥಾ ಕೊನೆಗೊಳಿಸಲಾಗುವುದು' ಎಂದು ತಿಳಿಸಿದರು.

'ರಾಜ್ಯದ ಎಲ್ಲ ಜಿಲ್ಲೆಗಳ ಅಹಿಂದ ನಾಯಕರು ಕ್ಯಾಂಟರ್ ವಾಹನಗಳ ಮೂಲಕ ಜಾಥಾದಲ್ಲಿ ಪಾಲ್ಗೊಳ್ಳಲಿದ್ದಾರೆ. ಕ್ಯಾಂಟರ್ ವಾಹನಗಳಿಗೆ ಬುದ್ಧ, ಬಸವ, ಅಂಬೇಡ್ಕರ್ ಅವರ ಭಾವಚಿತ್ರಗಳನ್ನು ಅಂಟಿಸಿ, ದಾರಿಯುದ್ದಕ್ಕೂ ಮೆರವಣಿಗೆ ಮಾಡಲಾಗುವುದು. ಸಿದ್ದರಾಮಯ್ಯ ವಿರುದ್ಧ ವಿರೋಧ ಪಕ್ಷಗಳು ನಡೆಸಿರುವ ಷಡ್ಯಂತ್ರದ ಬಗ್ಗೆ ಹಾಗೂ ಸಂವಿಧಾನದ ಬಗ್ಗೆ ಮಾರ್ಗ ಮಧ್ಯದ ಪಟ್ಟಣಗಳಲ್ಲಿ ಜಾಗೃತಿ ಮೂಡಿಸಲಾಗುವುದು. ಈ ಕಾರ್ಯಕ್ರಮವು ಪಕ್ಷಾತೀತವಾಗಿದೆ' ಎಂದು ಹೇಳಿದರು.

ರಾಜೀನಾಮೆ ನೀಡುವುದು ಸೂಕ್ತ: ಸಂತೋಷ್ ಹೆಗ್ಡೆ

ಮಂಗಳೂರು: ಮುಡಾ ಹಗರಣದಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡುವುದು ಸೂಕ್ತ ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಹೇಳಿದರು. ಮಂಗಳೂರು ವಿಶ್ವವಿದ್ಯಾನಿಲಯದ ಸಂಸ್ಥಾಪನಾ ದಿನಾಚರಣೆಯಲ್ಲಿ ಪಾಲ್ಗೊಂಡಿದ್ದ ಅವರು ಪತ್ರಕರ್ತರ ಜೊತೆ ಮಾತನಾಡಿ, ಕಾನೂನು ಹೋರಾಟ ಮಾಡಲು ಮುಖ್ಯಮಂತ್ರಿಗೆ ಅವಕಾಶ ಇದೆ. ಆದರೆ ಸಾರ್ವಜನಿಕರ ದೃಷ್ಟಿಯಲ್ಲಿ ರಾಜೀನಾಮೆ ನೀಡುವುದೇ ಸರಿ ಎಂದರು.



ಸಿದ್ದರಾಮಯ್ಯ ಅವರು ತಾವೇನೂ ತಪ್ಪು ಮಾಡಿಲ್ಲ ಎಂದು ಹೇಳುತ್ತ ಬಂದಿ ದ್ದಾರೆ. ಈಗ ಆರೋಪಗಳಿಗೆ ಸಂಬಂಧಿಸಿ ಪುರಾವೆ ಇವೆ ಎಂದು ನ್ಯಾಯಾಲಯವೇ ಹೇಳಿದೆ. ತನಿಖೆ ಮಾಡುವ ಏಜೆನ್ಸಿ ಯಾವ ನಿರ್ಣಯಕ್ಕೆ ಬರುತ್ತದೆ ಎಂಬುದರ ಮೇಲೆ ಪ್ರಕರಣ ಅಂತ್ಯ ಕಾಣುತ್ತದೆ. ಆದರೆ ಕಾನೂನು ಹೋರಾಟದ ಮುಂದಿನ ಹಂತದಲ್ಲಿ ಸಿದ್ದರಾಮಯ್ಯ ಗೆಲ್ಲುವ ಸಾಧ್ಯತೆ ಕಡಿಮೆ ಎಂದು ಸಂತೋಷ್ ಹೆಗ್ಡೆ ಅಭಿಪ್ರಾಯಪಟ್ಟರು.

ಕಾನೂನನ್ನು ಗೌರವಿಸುವ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು. ಕ್ಲೀನ್ ಚಿಟ್ ಸಿಕ್ಕ ನಂತರ ಮತ್ತೆ ಅವರು ಮುಖ್ಯಮಂತ್ರಿ ಆಗಿ ಮುಂದುವರಿಯಬಹುದು

ವಿ. ಸೋಮಣ್ಣ, ರೈಲ್ವೆ ಖಾತೆ ರಾಜ್ಯ ಸಚಿವ

ಅನುಮತಿ ಯಾಕೆ ಬೇಕು?

ಸಮಾನತೆಯು ಸಂವಿಧಾನದ ಆಶಯ. ಹೀಗಿರುವಾಗ ವಿಶಿಷ್ಟ ವ್ಯಕ್ತಿಗಳ ಮೇಲೆ ಕಾನೂನು ಕ್ರಮಕ್ಕೆ ವಿಶೇಷ ಅನುಮತಿ ಯಾಕೆ ಬೇಕು ಎಂದು ಸಂತೋಷ್ ಹೆಗ್ಡೆ ಪ್ರಶ್ನಿಸಿದರು.

ಬ್ರಿಟಿಷರು ಅವರ ಆಡಳಿತದಲ್ಲಿ ಅಧಿಕಾರಿಗಳಿಗೆ ತೊಂದರೆಯಾಗಬಾರದು ಎಂದು ವಿಶೇಷ ಅನುಮತಿ ಪಡೆಯುವ ಪದ್ಧತಿ ಬೆಳೆಸಿಕೊಂಡಿದ್ದರು. ಅದನ್ನು ಈಗಲೂ ಮುಂದುವರಿಸುವ ಅಗತ್ಯ ಏನಿದೆ? ತಪ್ಪು ಮಾಡಿಲ್ಲ ಎಂದಾದರೆ ನ್ಯಾಯಾಲಯವೇ ನಿರಪರಾಧಿ ಎಂದು ಘೋಷಿಸುವುದಿಲ್ಲವೇ ಎಂದು ಅವರು ಕೇಳಿದರು.

ತವರಲ್ಲೇ ತನಿಖೆ ಎದುರಿಸಬೇಕಾದ ಸ್ಥಿತಿ...

ಪ್ರಜಾವಾಣಿ ವಾರ್ತೆ

ಮೈಸೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಬಿ.ಎಂ. ಪಾರ್ವತಿ ಮುಡಾದಿಂದ ಕೋಟ್ಯಂತರ ರೂಪಾಯಿ ಬೆಲೆ ಬಾಳುವ 14 ನಿವೇಶನಗಳನ್ನು ಅಕ್ರಮವಾಗಿ ಪಡೆದಿದ್ದು, ಪ್ರಕರಣಕ್ಕೆ ಸಂಬಂಧಿಸಿ ಸಿದ್ದರಾಮಯ್ಯ ಸೇರಿದಂತೆ ಐವರು ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಬೇಕು' ಎಂದು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಮೈಸೂರು ಲೋಕಾಯುಕ್ತ ಪೊಲೀಸರಿಗೆ ಆದೇಶಿಸಿದೆ. ಇದರೊಂದಿಗೆ, ಸಿದ್ದರಾಮಯ್ಯ ತಮ್ಮ ತವರಿನಲ್ಲೇ ತನಿಖೆ ಎದುರಿಸಬೇಕಾದ ಸನ್ನಿವೇಶ ಮೊದಲ ಬಾರಿಗೆ ಎದುರಾಗಿದೆ.

ಮೈಸೂರಿನವರೇ ಆದ ಸ್ನೇಹಮಯಿ ಕೃಷ್ಣ ಅವರ ದೂರಿನ ಆಧಾರದಲ್ಲಿ ಮುಖ್ಯಮಂತ್ರಿಗೆ ಈ ಪರಿಸ್ಥಿತಿ ಎದುರಾಗಿದೆ.



ಮೈಸೂರು ಲೋಕಾಯುಕ್ತ ಪೊಲೀಸರ ಕ್ರಮದತ್ತ ಎಲ್ಲರ ಚಿತ್ತ ನೆಟ್ಟಿದೆ. ಮುಖ್ಯಮಂತ್ರಿ ವಿರುದ್ಧ ಯಾವಾಗ ಹಾಗೂ ಯಾವ ಸೆಕ್ಷನ್‌ಗಳ ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗುತ್ತದೆ? ಸಿದ್ದರಾಮಯ್ಯ ಸೇರಿದಂತೆ ಐವರು ಆರೋಪಿಗಳನ್ನು ಯಾವಾಗ ವಿಚಾರಣೆಗೆ ಒಳಪಡಿಸುತ್ತದೆ ಎಂಬ ಕುತೂಹಲವೂ ಮೂಡಿದೆ. ಬಿಜೆಪಿ ಹಾಗೂ ಜೆಡಿಎಸ್‌ನವರು ತ್ವರಿತ ಕ್ರಮಕ್ಕೆ ಒತ್ತಾಯಿಸಿದ್ದಾರೆ.

ಮೂಲಗಳ ಪ್ರಕಾರ, 'ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಆದೇಶ ಮೈಸೂರು ಲೋಕಾಯುಕ್ತ ಪೊಲೀಸರಿಗೆ ಬುಧವಾರ ರಾತ್ರಿವರೆಗೂ ತಲುಪಿರಲಿಲ್ಲ. ಅಧಿಕೃತ ಆದೇಶದ ಪ್ರತಿ ಹಾಗೂ ನಿರ್ದೇಶನ ದೊರೆತ ನಂತರ ಕ್ರಮ ವಹಿಸಲಿದ್ದಾರೆ'.

ದೂರುದಾರರಲ್ಲಿ ಒಬ್ಬರಾದ ಪ್ರದೀಪ್‌ಕುಮಾರ್, ಸಿದ್ದರಾಮಯ್ಯ ವಿರುದ್ಧ ತನಿಖೆಗೆ ಹೈಕೋರ್ಟ್ ಅನುಮತಿ ಕೊಟ್ಟಿರುವುದರಿಂದ ಎಫ್‌ಐಆರ್ ದಾಖಲಿಸುವಂತೆ ಬುಧವಾರ ಬೆಳಿಗ್ಗೆಯೇ ಮನವಿ ಸಲ್ಲಿಸಿ ಒತ್ತಾಯಿಸಿದ್ದಾರೆ. ಈ ನಡುವೆ, ಬುಧವಾರ ಮಧ್ಯಾಹ್ನ ಹೊರಬಿದ್ದ 'ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ'ದ ಆದೇಶದಂತೆ ಲೋಕಾಯುಕ್ತ ಪೊಲೀಸರು ಕ್ರಮ ಕೈಗೊಳ್ಳಬೇಕಾಗಿದೆ.

ದೂರುದಾರರಾದ ಸ್ನೇಹಮಯಿ ಕೃಷ್ಣ ಅವರು, 'ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ'ದ ತೀರ್ಪಿನ ಪ್ರತಿಯನ್ನು ಗುರುವಾರ ಇಲ್ಲಿನ ಲೋಕಾಯುಕ್ತ ಪೊಲೀಸರಿಗೆ ಸಲ್ಲಿಸಿ ಎಫ್‌ಐಆರ್ ದಾಖಲಿಸುವಂತೆ ಕೋರುವ ಸಾಧ್ಯತೆ ಇದೆ.

'ಮುಖ್ಯಮಂತ್ರಿ ವಿರುದ್ಧ ಪ್ರಕರಣ ದಾಖಲಿಸಲು ಯಾವುದೇ ಕ್ಷಣದಲ್ಲಿ ಆದೇಶ ಹೊರಬೀಳಬಹುದು ಎಂಬ ನಿರೀಕ್ಷೆಯಲ್ಲೇ ಲೋಕಾಯುಕ್ತ ಪೊಲೀಸರು ಸಂಜೆವರೆಗೂ ಕಾದಿದ್ದರು. ಆದರೆ, ಆದೇಶದ ಪ್ರತಿ ಬಾರದ ಕಾರಣ ಕ್ರಮ ಕೈಗೊಂಡಿಲ್ಲ. ತಲುಪಿದ ಕೂಡಲೇ ಪ್ರಕರಣ ದಾಖಲಿಸಲು ಸಿದ್ಧತೆ ನಡೆಸಿದ್ದಾರೆ. ಈ ಹಿನ್ನೆಲೆಯಲ್ಲಿ, ಲೋಕಾಯುಕ್ತ ಎಸ್ಪಿ ಅಧಿಕಾರಿಗಳ ಸಭೆಯನ್ನೂ ನಡೆಸಿದರು' ಎಂದು ತಿಳಿದುಬಂದಿದೆ.

ಸಿದ್ದರಾಮಯ್ಯಗೆ ಚಪ್ಪಲಿ ಹಾರ ಹಾಕುತ್ತೀರಾ: ಎಚ್‌ಡಿಕೆ ಪ್ರಶ್ನೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಮುಡಾ ಹಗರಣದಲ್ಲಿ ತನಿಖೆಗೆ ಅನುಮತಿ ನೀಡಿದಾಗ ಕಾಂಗ್ರೆಸ್‌ನವರು ರಾಜ್ಯಪಾಲರ ಚಿತ್ರಕ್ಕೆ ಚಪ್ಪಲಿ ಹಾರ ಹಾಕಿದರು. ಈಗ ಕಾಂಗ್ರೆಸ್‌ನವರು ಸಿದ್ದರಾಮಯ್ಯ ಅವರಿಗೆ ಚಪ್ಪಲಿ ಹಾರ ಹಾಕುತ್ತಾರಾ? ಅವರ ಪ್ರತಿಕೃತಿ ದಹನ ಮಾಡುತ್ತಾರಾ' ಎಂದು ಕೇಂದ್ರದ ಭಾರಿ ಕೈಗಾರಿಕೆ ಹಾಗೂ ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದರು.



'ಕುಮಾರಸ್ವಾಮಿ ರಾಜೀನಾಮೆ ಕೊಟ್ಟರಾ' ಎಂದು ಕೇಳಿದ ಸಿದ್ದರಾಮಯ್ಯ ಅವರಿಗೆ ತಿರುಗೇಟು ಕೊಟ್ಟ ಅವರು, 'ನನ್ನ ಮೇಲಿನ ಪ್ರಕರಣಗಳಿಗೂ ನಿಮ್ಮ ಹಗರಣಕ್ಕೂ ವ್ಯತ್ಯಾಸ ಇದೆ' ಎಂದರು. ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕುಮಾರಸ್ವಾಮಿ ಅವರು ಸರ್ಕಾರಿ ಭೂಮಿ ತೆಗೆದುಕೊಂಡಿದ್ದಾರೆ ಎಂದು ಕಾಂಗ್ರೆಸ್‌ನವರು ಆರೋಪ ಮಾಡುತ್ತಿದ್ದಾರೆ. ಸಾಯಿ ವೆಂಕಟೇಶ್ವರ ಮಿನರಲ್ಸ್ ಬಗ್ಗೆಯೂ ಮಾತನಾಡುತ್ತಿದ್ದಾರೆ. ಅರ್ಜಿ ಹಾಕದಿರುವ ಕಂಪನಿಗೆ ಗಣಿ ಗುತ್ತಿಗೆ ಕೊಡಲಾಗಿದೆ ಎನ್ನುತ್ತಿದ್ದಾರೆ. ಅವರು ಅರ್ಜಿ ಹಾಕಿದ್ದಾರೆ. ಆದರೆ, ಅವರಿಗೆ ಗಣಿ ಗುತ್ತಿಗೆ ನೀಡಲಾಗಿಲ್ಲ. ಅವರಿಗೆ ಒಂದು ಇಂಚು ಭೂಮಿಯನ್ನು ಕೊಟ್ಟಿಲ್ಲ. ರಾಜ್ಯ ಬೊಕ್ಕಸಕ್ಕೆ ನಯಾಪೈಸೆ ನಷ್ಟ ಆಗಿಲ್ಲ. ಹೀಗಿದ್ದ ಮೇಲೆ ಅದು ಹಗರಣ ಹೇಗೆ ಆಗುತ್ತದೆ' ಎಂದು ಪ್ರಶ್ನಿಸಿದರು.

'ಗಂಗೇನಹಳ್ಳಿ ಡಿನೋಟಿಫಿಕೇಶನ್ ವಿಚಾರಕ್ಕೆ ಬರುವುದಾದರೆ, ರಾಜಶೇಖರಯ್ಯ ಅನಾಮಿಕ ಎಂದು ಸಚಿವರು ಹೇಳಿದ್ದಾರೆ. 2007ರ ವಿಳಾಸವನ್ನು ಈಗ ಹುಡುಕಿಕೊಂಡು ಹೋದರೆ ಏನು ಪ್ರಯೋಜನ? ಐದು ವರ್ಷ ಅಧಿಕಾರದಲ್ಲಿ ಇದ್ದಾಗ ಹುಡುಕಿಕೊಂಡು ಯಾಕೆ ಹೋಗಲಿಲ್ಲ? ಇವರು ನನ್ನ ನೈತಿಕತೆ ಬಗ್ಗೆ ಪ್ರಶ್ನೆ ಮಾಡಿದ್ದಾರೆ. ನನ್ನ ನೈತಿಕತೆಯನ್ನು ಸಾಬೀತು ಮಾಡಿ ಉತ್ತರ ಕೊಡುತ್ತೇನೆ' ಎಂದು ಸವಾಲು ಹಾಕಿದರು.

'ಗಂಗೇನಹಳ್ಳಿ ಭೂಮಿ ಸರ್ಕಾರಿ ಭೂಮಿ ಎಂದು ಸುಳ್ಳು ಹೇಳಿದ್ದಾರೆ. ಸ್ವಾಧೀನ ಮಾಡಿಕೊಂಡ ಭೂಮಿಗೆ ಬಿಡಿಎಯವರು ಪರಿಹಾರ ನೀಡಿದ್ದಾರೆಯೇ? ಅಲ್ಲಿ ಬಡಾವಣೆ ಮಾಡಲಾಗಿದೆಯೇ? ಯಾರಿಗಾದರೂ ನಿವೇಶನ ಹಂಚಿಕೆ ಆಗಿದೆಯಾ? 1975-76ರಲ್ಲಿ ಅದಕ್ಕೆ ಅಧಿಸೂಚನೆ ಹೊರಡಿಸಲಾಗಿದೆ. ಸ್ವಾಧೀನ ಮಾಡಿಕೊಂಡಿದ್ದ ಜಾಗದಲ್ಲಿ 2007ರ ವರೆಗೂ ನಿವೇಶನ ಮಾಡಿ ಹಂಚಿಲ್ಲ? ಸ್ವಾಧೀನಪಡಿಸಿಕೊಂಡ ಭೂಮಿಯನ್ನು ಐದು ವರ್ಷದಲ್ಲಿ ಉಪಯೋಗ ಮಾಡಿಕೊಳ್ಳದಿದ್ದರೆ ಆ ಭೂಮಿಯನ್ನು ಮರಳಿ ರೈತರಿಗೆ ಕೊಡಬೇಕು ಎಂದು ಸುಪ್ರೀಂ ಕೋರ್ಟ್ ಆದೇಶ ಇದೆ. ಇದು ಸರ್ಕಾರಕ್ಕೆ ಗೊತ್ತಿಲ್ಲವೇ' ಎಂದು ಅವರು ಪ್ರಶ್ನಿಸಿದರು.

'ನನ್ನ ಬಾವಮೈದ ಆ ಜಾಗವನ್ನು ಖರೀದಿ ಮಾಡಿದ್ದಾನೆ. ಡಿನೋಟಿಫಿಕೇಶನ್ ಆದ ಜಾಗವನ್ನು ಮಾರಬಾರದು ಎಂದು ಕಾನೂನಿನಲ್ಲಿ ಇದೆಯಾ' ಎಂದು ಅವರು ಕೇಳಿದರು.

'ಕರ್ನಾಟಕದಲ್ಲಿ ಇರುವುದು ದರೋಡೆಕೋರರ ಸರ್ಕಾರ. ಅವರು ಹಿಂದೆಯೂ ದರೋಡೆ ಮಾಡುತ್ತಿದ್ದರು. ಈಗಲೂ ಮಾಡುತ್ತಿದ್ದಾರೆ. ಕೇರಳದ ಬಸ್‌ನಲ್ಲಿ ಚಿನ್ನದ ವ್ಯಾಪಾರಿಯಿಂದ ಚಿನ್ನ ಲೂಟಿ ಮಾಡಿದ ನಿಮ್ಮ ಹಣೆಬರಹ ಗೊತ್ತಿದೆ' ಎಂದು ತಿರುಗೇಟು ನೀಡಿದರು.

ಸಿ.ಎಂ.ಗೆ ತನಿಖೆಯ ಬಿಸಿ

ಒಂದನೇ ಪುಟದಿಂದ...

'ಈ ಕ್ರಿಮಿನಲ್ ಪ್ರಕರಣದ ತನಿಖೆ ನಡೆಸಿ ಅಂತಿಮ ವರದಿಯನ್ನು (ದೋಷಾರೋಪ ಪಟ್ಟಿ) ಕಲಂ 173ರ ಅಡಿಯಲ್ಲಿ ಮೂರು ತಿಂಗಳ ಒಳಗಾಗಿ ವಿಚಾರಣಾ ನ್ಯಾಯಾಲಯಕ್ಕೆ ಸಲ್ಲಿಸಬೇಕು' ಎಂದು ನಿರ್ದೇಶಿಸಿದ ನ್ಯಾಯಾಧೀಶರು ವಿಚಾರಣೆ ಮುಂದೂಡಿದರು. ಫಿರ್ಯಾದುದಾರ ಸ್ನೇಹಮಯಿ ಕೃಷ್ಣ ಹಾಜರಿದ್ದರು.

ಈ ಮೊದಲು ಸ್ನೇಹಮಯಿ ಕೃಷ್ಣ ಸೇರಿದಂತೆ ಒಟ್ಟು ಮೂವರು ಸಲ್ಲಿಸಿದ್ದ ಖಾಸಗಿ ದೂರಿನ ಪ್ರಾಥಮಿಕ ವಿಚಾರಣೆ ನಡೆಸಿದ್ದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರು ಆದೇಶ ಕಾಯ್ದಿರಿಸಿದ್ದರು. ಏತನ್ಮಧ್ಯೆ, ರಾಜ್ಯಪಾಲರು ಭ್ರಷ್ಟಾಚಾರ ನಿಗ್ರಹ ಕಾಯ್ದೆ-1988ರ ಕಲಂ 17ಎ ಅಡಿಯಲ್ಲಿ ತನಿಖೆಗೆ ಮಂಜೂರಾತಿ ನೀಡಿ ಆದೇಶಿಸಿದ್ದರು. ಈ ಆದೇಶವನ್ನು ಪ್ರಶ್ನಿಸಿ ಸಿದ್ದರಾಮಯ್ಯ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಆದೇಶ ಪ್ರಕಟಣೆಗೆ ಮಧ್ಯಂತರ ತಡೆ ನೀಡಿ ವಿಚಾರಣೆ ನಡೆಸಿತ್ತು. ಮಂಗಳವಾರವಷ್ಟೇ ರಿಟ್ ಅರ್ಜಿ ವಜಾಗೊಳಿಸಿದ್ದ ನ್ಯಾಯಪೀಠ, 'ರಾಜ್ಯಪಾಲರ ಆದೇಶದ ಅನುಸಾರ ಸಿದ್ದರಾಮಯ್ಯ ವಿರುದ್ಧದ ಆರೋಪ ಕುರಿತು ತನಿಖೆಯ ಅಗತ್ಯವಿದೆ' ಎಂದು ತೀರ್ಪು ನೀಡಿತ್ತು ಮತ್ತು ಸೆಷನ್ಸ್ ನ್ಯಾಯಾಲಯ ಕಾಯ್ದಿರಿಸಿದ್ದ ಆದೇಶಕ್ಕೆ ನೀಡಿದ್ದ ತಡೆ ಯನ್ನು ತೆರವುಗೊಳಿಸಿತ್ತು. ಹೀಗಾಗಿ, ಫಿರ್ಯಾದುದಾರ ಮೈಸೂರಿನ ಸ್ನೇಹಮಯಿ ಕೃಷ್ಣ ಬುಧವಾರ ತಮ್ಮ ಪರ ಹಿರಿಯ ವಕೀಲೆ ಲಕ್ಷ್ಮಿ ಅಯ್ಯಂಗಾರ್ ಮುಖಾಂತರ ತೀರ್ಪಿನ ಪ್ರತಿಯನ್ನು ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರಿಗೆ ಸಲ್ಲಿಸಿ ಎಫ್‌ಐಆರ್ ದಾಖಲಿಸಲು ನಿರ್ದೇಶಿಸುವಂತೆ ಕೋರಿದರು.

ಲಕ್ಷ್ಮಿ ಅಯ್ಯಂಗಾರ್ ವಾದವನ್ನು ಆಲಿಸಿದ ನ್ಯಾಯಾಧೀಶರು ಸುಪ್ರೀಂ ಕೋರ್ಟ್‌ನ ಕೆಲ ತೀರ್ಪುಗಳು ಮತ್ತು ಹೈಕೋರ್ಟ್ ಏಕಸದಸ್ಯ ನ್ಯಾಯಪೀಠದ ತೀರ್ಪಿನ ಅನುಸಾರ ಖಾಸಗಿ ದೂರಿಗೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಸೇರಿ ಇತರರ ವಿರುದ್ಧ; ಭಾರತೀಯ ದಂಡ ಸಂಹಿತೆ–1860ರ ಕಲಂ 120ಬಿ, 166, 403, 406, 420, 426, 465, 468, 340, 351, ಭ್ರಷ್ಟಾಚಾರ ನಿಗ್ರಹ ಕಾಯ್ದೆ–1988ರ ಕಲಂ 9, 13 ಮತ್ತು ಆಸ್ತಿ ಬೇನಾಮಿ ವಹಿವಾಟು ಕಾಯ್ದೆ–1988ರ ಕಲಂ 3, 53, 54, ಕರ್ನಾಟಕ ಭೂ ಕಬಳಿಕೆ ನಿಷೇಧ ಕಾಯ್ದೆ-2011ರ ಕಲಂ 3 ಮತ್ತು 4ರ ಅಡಿಯಲ್ಲಿ ಎಫ್‌ಐಆರ್ ದಾಖಲಿಸಿ ಕ್ರಿಮಿನಲ್ ಪ್ರಕರಣದ ತನಿಖೆ ನಡೆಸುವಂತೆ ಆದೇಶಿಸಿದರು.

ಎ–ಬಿ–ಸಿ ರಿಪೋರ್ಟ್ ಎಂದರೇನು?

ಕರ್ನಾಟಕ ಪೊಲೀಸ್ ಕೈಪಿಡಿ ಅನುಸಾರ ಎ, ಬಿ, ಸಿ ರಿಪೋರ್ಟ್‌ಗಳ ವರ್ಗೀಕರಣ ಮಾಡಲಾಗುತ್ತದೆ. ಉಳಿದೆಲ್ಲ ಪ್ರಕ್ರಿಯೆಗಳು ಸಿಆರ್‌ಪಿಸಿ ಅನುಸಾರ ನಡೆಯುತ್ತವೆ. ಯಾವುದೇ ಪ್ರಕರಣದಲ್ಲಿ ತನಿಖೆ ಮುಗಿದ ನಂತರ ಪೊಲೀಸರು ನ್ಯಾಯಾಲಯಕ್ಕೆ ಮೂರು ವಿಧಗಳಲ್ಲಿ ಅಂತಿಮ ವರದಿಯನ್ನು ಸಲ್ಲಿಸಬಹುದು.

ಎ ರಿಪೋರ್ಟ್: ಆರೋಪಿಯನ್ನು ವಿಚಾರಣೆಗೆ ಗುರಿಪಡಿಸಲು ಸಾಧ್ಯವಿರುವಷ್ಟು ಸಾಕ್ಷ್ಯಾಧಾರ ಗಳು ಕಂಡು ಬಂದಿವೆ ಎಂಬುದು 'ಎ' ರಿಪೋರ್ಟ್.

ಬಿ ರಿಪೋರ್ಟ್: ತನಿಖೆ ಕಾಲದಲ್ಲಿ ಆರೋಪಿಯನ್ನು ವಿಚಾರಣೆಗೆ ಗುರಿಪಡಿಸಲು ಸಾಕಾಗುವಷ್ಟು ಸಾಕ್ಷ್ಯಾಧಾರಗಳು ಕಂಡುಬಂದಿಲ್ಲ ಎಂಬುದು 'ಬಿ' ರಿಪೋರ್ಟ್.

ಸಿ ರಿಪೋರ್ಟ್: ತನಿಖೆಯನ್ನು ಮಾಡಲು ಸಾಧ್ಯವಿಲ್ಲ ಎಂಬುದು (undetectable-ಪತ್ತೆ ಹಚ್ಚಲಾಗದ) 'ಸಿ' ರಿಪೋರ್ಟ್.

ಭರಚುಕ್ಕಿ: ಕಿರು ಜಲವಿದ್ಯುತ್ ಯೋಜನೆಗೆ ಮರು ಪ್ರಸ್ತಾವ

2ನೇ ಮುಖ ಪುಟದಿಂದ...

ವಿದ್ಯುತ್ ಉತ್ಪಾದನಾ ಘಟಕವು ಗಗನಚುಕ್ಕಿ, ಭರಚುಕ್ಕಿ ಜಲಪಾತಗಳ ಮಧ್ಯೆ ಸ್ಥಾಪನೆಗೊಳ್ಳುವುದರಿಂದ ಭೂಗತ ನೀರಿನ ಪೈಪ್‌ಲೈನ್ ಮತ್ತು ಭೂಮಿಯ ಮೇಲಿನ ವಿದ್ಯುತ್ ಪೂರೈಕೆ ಲೈನ್‌ಗಳು ಪ್ರವಾಸಿ ಗರ ಪಾರ್ಕಿಂಗ್ ಜಾಗದಲ್ಲಿ ಹಾದು ಹೋಗುತ್ತವೆ. ಇದರಿಂದ ಅವಳಿ ಜಲಪಾತದ ಸಹಜ ಸೌಂದರ್ಯಕ್ಕೆ ಧಕ್ಕೆ ಉಂಟಾಗುತ್ತದೆ.ಈಗಿರುವ ಕಟ್ಟಡಗಳು ಮತ್ತು ಭವಿಷ್ಯದ ಪರಿಸರ ಪ್ರವಾಸೋದ್ಯಮಕ್ಕೂ ಗಂಭೀರ ಪರಿಣಾಮ ಬೀರುತ್ತದೆ ಎಂದು ಹೇಳಿತ್ತು.

ಇದೇ ಜಾಗದಲ್ಲಿ 24.74 ಮೆ.ವಾ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆ ಸ್ಥಾಪನೆಗೆ ಬಸವೇಶ್ವರ ಮಿನಿ ಹೈಡಲ್ ಯೋಜನೆ 2012 ರಲ್ಲಿ ಪ್ರಸ್ತಾವ ಸಲ್ಲಿಸಿತ್ತು. ವನ್ಯಜೀವಿ ಮಂಡಳಿ ಪ್ರಸ್ತಾವವನ್ನು ತಿರಸ್ಕರಿಸಿತ್ತು. ಈ ಜಾಗವು ಸತ್ತೇಗಾಲ ಗ್ರಾಮದ ವ್ಯಾಪ್ತಿಯಲ್ಲಿದ್ದು, ಈ ಜಾಗದ ಬಗ್ಗೆ ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆ ಮಧ್ಯೆ ತಕರಾರು ಇದೆ. ಈ ವಿಚಾರ ಹೈಕೋರ್ಟ್‌ನಲ್ಲಿ ಇದ್ದು, ಇನ್ನೂ ಇತ್ಯರ್ಥವಾಗಿಲ್ಲ. ಆದ್ದರಿಂದ, ಭೂಮಿಯನ್ನು ಕೊಡಬಾರದು ಎಂದು ವರದಿಯಲ್ಲಿ ಹೇಳಿತ್ತು.

ಸತ್ತೇಗಾಲ ಅರಣ್ಯ ಪ್ರದೇಶದಲ್ಲಿ ಆನೆಗಳು, ಚಿರತೆ, ನೀರು ನಾಯಿ, ಮಹಶೀರ್ ಮೀನು, ಮೊಸಳೆ ಮುಂತಾದ ಅಪರೂಪದ ಪ್ರಾಣಿಗಳು ವಾಸವಿರುವುದರಿಂದ ಯೋಜನೆಗೆ ಅನುಮತಿ ನೀಡಬಾರದು ಎಂದು ಶಿಫಾರಸು ಮಾಡಿತ್ತು.

'ನ್ಯಾಯಾಲಯದ ತೀರ್ಪಿಗೆ ವಿರುದ್ಧ'

'ಮಾನವ- ಆನೆ ಸಂಘರ್ಷ ಕಡಿಮೆ ಮಾಡಲು ಎಲ್ಲ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿಯವರೇ ಅಂತಾರಾಷ್ಟ್ರೀಯ ಮಾನವ- ಆನೆ ಸಂಘರ್ಷ ಸಮ್ಮೇಳನದಲ್ಲಿ ಹೇಳಿದ್ದರು. ಆದ್ದರಿಂದ, ಯೋಜನೆಯನ್ನು ತಿರಸ್ಕರಿಸುವ ಮೂಲಕ ಸರ್ಕಾರ ತನ್ನ ಬದ್ಧತೆ ತೋರಿಸಬೇಕು. ಯೋಜನೆಗೆ ಅನುಮತಿ ನೀಡಿದ್ದೆ ಆದಲ್ಲಿ, ಆನೆ ಸಂಘರ್ಷ ಕುರಿತು ಆನೆ ಕಾರ್ಯಪಡೆಯ ಶಿಫಾರಸ್ಸಿನ ಮೇರೆಗೆ ಹೈಕೋರ್ಟ್ ನೀಡಿರುವ ತೀರ್ಪಿಗೆ ವಿರುದ್ಧವಾಗಲಿದೆ' ಎಂದು ವನ್ಯಜೀವಿ ಸಂರಕ್ಷಣಾ ಕಾರ್ಯಕರ್ತ ಗಿರಿಧರ ಕುಲಕರ್ಣಿ ಪ್ರತಿಪಾದಿಸಿದ್ದಾರೆ.

ಹೊಸ ಪ್ರಸ್ತಾವದಲ್ಲಿ ಏನಿದೆ?

ಈ ಬಾರಿ 3.6 ಹೆಕ್ಟೇರ್ ಪ್ರದೇಶದಲ್ಲಿ ಯೋಜನೆ ಅನುಷ್ಠಾನಕ್ಕೆ ಮಧ್ಯರಂಗ ಪ್ರಸ್ತಾವ ಸಲ್ಲಿಸಿದೆ. ಇದರಲ್ಲಿ ಅರಣ್ಯ ಭೂಮಿ 1.45 ಹೆಕ್ಟೇರ್, ಅರಣ್ಯೇತರ ಭೂಮಿ 2.15 ಹೆಕ್ಟೇರ್. ಈ ಯೋಜನೆಯನ್ನು ₹38 ಕೋಟಿ ವೆಚ್ಚದಲ್ಲಿ ಸ್ಥಾಪಿಸಲಾಗುತ್ತಿದೆ.1.45 ಹೆಕ್ಟೇರ್ ಅರಣ್ಯ ಭೂಮಿಯನ್ನು ಈ ಯೋಜನೆಗೆ ನೀಡಬೇಕು ಎಂದು ಅರ್ಜಿ ಸಲ್ಲಿಸಿದೆ.

ಭೂಸಕ್ರಮೀಕರಣ ಸಮಿತಿ ಮುಂದೆ ಮಂಡನೆ ಮಾಡದೆಯೇ ಭೂಮಿ ಮಂಜೂರು

ಸಾಗುವಳಿ ಚೀಟಿ ಬೇಕಾಬಿಟ್ಟಿ ಹಂಚಿಕೆ

● ವಿಜಯಕುಮಾರ್ ಎಸ್.ಕೆ.

ಚಿಕ್ಕಮಗಳೂರು: ಕಡೂರು–ಮೂಡಿಗೆರೆ ಅಕ್ರಮ ಭೂಮಂಜೂರಾತಿ ಪ್ರಕರಣದಲ್ಲಿ ಭೂಸಕ್ರಮೀಕರಣ ಸಮಿತಿ ಮುಂದೆ ಕಡತಗಳನ್ನು ಮಂಡಿಸದೆ ಕಚೇರಿ ಸಿಬ್ಬಂದಿಯೇ ಸಾಗುವಳಿ ಚೀಟಿ ಮುದ್ರಿಸಿ ಮನಸೋಇಚ್ಛೆ ಹಂಚಿಕೆ ಮಾಡಿರುವುದು ತನಿಖೆಯಿಂದ ಬಹಿರಂಗವಾಗಿದೆ.

ಎರಡೂ ತಾಲ್ಲೂಕಿನಲ್ಲಿ ಅಕ್ರಮ ಭೂಮಂಜೂರಾತಿ ಬಗ್ಗೆ ತನಿಖೆ ನಡೆಸಲು 2023ರ ಆಗಸ್ಟ್‌ನಲ್ಲಿ 13 ತಹಶೀಲ್ದಾರ್‌ಗಳ ತಂಡವನ್ನು ಸರ್ಕಾರ ರಚನೆ ಮಾಡಿತ್ತು. ತನಿಖೆ ನಡೆಸಿರುವ ತಂಡ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ಆಯಾ ವಿಧಾನಸಭಾ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿ ಭೂಸಕ್ರಮೀಕರಣ ಸಮಿತಿಗಳು ಇರುತ್ತವೆ. ತಹಶೀಲ್ದಾರ್ ಸದಸ್ಯ ಕಾರ್ಯದರ್ಶಿಯಾಗಿದ್ದರೆ, ಅಧಿಕಾರಿಗಳ ಹೊರತಾದ ಸದಸ್ಯರೂ ಸಮಿತಿಯಲ್ಲಿ ಇರುತ್ತಾರೆ.



ನಮೂನೆ 50, 53 ಮತ್ತು 57 ಅಡಿಯಲ್ಲಿ ಬಗರ್ ಹುಕುಂ ಸಾಗುವಳಿದಾರರು ಸಲ್ಲಿಸುವ ಅರ್ಜಿಗಳನ್ನು ಈ ಸಮಿತಿ ಮುಂದೆ ಮಂಡಿಸುವುದು ಕಡ್ಡಾಯ. ಅದರೆ, ಈ ಸಮಿತಿಯ ಮುಂದೆ ಮಂಡನೆಯನ್ನೇ ಮಾಡದ 1,159 ಪ್ರಕರಣಗಳನ್ನು ತನಿಖಾ ತಂಡ ಗುರುತಿಸಿದೆ. ಮೂಡಿಗೆರೆ ತಾಲ್ಲೂಕಿನಲ್ಲಿ 1,004 ಪ್ರಕರಣ, ಕಡೂರು ತಾಲ್ಲೂಕಿನಲ್ಲಿ 155 ಪ್ರಕರಣಗಳಿವೆ. ಅಧಿಕಾರಿ ಮತ್ತು ಕಚೇರಿ ಸಿಬ್ಬಂದಿಯೇ ತಮಗೆ ಬೇಕಾದವರಿಗೆ ಸಾಗುವಳಿ ಚೀಟಿ ಮುದ್ರಿಸಿ ಕೊಟ್ಟಿರುವುದನ್ನು ತನಿಖಾ ತಂಡ ಪತ್ತೆ ಮಾಡಿದೆ.

ಇದಲ್ಲದೇ ಶಾಸಕರ ಅಧ್ಯಕ್ಷತೆಯ ಸಮಿತಿಯು ಸಭೆ ನಡೆಸಿ ಸಿದ್ಧಪಡಿಸಿರುವ ನಡಾವಳಿಗಳನ್ನು ತಿದ್ದಿರುವ ಪ್ರಕರಣಗಳನ್ನೂ ತನಿಖಾ ತಂಡ ಪತ್ತೆ ಮಾಡಿದೆ. ಕಡೂರು ತಾಲ್ಲೂಕಿನಲ್ಲಿ ಈ ರೀತಿಯ 156 ಪ್ರಕರಣಗಳಿದ್ದರೆ, ಮೂಡಿಗೆರೆ ತಾಲ್ಲೂಕಿನಲ್ಲಿ ನಡಾವಳಿ ತಿದ್ದಿರುವ ಪ್ರಕರಣ ಇಲ್ಲ.

ಇನ್ನು ಸಮಿತಿಯಲ್ಲಿ ನಿರ್ಧಾರ ಮಾಡಿರುವ ವಿಸ್ತೀರ್ಣಕ್ಕಿಂತ ಹೆಚ್ಚು ಭೂಮಿಯನ್ನು ಮಂಜೂರು ಮಾಡಿರುವ ಪ್ರಕರಣಗಳೂ ಇವೆ. ಕಡೂರು ತಾಲ್ಲೂಕಿನಲ್ಲಿ 46 ಮತ್ತು ಮೂಡಿಗೆರೆ ತಾಲ್ಲೂಕಿನಲ್ಲಿ 5 ಪ್ರಕರಣಗಳಿವೆ. ಭೂಸಕ್ರಮೀಕರಣ ಸಮಿತಿಯಲ್ಲಿ ಅರ್ಜಿಗಳನ್ನು ವಜಾ ಮಾಡಿದ್ದರೂ ಅವುಗಳಿಗೂ ಹಕ್ಕುಪತ್ರ ನೀಡಿರುವ 11 ಪ್ರಕರಣಗಳಿವೆ ಎಂಬುದನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಕಡೂರು ತಾಲ್ಲೂಕಿನ ಅಮೃತ ಮಹಲ್ ಕಾವಲಿನಲ್ಲೂ ಮಂಜೂರಾತಿ ನೀಡಿರುವ 197 ಪ್ರಕರಣಗಳಿವೆ. ಪಶುಸಂಗೋಪನಾ ಇಲಾಖೆಯ ಅಭಿ ಪ್ರಾಯವನ್ನೇ ಪಡೆಯದೆ ಭೂಮಂಜೂ ರಾತಿ ನೀಡಲಾಗಿದೆ ಎಂದೂ ತನಿಖಾ ತಂಡ ಅಭಿಪ್ರಾಯಪಟ್ಟಿದೆ.

ಅರ್ಜಿ ಸಲ್ಲಿಸದಿದ್ದರೂ ಭೂಮಿ ಮಂಜೂರು

ನಿಗದಿತ ದಿನಾಂಕದೊಳಗೆ ಸಾಗುವಳಿ ಮಾಡುತ್ತಿರುವ ರೈತರು ಅರ್ಜಿ ಸಲ್ಲಿಸಿದರೆ ಅವುಗಳನ್ನು ಕ್ಷೇತ್ರದ ಶಾಸಕರ ಅಧ್ಯಕ್ಷತೆಯ ಭೂಸಕ್ರಮೀಕರಣ ಸಮಿತಿ ಮುಂದೆ ಮಂಡಿಸಿ ನಿರ್ಣಯ ಕೈಗೊಂಡು ಬಳಿಕ ಭೂಮಂಜೂರಾತಿ ನೀಡಲಾಗುತ್ತದೆ.

ಆದರೆ, ಮೂಡಿಗೆರೆ ಮತ್ತು ಕಡೂರು ತಾಲ್ಲೂಕಿನಲ್ಲಿ ಅರ್ಜಿ ಸಲ್ಲಿಸದವರಿಗೂ ಹಕ್ಕುಪತ್ರ ವಿತರಿಸಲಾಗಿದೆ. ಕಡೂರು ತಾಲ್ಲೂಕಿನಲ್ಲಿ ಈ ರೀತಿಯ 98 ಪ್ರಕರಣಗಳಿದ್ದರೆ, ಮೂಡಿಗೆರೆ ತಾಲ್ಲೂಕಿನಲ್ಲಿ 135 ಪ್ರಕರಣಗಳಿವೆ.

ಇನ್ನು ಅರ್ಹತಾ ದಿನಂಕದೊಳಗೆ 18 ವರ್ಷ ತುಂಬದವರಿಗೂ ಹಕ್ಕುಪತ್ರ ವಿತರಿಸಲಾಗಿದೆ. ನಮೂನೆ 50 ಮತ್ತು 53ರಲ್ಲಿ ಅರ್ಜಿ ಸಲ್ಲಿಸುವ ಅರ್ಜಿದಾರರಿಗೆ 1987ರ ಏಪ್ರಿಲ್ 1ರೊಳಗೆ(ಎಸ್‌ಸಿಎಸ್‌ಟಿಗೆ 1989) 18 ವರ್ಷ ತುಂಬಿರಬೇಕು. ಅಲ್ಲದೇ ಆ ಅವಧಿಯೊಳಗೆ ಸಾಗುವಳಿ ಮಾಡುತ್ತಿರಬೇಕು.

ನಮೂನೆ 57ರಲ್ಲಿ ಅರ್ಜಿ ಸಲ್ಲಿಸುವ ವ್ಯಕ್ತಿಗೆ 2002ರ ಜನವರಿ 1ರೊಳಗೆ(ಎಸ್‌ಸಿಎಸ್‌ಟಿಗೆ 2004) 18 ವರ್ಷ ತುಂಬಿರಬೇಕು. ಅಷ್ಟರಲ್ಲಿ ಸಾಗುವಳಿ ಮಾಡುತ್ತಿರಬೇಕು. ಆದರೆ, ಅರ್ಹತಾ ದಿನಾಂಕದೊಳಗೆ 18 ವರ್ಷ ತುಂಬದಿದ್ದರೂ, ಸಾಗುವಳಿ ಮಾಡದಿದ್ದರೂ 318 ಜನರಿಗೆ ಭೂಮಿ ಮಂಜೂರು ಮಾಡಲಾಗಿದೆ ಎಂದು ತನಿಖಾ ತಂಡ ವರದಿಯಲ್ಲಿ ಉಲ್ಲೇಖಿಸಿದೆ.

ಸಾಗುವಳಿ ಚೀಟಿ ಮುದ್ರಿಸಿ ಮನಸೋಇಚ್ಛೆ ಹಂಚಿಕೆ ಮಾಡಿರುವ ಬಗ್ಗೆ 2023ರ ಆಗಸ್ಟ್ 10ರಂದು 'ಪ್ರಜಾವಾಣಿ' ವರದಿ ಪ್ರಕಟಿಸಿತ್ತು. ತನಿಖಾ ತಂಡ ಸಲ್ಲಿಕೆ ಮಾಡಿರುವ ವರದಿಯಲ್ಲೂ ಇದೇ ಅಂಶಗಳು ಉಲ್ಲೇಖವಾಗಿವೆ.

ತಮಿಳು ಚಿತ್ರ ನಿರ್ದೇಶಕನ ಬಂಧನ, ಬಿಡುಗಡೆ

ತಿರುಚಿರಾಪಳ್ಳಿ (ಪಿಟಿಐ): ಪಳನಿಯ ಮುರುಗನ್ ದೇಗುಲದ ಪ್ರಸಾದ ಪಂಚಾಮೃತದ ಬಗ್ಗೆ ಹೇಳಿಕೆ ನೀಡಿದ್ದಕ್ಕಾಗಿ, ತಮಿಳು ಚಲನಚಿತ್ರ ನಿರ್ದೇಶಕ ಮೋಹನ್ ಜಿ., ಅವರನ್ನು ಬಂಧಿಸಲಾಗಿದ್ದು, ನ್ಯಾಯಾಲಯವು ಜಾಮೀನಿನ ಮೇಲೆ ಬಿಡುಗಡೆ ಮಾಡಿದೆ.

ರಾಜ್ಯದಲ್ಲಿ 'ಗಾಂಜಾ' ಘಾಟು ಜೋರು

ಒಂದನೇ ಪುಟದಿಂದ...

ಮೈಸೂರು ಜಿಲ್ಲೆಯ ಹುಣಸೂರು, ಪಿರಿಯಾಪಟ್ಟಣ ಹಾಗೂ ಹಾಸನದ ಅರಕಲಗೂಡು ಭಾಗದಲ್ಲಿ ಶುಂಠಿ ಬೆಳೆ ಮಧ್ಯೆ ಗಾಂಜಾ ಬೆಳೆದು ಕೊಡಗು, ಚಿಕ್ಕಮಗಳೂರಿನ ಹೋಂ ಸ್ಟೇಗಳಲ್ಲಿ ನಡೆಯುವ ಪಾರ್ಟಿಗಳಿಗೆ ನೈಸರ್ಗಿಕ ಗಾಂಜಾ ಪೂರೈಕೆ ಮಾಡಲಾಗುತ್ತಿದೆ.

ಆಂಧ್ರಪ್ರದೇಶ, ತೆಲಂಗಾಣದ ಪೆಡ್ಲರ್‌ಗಳು ರಾಜ್ಯಕ್ಕೆ ಬಂದು ಕಡಿಮೆ ಶ್ರಮ, ಸಮಯದಲ್ಲಿ ಹೆಚ್ಚು ದುಡ್ಡು ಗಳಿಸುತ್ತಿದ್ದಾರೆ. ಡ್ರಗ್ಸ್ ತೆಗೆದುಕೊಂಡವರು ಹಲವು ರೋಗಕ್ಕೆ ಒಳಗಾಗುತ್ತಾರೆ. ಅಪರಾಧ ಕೃತ್ಯಗಳಲ್ಲೂ ಭಾಗಿ ಆಗುತ್ತಿದ್ದಾರೆ.

'ಇದುವರೆಗೂ ಪೊಲೀಸ್ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯುತ್ತಿತ್ತು. ಇನ್ನು ಮುಂದೆ ರಾಜ್ಯದಲ್ಲಿ ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ಕಾರ್ಯಪಡೆ ಅಧ್ಯಕ್ಷರು, ಸದಸ್ಯರ ನೇತೃತ್ವದಲ್ಲಿ ಡ್ರಗ್ಸ್ ದಂಧೆಗೆ ಕಡಿವಾಣ ಹಾಕಲಾಗುವುದು. ಕಾರ್ಯಪಡೆ ಮಾರ್ಗದರ್ಶನದಲ್ಲೇ ಪೊಲೀಸರು ಕಾರ್ಯಾಚರಣೆ ನಡೆಸಲಿದ್ದಾರೆ' ಎಂದು ಅಧಿಕಾರಿಯೊಬ್ಬರು ಹೇಳಿದರು.


ಹೆಚ್ಚು ಪ್ರಕರಣಗಳು ದಾಖಲಾದ ಜಿಲ್ಲೆಗಳು (2020ರಿಂದ 2024ರ ಸೆ.17ರ ವರೆಗೆ)

ಬೆಂಗಳೂರು ನಗರ	15,114
ಮಂಗಳೂರು ನಗರ	2,312
ಶಿವಮೊಗ್ಗ	997
ಉಡುಪಿ	944
ಚಿಕ್ಕಮಗಳೂರು	684
ಬೆಂಗಳೂರು ಜಿಲ್ಲೆ	566
ಹುಬ್ಬಳ್ಳಿ–ಧಾರವಾಡ ನಗರ	414
ರಾಮನಗರ	315
ಉತ್ತರಕನ್ನಡ	302
ಹಾಸನ	295
ದಾವಣಗೆರೆ	286

ಸಾಣೇಹಳ್ಳಿಶ್ರೀಗೆ ಶರಣ ವಿಜಯ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ(ಬೀದರ್ ಜಿಲ್ಲೆ): ಅಖಿಲ ಭಾರತ ಲಿಂಗವಂತ ಹರಳಯ್ಯ ಪೀಠ ಹಾಗೂ ಅಂತರ ರಾಷ್ಟ್ರೀಯ ಲಿಂಗಾಯತ ಧರ್ಮ ಕೇಂದ್ರದ ಪ್ರಸಕ್ತ ಸಾಲಿನ ಶರಣ ವಿಜಯ ರಾಷ್ಟ್ರೀಯ ಪ್ರಶಸ್ತಿಗೆ ಚಿತ್ರದುರ್ಗದ ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅವರನ್ನು ಆಯ್ಕೆ ಮಾಡಲಾಗಿದೆ.



ದಸರಾ ಹಬ್ಬದ ಅಂಗವಾಗಿ ಶರಣ ಹರಳಯ್ಯನವರ ಗವಿಯಲ್ಲಿ ಅಕ್ಟೋಬರ್ 11ರಂದು ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಪಂಡಿತಾರಾಧ್ಯ ಶಿವಾಚಾರ್ಯರು ಹಲವು ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬಸವತತ್ವ ಪ್ರಚಾರದಲ್ಲಿ ತೊಡಗಿರುವುದನ್ನು ಗುರುತಿಸಿ ಪ್ರಶಸ್ತಿ ಘೋಷಿಸಲಾಗಿದೆ ಎಂದು ಹರಳಯ್ಯ ಪೀಠಾಧ್ಯಕ್ಷೆ ಅಕ್ಕ ಗಂಗಾಂಬಿಕಾ ತಿಳಿಸಿದ್ದಾರೆ.

ಅತ್ಯಾಚಾರ ಪ್ರಕರಣ: ಮುನಿರತ್ನಗೆ ಎಸ್‌ಐಟಿ ಪ್ರಶ್ನಾವಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಾಚಾರ ಪ್ರಕರಣದ ಆರೋಪಿ, ರಾಜರಾಜೇಶ್ವರಿ ನಗರ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ಅವರನ್ನು ವಿಚಾರಣೆಗಾಗಿ ಸಿಐಡಿಯ ವಿಶೇಷ ತನಿಖಾ ದಳವು (ಎಸ್‌ಐಟಿ) ಕಸ್ಟಡಿಗೆ ಪಡೆದುಕೊಂಡಿದ್ದು ಬುಧವಾರ ತನಿ ಖಾಧಿಕಾರಿಗಳು ಹಲವು ಪ್ರಶ್ನೆಗಳನ್ನು ಕೇಳಿ ಹೇಳಿಕೆ ದಾಖಲಿಸಿಕೊಂಡರು.

ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ಮುನಿರತ್ನ ಅವರನ್ನು ಬಾಡಿ ವಾರಂಟ್ ಮೇಲೆ ಮಂಗಳವಾರ ರಾತ್ರಿಯೇ ವಶಕ್ಕೆ ಪಡೆದುಕೊಂಡ ಎಸ್‌ಐಟಿ ಅಧಿಕಾರಿಗಳು, ಸಿಐಡಿ ಕಚೇರಿಗೆ ಕರೆತಂದಿದ್ದರು. ಕಚೇರಿಯಲ್ಲೇ ವಿಚಾರಣೆ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

'ಮೊದಲ ದಿನದ ವಿಚಾರಣೆಯಲ್ಲಿ ಹಲವು ಪ್ರಶ್ನೆಗಳನ್ನು ಕೇಳಲಾಯಿತು. ದಾಖಲೆಗಳನ್ನೂ ಅವರ ಎದುರು ಇಡಲಾಯಿತು. ಆದರೆ, ಮುನಿರತ್ನ ತನಿಖೆಗೆ ಸಹಕಾರ ನೀಡುತ್ತಿಲ್ಲ. ನನಗೆ ಏನೂ ತಿಳಿದಿಲ್ಲ; ನನ್ನ ವಿರುದ್ಧ ರಾಜಕೀಯ ಷಡ್ಯಂತ್ರ ಮಾಡಲಾಗಿದೆ ಎಂದಷ್ಟೇ ಉತ್ತರಿಸುತ್ತಿದ್ದಾರೆ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

'ಆರೋಪಿ ಮೊಬೈಲ್ ಅನ್ನು ಜಪ್ತಿ ಮಾಡಲಾಗಿದ್ದು, ಪರಿಶೀಲನೆಗಾಗಿ ಸೈಬರ್ ತಜ್ಞರಿಗೆ ರವಾನಿಸಲಾಗಿದೆ. ಅತ್ಯಾಚಾರ ಪ್ರಕರಣದ ಸಂಬಂಧ ಆರೋಪಿಯನ್ನು ನ್ಯಾಯಾಲಯದ ಅನುಮತಿ ಪಡೆದು ಮತ್ತೆ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗುವುದು' ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

'ಮುನಿರತ್ನ ವಿರುದ್ಧ ರಾಮನಗರ ಜಿಲ್ಲೆಯ ಕಗ್ಗಲೀಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಅತ್ಯಾಚಾರ ಪ್ರಕರಣ ಹಾಗೂ ಬೆಂಗಳೂರಿನ ವೈಯಾಲಿಕಾವಲ್ ಠಾಣೆಯಲ್ಲಿ ದಾಖಲಾಗಿದ್ದ ಕೊಲೆ ಬೆದರಿಕೆ ಹಾಗೂ ಜಾತಿ ನಿಂದನೆ ಪ್ರಕರಣಗಳ ಎಫ್‌ಐಆರ್ ಅನ್ನು ಪಡೆಯಲಾಗಿದೆ. ಕಗ್ಗಲೀಪುರ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್‌ನಲ್ಲಿ ಇನ್ನೂ ಆರು ಆರೋಪಿಗಳ ಹೆಸರು ಉಲ್ಲೇಖವಾಗಿದೆ. ಅವರನ್ನು ವಿಚಾರಣೆಗೆ ಕರೆಸಲಾಗುವುದು. ಅಗತ್ಯಬಿದ್ದರೆ ಬಂಧಿಸಲಾಗುವುದು' ಎಂದು ಮೂಲಗಳು ತಿಳಿಸಿವೆ.

ಬಂಜಾರ ಸಾಹಿತ್ಯ ಶಿಬಿರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ವತಿಯಿಂದ 'ರಾಜ್ಯಮಟ್ಟದ ಬಂಜಾರ ಸಾಹಿತ್ಯ, ಕಾವ್ಯ ಹಾಗೂ ನಾಟಕ ರಚನಾ ಶಿಬಿರ'ಕ್ಕೆ ಅರ್ಜಿ ಆಹ್ವಾನಿಸಲಾಗಿದೆ. 'ಬಂಜಾರ ಸಮುದಾಯದ 20ರಿಂದ 40 ವರ್ಷದಲೊಗಿನ ಆಸಕ್ತರು ಅಕ್ಟೋಬರ್ 10ರೊಳಗೆ ಅರ್ಜಿ ಸಲ್ಲಿಸಬಹುದು. ಈ ಶಿಬಿರಕ್ಕೆ 50 ಜನ ಶಿಬಿರಾರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತಿದೆ. ಅಕ್ಟೋಬರ್‌ನಲ್ಲಿ ರಾಮನಗರ ಜಿಲ್ಲೆಯಲ್ಲಿ ಈ ಶಿಬಿರ ನಡೆಯಲಿದೆ' ಎಂದು ಅಕಾಡೆಮಿ ಅಧ್ಯಕ್ಷ ಎ.ಆರ್. ಗೋವಿಂದಸ್ವಾಮಿ ತಿಳಿಸಿದ್ದಾರೆ.

ವಿಳಾಸ: ಅಧ್ಯಕ್ಷರು ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ, ಜೆ.ಸಿ. ರಸ್ತೆ ಬೆಂಗಳೂರು. ಮಾಹಿತಿಗೆ: 080–29917745ಗೆ ಸಂಪರ್ಕಿಸಿ.



ಬಾಗಲಕೋಟೆ ಜಿಲ್ಲೆ ಮಹಾಲಿಂಗಪುರದ ರೈತ ಯಲ್ಲನಗೌಡ ಪಾಟೀಲ ಹಾಗೂ ಅವರ ಸಹೋದರರು ₹36 ಲಕ್ಷಕ್ಕೆ ಖರೀದಿಸಿದ ಜೋಡೆತ್ತು

ದಾಖಲೆಯ ₹36 ಲಕ್ಷಕ್ಕೆ ಜೋಡೆತ್ತು ಖರೀದಿ

ಪ್ರಜಾವಾಣಿ ವಾರ್ತೆ

ಮಹಾಲಿಂಗಪುರ (ಬಾಗಲಕೋಟೆ ಜಿಲ್ಲೆ): ಇಲ್ಲಿನ ಪುರಸಭೆ ಅಧ್ಯಕ್ಷ, ರೈತ ಯಲ್ಲನಗೌಡ ಪಾಟೀಲ ಹಾಗೂ ಅವರ ಸಹೋದರರು ಸಮೀಪದ ಅಕ್ಕಿಮರಡಿ ಗ್ರಾಮದ ಕುಮಾರ ಬೋರಡ್ಡಿ ಅವರ ಜೋಡೆತ್ತನ್ನು ದಾಖಲೆಯ ₹36 ಲಕ್ಷಕ್ಕೆ ಖರೀದಿಸಿದ್ದಾರೆ.

ಈ ಜೋಡೆತ್ತು ಕರ್ನಾಟಕ, ಮಹಾರಾಷ್ಟ್ರ ಸೇರಿದಂತೆ ಹಲವು ರಾಜ್ಯಗಳಲ್ಲಿ ನಡೆದ 'ತೆರಬಂಡಿ' ಸ್ಪರ್ಧೆಯಲ್ಲಿ ಪ್ರಥಮ, ದ್ವಿತೀಯ ಸ್ಥಾನ ಪಡೆದಿವೆ. ಅಲ್ಲದೆ, ಹಲವಾರು ಬಹುಮಾನಗಳನ್ನು ಗಳಿಸಿವೆ. ನಾಲ್ಕೈದು ವರ್ಷಗಳ ಹಿಂದೆ ಒಂದು ಎತ್ತಿಗೆ ₹16 ಲಕ್ಷ ಹಾಗೂ ಇನ್ನೊಂದು ಎತ್ತಿಗೆ ₹12 ಲಕ್ಷ ಕೊಟ್ಟು ಕುಮಾರ ಬೋರಡ್ಡಿ ಖರೀದಿಸಿದ್ದರು.

ಜಾನುವಾರು ಪ್ರಿಯರಾದ ರೈತ ಯಲ್ಲನಗೌಡ ಪಾಟೀಲ ಅವರು, ಮಹಾಲಿಂಗಪುರ ಬಸವೇಶ್ವರ ಜಾತ್ರಾ ಸಮಿತಿ ಅಧ್ಯಕ್ಷರಾಗಿದ್ದು ಗ್ರಾಮೀಣ ಕ್ರೀಡೆಗಳಾದ ತೆರಬಂಡಿ, ಕಲ್ಲು ಎಳೆಯುವುದು, ಗಳೆ ಹೊಡೆಯುವ ರಾಜ್ಯಮಟ್ಟದ ಸ್ಪರ್ಧೆಗಳನ್ನು ಸಂಘಟಿಸುತ್ತಾರೆ. ಲಕ್ಷಾಂತರ ರೂಪಾಯಿ ಮೌಲ್ಯದ ಎತ್ತುಗಳನ್ನು ಸಾಕಿ ಸ್ಪರ್ಧೆಯಲ್ಲಿ ಭಾಗವಹಿಸುವುದು ಇವರ ಪ್ರಮುಖ ಹವ್ಯಾಸ. 'ಮಹಾಲಿಂಗಪುರ ರಾಜಾ' ಎಂದೇ ಖ್ಯಾತಿ ಪಡೆದ ₹8.1 ಲಕ್ಷ ಕೊಟ್ಟು ಖರೀದಿಸಿದ್ದ ಅವರ ಎತ್ತೊಂದು ಕಳೆದ ವರ್ಷ ತೀರಿಹೋಗಿತ್ತು.

ಕರಜಗಿಗೆ 'ವಿ.ಕೃ.ಗೋಕಾಕ್ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿನಾಯಕ ಗೋಕಾಕ್ ವಾಙ್ಮಯ ಟ್ರಸ್ಟ್ ಹಾಗೂ ಭಾರತೀಯ ವಿದ್ಯಾಭವನ ನೀಡುವ 2024ನೇ ಸಾಲಿನ 'ವಿ.ಕೃ.ಗೋಕಾಕ್ ಪ್ರಶಸ್ತಿ'ಗೆ ಶಿಕ್ಷಣ ತಜ್ಞ ಗುರುರಾಜ ಕರಜಗಿ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು ₹25 ಸಾವಿರ ನಗದು ಮತ್ತು ಫಲಕವನ್ನು ಒಳಗೊಂಡಿದೆ.

ಟ್ರಸ್ಟ್ ಅಧ್ಯಕ್ಷ ನರಹಳ್ಳಿ ಬಾಲಸುಬ್ರಹ್ಮಣ್ಯ, ಕಾರ್ಯದರ್ಶಿ ಅನಿಲ್ ಗೋಕಾಕ್, ಭಾರತೀಯ ವಿದ್ಯಾಭವನದ ನಿರ್ದೇಶಕ ಎಚ್.ಎನ್.ಸುರೇಶ್ ಹಾಗೂ ಅಭಿನವ ರವಿಕುಮಾರ್ ಅವರನ್ನೊಳಗೊಂಡ ಸಮಿತಿ ಈ ಆಯ್ಕೆ ಮಾಡಿದೆ.



ಗುರುರಾಜ ಕರಜಗಿ

ಇದೇ 29ರಂದು ಬೆಳಿಗ್ಗೆ 11 ಗಂಟೆಗೆ ನಗರದ ರೇಸ್ ಕೋರ್ಸ್ ರಸ್ತೆಯಲ್ಲಿರುವ ಭಾರತೀಯ ವಿದ್ಯಾಭವನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಶಿರೂರು: ಚಾಲಕನ ಶವ ಪತ್ತೆ

ಪ್ರಜಾವಾಣಿ ವಾರ್ತೆ

ಕಾರವಾರ: ಶಿರೂರು ಗುಡ್ಡ ಕುಸಿತ ದುರಂತದಲ್ಲಿ ಕಣ್ಮರೆಯಾಗಿದ್ದ ಕೇರಳ ಕೋಯಿಕ್ಕೊಡ್‌ನ ಲಾರಿ ಚಾಲಕ ಅರ್ಜುನ್ ಮೃತದೇಹ ಬುಧವಾರ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದೆ.



ಅರ್ಜುನ್

ಗಂಗಾವಳಿ ನದಿಯ ಆಳದಲ್ಲಿ ಮಣ್ಣು, ಕಲ್ಲಿನ ಅಡಿ ನುಜ್ಜುಗುಜ್ಜಾದ ಸ್ಥಿತಿಯಲ್ಲಿದ್ದ 'ಭಾರತ್ ಬೆಂಜ್' ಕಂಪನಿಯ ಲಾರಿಯೊಳಗೆ ಅವರ ಶವ ಸಿಕ್ಕಿದೆ.

'ಮೃತದೇಹ ಅರ್ಜುನ್ ಅವರದ್ದು ಎಂಬುದು ಬಹುತೇಕ ಖಚಿತವಾಗಿದೆ. ಡಿಎನ್‌ಎ ಪರೀಕ್ಷೆಗೆ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳಿಸಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ನಾರಾಯಣ ತಿಳಿಸಿದ್ದಾರೆ.

ಜುಲೈ 16 ರಂದು ಗುಡ್ಡ ಕುಸಿತದ ವೇಳೆ ಮರದ ದಿಮ್ಮಿ ಸಾಗಿಸುತ್ತಿದ್ದ ಲಾರಿ ಸಹಿತ ಅರ್ಜುನ್ ಕಣ್ಮರೆಯಾಗಿದ್ದರು. ಅವರ ಪತ್ತೆಗೆ ಕೇರಳ ಸರ್ಕಾರ ವ್ಯಾಪಕ ಒತ್ತಡ ಹೇರಿತ್ತು. 71 ದಿನಗಳ ಬಳಿಕ ಮೃತದೇಹ ದೊರೆತಿದೆ.

ನಿಧನ ವಾರ್ತೆ

ಶುಭಲತಾ ಅಸ್ನೋಟಿಕರ್

ಕಾರವಾರ: ವಿಧಾನ ಪರಿಷತ್ ಮಾಜಿ ಸದಸ್ಯೆ ಶುಭಲತಾ ಅಸ್ನೋಟಿಕರ್ (68) ವಯೋಸಹಜ ಅನಾರೋಗ್ಯದಿಂದ ಬುಧವಾರ ಇಲ್ಲಿನ ಸ್ವಗೃಹದಲ್ಲಿ ನಿಧನರಾದರು.



ಅವರಿಗೆ ಪುತ್ರ, ಮಾಜಿ ಸಚಿವ ಆನಂದ್ ಅಸ್ನೋಟಿಕರ್ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ.


2002 ರಿಂದ 2008ರ ಅವಧಿಯಲ್ಲಿ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಯಾಗಿ ಉತ್ತರ ಕನ್ನಡ ಕ್ಷೇತ್ರದಿಂದ ಅವರು ವಿಧಾನ ಪರಿಷತ್‌ಗೆ ಆಯ್ಕೆಯಾಗಿದ್ದರು. ಕಾರವಾರ ಡಾಕ್ ಆ್ಯಂಡ್ ಪೋರ್ಟ್ ವರ್ಕರ್ಸ್ ಯೂನಿಯನ್ ಅಧ್ಯಕ್ಷರಾಗಿ ಪ್ರಸ್ತುತ ಅವರು ಕಾರ್ಯನಿರ್ವಹಿಸುತ್ತಿದ್ದರು.

ಅಂತ್ಯಕ್ರಿಯೆ ಗುರುವಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸ್ಪರ್ಧಾ ವಾಣಿ

ಘೇಂಡಾಮೃಗ ಸಂರಕ್ಷಣೆಗೆ 'ಭಾರತ ಮಾದರಿ'

ಸುಕೃತ ಎಸ್.



ಹುಲಿ, ಆನೆ, ಸಿಂಹಗಳಂತೆ ಘೇಂಡಾಮೃಗ ಬಹು ಚರ್ಚಿತ ಪ್ರಾಣಿಯೇನಲ್ಲ. ಆನೆಯ ಬಳಿಕ ಜಗತ್ತಿನಲ್ಲಿರುವ ಅತಿ ದೊಡ್ಡ ಸಸ್ತನಿ ಈ ಘೇಂಡಾಮೃಗ. ಇವುಗಳಲ್ಲಿ ಐದು ವಿಧಗಳಿವೆ. ಅವುಗಳಲ್ಲಿ 'ಒಂಟಿ ಕೊಂಬಿನ ಘೇಂಡಾಮೃಗ' ಅಥವಾ 'ಇಂಡಿಯನ್ ರೈನೊ' ಕೂಡ ಒಂದು. ಬೇಟೆಯ ಕಾರಣಕ್ಕೆ ಅಳಿವಿನ ಅಂಚಿಗೆ ಬಂದಿದ್ದ ಘೇಂಡಾಮೃಗವನ್ನು ಭಾರತ ಉಳಿಸಿಕೊಂಡಿದೆ. ಇದರ ಸಂರಕ್ಷಣೆ ಪ್ರಕ್ರಿಯೆಗೆ ಶತಮಾನದ ಇತಿಹಾಸವಿದೆ. ಜಗತ್ತಿನಲ್ಲಿ ಪ್ರಾಣಿ ಸಂರಕ್ಷಣೆಯ 'ಭಾರತ ಮಾದರಿ' ರೂಪುಗೊಂಡಿದೆ.

ಸೆಪ್ಟೆಂಬರ್ 22 ವಿಶ್ವ ಘೇಂಡಾಮೃಗ ದಿನ. ಇದರ ಭಾಗವಾಗಿ ಕೇಂದ್ರ ಸರ್ಕಾರವು ಇತ್ತೀಚೆಗೆ ಪುಟ್ಟ ವರದಿಯೊಂದನ್ನು ಬಿಡುಗಡೆಗೊಳಿಸಿದೆ. ಒಂಟಿ ಕೊಂಬಿನ ಘೇಂಡಾಮೃಗ ಸಂರಕ್ಷಣೆಯಲ್ಲಿ ಭಾರತವು ಕೈಗೊಂಡ ಕ್ರಮಗಳ ಕುರಿತು ಅದರಲ್ಲಿ ಮಾಹಿತಿಗಳಿವೆ. 1960ರ ಹೊತ್ತಿಗೆ 600ರಷ್ಟಿದ್ದ ಒಂಟಿ ಕೊಂಬಿನ ಘೇಂಡಾಮೃಗಗಳ ಸಂಖ್ಯೆಯು 2024ರ ಹೊತ್ತಿಗೆ 4,000 ದಾಟಿದೆ.

ಅಸ್ಸಾಂನ ಕಾಜಿರಂಗ ರಾಷ್ಟ್ರೀಯ ಉದ್ಯಾನ ಪ್ರದೇಶವು ಒಂಟಿ ಕೊಂಬಿನ ಘೇಂಡಾಮೃಗಗಳ ಆವಾಸಸ್ಥಾನ. ಅಸ್ಸಾಂ ಮಾತ್ರವಲ್ಲದೆ, ಪಶ್ಚಿಮ ಬಂಗಾಳ, ಉತ್ತರ ಪ್ರದೇಶ ರಾಜ್ಯಗಳಲ್ಲಿಯೂ ಈ ಘೇಂಡಾಮೃಗದ ಆವಾಸವಿದೆ. ಭಾರತ ಮಾತ್ರವಲ್ಲದೆ ನೇಪಾಳ ಹಾಗೂ ಭೂತಾನ್‌ನಲ್ಲಿಯೂ ಒಂಟಿ ಕೊಂಬಿನ ಘೇಂಡಾಮೃಗಗಳು ಕಾಣಸಿಗುತ್ತವೆ. ಈ ದೇಶಗಳಲ್ಲಿ ಬಿಟ್ಟು ಬೇರೆಯಲ್ಲೂ ಈ ಪ್ರಬೇಧದ ಘೇಂಡಾಮೃಗಗಳಿಲ್ಲ.

ಏನಿದು 'ಭಾರತ ಮಾದರಿ'?

ಈ ಮಾದರಿಯು ರೂಪುಗೊಂಡಿರುವುದರ ಹಿಂದೆ ಹಲವಾರು ದಶಕಗಳ ಶ್ರಮವಿದೆ. ಬ್ರಿಟಿಷರ ಕಾಲದಲ್ಲಿ ಇವುಗಳನ್ನು ಕ್ರೀಡೆಗಾಗಿ ಬೇಟೆಯಾಡಲಾಗುತ್ತಿತ್ತು. ಇದೇ ಕಾರಣಕ್ಕಾಗಿ ಒಂಟಿ ಕೊಂಬಿನ ಘೇಂಡಾಮೃಗಗಳು ಹೇರಳವಾಗಿದ್ದ ಕಾಜಿರಂಗ ಅರಣ್ಯ ಪ್ರದೇಶವನ್ನು ಲೇಡಿ ಕರ್ಜನ್ ಸಂರಕ್ಷಿತ ಪ್ರದೇಶವನ್ನಾಗಿ ಘೋಷಿಸಿದರು. ಅಲ್ಲಿಂದೀಚೆಗೆ ಬ್ರಿಟಿಷರು, ಸ್ವಾತಂತ್ರ್ಯಾನಂತರ ಭಾರತ ಸರ್ಕಾರ, ಅಸ್ಸಾಂ ಸರ್ಕಾರ ಹಾಗೂ ಸ್ಥಳೀಯರ ಶ್ರಮದಿಂದಾಗಿ ಈ ಪ್ರಬೇಧದ ಘೇಂಡಾಮೃಗವು ಉಳಿದುಕೊಂಡಿದೆ.

1897ರ ಅಸ್ಸಾಂ ಅರಣ್ಯ ಸಂರಕ್ಷಣೆ ಕಾಯ್ದೆ, 1932ರ ಬಂಗಾಳ ಘೇಂಡಾಮೃಗ ಸಂರಕ್ಷಣೆ ಕಾಯ್ದೆ, 1954ರ ಅಸ್ಸಾಂ ಘೇಂಡಾಮೃಗ ಸಂರಕ್ಷಣೆ ಕಾಯ್ದೆ, 1972ರ ವನ್ಯಜೀವಿ (ಸಂರಕ್ಷಣೆ) ಕಾಯ್ದೆ ಹಾಗೂ ಈ ಕಾಯ್ದೆಗೆ 2009ರಲ್ಲಿ ಅಸ್ಸಾಂ ಸರ್ಕಾರ ಮಾಡಿದ ತಿದ್ದುಪಡಿ... ಇಂಥ ಹಲವು ಕಠಿಣ ಕಾನೂನುಗಳ ಕಾರಣದಿಂದಾಗಿ ಭಾರತದಲ್ಲಿ ಒಂಟಿ ಕೊಂಬಿನ ಘೇಂಡಾಮೃಗಗಳ ಸಂಖ್ಯೆ ಏರಿಕೆಯಾಗುತ್ತಿದೆ ಮತ್ತು ಇವುಗಳ ಬೇಟೆ ನಿಂತುಹೋಗಿದೆ.


ಸಂರಕ್ಷಣೆ ಪ್ರಕ್ರಿಯೆಯಲ್ಲಿ ಸರ್ಕಾರದೊಂದಿಗೆ ಸಾರ್ವಜನಿಕರು ಕೈಜೋಡಿಸಿರುವುದೇ ಈ ಮಾದರಿಯ ಯಶಸ್ಸಿನ ಪ್ರಮುಖ ಕಾರಣ. ಇದರಿಂದಾಗಿ ಮಾನವ–ವನ್ಯಜೀವಿ ಸಂಘರ್ಷವು ಕಾಜಿರಂಗ ಉದ್ಯಾನ ಪ್ರದೇಶದಲ್ಲಿ ತಗ್ಗಿದೆ.

ಯಶಸ್ಸಿನ ಇತರೆ ಪ್ರಮುಖ ಕಾರಣಗಳು

- ಆವಾಸಸ್ಥಾನಗಳ ವ್ಯಾಪ್ತಿಯನ್ನು ಹೆಚ್ಚಿಸಿರುವುದು
- ನೂತನ ಸಂರಕ್ಷಿತ ಪ್ರದೇಶಗಳನ್ನು ಘೋಷಿಸಿರುವುದು
- ಬೇಟೆಗೆ ಸಂಪೂರ್ಣ ನಿಷೇಧ
- ಬೇಟೆಯಾಡಿದರೆ ಹೆಚ್ಚಿನ ಪ್ರಮಾಣ ದಂಡ ವಸೂಲಿ, ಜೀವಾವಧಿ ಶಿಕ್ಷೆ ಸೇರಿದಂತೆ ಕಠಿಣ ಸಜೆ

ವಿಶ್ವದ ಒಟ್ಟು ಒಂಟಿ ಕೊಂಬಿನ ಘೇಂಡಾಮೃಗಗಳಲ್ಲಿ ಶೇ 70ರಷ್ಟು ಭಾರತದಲ್ಲಿವೆ

ಭಾರತದಲ್ಲಿರುವ ಒಟ್ಟು ಒಂಟಿ ಕೊಂಬಿನ ಘೇಂಡಾಮೃಗಳ ಸಂಖ್ಯೆಯಲ್ಲಿ ಶೇ 80ರಷ್ಟು ಅಸ್ಸಾಂನ ಕಾಜಿರಂಗ ರಾಷ್ಟ್ರೀಯ ಉದ್ಯಾನದಲ್ಲಿವೆ




ಕೊಂಬು: ಜೀವಕ್ಕೆ ಆಪತ್ತು

ಚೀನಾ ಹಾಗೂ ವಿಯೆಟ್ನಾಂಗಳಲ್ಲಿ ಘೇಂಡಾಮೃಗಗಳ ಕೊಂಬಿಗೆ ಔಷಧೀಯ ಗುಣಗಳಿವೆ ಎಂಬ ನಂಬಿಕೆ ಜನರಲ್ಲಿದೆ. ಇದೇ ಕಾರಣಕ್ಕೆ ವಿಶ್ವದಾದ್ಯಂತ ಘೇಂಡಾಮೃಗಗಳನ್ನು ಹತ್ಯೆ ಮಾಡಲಾಗುತ್ತಿದೆ. ಜಗತ್ತಿನಾದ್ಯಂತ ನಡೆಯುವ ವನ್ಯಜೀವಿಗಳ ಕಳ್ಳಸಾಗಣೆಯಲ್ಲಿ ಘೇಂಡಾಮೃಗಗಳ ಕೊಂಬು, ಅಂಗಗಳಿಂದ ತಯಾರಾದ ಉತ್ಪನ್ನಗಳ ಕಳ್ಳಸಾಗಣೆಯು ಶೇ 29ರಷ್ಟಿದೆ ಎಂದು ವಿಶ್ವಸಂಸ್ಥೆ ಹೇಳುತ್ತದೆ. ಜಗತ್ತಿನಾದ್ಯಂತ ಘೇಂಡಾಮೃಗಗಳ ಸಂಖ್ಯೆಯು ತುಸು ಏರಿಕೆ ಕಾಣುತ್ತಿದ್ದರೂ ಅದರ ಕೊಂಬಿಗಾಗಿ ಹೆಚ್ಚಿನ ಪ್ರಮಾಣದಲ್ಲಿ ಬೇಟೆಯಾಡಲಾಗುತ್ತಿದೆ.

ಹವಾಮಾನ ಬದಲಾವಣೆ, ಆವಾಸಸ್ಥಾನಗಳು ಕಾಣೆಯಾಗುತ್ತಿರುವುದು ಘೇಂಡಾಮೃಗಗಳ ಸಂಖ್ಯೆ ಇಳಿಕೆಯಾಗಲು ಇರುವ ಇತರ ಪ್ರಮುಖ ಕಾರಣಗಳು.

5 ಲಕ್ಷ 20ನೇ ಶತಮಾನದ ಆರಂಭದಲ್ಲಿ ಜಗತ್ತಿನಾದ್ಯಂತ ಇದ್ದ ಘೇಂಡಾಮೃಗಗಳ ಸಂಖ್ಯೆ

28,000 ಜಗತ್ತಿನಲ್ಲಿರುವ ಘೇಂಡಾಮೃಗಗಳ ಪ್ರಸ್ತುತ ಸಂಖ್ಯೆ



'ಕೃಷ್ಣನ ವಾಹನ'

ಘೇಂಡಾಮೃಗ ಅಸ್ಸಾಂ ರಾಜ್ಯದ ಹೆಮ್ಮೆ. ಅಲ್ಲಿನ ಜನರು ಈ ಪ್ರಾಣಿಯನ್ನು ದೇವರು ಅಂತಲೂ ಪೂಜಿಸುತ್ತಾರೆ. ಪ್ರತಿ ವರ್ಷ ಅಲ್ಲಿ ಜಾತ್ರೆಯೂ ನಡೆಯುತ್ತದೆ. ರಾಜ್ಯದ ಮೂಲೆ ಮೂಲೆಯಿಂದಲೂ ಜನರು ಈ ಜಾತ್ರೆಯಲ್ಲಿ ಭಾಗವಹಿಸುತ್ತಾರೆ. ಅಲ್ಲಿನ ಸಂಸ್ಕೃತಿಯಲ್ಲಿ ಘೇಂಡಾಮೃಗ ಹಾಸುಹೊಕ್ಕಾಗಿದೆ. ಈ ಪ್ರಾಣಿಯ ಬಗೆಗಿನ ಅಲ್ಲಿನ ಜನಪದ ಕಥೆಯೊಂದು ಕುತೂಹಲಕಾರಿಯಾಗಿದೆ. ಕಥೆ ಹೀಗಿದೆ: ಸೋನಿಪುರದ ರಾಜಕುಮಾರಿಗೆ ಸುಂದರ ರಾಜಕುಮಾರನ ಕನಸು ಬಿದ್ದು, ಆತನ ಮೇಲೆ ಪ್ರೇಮಾಂಕುರವಾಯಿತು. ಗೆಳತಿ ಚಿತ್ರಲೇಖಾ, ರಾಜಕುಮಾರಿ ವಿವರಿಸಿದ ಕನಸನ್ನೇ ಧ್ಯಾನಿಸಿ ರಾಜಕುಮಾರನ ಚಿತ್ರ ಬಿಡಿಸಿದಳು. ಆ ಚಿತ್ರವು ಕೃಷ್ಣನ ಮೊಮ್ಮಗ ಅನಿರುದ್ಧನದು. ಅನಿರುದ್ಧನು ರಾಜಕುಮಾರಿಯನ್ನು ವರಿಸಲು ಸೋನಿಪುರಕ್ಕೆ ಬರುತ್ತಾನೆ. ಆದರೆ ರಾಜನಿಗೆ ಈ ಮದುವೆ ಇಷ್ಟವಿರುವುದಿಲ್ಲ. ಅನಿರುದ್ಧನನ್ನು ಬಂಧಿ ಮಾಡಿಕೊಳ್ಳುತ್ತಾನೆ. ಈಗ ಕೃಷ್ಣನ ಪ್ರವೇಶವಾಗುತ್ತದೆ. ತನ್ನ ಮೊಮ್ಮಗನನ್ನು ಕರೆತರಲು, ಇಬ್ಬರಿಗೂ ಮದುವೆ ಮಾಡಿಸಲು, ಕೃಷ್ಣ ಸೋನಿಪುರಕ್ಕೆ ಘೇಂಡಾಮೃಗವೇರಿ ಹೊರಟನಂತೆ.

ಬ್ರಹ್ಮಪುತ್ರ ನದಿಯನ್ನು ದಾಟಿ ಸೋನಿಪುರ ಸೇರಬೇಕು. ಕೃಷ್ಣ ತನ್ನ ಘೇಂಡಾಮೃಗದ ಸೇನೆಯನ್ನು ನದಿಯ ದಂಡೆಯಲ್ಲಿಯೇ ಬಿಟ್ಟು ತೆರಳಿದ. ಇವುಗಳು ಅಲ್ಲಿನ ಪ್ರಕೃತಿಗೆ ಮನಸೂರೆಗೊಂಡು ಹುಲ್ಲು ತಿನ್ನುತ್ತಾ ನಿಂತುಬಿಟ್ಟವಂತೆ. ಕೃಷ್ಣ ತನ್ನ ಕೆಲಸದಲ್ಲಿ ಸಫಲನಾಗಿ ಆ ಬದಿಯ ದಂಡೆಯಿಂದ ಕೊಳಲು ಊದಿ ತನ್ನ ಘೇಂಡಾಮೃಗ ಸೇನೆಯನ್ನು ಕರೆದನಂತೆ. ಆದರೆ, ನದಿಯ ರಭಸದ ಶಬ್ದಕ್ಕೆ ಘೇಂಡಾಮೃಗಗಳಿಗೆ ಕೊಳಲಿನ ಕರೆ ಕೇಳಿಸಲಿಲ್ಲ. ಇದರಿಂದ ಕ್ರುದ್ಧನಾದ ಕೃಷ್ಣ, ನದಿ ದಾಟಿಬಂದು, ನೀವೆಲ್ಲಾ ಇಲ್ಲಿಯೇ ಇದ್ದುಬಿಡಿ ಎಂದು ತನ್ನ ಘೇಂಡಾಮೃಗ ಸೇನೆಯನ್ನು ಬಿಟ್ಟು ತೆರಳಿದನಂತೆ. ಅಲ್ಲಿಂದ ಅವು ಅಸ್ಸಾಂನಲ್ಲಿಯೇ ಇದ್ದುಬಿಟ್ಟವಂತೆ.

ಕೃಷ್ಣ, ತಮ್ಮ ಘೇಂಡಾಮೃಗ ಸೇನೆಯನ್ನು ಯುದ್ಧಕ್ಕೆಂದು ಸಿದ್ಧಪಡಿಸಿಕೊಂಡು ಬಂದಿದ್ದನಂತೆ. ಅವಕ್ಕೆ ಬೆನ್ನಿನ ಮೇಲೆ ಕವಚಗಳನ್ನು ಹಾಕಿದ್ದನಂತೆ, ಮೂಗಿನ ಮೇಲೆ ಕೊಂಬು ಕೂರಿಸಿದ್ದನಂತೆ. ಕೃಷ್ಣ ಬಿಟ್ಟು ಹೋದ ಮೇಲೆ ಅವುಗಳು ಈ ಕವಚವನ್ನು ಕಳಚಲಿಲ್ಲವಂತೆ. ಅದಕ್ಕಾಗಿಯೇ ಅವುಗಳ ದೇಹದ ಮೇಲೆ ಕಿವಿಯಲ್ಲಿ ಹಾಗೂ ಬಾಲದ ತುದಿಗೆ ಬಿಟ್ಟರೆ ಬೇರೆಡೆ ಕೂದಲೇ ಇಲ್ಲವಂತೆ.

ಆಧಾರ: ಪಿಟಿಐ, ಅಸ್ಸಾಂ ಅರಣ್ಯ ಇಲಾಖೆ, ಪಿಐಬಿ ವರದಿ

ರೈಲ್ವೆಯಲ್ಲಿ 8,113 ತಾಂತ್ರಿಕೇತರ ಹುದ್ದೆಗಳು

ಮಂಜುನಾಥ್ ಭದ್ರಶೆಟ್ಟಿ

ರೈಲ್ವೆ ಸಚಿವಾಲಯದ ಅಡಿ ಕಾರ್ಯನಿರ್ವಹಿಸುವ ರೈಲ್ವೆ ನೇಮಕಾತಿ ಮಂಡಳಿಗಳು (RRBs) ಇತ್ತೀಚೆಗೆ ಹೆಚ್ಚು ನೇಮಕಾತಿ ಪ್ರಕ್ರಿಯೆಗಳನ್ನು ಆರಂಭಿಸುತ್ತಿವೆ. ಇದೇ ವರ್ಷ ಪ್ರಾರಂಭಿಸಲಾಗಿರುವ 5,696 ಸಹಾಯಕ ಲೊಕೊ ಪೈಲಟ್, 7,386 ಜೂನಿಯರ್ ಎಂಜಿನಿಯರ್ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಸದ್ಯ ಪ್ರಗತಿಯಲ್ಲಿದೆ.

ಈ ಸಾಲಿಗೆ ಮತ್ತೊಂದು ದೊಡ್ಡ ನೇಮಕಾತಿ ಎಂದರೆ 'ನಾನ್ ಟೆಕ್ನಿಕಲ್ ಗ್ರಾಜ್ಯುಯೇಟ್' ವಿಭಾಗದ 8,113 ಹುದ್ದೆಗಳ ನೇಮಕಾತಿ. ನಾನ್ ಟೆಕ್ನಿಕಲ್ ಗ್ರಾಜ್ಯುಯೇಟ್ ವಿಭಾಗದಲ್ಲಿ ಚೀಫ್ ಕಮರ್ಷಿಯಲ್ ಕಮ್ ಟಿಕೆಟ್ ಸೂಪರವೈಸರ್, ಸ್ಟೇಷನ್ ಮಾಸ್ಟರ್, ಗೂಡ್ಸ್ ಟ್ರೈನ್ ಮ್ಯಾನೇಜರ್, ಜೂನಿಯರ್ ಅಕೌಂಟ್ ಅಸಿಸ್ಟಂಟ್ ಕಮ್ ಟೈಪಿಸ್ಟ್ ಹಾಗೂ ಸೀನಿಯರ್ ಕ್ಲರ್ಕ್ ಕಮ್ ಟೈಪಿಸ್ಟ್ ಎಂಬ ಐದು ಬಗೆಯ ಹುದ್ದೆಗಳಿವೆ. ಆನ್‌ಲೈನ್ ಅರ್ಜಿ ಸಲ್ಲಿಕೆ ಪ್ರಾರಂಭವಾಗಿದ್ದು ಅಕ್ಟೋಬರ್ 14 ಕಡೆಯ ದಿನ. ಅಂಗೀಕೃತ ವಿಶ್ವವಿದ್ಯಾಲಯದಿಂದ ಯಾವುದೇ ಪದವಿ ಪಡೆದವರು ಅರ್ಜಿ ಸಲ್ಲಿಸಬಹುದು. ಜೂನಿಯರ್ ಅಕೌಂಟ್ ಅಸಿಸ್ಟಂಟ್ ಹಾಗೂ ಸೀನಿಯರ್ ಕ್ಲರ್ಕ್ ಹುದ್ದೆಗಳಿಗೆ ಇಂಗ್ಲಿಷ್ ಅಥವಾ ಹಿಂದಿ ಕಂಪ್ಯೂಟರ್ ಟೈಪಿಂಗ್ ಕೌಶಲ ಇರಬೇಕು. ಅರ್ಹ ಪುರುಷ, ಮಹಿಳೆ, ಲಿಂಗತ್ವ ಅಲ್ಪಸಂಖ್ಯಾತರು ಅರ್ಜಿ ಸಲ್ಲಿಸಬಹುದು. ಸಾಮಾನ್ಯ ಹಾಗೂ ಒಬಿಸಿ ಅಭ್ಯರ್ಥಿಗಳಿಗೆ ₹500, ಎಸ್.ಸಿ/ಎಸ್‌ಟಿ, ಮಾಜಿ ಸೈನಿಕ ಅಭ್ಯರ್ಥಿಗಳಿಗೆ ₹250 ಶುಲ್ಕವಿದೆ.

18 ರಿಂದ 36 ವರ್ಷ ವಯೋಮಾನದವರು ಅರ್ಜಿ ಸಲ್ಲಿಸಲು ಅರ್ಹರು. ಎಸ್.ಸಿ, ಎಸ್‌ಟಿ, ಒಬಿಸಿ, ಇತರೆ ಅಭ್ಯರ್ಥಿಗಳಿಗೆ ವಯೋಮಾನದಲ್ಲಿ ಸಡಿಲಿಕೆ ಇದೆ.



ಎರಡು ಹಂತದ ಕಂಪ್ಯೂಟರ್ ಬೇಸ್ಡ್ ಟೆಸ್ಟ್ (ಸಿಬಿಟಿ) ಮತ್ತು ದಾಖಲಾತಿಗಳ ಪರಿಶೀಲನೆ ಮೂಲಕ ಭರ್ತಿ ಮಾಡಲಾಗುತ್ತದೆ. ಸಿಬಿಟಿ–1 ರಲ್ಲಿ 100 ಅಂಕಗಳಿಗೆ ಒಂದು ಪತ್ರಿಕೆ, ಸಿಬಿಟಿ–2 ನಲ್ಲಿ 120 ಅಂಕಗಳಿಗೆ ಒಂದು ಪತ್ರಿಕೆ ಮಾತ್ರ ಇರುತ್ತದೆ. ಸಿಬಿಟಿ–1ರಲ್ಲಿ ಪಾಸಾದವರು ಮಾತ್ರ ಸಿಬಿಟಿ–2ಕ್ಕೆ ಅರ್ಹತೆ ಪಡೆಯುತ್ತಾರೆ.

ದೇಶದಲ್ಲಿರುವ ಒಟ್ಟು 21 ರೈಲ್ವೆ ನೇಮಕಾತಿ ಮಂಡಳಿಗಳು ಒಟ್ಟಾರೆ ಹುದ್ದೆಗಳಲ್ಲಿನ ತಮ್ಮ ವ್ಯಾಪ್ತಿಯ ಹುದ್ದೆಗಳಿಗೆ ಸಂಬಂಧಿಸಿದಂತೆ ನೇಮಕಾತಿ ಪ್ರಕ್ರಿಯೆ ನಡೆಸುತ್ತವೆ. ಅಭ್ಯರ್ಥಿಗಳು ತಮ್ಮ ಇಷ್ಟದ ಮಂಡಳಿಯ ಅಧಿಕೃತ ವೆಬ್‌ಸೈಟ್‌ನಲ್ಲಿ, ಒಬ್ಬ ಅಭ್ಯರ್ಥಿ ಒಂದು ಕಡೆಗೆ ಮಾತ್ರ ಅರ್ಜಿ ಸಲ್ಲಿಸಬಹುದು. ಇದಕ್ಕಾಗಿ ಎಲ್ಲ ಮಂಡಳಿಗಳಿಗೂ ಅನ್ವಯವಾಗುವಂತೆ ಏಕೀಕೃತ ವಿವರಾಣಾತ್ಮಕ ಅಧಿಸೂಚನೆ (CEN) ಹೊರಡಿಸಲಾಗಿದೆ.

ಹುದ್ದೆಗಳ ವರ್ಗೀಕರಣ

ಹುದ್ದೆ	ಸಂಖ್ಯೆ	RRB ಬೆಂಗಳೂರಿಗೆ
ಟಿಕೆಟ್ ಸೂಪರವೈಸರ್	1,736	51
ಸ್ಟೇಷನ್ ಮಾಸ್ಟರ್	994	116
ಗೂಡ್ಸ್ ಟ್ರೈನ್ ಮ್ಯಾನೇಜರ್	3,144	237
ಅಕೌಂಟ್ ಅಸಿಸ್ಟಂಟ್	1,507	88
ಸೀನಿಯರ್ ಕ್ಲರ್ಕ್	732	4

ಆಸಕ್ತ ಅಭ್ಯರ್ಥಿಗಳು ತಮ್ಮ ವ್ಯಾಪ್ತಿಯ ರೈಲ್ವೆ ಮಂಡಳಿ ವೆಬ್‌ಸೈಟ್‌ಗೆ ಭೇಟಿ ನೀಡಿ ಹುದ್ದೆಗಳ ವರ್ಗೀಕರಣ, ಪರೀಕ್ಷಾ ಪಠ್ಯಕ್ರಮ ಹಾಗೂ ಇತರೆ ಹೆಚ್ಚಿನ ಮಾಹಿತಿಗೆ ಅಧಿಸೂಚನೆ ನೋಡಿಕೊಂಡು ಅರ್ಜಿ ಸಲ್ಲಿಸಬಹುದು.

ಪದವಿಪೂರ್ವ ಅಭ್ಯರ್ಥಿಗಳಿಗೆ 3,445 ಹುದ್ದೆ

ತಾಂತ್ರಿಕೇತರ ಪದವಿಪೂರ್ವ ವಿಭಾಗದಲ್ಲಿ 3,445 ಹುದ್ದೆಗಳಿಗೂ RRBs ಕಡೆಯಿಂದ ನೇಮಕಾತಿ ನಡೆಯುತ್ತಿದೆ. ಟಿಕೆಟ್ ಕ್ಲರ್ಕ್ 2022, ಅಕೌಂಟ್ಸ್ ಕ್ಲರ್ಕ್ 361, ಜೂನಿಯರ್ ಕ್ಲರ್ಕ್ 990 ಮತ್ತು ಟ್ರೈನ್ಸ್ ಕ್ಲರ್ಕ್ ಎಂಬ 72 ಹುದ್ದೆಗಳಿವೆ. ಪಿಯುಸಿ ಪಾಸಾಗಿರುವ 18ರಿಂದ33ರ ವಯೋಮಾನ ಅರ್ಹ ಪುರುಷ, ಮಹಿಳೆ ಹಾಗೂ ಲಿಂಗತ್ವ ಅಲ್ಪಸಂಖ್ಯಾತರು ಅರ್ಜಿ ಸಲ್ಲಿಸಬಹುದು. ಅಕ್ಟೋಬರ್ 20 ಅರ್ಜಿ ಸಲ್ಲಿಸಲು ಕಡೆಯ ದಿನ. RRB ಬೆಂಗಳೂರು ವ್ಯಾಪ್ತಿಗೆ 60 ಹುದ್ದೆಗಳಿವೆ. ವೆಬ್‌ಸೈಟ್ www.rrbbnc.gov.in.

21 ರೈಲ್ವೆ ನೇಮಕಾತಿ ಮಂಡಳಿಗಳು: ಭಾರತೀಯ ರೈಲ್ವೆಯ 17 ವಲಯಗಳಲ್ಲಿ ಒಟ್ಟು 21 ರೈಲ್ವೆ ನೇಮಕಾತಿ ಮಂಡಳಿಗಳು ಕಾರ್ಯನಿರ್ವಹಿಸುತ್ತಿವೆ. ಬೆಂಗಳೂರು, ಅಜ್ಮೀರ್ ಅಹಮದಾಬಾದ್, ಭೋಪಾಲ್, ಭುವನೇಶ್ವರ, ಬಿಲಾಸ್‌ಪುರ, ಚಂಡೀಗಢ, ಚೆನ್ನೈ, ಗೋರಖಪುರ, ಗುವಾಹಟಿ, ಜಮ್ಮು ,ಶ್ರೀನಗರ, ಕೋಲ್ಕತ್ತ, ಮಾಲ್ಡಾ, ಮುಂಬೈ, ಮುಜಾಫರ್‌ಪುರ ಪಟ್ನಾ, ಪ್ರಯಾಗರಾಜ್, ರಾಂಚಿ, ಸಿಕಂದರಾಬಾದ್, ಸಿಲಿಗುರಿ ತಿರುವನಂತಪುರ.


ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ -ಗಣಿತ

ಅಧ್ಯಾಯ–6 ತ್ರಿಭುಜ

ಅಭ್ಯಾಸ–6.2

10) ABCD ಚತುರ್ಭುಜದಲ್ಲಿ $\frac{AO}{BO}=\frac{CO}{DO}$ ಆಗುವಂತೆ ಕರ್ಣಗಳು ಪರಸ್ಪರ O ಬಿಂದುವಿನಲ್ಲಿ ಛೇದಿಸುತ್ತವೆ. ಆದರೆ ABCD ಯು ಒಂದು ತ್ರಾಪಿಜ್ಯ ಎಂದು ಸಾಧಿಸಿ.



ಪರಿಹಾರ:ABCD ಯು ಒಂದು ತ್ರಾಪಿಜ್ಯ ಎಂದು ಸಾಧಿಸಬೇಕಿದೆ.
ಇಲ್ಲಿ O ಬಿಂದುವಿನಿಂದ ADಗೆ ಒಂದು ರೇಖೆಯನ್ನು ಎಳೆಯಲಾಗಿದೆ.
ಅದು E ಬಿಂದುವಿನಲ್ಲಿ ಸಂಧಿಸುತ್ತಿದೆ.

EO || DC || AB
ΔDAB ದಲ್ಲಿ, EO || AB
ಮೂಲ ಸಮಾನುಪಾತತೆಯ ಪ್ರಮೇಯದಂತೆ

$\frac{DE}{EA}=\frac{DO}{OB}$ ....(1)

$\frac{AO}{BO}=\frac{CO}{DO}$.

$\Rightarrow \frac{AO}{CO}=\frac{BO}{DO}$


$\Rightarrow \frac{CO}{AO}=\frac{DO}{BO}$

$\Rightarrow \frac{DO}{OB}=\frac{CO}{AO}$ ....(2)

ಸಮೀಕರಣ 1 ಮತ್ತು 2ರಿಂದ,
DE/EA = CO/AO
ಮೂಲ ಸಮಾನುಪಾತತೆಯ ಪ್ರಮೇಯದಂತೆ ಅದರಂತೆಯೇ
EO || DC ಅದರಂತೆಯೇ EO || AB
⇒ AB || DC.
ಹೀಗಾಗಿ ABCD ಚತುರ್ಭುಜವು ಒಂದು ತ್ರಾಪಿಜ್ಯವಾಗಿದೆ.

ಅಭ್ಯಾಸ –6.3

ಚಿತ್ರ 6.34 ರಲ್ಲಿ ಸಮರೂಪ ತ್ರಿಭುಜಗಳ ಜೊತೆಗಳು ಯಾವುವು ತಿಳಿಸಿ. ಈ ಪ್ರಶ್ನೆಗಳನ್ನು ಉತ್ತರಿಸಲು ಸಮರೂಪತೆಯ ಯಾವ ನಿರ್ಧಾರಕ ಗುಣಗಳನ್ನು ಉಪಯೋಗಿಸಿರುವಿರಿ ಎಂದು ಬರೆಯಿರಿ ಹಾಗೂ ಸಮರೂಪ ತ್ರಿಭುಜಗಳ ಜೊತೆಗಳನ್ನು ಸೂಚಿಸಲು ಸಂಕೇತವನ್ನು ಬರೆಯಿರಿ.



ಪರಿಹಾರ: (i) ΔABC ಮತ್ತು ΔPQR, ದಲ್ಲಿ
∠A = ∠P = 60°
∠B = ∠Q = 80°
∠C = ∠R = 40°
ಕೋ ಕೋ ಕೋ ನಿರ್ಧಾರಕ ಗುಣದಂತೆ
∴ ΔABC ~ ΔPQR

(ii) ΔABC ಮತ್ತು ΔPQR ದಲ್ಲಿ

$\Rightarrow \frac{AB}{QR}=\frac{2}{4}=\frac{1}{2}$

$\frac{BC}{RP}=\frac{2.5}{5}=\frac{1}{2}$

$\frac{C}{PA}=\frac{3}{6}=\frac{1}{2}$

ಬಾ ಬಾ ಬಾ ಸಮರೂಪತೆ ನಿರ್ಧಾರಕ ಗುಣದಂತೆ '
ΔABC ~ ΔQRP

(iii) ΔLMP ಮತ್ತು ΔDEF ದಲ್ಲಿ
LM = 2.7, MP = 2, LP = 3, EF=5, DE = 4, DF= 6

$\Rightarrow \frac{MP}{DE}=\frac{2}{4}=\frac{1}{2}$

$\frac{PL}{DF}=\frac{3}{6}=\frac{1}{2}$

$\frac{LM}{EF}=\frac{2.7}{5}=\frac{27}{50}$

ಹೀಗಾಗಿ MP/DE = PL/DF ≠ LM/EF
ಆದ್ದರಿಂದ , ΔLMP ಮತ್ತು ΔDEF ಗಳು ಸಮರೂಪ ತ್ರಿಭುಜಗಳಲ್ಲ.

(iv) In ΔMNL ಮತ್ತು ΔQPR ದಲ್ಲಿ

$\Rightarrow \frac{MN}{QP}=\frac{ML}{QR}=\frac{1}{2}$

∠M = ∠Q = 70°
ಆದ್ದರಿಂದ by SAS ಸಮರೂಪತೆ ನಿರ್ಧಾರಕ ಗುಣದಂತೆ
∴ ΔMNL ~ ΔQPR

(v) In ΔABC ಮತ್ತು ΔDEF ದಲ್ಲಿ
AB = 2.5, BC = 3, ∠A = 80°, EF = 6, DF = 5, ∠F = 80°
ಇಲ್ಲಿ

$\Rightarrow \frac{AB}{DF}=\frac{2.5}{5}=\frac{1}{2}$

ಮತ್ತು BC/EF = 3/6 = 1/2
⇒ ∠B ≠ ∠F
ಹೀಗಾಗಿ, ΔABC ಮತ್ತು ΔDEF ಗಳು ಸಮರೂಪ ತ್ರಿಭುಜಗಳಲ್ಲ..

(vi) ΔDEFದಲ್ಲಿ ,
∠D + ∠E + ∠F = 180°
⇒ 70° + 80° + ∠F = 180°
⇒ ∠F = 180° – 70° – 80°⇒ ∠F = 30°
ΔPQR ದಲ್ಲಿ
∠P + ∠Q + ∠R = 180 (Sum of angles of Δ)
⇒ ∠P + 80° + 30° = 180°
⇒ ∠P = 180° – 80° -30°⇒ ∠P = 70°
, ΔDEF ಮತ್ತು ΔPQR, ಕೋನಗಳನ್ನು ತುಲನೆ ಮಾಡಿದಾಗ
∠D = ∠P = 70°
∠F = ∠Q = 80°
∠F = ∠R = 30°
ಕೋನ ಕೋನ ನಿರ್ಧಾರಕ ಗುಣದಿಂದ
ΔDEF ~ ΔPQR

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC - CHEMISTRY

The d- and f-Block Elements

56. When Cu^{2+} ion is treated with KI, a white precipitate is formed. Explain the reaction with the help of a chemical equation.

Ans: When Cu^{2+} ion is treated with KI, it produces Cu_2I_2 white precipitate in the final product.
$2Cu^{2+} + 4I^- \rightarrow Cu_2I_2$ (White ppt.) + I_2
(In this reaction, CuI_2 is formed, which, being unstable, dissociates into Cu_2I_2 and I_2).

57. Out of Cu_2Cl_2 and $CuCl_2$, which is more stable and why?

Ans: $CuCl_2$ is more stable than Cu_2Cl_2. The stability of Cu^{2+}(aq) is more than Cu^+(aq) due to the much more negative $\Delta_{hyd}H^\circ$ of Cu^{2+}(aq) than Cu^+(aq).

58. Zinc has very high $E^\circ\left(\frac{M^{3+}}{M^{2+}}\right)$ value why?

Ans: The highest $E^\circ\left(\frac{Zn^{3+}}{Zn^{2+}}\right)$ value for Zn is due to the removal of an electron from stable d^{10} configuration of Zn^{2+}.

59. Vanadium has relatively low $E^\circ\left(\frac{M^{3+}}{M^{2+}}\right)$ value. Give reason.

Ans: This is due to extra stability of V^{2+} due to half filled t_{2g}^3 orbital.

60. $E^\circ\left(\frac{M^{3+}}{M^{2+}}\right)$ value of Mn^{2+} is comparatively high. Why?

Ans: Due to d^5 configuration of Mn^{2+}, it is very stable.

61. $E^\circ\left(Fe^{3+}/Fe^{2+}\right)$ value of Fe^{2+} is low. Why?

Ans: This is due to extra stability of $Fe^{3+}\left(d^5\right)$. i.e., low third ionization enthalpy.

62. How do you explain the relative stability of ions by using standard electrode potential values?

Ans: The relative stabilities of cations can be explained on the basic of their standard electrode potential values. For Example

$Cu^+ + e \longrightarrow Cu \qquad E^\circ_{red} = 0.52\ V$

$Cu^{2+} + 2e \longrightarrow Cu \qquad E^\circ_{red} = 0.34\ V$

The stability of ion is inversely proportional to E° value. Higher the E° value lesser is the stability. Here $E^\circ_{Cu^{2+}/Cu}$ is less than $E^\circ_{Cu^+/Cu}$. Hence Cu^{2+} is more stable than Cu^+ ion.

63. On the basis of Lanthanoid contraction, explain the following
(i) Nature of bonding in Lu_2O_3 and La_2O_3
(ii) Trends in the stability of oxo salts of lanthanides from La to Lu.
(iii) Stability of the complexes of lanthanides.
(iv) Radii of 4d and 5d block elements
(v) Trends in acidic character of lanthanide oxides.

Answer: (i) Due to lanthanide contraction, size reduces. With the size reduction, the covalent character increases. Therefore, Lu_2O_3 is more covalent than La_2O_3.
(ii) Oxosalts contain oxygen as an anion. As the size of the cation reduces from La to Lu, according to Fajan's rules, the polarising power of the cation will increase, and it will distort the cloud of oxygen(anion) significantly. Thus the bond weakens, and the stability also reduces.
(iii) As the size of the central atom reduces, the stability of the complex increases. A small metal ion with a greater charge attracts the ligands better.
(iv) In 5d block elements, the effective nuclear charge increases due to poor shielding of f orbitals, thereby reducing the size. This is called lanthanide contraction. So, the radii of 4d and 5d block elements end up being very similar.
(v) From La to Lu, the acidic character increases. As the size reduces from La to Lu, the ability to lose electrons (Lewis base character) reduces, so the acidity increases

64. How would you account for the increasing oxidizing power in the series $VO^{2+} < Cr_2O_7^{2+} < MnO_4^-$

Ans: This is due to the increasing stability of the lower species to which they are reduced.

65. Which is a strong reducing agent Cr^{2+} or Fe^{2+} and why?

Ans: Cr^{2+} is good reducing agent because of its less standard reduction potential value than Fe^{2+}

ಬದ್ಲಾಪುರ ಲೈಂಗಿಕ ದೌರ್ಜನ್ಯ ಪ್ರಕರಣ ಆರೋಪಿಯ ಶೂಟೌಟ್: ನಿಷ್ಪಕ್ಷಪಾತ ತನಿಖೆಗೆ ಸೂಚನೆ

‘ತಲೆಗೆ ಗುಂಡು ಹಾರಿಸಿದ್ದು ಏಕೆ’

ಮುಂಬೈ(ಪಿಟಿಐ): ಬದ್ಲಾಪುರದಲ್ಲಿ ಇಬ್ಬರು ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಪ್ರಕರಣದ ಆರೋಪಿ ಅಕ್ಷಯ್ ಶಿಂದೆ ಶೂಟೌಟ್ ಕುರಿತಂತೆ ಬಾಂಬೆ ಹೈಕೋರ್ಟ್, ಪೊಲೀಸರಿಗೆ ಬುಧವಾರ ಹಲವು ಹರಿತವಾದ ಪ್ರಶ್ನೆಗಳನ್ನು ಕೇಳಿದೆ.

‘ಮೊದಲು ಆರೋಪಿಯ ಕೈ ಅಥವಾ ಕಾಲುಗಳಿಗೆ ಗುಂಡು ಹೊಡೆಯದೇ ಆತನ ತಲೆಗೆ ಹೊಡೆದದ್ದು ಏಕೆ’ ಎಂದು ಕೇಳುವ ಮೂಲಕ ಪೊಲೀಸರನ್ನು ತರಾಟೆಗೆ ತೆಗೆದುಕೊಂಡಿದೆ.

‘ಆರೋಪಿಯು ಮೇಲುಗೈ ಸಾಧಿಸಿ, ವ್ಯಾನಿನಲ್ಲಿ ತನ್ನನ್ನು ಕರೆದುಕೊಂಡು ಹೋಗುತ್ತಿದ್ದ ಪೊಲೀಸರಿಂದ ಪಿಸ್ತೂಲ್ ಕಿತ್ತುಕೊಂಡು, ಅವರತ್ತ ಗುಂಡು ಹಾರಿಸಲು ಯತ್ನಿಸಿದ್ದ ಎಂಬುದನ್ನು ನಂಬುವುದು ಕಷ್ಟ’ ಎಂದು ನ್ಯಾಯಮೂರ್ತಿಗಳಾದ ರೇವತಿ ಮೋಹಿತೆ ಡೇರೆ ಮತ್ತು ಪೃಥ್ವಿರಾಜ್ ಚವಾಣ್ ಅವರಿದ್ದ ವಿಭಾಗೀಯ ಪೀಠ ಹೇಳಿದೆ.

ಅಕ್ಷಯ್ ತಂದೆ ಅಣ್ಣಾ ಶಿಂದೆ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ವಿಭಾಗೀಯ ಪೀಠ ನಡೆಸಿತು. ಅಣ್ಣಾ ಶಿಂದೆ ಪರ ಹಾಜರಿದ್ದ ವಕೀಲ ಅಮಿತ್ ಕಟಾರನವರೆ, ‘ಇದು ನಕಲಿ ಎನ್‌ಕೌಂಟರ್’ ಎಂದು ಪೀಠಕ್ಕೆ ತಿಳಿಸಿದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಚಿಕ್ಕಪುಟ್ಟ ಸಂಗತಿಗಳ ಬಗ್ಗೆಯೂ ಪ್ರಶ್ನಿಸಿದ ಪೀಠ, ‘ಪೊಲೀಸರು ಬಳಸಿದ್ದು ರಿವಾಲ್ವಾರೋ ಅಥವಾ ಪಿಸ್ತೂಲೋ?’ ಎಂದು ಕೇಳಿತು.

‘ಈ ಶೂಟೌಟನ್ನು ಎನ್‌ಕೌಂಟರ್ ಎನ್ನಲು ಸಾಧ್ಯವಿಲ್ಲ. ಎನ್‌ಕೌಂಟರ್‌ಗೆ ಬೇರೆಯದೇ ವ್ಯಾಖ್ಯಾನವಿದೆ’ ಎಂದು ನ್ಯಾಯಮೂರ್ತಿ ಚವಾಣ್ ಮೌಖಿಕವಾಗಿ ಅಭಿಪ್ರಾಯ ವ್ಯಕ್ತಪಡಿಸಿದರು.

‘ಶೂಟೌಟ್ ಕುರಿತ ತನಿಖೆಯನ್ನು ನಿಷ್ಪಕ್ಷಪಾತ ಹಾಗೂ ನ್ಯಾಯಯುತವಾಗಿ ನಡೆಸಬೇಕು’ ಎಂದು ಸೂಚಿಸಿದ ಪೀಠ, ‘ತನಿಖೆಯನ್ನು ಸಮರ್ಪಕವಾಗಿ ನಡೆಸದಿದ್ದಲ್ಲಿ ನಾವು ಸೂಕ್ತ ಆದೇಶ ನೀಡಬೇಕಾಗುತ್ತದೆ’ ಎಂದು ಹೇಳಿ, ವಿಚಾರಣೆಯನ್ನು ಅಕ್ಟೋಬರ್ 3ಕ್ಕೆ ಮುಂದೂಡಿತು.

ಆತ್ಮರಕ್ಷಣೆಗಾಗಿ ಪೊಲೀಸರಿಂದ ಗುಂಡು: ಶಿಂದೆ

ಮುಂಬೈ: ‘ಬದ್ಲಾಪುರ ಲೈಂಗಿಕ ದೌರ್ಜನ್ಯ ಪ್ರಕರಣದ ಆರೋಪಿ ಅಕ್ಷಯ್ ಶಿಂದೆಯನ್ನು ಕರೆದೊಯ್ಯುತ್ತಿದ್ದ ಪೊಲೀಸರು ಆತ್ಮರಕ್ಷಣೆಗಾಗಿ ಆತನತ್ತ ಗುಂಡು ಹಾರಿಸಿದ್ದಾರೆ’ ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಬುಧವಾರ ಹೇಳಿದ್ದಾರೆ.

ಸುದ್ದಿವಾಹಿನಿಯೊಂದು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಅವರು, ಸುದ್ದಿಗಾರರೊಂದಿಗೆ ಮಾತನಾಡಿ, ‘ಆರೋಪಿಯು, ಪೊಲೀಸರತ್ತ ಗುಂಡು ಹಾರಿಸಿ, ಓಡಿ ಹೋಗಿದ್ದರೆ ಏನಾಗುತ್ತಿತ್ತು’ ಎಂದು ಪ್ರಶ್ನಿಸಿದ್ದಾರೆ.

ಈ ಘಟನೆಯನ್ನು ನಕಲಿ ಎನ್‌ಕೌಂಟರ್ ಎಂಬ ವಿಪಕ್ಷಗಳ ಒಕ್ಕೂಟ ಮಹಾ ವಿಕಾಸ್ ಅಘಾಡಿ (ಎಂವಿಎ) ಹೇಳಿಕೆಯನ್ನು ಮುಖ್ಯಮಂತ್ರಿ ಏಕನಾಥ ಶಿಂದೆ ಖಂಡಿಸಿದ್ದಾರೆ.

‘ಪೊಲೀಸರು ಆತ್ಮರಕ್ಷಣೆಗಾಗಿ ಪಿಸ್ತೂಲ್ ಇಟ್ಟುಕೊಂಡಿರುತ್ತಾರೆ. ಅದು ತೋರಿಕೆ ವಸ್ತುವಲ್ಲ. ಒಂದು ವೇಳೆ ಆರೋಪಿ ತಪ್ಪಿಸಿಕೊಂಡು ಹೋಗಿದ್ದರೆ ವಿರೋಧ ಪಕ್ಷಗಳು ಸರ್ಕಾರವನ್ನು ಟೀಕಿಸುತ್ತಿದ್ದವು. ತಪ್ಪಿಸಿಕೊಳ್ಳುವುದಕ್ಕೆ ನಾವೇ ಆತನಿಗೆ ನೆರವಾದೆವು ಎನ್ನುತ್ತಿದ್ದವು’ ಎಂದರು.

ಲೈಂಗಿಕ ದೌರ್ಜನ್ಯ ನಡೆದಿದೆ ಎನ್ನಲಾದ ಬದ್ಲಾಪುರದ ಶಾಲೆಯ ಆಡಳಿತ ಮಂಡಳಿ ಸದಸ್ಯರು ತಲೆಮರೆಸಿಕೊಂಡಿರುವ ಕುರಿತ ಪತ್ರಕರ್ತರ ಪ್ರಶ್ನೆಗೆ, ‘ಎಲ್ಲಿಯೇ ತಲೆ ಮರೆಸಿಕೊಂಡಿದ್ದರೂ ಅವರನ್ನೆಲ್ಲಾ ಒಂದು ದಿನ ಬಂಧಿಸಲಾಗುತ್ತದೆ. ಎಷ್ಟು ದಿನ ತಲೆ ಮರೆಸಿಕೊಳ್ಳುತ್ತಾರೆ’ ಎಂದರು.

‘ಅಕ್ಷಯ್ ಶಿಂದೆ ಒಬ್ಬ ರಾಕ್ಷಸನಿದ್ದಂತೆ. ಆತನಿಗೆ ನಾಲ್ವರು ಪತ್ನಿಯರಿದ್ದರು. ಒಬ್ಬ ಪತ್ನಿ ಆತನ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ. ಆತ ರಾಕ್ಷಸ ಎಂದೂ ಹೇಳಿಕೆ ನೀಡಿದ್ದಾರೆ. ಅವರೊಂದಿಗೆ ಆತ ಎಷ್ಟು ಕ್ರೂರವಾಗಿ ನಡೆದುಕೊಂಡಿರಬೇಕು ಊಹಿಸಿ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.



ಅರುಣಾಚಲ ಪ್ರದೇಶದ ಗೋರಿಚೆನ್ ಪರ್ವತ ಶ್ರೇಣಿಯಲ್ಲಿರುವ 20,942 ಅಡಿ ಎತ್ತರದ ಶಿಖರದ ತುದಿಯನ್ನು ಯಶಸ್ವಿಯಾಗಿ ಏರಿದ ರಾಷ್ಟ್ರೀಯ ಪರ್ವತಾರೋಹಣ ಮತ್ತು ಸಾಹಸ ಕ್ರೀಡೆಗಳ ಸಂಸ್ಥೆಯ (ಎನ್‌ಐಎಂಎಎಸ್) ತಂಡದ ಸದಸ್ಯರು ಸಂಭ್ರಮಿಸಿದರು ಪಿಟಿಐ ಚಿತ್ರ

ಯೂಟ್ಯೂಬರ್ ಬಿಡುಗಡೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಡಿಎಂಕೆ ಟೀಕಾಕಾರ ಹಾಗೂ ಯೂಟ್ಯೂಬರ್–ಪತ್ರಕರ್ತ ಶಂಕರ್ ಅಲಿಯಾಸ್ ಸವುಕ್ಕು ಶಂಕರ್ ಅವರನ್ನು ತಕ್ಷಣವೇ ಬಿಡುಗಡೆ ಮಾಡಬೇಕು ಎಂದು ತಮಿಳುನಾಡು ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಬುಧವಾರ ಸೂಚನೆ ನೀಡಿದೆ.

ಅವರನ್ನು ಈ ಹಿಂದೆ ಬಂಧಿಸಿದ್ದ ಕ್ರಮವನ್ನು ರದ್ದುಗೊಳಿಸಿದ್ದ ಕೆಲವೇ ದಿನಗಳಲ್ಲಿ ಅವರನ್ನು ಗೂಂಡಾ ಕಾಯ್ದೆಯ ಅಡಿಯಲ್ಲಿ ಮತ್ತೆ ಬಂಧಿಸಲಾಗಿತ್ತು.

ಬಂಧನ ಆದೇಶವನ್ನು ಹಿಂಪಡೆಯಬೇಕು ಎಂದು ಸಲಹಾ ಮಂಡಳಿಯು ಅಭಿಪ್ರಾಯ ನೀಡಿದೆ ಎಂದು ಹಿರಿಯ ವಕೀಲರಾದ ಮುಕುಲ್ ರೋಹಟಗಿ ಮತ್ತು ಸಿದ್ಧಾರ್ಥ ಲೂಥ್ರಾ ಅವರು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರು ಇದ್ದ ವಿಭಾಗೀಯ ಪೀಠಕ್ಕೆ ಮಾಹಿತಿ ನೀಡಿದರು. ಇದಾದ ನಂತರ ಪೀಠವು ಅವರ ಬಿಡುಗಡೆಗೆ ಆದೇಶಿಸಿತು.

‘ಬೇರೆ ಯಾವುದೇ ಪ್ರಕರಣದಲ್ಲಿ ಅವರು ಬೇಕಾದವರಲ್ಲ ಎಂದಾದರೆ, ಅವರನ್ನು ತಕ್ಷಣವೇ ಬಿಡುಗಡೆ ಮಾಡಬೇಕು’ ಎಂದು ಪೀಠವು ಹೇಳಿದೆ. ‘ಸಲಹಾ ಮಂಡಳಿಯ ಅಭಿಪ್ರಾಯ ಆಧರಿಸಿ ರಾಜ್ಯ ಸರ್ಕಾರವು ಬಂಧನ ಆದೇಶವನ್ನು ಬುಧವಾರ ರದ್ದುಪಡಿಸಿದೆ’ ಎಂದು ಪೀಠವು ಹೇಳಿತು.

ಹಿಂದೆ ಶಂಕರ್ ಅವರ ಬಂಧನಕ್ಕೆ ಹೊರಡಿಸಿದ್ದ ಆದೇಶವನ್ನು ಮದ್ರಾಸ್ ಹೈಕೋರ್ಟ್ ರದ್ದುಪಡಿಸಿದ ಕೆಲವೇ ದಿನಗಳಲ್ಲಿ ಅವರ ಬಂಧನಕ್ಕೆ ಹೊರಡಿಸಿದ್ದ ಮತ್ತೊಂದು ಆದೇಶವನ್ನು ತಾಯಿ ಎ. ಕಮಲಾ ಅವರು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು.

ರಾಜ್ಯ ಸರ್ಕಾರವು ಭಿನ್ನ ಅಭಿಪ್ರಾಯ ದಾಖಲಿಸಿದವರನ್ನು ಹುಡುಕಿ ಬಂಧಿಸುವ ಕ್ರಮದ ಭಾಗವಾಗಿ ಶಂಕರ್ ಅವರ ವಿರುದ್ಧ ಕ್ರಮ ಕೈಗೊಂಡಿದೆ. ಶಂಕರ್ ಅವರಿಗೆ ಕಿರುಕುಳ ನೀಡಲು, ಅವರನ್ನು ಜೈಲಿನಲ್ಲಿಯೇ ಇರಿಸಲು ಈ ರೀತಿ ಮಾಡಿದೆ. ಅದರಲ್ಲೂ, ಅವರಿಗೆ ಬಹುತೇಕ ಪ್ರಕರಣಗಳಲ್ಲಿ ಜಾಮೀನು ಸಿಕ್ಕಿರುವಾಗ, ಗೂಂಡಾ ಕಾಯ್ದೆಯ ಅಡಿಯಲ್ಲಿ ಮೊದಲು ಬಂಧಿಸಿದ್ದ ಕ್ರಮ ರದ್ದಾಗಿರುವಾಗಲೂ ಹೀಗೆ ಮಾಡಲಾಗಿದೆ ಎಂದು ಕಮಲಾ ಅವರು ಹೇಳಿದ್ದರು.

ಕಲಬೆರಕೆ ತುಪ್ಪ: ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಹೈದರಾಬಾದ್: ತಿರುಪತಿ ಲಾಡು ಪ್ರಸಾದ ವಿವಾದದ ಕೇಂದ್ರವಾದ ತಮಿಳುನಾಡು ಮೂಲದ ಎ.ಆರ್.ಡೇರಿ ಕಂಪನಿ ವಿರುದ್ಧ ತಿರುಪತಿ ಪೊಲೀಸ್ ಠಾಣೆಯಲ್ಲಿ ಪ್ರಕರಣದ ದಾಖಲಾಗಿದೆ.

ಎ.ಆರ್.ಡೇರಿ ಪೂರೈಸಿದ ತುಪ್ಪವು ಸಸ್ಯಜನ್ಯ ಮತ್ತು ಪ್ರಾಣಿಗಳ ಕೊಬ್ಬಿನ ಅಂಶದೊಂದಿಗೆ ಕಲಬೆರಕೆ ಆಗಿತ್ತು ಎಂದು ಟಿಟಿಡಿ ಬುಧವಾರ ತಿರುಪತಿ ಪೂರ್ವ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಿದೆ.

ಲಾಡು ಪ್ರಸಾದ ಸಿದ್ಧಪಡಿಸಲು ಈ ಡೇರಿಯಿಂದ ತರಿಸಿಕೊಂಡಿದ್ದ ತುಪ್ಪದ ಮಾದರಿಯನ್ನು ಗುಜರಾತಿನ ಎನ್‌ಡಿಡಿಬಿ ಪ್ರಯೋಗಾಲಯದಲ್ಲಿ ಪರೀಕ್ಷೆಗೊಳಪಡಿಸಲಾಗಿತ್ತು. ಅದರ ವರದಿ ಪ್ರಕಾರ, ತುಪ್ಪದಲ್ಲಿ ಹಂದಿ ಸೇರಿದಂತೆ ಪ್ರಾಣಿಗಳ ಕೊಬ್ಬಿನ ಅಂಶ ಪತ್ತೆಯಾಗಿದೆ ಎಂದು ಟಿಟಿಡಿ ದೂರಿನಲ್ಲಿ ಉಲ್ಲೇಖಿಸಿದೆ. ಟಿಟಿಡಿ ಮಾಡಿರುವ ಈ ಆರೋಪಗಳನ್ನು ಎ.ಆರ್.ಡೇರಿ ನಿರಾಕರಿಸಿದೆ.

ಇದೇ 28ಕ್ಕೆ ಪೂಜೆ: ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ತಿರುಪತಿ ಲಾಡು ಕುರಿತು ಮಾಡಿರುವ ಆರೋಪಗಳಿಂದ ಕಳಂಕಿತವಾಗಿರುವ ತಿರುಮಲದ ಪಾವಿತ್ರ್ಯತೆಯನ್ನು ಮರುಸ್ಥಾಪಿಸಲು ಇದೇ 28ರಂದು ಭಕ್ತರು ರಾಜ್ಯದ ದೇವಾಲಯದ ಪೂಜೆಗಳಲ್ಲಿ ಭಾಗವಹಿಸುವಂತೆ ವೈಎಸ್‌ಆರ್‌ಸಿಪಿ ಮುಖ್ಯಸ್ಥ ವೈ.ಎಸ್.ಜಗನ್ ಮೋಹನ್ ರೆಡ್ಡಿ ತಿಳಿಸಿದ್ದಾರೆ.

‘ಕಲಿಯುಗ ಶುರುವಾಗಿರುವಂತೆ ಕಾಣುತ್ತಿದೆ’

ಇಳಿ ವಯಸ್ಸಿನ ದಂಪತಿ ನಡುವಿನ ಜೀವನಾಂಶ ಮೊತ್ತದ ತಕರಾರು ಪ್ರಕರಣ

ಪ್ರಜಾವಾಣಿ ವಾರ್ತೆ

ಲಖನೌ: ಇಳಿ ವಯಸ್ಸಿನ ದಂಪತಿಯ ನಡುವೆ ಜೀವನಾಂಶದ ಮೊತ್ತಕ್ಕೆ ಸಂಬಂಧಿಸಿದಂತೆ ನಡೆದಿರುವ ತಕರಾರನ್ನು ಗಮನಿಸಿದ ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಸೌರವ್ ಶ್ಯಾಮ್ ಶಂಶೇರಿ ಅವರು ‘ಕಲಿಯುಗ ಶುರುವಾಗಿರುವಂತೆ ಕಾಣುತ್ತಿದೆ’ ಎಂದರು.

ಪತ್ನಿ ಗಾಯತ್ರಿ ದೇವಿ ಅವರಿಗೆ ಜೀವನಾಂಶದ ರೂಪದಲ್ಲಿ ₹5 ಸಾವಿರ ನೀಡುವಂತೆ ಕೌಟುಂಬಿಕ ನ್ಯಾಯಾಲಯ ನೀಡಿರುವ ಆದೇಶವನ್ನು ಪ್ರಶ್ನಿಸಿ



80 ವರ್ಷ ವಯಸ್ಸಿನ ಮುನೇಶ್ ಕುಮಾರ್ ಗುಪ್ತ ಸಲ್ಲಿಸಿರುವ ಅರ್ಜಿಯು ನ್ಯಾಯಮೂರ್ತಿ ಶಂಶೇರಿ ಅವರ ಎದುರು ವಿಚಾರಣೆಗೆ ಬಂದಿತ್ತು.

ವಿಚಾರಣೆಯನ್ನು ಮುಂದೂಡಿರುವ ನ್ಯಾಯಮೂರ್ತಿಯವರು, ದಂಪತಿಯು ಮುಂದಿನ ವಿಚಾರಣೆಗೆ ನ್ಯಾಯಾಲಯಕ್ಕೆ ಬರುವಾಗ ರಚನಾತ್ಮಕವಾದ ರಾಜಿ ಸೂತ್ರವೊಂದನ್ನು ಕಂಡುಕೊಂಡಿರುತ್ತಾರೆ ಎಂಬ ಭರವಸೆಯನ್ನು ವ್ಯಕ್ತಪಡಿಸಿದರು.

ಮುನೇಶ್ ಅವರು ಆರೋಗ್ಯ ಇಲಾಖೆಯಲ್ಲಿ ನಾಲ್ಕನೆಯ ದರ್ಜೆಯ ನೌಕರರಾಗಿ ಕೆಲಸ ಮಾಡಿ ನಿವೃತ್ತರಾಗಿದ್ದಾರೆ. 1981ರಲ್ಲಿ ತಾವು ಪತ್ನಿಯ ಹೆಸರಿನಲ್ಲಿ ಮನೆಯನ್ನು ಖರೀದಿಸಿದ್ದಾಗಿ ಅವರು ಹೇಳಿದ್ದಾರೆ. ಈ ಮನೆಯನ್ನು ಪತ್ನಿಯು ಕಿರಿಯ ಮಗನಿಗೆ ಉಡುಗೊರೆಯಾಗಿ 2008ರಲ್ಲಿ ನೀಡಿದ ನಂತರ ವಿವಾದ ಶುರುವಾಯಿತು.

ಭಿನ್ನಾಭಿಪ್ರಾಯದ ಕಾರಣಕ್ಕೆ ಮುನೇಶ್ ಅವರು ಮನೆಯನ್ನು ತೊರೆದು, ಹಿರಿಯ ಮಗನ ಜೊತೆ ಬಾಡಿಗೆ ಮನೆಯೊಂದರಲ್ಲಿ ವಾಸಿಸಲು ಆರಂಭಿಸಿದರು. ಮುನೇಶ್ ಅವರಿಂದ ತಮಗೆ ಜೀವನಾಂಶ ಸಿಗಬೇಕು ಎಂದು ಪತ್ನಿಯು ಕೌಟುಂಬಿಕ ನ್ಯಾಯಾಲಯದ ಮೆಟ್ಟಿಲೇರಿದರು. ಆಕೆಗೆ ₹5 ಸಾವಿರ ಜೀವನಾಂಶ ನೀಡಬೇಕು ಎಂದು ಕೌಟುಂಬಿಕ ನ್ಯಾಯಾಲಯ ಹೇಳಿತ್ತು.

ತಮ್ಮನ್ನು ಹಾಗೂ ಹಿರಿಯ ಮಗನನ್ನು ಬಲವಂತವಾಗಿ ಮನೆಯಿಂದ ಹೊರಹಾಕಲಾಯಿತು. ಇದಾದ ನಂತರವೂ ತಾವು ತಮ್ಮ ₹14 ಸಾವಿರ ಪಿಂಚಣಿ ಹಣದಿಂದ ಪತ್ನಿಗೆ ತಿಂಗಳಿಗೆ ₹2 ಸಾವಿರ ನೀಡುತ್ತಿದ್ದುದಾಗಿ ಮುನೇಶ್ ಹೇಳಿದ್ದಾರೆ.

ಸುಧಾ, ಮಯೂರ ಓದಿರಿ

‘ಬಾಲಕರಿಗಾಗಿ ಆರ್‌ಎಸ್‌ಎಸ್ ಶಾಖೆಗಳು’

ಮುಂಬೈ(ಪಿಟಿಐ): ‘ಸಂಘದ ಶಾಖೆಗಳಲ್ಲಿ ಬಾಲಕರು ಮತ್ತು ಬಾಲಕಿಯರು ಒಟ್ಟಾಗಿ ಪಾಲ್ಗೊಳ್ಳಬೇಕು ಎಂಬ ಬಗ್ಗೆ ಬೇಡಿಕೆಗಳು ಬಂದಿಲ್ಲ. ಸಮಾಜ ಕೂಡ ಇಂತಹ ಬೇಡಿಕೆ ಮುಂದಿಟ್ಟಿಲ್ಲ’ ಎಂದು ಆರ್‌ಎಸ್‌ಎಸ್‌ನ ಅಖಿಲ ಭಾರತೀಯ ಪ್ರಚಾರ ಪ್ರಮುಖ ಸುನೀಲ್ ಅಂಬೇಕರ್ ಬುಧವಾರ ಹೇಳಿದ್ದಾರೆ.

‘ಇಂತಹ ಬೇಡಿಕೆ ಬಂದಲ್ಲಿ, ಸಂಘದ ಸಂರಚನೆಯಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡಲಾಗುವುದು’ ಎಂದಿದ್ದಾರೆ.

ಅವರು ‘ಇಂಡಿಯಾ ಟುಡೆ ಸಮಾವೇಶ’ದಲ್ಲಿ ಮಾತನಾಡಿದರು.


‘ಸಂಘಟನೆಯಲ್ಲಿ ಮಹಿಳೆಯರು ಉನ್ನತ ಸ್ಥಾನಗಳಲ್ಲಿ ಏಕೆ ಇಲ್ಲ’ ಎಂಬ ಪ್ರಶ್ನೆಗೆ, ‘ಮೂಲಭೂತವಾಗಿ ಸಂಘದ ಶಾಖೆಗಳು ಬಾಲಕರಿಗಾಗಿ ಕಾರ್ಯನಿರ್ವಹಿಸುತ್ತಿವೆ. ಮಹಿಳೆಯರೇ ಇರುವ ರಾಷ್ಟ್ರ ಸೇವಿಕಾ ಸಮಿತಿಯು 1930ರಿಂದಲೇ ಅಸ್ತಿತ್ವದಲ್ಲಿದ್ದು, ಆರ್‌ಎಸ್‌ಎಸ್‌ನಂತೆಯೇ ಕಾರ್ಯ ನಿರ್ವಹಿಸುತ್ತಿದೆ’ ಎಂದು ಉತ್ತರಿಸಿದ್ದಾರೆ.

ದಾಖಲೆಗಳನ್ನು ತಿದ್ದಲಾಗಿದೆ: ಸಿಬಿಐ

ನವದೆಹಲಿ(ಪಿಟಿಐ): ವೈದ್ಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಮತ್ತು ಆಕೆ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಕೋಲ್ಕತ್ತದ ತಾಲಾ ಪೊಲೀಸ್ ಠಾಣೆಯಲ್ಲಿ ಕೆಲ ದಾಖಲೆಗಳನ್ನು ‘ತಿದ್ದಲಾಗಿದೆ’ ಹಾಗೂ ಕೆಲ ‘ಸುಳ್ಳು ದಾಖಲೆಗಳನ್ನು ಸೃಷ್ಟಿಸಲಾಗಿದೆ’ ಎಂದು ಸಿಬಿಐ ಬುಧವಾರ ಅರೋಪಿಸಿದೆ.

ಪ್ರಕರಣ ಕುರಿತು ತನಿಖೆ ನಡೆಸುತ್ತಿರುವ ಸಿಬಿಐ, ‘ತಾಲಾ ಠಾಣೆಯ ಸಿ.ಸಿ. ಟಿವಿ ಕ್ಯಾಮೆರಾದ ದೃಶ್ಯಗಳನ್ನು ಜಪ್ತಿ ಮಾಡಿ, ಕೋಲ್ಕತ್ತದಲ್ಲಿರುವ ಕೇಂದ್ರೀಯ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ’ ಎಂದು ವಿಶೇಷ ನ್ಯಾಯಾಲಯಕ್ಕೆ ತಿಳಿಸಿದೆ.

ತಾಲಾ ಠಾಣೆಯ ಅಧಿಕಾರಿ ಅಭಿಜಿತ್ ಮಂಡಲ್ ಹಾಗೂ ವೈದ್ಯಕೀಯ ಕಾಲೇಜಿನ ಮಾಜಿ ಪ್ರಾಂಶುಪಾಲ ಸಂದೀಪ್ ಘೋಷ್ ಅವರನ್ನು ವಿಚಾರಣೆಗೆ ಒಳಪಡಿಸಲಾಗಿತ್ತು. ತಿದ್ದಲಾದ ಹಾಗೂ ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದ ಕುರಿತು ಕೆಲ ‘ಹೊಸ/ಹೆಚ್ಚುವರಿ’ ಸಂಗತಿಗಳು ವಿಚಾರಣೆ ವೇಳೆ ಬೆಳಕಿಗೆ ಬಂದಿವೆ ಎಂದು ಸಿಬಿಐ ತಿಳಿಸಿದೆ.



ಸುಭಾಷಿತ

ಅನ್ಯಾಯ ನಡೆದಾಗ ನೀವು ತಟಸ್ಥರಾಗಿ ಉಳಿದರೆ, ಶೋಷಕರ ಪರವಾಗಿ ಇದ್ದೀರಿ ಎಂದರ್ಥ.

-ಡೆಸ್ಮಂಡ್ ಟುಟು

ಗುರುತರ ಪ್ರಶ್ನೆ ಎತ್ತಿದ ಕೋರ್ಟ್ ತನಿಖೆ ಎದುರಿಸುವುದೇ ಸೂಕ್ತ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಬದಲಿ ನಿವೇಶನ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ತಮ್ಮ ವಿರುದ್ಧ ತನಿಖೆಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ನೀಡಿರುವ ಅನುಮತಿಯನ್ನು ರದ್ದುಗೊಳಿಸುವಂತೆ ಕೋರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ತಿರಸ್ಕರಿಸಿದೆ. ಇದು, ಸಿದ್ದರಾಮಯ್ಯ ಅವರಿಗೆ ರಾಜಕೀಯ ಹಿನ್ನಡೆಯಷ್ಟೇ ಅಲ್ಲ, ಮುಖ್ಯಮಂತ್ರಿ ಹುದ್ದೆಯಲ್ಲಿ ಅವರು ಮುಂದುವರಿಯುವುದು ಸಮರ್ಥನೀಯವೇ ಎಂಬ ಪ್ರಶ್ನೆಯನ್ನೂ ಎತ್ತಿದೆ. ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ ನಿಯಮಗಳ ಪ್ರಕಾರ ಮುಡಾದಿಂದ ಎರಡು ನಿವೇಶನ ನೀಡಬೇಕಿದ್ದರೂ, 14 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ ಎಂಬ ಆರೋಪವಿದೆ. ನಿವೇಶನ ಹಂಚಿಕೆ ಪ್ರಕ್ರಿಯೆಯಲ್ಲಿನ ಘಟನಾವಳಿಗಳ ಹಿಂದೆ ಅಡಗಿರಬಹುದಾದ ಸತ್ಯವನ್ನು ಅರಿಯಲು ತನಿಖೆಯ ಅಗತ್ಯವಿದೆ ಎಂದು ಹೇಳಿದ್ದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಹೈಕೋರ್ಟ್‌ನ ಏಕಸದಸ್ಯ ಪೀಠವು ತನಿಖೆಗೆ ಅನುವು ಮಾಡಿಕೊಟ್ಟಿತ್ತು. ಅದಕ್ಕೆ ಪೂರಕವಾಗಿ ಜನಪ್ರತಿನಿಧಿಗಳ ಪ್ರಕರಣಗಳ ವಿಶೇಷ ನ್ಯಾಯಾಲಯವು ಬುಧವಾರ ಅಧಿಕೃತವಾದ ಆದೇಶವನ್ನು ಹೊರಡಿಸಿದ್ದು, ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುವಂತೆ ಲೋಕಾಯುಕ್ತ ಪೊಲೀಸರಿಗೆ ಸೂಚಿಸಿದೆ. ವಿಚಾರಣೆಯ ಹಂತದಲ್ಲೇ ಕೆಲವು ಅನುಮಾನಗಳಿಗೆ ಉತ್ತರ ಹುಡುಕಿರುವ ನ್ಯಾಯಮೂರ್ತಿ ನಾಗಪ್ರಸನ್ನ, ಹಲವು ಗಂಭೀರವಾದ ಪ್ರಶ್ನೆಗಳನ್ನು ಎತ್ತಿ, ತೀರ್ಮಾನಕ್ಕೆ ಬಂದಿದ್ದಾರೆ. ‘ಫಲಾನುಭವಿಯು ಉಪಮುಖ್ಯಮಂತ್ರಿ, ಮುಖ್ಯಮಂತ್ರಿ ಸೇರಿದಂತೆ ವಿವಿಧ ಪ್ರಭಾವಿ ಹುದ್ದೆಗಳಲ್ಲಿದ್ದ ರಾಜಕಾರಣಿಯ ಪತ್ನಿ ಆಗಿರದಿದ್ದರೆ ಕಾಲಕಾಲಕ್ಕೆ ನಿಯಮಗಳನ್ನು ಅನುಕೂಲಕರವಾಗಿಸಿ ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತಿತ್ತೇ’, ‘ತಮ್ಮ ಪತ್ನಿಗೆ ನಿವೇಶನ ಹಂಚಿಕೆ ಮಾಡಿರುವುದಕ್ಕೆ ಸಂಬಂಧಿಸಿದ ಯಾವುದೇ ಕಡತಗಳಿಗೆ ಸಿದ್ದರಾಮಯ್ಯ ಸಹಿ ಹಾಕದೇ ಇರಬಹುದು ಅಥವಾ ಈ ಸಂಬಂಧ ಯಾವುದೇ ಆದೇಶಗಳನ್ನು ಹೊರಡಿಸದೇ ಇರಬಹುದು. ಆದರೆ, ತಮ್ಮ ಪತ್ನಿಯ ಜೀವನದಲ್ಲಿ ಏನು ನಡೆಯುತ್ತಿದೆ ಎಂಬುದರ ಅರಿವು ತಮಗಿರಲಿಲ್ಲ ಎಂದು ಅವರು ಹೇಳಲು ಸಾಧ್ಯವಿದೆಯೇ’ ಎಂಬ ಪ್ರಶ್ನೆಗಳನ್ನು ನ್ಯಾಯಪೀಠ ಕೇಳಿದೆ. ‘ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಅಥವಾ ಇತರ ಹುದ್ದೆಗಳಲ್ಲಿದ್ದಾಗ ತಮ್ಮ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡಿರುವ ಚಿತ್ರಣವು ಮೇಲ್ನೋಟಕ್ಕೆ ಕಾಣುತ್ತಿದೆ’ ಎಂದೂ ನ್ಯಾಯಾಲಯ ಹೇಳಿದೆ. ದೀರ್ಘಕಾಲದ ರಾಜಕೀಯ ಜೀವನದಲ್ಲಿ ಕಳಂಕರಹಿತ, ಶುದ್ಧಹಸ್ತ ಎಂಬ ಹೆಸರು ಗಳಿಸಿರುವ ಸಿದ್ದರಾಮಯ್ಯ ಅವರ ಪಾಲಿಗೆ ಈ ಮಾತುಗಳು ಈ ಸಂದರ್ಭದಲ್ಲಿ ಬಹಳ ಗುರುತರ. ಈ ಪ್ರಶ್ನೆಗಳಿಗೆ ರಾಜ್ಯದ ಜನಸಾಮಾನ್ಯರು ಕೂಡ ಉತ್ತರ ಬಯಸುತ್ತಾರೆ.



ತನಿಖೆಯನ್ನು ಇನ್ನೂ ವಿರೋಧಿಸುವುದು ರಾಜಕೀಯವಾಗಿ ವಿವೇಕರಹಿತ ನಡೆಯಾಗುತ್ತದೆ ಎಂಬುದನ್ನು ಸಿದ್ದರಾಮಯ್ಯ ಅವರು ಇನ್ನಾದರೂ ಅರ್ಥ ಮಾಡಿಕೊಳ್ಳಬೇಕು

‘ತನಿಖೆ ಮತ್ತು ವಿಚಾರಣೆಗೆ ಅನುಮತಿ ನೀಡುವಾಗ ರಾಜ್ಯಪಾಲರು ಅಸಾಂವಿಧಾನಿಕವಾಗಿ ತೀರ್ಮಾನ ಕೈಗೊಂಡಿದ್ದಾರೆ. ಬಿಜೆಪಿಯ ಏಜೆಂಟರಂತೆ ವರ್ತಿಸಿರುವ ಅವರು, ತಮ್ಮ ವಿವೇಚನೆಯನ್ನೇ ಬಳಸಿಲ್ಲ’ ಎಂದು ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್ ನಾಯಕರು ಆರೋಪಿಸಿದ್ದರು. ಈ ವಿಷಯವನ್ನು ಇತ್ಯರ್ಥಪಡಿಸಿರುವ ನ್ಯಾಯಾಲಯವು ರಾಜ್ಯಪಾಲರು ಸಾಮಾನ್ಯ ಸಂದರ್ಭಗಳಲ್ಲಿ ಸಂಪುಟದ ಸಲಹೆ ಅನುಸಾರವೇ ನಿರ್ಧಾರ ಕೈಗೊಳ್ಳಬೇಕು. ಆದರೆ, ವಿಶೇಷ ಸಂದರ್ಭಗಳಲ್ಲಿ ಸ್ವತಂತ್ರ ನಿರ್ಧಾರ ಕೈಗೊಳ್ಳುವ ಅಧಿಕಾರ ರಾಜ್ಯಪಾಲರಿಗೆ ಇದ್ದು, ಅಧಿಕಾರ ದುರ್ಬಳಕೆಯ ಆರೋಪದಡಿ ಸಿದ್ದರಾಮಯ್ಯ ಅವರ ವಿರುದ್ಧ ತನಿಖೆ ಮತ್ತು ವಿಚಾರಣೆಗೆ ಅನುಮತಿ ಕೋರಿದ್ದ ಪ್ರಕರಣ ಕೂಡ ಅಂತಹ ಒಂದು ವಿಶೇಷ ಸಂದರ್ಭ ಎಂದು ವ್ಯಾಖ್ಯಾನಿಸಿದೆ. ರಾಜ್ಯಪಾಲರು ವ್ಯಾಪಕವಾಗಿ ಪರಿಶೀಲಿಸಿ, ವಿವೇಚನೆಯನ್ನು ಬಳಸಿ ನಿರ್ಧಾರ ಕೈಗೊಂಡಿದ್ದಾರೆ ಎಂದು ತೀರ್ಪಿನಲ್ಲಿ ಹೇಳಿದೆ. ಈಗ ನೀಡಿರುವ ಅನುಮತಿ ತನಿಖೆಗೆ ಸೀಮಿತವಾಗಿದ್ದು, ನ್ಯಾಯಾಲಯದಲ್ಲಿ ವಿಚಾರಣೆ ಆರಂಭಿಸುವುದಕ್ಕಲ್ಲ. ನ್ಯಾಯಾಲಯದಲ್ಲಿ ವಿಚಾರಣೆ ಆರಂಭಿಸಲು ಸಕ್ಷಮ ಪ್ರಾಧಿಕಾರದಿಂದ ಮಂಜೂರಾತಿ ಪಡೆಯುವ ಪ್ರಶ್ನೆಯು ತನಿಖೆ ಮುಗಿದ ನಂತರವೇ ಉದ್ಭವವಾಗುತ್ತದೆ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ತನಿಖೆ ಎದುರಿಸಲು ತಾವು ಸಿದ್ಧ ಎಂದಿರುವ ಸಿದ್ದರಾಮಯ್ಯ, ತನಿಖೆಗೆ ಹೊರಡಿಸಿರುವ ಆದೇಶವನ್ನು ರದ್ದುಗೊಳಿಸುವಂತೆ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸುವುದಾಗಿಯೂ ಹೇಳಿದ್ದಾರೆ. ಕಾಂಗ್ರೆಸ್ ಪಕ್ಷವೂ ಇದೇ ರೀತಿಯಲ್ಲಿ ಇಬ್ಬಗೆಯ ನಿಲುವು ಪ್ರದರ್ಶಿಸುತ್ತಿದೆ. ಆರೋಪಗಳ ಕುರಿತು ತನಿಖೆಯನ್ನು ಇನ್ನೂ ವಿರೋಧಿಸುವುದು ರಾಜಕೀಯವಾಗಿ ವಿವೇಕರಹಿತ ನಡೆಯಾಗುತ್ತದೆ ಎಂಬುದನ್ನು ಅವರು ಇನ್ನಾದರೂ ಅರ್ಥ ಮಾಡಿಕೊಳ್ಳಬೇಕು. ಆರೋಪಕ್ಕೆ ಗುರಿಯಾದ ರಾಜಕಾರಣಿಗಳು ಸಾಮಾನ್ಯವಾಗಿ ತನಿಖೆ ಮುಗಿದು, ಆರೋಪಪಟ್ಟಿ ಸಲ್ಲಿಕೆ ಆಗುವವರೆಗೂ ರಾಜೀನಾಮೆ ನೀಡುವುದಿಲ್ಲ. ಸಿದ್ದರಾಮಯ್ಯ ಕೂಡ ಅದೇ ಮಾರ್ಗವನ್ನು ಅನುಸರಿಸಲು ಮುಂದಾಗಿರಬಹುದು. ಪ್ರಕರಣಕ್ಕೆ ಸಂಬಂಧಿಸಿದಂತೆ ನೀಡಿರುವ ತೀರ್ಪಿನಲ್ಲಿ ನ್ಯಾಯಮೂರ್ತಿಯವರು ಉಲ್ಲೇಖಿಸಿರುವ ಅಂಶಗಳು ರಾಜಕೀಯವಾಗಿ ಮತ್ತು ನೈತಿಕವಾಗಿ ತಮ್ಮ ವ್ಯಕ್ತಿತ್ವಕ್ಕೆ ಉಂಟುಮಾಡಿರುವ ಹಾನಿಯ ಕುರಿತು ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಪಕ್ಷ ಗಮನಿಸಬೇಕಿದೆ. ಮುಖ್ಯಮಂತ್ರಿ ಸ್ಥಾನದಲ್ಲಿ ತಾವು ಮುಂದುವರಿಯುವುದು ವಿವೇಕದ ನಡೆಯಾಗುತ್ತದೆಯೇ ಎಂಬ ಬಗ್ಗೆ ಸಿದ್ದರಾಮಯ್ಯ ಅವರು ಆಲೋಚಿಸಬೇಕಿದೆ.

ದಿನದ ಟ್ವೀಟ್

ಭಾಷೆ ಕಲಿಕೆಗೆ ಬೇಡ ಭೇದ

ಪ್ರತಿ ಭಾಷೆಯೂ ಸುಂದರ... ಎಷ್ಟು ಸಾಧ್ಯವೋ ಅಷ್ಟು ಭಾಷೆಗಳನ್ನು ಕಲಿಯಲು ಪ್ರಯತ್ನಿಸಿ. ಆದರೆ ಭಾಷೆಯನ್ನು ಯಾರ ಮೇಲೆಯೂ ಹೇರಲು ಹೋಗಬೇಡಿ. ಎಲ್ಲರೂ ತಮ್ಮ ಭಾಷೆಯನ್ನು ಪ್ರೀತಿಸುತ್ತಾರೆ...ಯಾವುದೇ ನಗರ ಅಥವಾ ದೇಶದಲ್ಲಿ ಸ್ಥಳೀಯ ಭಾಷೆಯಲ್ಲಿ ಕೆಲವು ಪದಗಳನ್ನು ಉಚ್ಚರಿಸುತ್ತಿದ್ದಂತೆಯೇ ಅವರು ನಿಮ್ಮನ್ನು ವಿಶೇಷವಾಗಿ ಕಾಣತೊಡಗುತ್ತಾರೆ ಎಂಬುದನ್ನು ನೆನಪಿಡಿ... ಕಲಿಯುವ ಇಚ್ಛಾಶಕ್ತಿ ತೋರಿ ಮತ್ತು ಚಮತ್ಕಾರವನ್ನು ನೋಡಿ...

ವಿಕ್ರಂ ಚಂದ್ರಶೇಖರ್

ಕಿಡಿನುಡಿ



ವಾಹನಗಳಿಗೆ ಹಸಿರು ಸಿಗ್ನಲ್ ದೀಪ ಇದ್ದಾಗ ಜನ ರಸ್ತೆ ದಾಟುತ್ತಿದ್ದುದನ್ನು ಇಂದು ಗಮನಿಸಿದೆ... ಇದು ನಿಜಕ್ಕೂ ಕಳವಳಕಾರಿ. ವಾಹನ ಮಾಲೀಕರಿಗೆ ಬಹಳಷ್ಟು ನಿಯಮಗಳು ಅನ್ವಯಿಸುತ್ತವೆಯಾದರೂ ಪಾದಚಾರಿಗಳು, ಸೈಕಲ್ ಸವಾರರಿಗೆ ಅಂತಹ ನಿಯಮಗಳಿಲ್ಲ. ಸುಶಿಕ್ಷಿತರು ಸಹ ಹೀಗೆ ನಡೆದುಕೊಳ್ಳುವುದು ಅಚ್ಚರಿ ಹುಟ್ಟಿಸುತ್ತದೆ... ವಾಹನ ಮಾಲೀಕರಿಗೆ ಮಾತ್ರವಲ್ಲ, ತಪ್ಪೆಸಗುವ ಪಾದಚಾರಿಗಳಿಗೂ ದಂಡ ವಿಧಿಸುವಂತೆ ಆಗಬೇಕು.

ದಿವ್ಯಾ ಟಂಡನ್, ಉದ್ಯಮಿ

25 ವರ್ಷಗಳ ಹಿಂದೆ

ಭಾನುವಾರ, 26-9-1999

• ಬಿಹಾರದಲ್ಲಿ ಐವರ ಸಾವು ಇಬ್ಬರು ಸಚಿವರ ಬಂಧನ

ನವದೆಹಲಿ, ಸೆ. 25 (ಪಿಟಿಐ, ಯುಎನ್ಐ)– ಒಂಬತ್ತು ರಾಜ್ಯಗಳಲ್ಲಿನ ಒಟ್ಟು 74 ಲೋಕಸಭಾ ಕ್ಷೇತ್ರಗಳಲ್ಲಿ ಇಂದು ಜರುಗಿದ ಮತದಾನದ ಸಂದರ್ಭದಲ್ಲಿ ನಡೆದ ಹಿಂಸಾಚಾರದಲ್ಲಿ ಬಿಹಾರದಲ್ಲಿ ಒಟ್ಟು ಐದು ಮಂದಿ ಸತ್ತಿದ್ದು, ಐವರು ಪೊಲೀಸರು ಸೇರಿದಂತೆ 13 ಮಂದಿ ಗಾಯಗೊಂಡಿದ್ದಾರೆ. ರಾಜ್ಯದ ಇಬ್ಬರು ಸಚಿವರನ್ನು ಬಂಧಿಸಲಾಗಿದೆ.

• ಯಶಸ್ವಿ ಸರ್ಕಾರ ಉರುಳಿಸುವ ಅಸ್ಥಿರ ಶಕ್ತಿ ಕಾಂಗ್ರೆಸ್: ಅಟಲ್

ಘಾಜಿಪುರ, (ಉತ್ತರಪ್ರದೇಶ), ಸೆ. 25 (ಪಿಟಿಐ)– ‘ಕಾರ್ಗಿಲ್ ಘರ್ಷಣೆ ಸಂದರ್ಭದಲ್ಲಿ ಸರ್ಕಾರಕ್ಕೆ ಆತಂಕ ತಂದೊಡ್ಡುವ ಮೂಲಕ ಕಾಂಗ್ರೆಸ್ ಪಕ್ಷವು ಸೈನಿಕರ ನೈತಿಕ ಸ್ಥೈರ್ಯ ಉಡುಗಿಸಿತು’ ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಆರೋಪಿಸಿದರು.

ಇಲ್ಲಿನ ರಾಮಲೀಲಾ ಮೈದಾನದಲ್ಲಿ ಚುನಾವಣಾ ಪ್ರಚಾರ ಸಭೆ ಉದ್ದೇಶಿಸಿ ಅವರು ಮಾತನಾಡಿದರು.

50 ವರ್ಷಗಳ ಹಿಂದೆ

ಗುರುವಾರ, 26-9-1974

• ಪಾಕ್‌ನಲ್ಲಿ ಹುಂಜಾ ವಿಲೀನ ಭುಟ್ಟೊ ಕ್ರಮಕ್ಕೆ ಭಾರತ ಆಕ್ಷೇಪ

ನವದೆಹಲಿ, ಸೆ. 25– ಭಾರತದ ಅವಿಭಾಜ್ಯ ಭಾಗವಾಗಿರುವ ಹುಂಜಾ ರಾಜ್ಯವನ್ನು ಪಾಕಿಸ್ತಾನದ ಉತ್ತರಪ್ರದೇಶದಲ್ಲಿ ವಿಲೀನ ಮಾಡಿರುವುದಾಗಿ ಪಾಕಿಸ್ತಾನದ ಪ್ರಧಾನಿ ಭುಟ್ಟೊ ಅವರು ಹೇಳಿಕೆ ನೀಡಿರುವುದಕ್ಕೆ ಭಾರತ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ವಿದೇಶಾಂಗ ಖಾತೆಯ ವಕ್ತಾರರು ಇಂದು ಇಲ್ಲಿ ನೀಡಿದ ಹೇಳಿಕೆಯಲ್ಲಿ ‘ಪಾಕಿಸ್ತಾನದ ಈ ಏಕಪಕ್ಷೀಯ ಕ್ರಮವು ಜಮ್ಮು-ಕಾಶ್ಮೀರದ ಉತ್ತರ ಭಾಗದಲ್ಲಿ ವಾಸ್ತವಿಕ ಬದಲಾವಣೆ ಉಂಟು ಮಾಡಿದೆ. ಇಂಥ ಬದಲಾವಣೆ ಮಾಡುವುದಕ್ಕೆ ಪಾಕಿಸ್ತಾನಕ್ಕೆ ಯಾವ ಹಕ್ಕೂ ಇಲ್ಲ’ ಎಂದು ತಿಳಿಸಿದ್ದಾರೆ.

• ಕೇಂದ್ರದ ನೆರವನ್ನು ಅವಲಂಬಿಸಬೇಡಿ: ರಾಜ್ಯಗಳಿಗೆ ಸಲಹೆ

ಲಖನೌ, ಸೆ. 25– ರಾಜ್ಯ ಸರ್ಕಾರಗಳು ತಮ್ಮ ಆರ್ಥಿಕ ಬಿಕ್ಕಟ್ಟನ್ನು ನಿವಾರಿಸಿಕೊಳ್ಳಲು ಹೆಚ್ಚಾಗಿ ಕೇಂದ್ರ ಸರ್ಕಾರವನ್ನು ಅವಲಂಬಿಸಿ-ಕೊಂಡಿರದೆ, ತಮ್ಮದೇ ಸಂಪನ್ಮೂಲಗಳನ್ನು ಕ್ರೋಡೀಕರಿಸಿಕೊಳ್ಳಬೇಕೆಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಚಂದ್ರಜಿತ್ ಯಾದವ್ ಅವರು ಇಂದು ಇಲ್ಲಿ ಸಲಹೆ ಇತ್ತರು.

ಮುಂದಿನ ಪೀಳಿಗೆಯ ಭವಿಷ್ಯ ಕರಾಳವಾಗದಂತೆ ಇರಬೇಕು ನಮ್ಮ ವರ್ತನೆ

ಭೂತಾಯಿ ಮೇಲೆ ಪೀಳಿಗೆಯ ಹಕ್ಕುಸ್ವಾಮ್ಯ



ವಿಶ್ಲೇಷಣೆ

ಅ.ನ. ಯಲ್ಲಪ್ಪ ರೆಡ್ಡಿ

ಪರಿಸರಕ್ಕೆ ಸಂಬಂಧಿಸಿದಂತೆ ಇದೇ 22ರಿಂದ ಮೂರು ದಿನಗಳ ಕಾಲ ನ್ಯೂಯಾರ್ಕ್‌ನಲ್ಲಿ ನಡೆದ ಜಾಗತಿಕ ಸಮಾವೇಶ ಮಹತ್ವಪೂರ್ಣವಾದದ್ದು. ನಮ್ಮ ಪರಿಸರವನ್ನು ಅದರ ಮೂಲಸ್ವರೂಪದಲ್ಲಿ ಮುಂದಿನ ಪೀಳಿಗೆಗೆ ದಾಟಿಸುವ, ಪರಿಸರಾತ್ಮಕ ಚಿಂತನೆಗಳನ್ನು ಗಮನದಲ್ಲಿಟ್ಟು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ದಿಸೆಯಲ್ಲಿ ಸಂವಾದ ಮತ್ತು ಚರ್ಚೆಗಳು ನಡೆದು, ಗೊತ್ತುವಳಿಗಳು ಅಂಗೀಕಾರವಾದಾಗ ಮಾತ್ರ ಇಂತಹ ಸಮಾವೇಶಗಳು ಅರ್ಥಪೂರ್ಣ ಎನಿಸುತ್ತವೆ. ಈ ಬಾರಿಯ ಸಮಾವೇಶದಲ್ಲಿ ನಾಲ್ಕು ಪ್ರಮುಖ ಅಂಶಗಳು ಮುನ್ನೆಲೆಗೆ ಬಂದವು. ಅವುಗಳೆಂದರೆ: ಹವಾಮಾನ ಬದಲಾವಣೆ, ಸಾಂಕ್ರಾಮಿಕ ರೋಗಗಳು, ಮಾಲಿನ್ಯ ಮತ್ತು ಅತಿರೇಕದ ಮಟ್ಟ ತಲುಪಿರುವ ಆರ್ಥಿಕ ಅಸಮಾನತೆ.

ಇವಿಷ್ಟೂ ಅಂಶಗಳು ಜಾಗತಿಕವಾಗಿ ಎಲ್ಲ ದೇಶಗಳ ಜನರನ್ನೂ ಕಾಡಿವೆ, ಕಾಡುತ್ತಲೇ ಇವೆ. ಇವುಗಳನ್ನು ಹತೋಟಿಗೆ ತಂದು ಜನರ ನೆಮ್ಮದಿಯ ಬದುಕಿಗೆ ಅವಕಾಶ ಕಲ್ಪಿಸಬೇಕಾದ ತುರ್ತು ಈಗ ಹಿಂದೆಂದಿಗಿಂತಲೂ ಅಧಿಕವಾಗಿದೆ. ಕೊರೊನಾ ಕಾಲಘಟ್ಟದಲ್ಲಿ ಭಾರತದಲ್ಲೇ ಕೆಲವರು ಶತಕೋಟ್ಯಧಿಪತಿಗಳಾದರು. ಕೋಟ್ಯಂತರ ಜನ ಮಹಾಮಾರಿಯಿಂದ ತತ್ತರಿಸಿ ಹೋಗಿದ್ದಾಗ, ಕೆಲವರಿಗೆ ಅದು ಲಾಭಕ್ಕೆ ದಾರಿ ಮಾಡಿಕೊಡುವ ಮೆಟ್ಟಿಲಾದದ್ದು ವಿಷಾದದ ಸಂಗತಿಯಲ್ಲವೇ? ಇದು ಭಾರತಕ್ಕಷ್ಟೇ ಸೀಮಿತವಾದ ಸಂಗತಿಯಲ್ಲ. ವಿಶ್ವದ 180 ರಾಷ್ಟ್ರಗಳ ಪೈಕಿ 117ರಲ್ಲಿ ಇಂತಹದೇ ಸ್ಥಿತಿ ನಿರ್ಮಾಣವಾಗಿತ್ತು.

ಮುಂದಿನ ಪೀಳಿಗೆಯ ಭವಿಷ್ಯ, ಅವರಿಗೆ ಇರುವ ಬದುಕುವ ಹಕ್ಕು ಮತ್ತು ಪರಿಸರಾತ್ಮಕವಾಗಿ ಆಗಬೇಕಿರುವ ಬದಲಾವಣೆಗಳ ಬಗ್ಗೆ ವಿವಿಧ ದೇಶಗಳ ವಿಜ್ಞಾನಿಗಳು ಮತ್ತು ನಾಯಕರು ನ್ಯೂಯಾರ್ಕ್ ಸಮಾವೇಶದಲ್ಲಿ ಬೆಳಕು ಚೆಲ್ಲಿದರು. ಗಾಳಿ, ನೀರು, ಬೆಟ್ಟಗುಡ್ಡ, ಜೈವಿಕ ವೈವಿಧ್ಯ ಇವೆಲ್ಲವೂ ನಮಗೆ ಭೂಮಿತಾಯಿ ನೀಡಿರುವ ಅಪೂರ್ವವಾದ ಕೊಡುಗೆಗಳು. ಆದರೆ ಈ ನೈಸರ್ಗಿಕ ಕೊಡುಗೆಗಳು ನಿರಂತರವಾಗಿ, ನಿರ್ದಯವಾಗಿ ಹಾಳುಗೆಡವಲ್ಪಟ್ಟಿವೆ. ದುರಸ್ತಿ ಮಾಡಲು ಸಾಧ್ಯವೇ ಇಲ್ಲ ಎಂಬಷ್ಟರಮಟ್ಟಿಗೆ ನಾವು ವಿಕೃತಿಯನ್ನು ಮೆರೆದಿದ್ದೇವೆ.

ಹದಿನಾಲ್ಕನೇ ಶತಮಾನದ ಕ್ರಿಸ್ಟೊಫರ್ ಕೊಲಂಬಸ್‌ನ ಕಾಲದಿಂದಲೇ ಇಂತಹ ಪ್ರವೃತ್ತಿ ಜಾಗತಿಕವಾಗಿ ಜನಸಮೂಹದ ಮನದಲ್ಲಿ ಬೇರೂರಿದೆ. ‘ನಾವು ಚೆನ್ನಾಗಿ ಬದುಕಿದರೆ ಸಾಕು. ನಾಳೆಯ, ಭವಿಷ್ಯದ ಚಿಂತೆ ನಮಗೇಕೆ? ಪ್ರಕೃತಿಯಲ್ಲಿ ಸಿಗುವ ಎಲ್ಲವನ್ನೂ ದೋಚಿ ಸುಖಪಡೋಣ’ ಎಂಬ ತತ್ವಕ್ಕೆ ಬಹುಪಾಲು ಮಂದಿ ಅಂಟಿಕೊಂಡಿದ್ದಾರೆ. ಅದರಲ್ಲೂ ಹಿಂದಿನ ಮೂರ್ನಾಲ್ಕು ದಶಕಗಳಲ್ಲಿ ಆಗಿರುವ ವಿಧ್ವಂಸಕ ಕೃತ್ಯಗಳಂತೂ ಅಕ್ಷಮ್ಯ. ಪರಿಸರಹಾನಿ ಮತ್ತು ತತ್ಪರಿಣಾಮವಾಗಿ ಆಗಿರುವ ಪಾರಿಸರಿಕ ಬದಲಾವಣೆಗಳಿಗೆ ಇಂದಿನ ಪೀಳಿಗೆಯವರೇ ಪ್ರಮುಖ ಹೊಣೆಗಾರರು. ಪರಿಸರದ ನ್ಯಾಯಕ್ಕೆ ವಿರುದ್ಧವಾಗಿ ನಡೆದುಕೊಂಡಾಗ ಆಗುವ ಅನಾಹುತಗಳನ್ನು ಯಾವ ವಿಜ್ಞಾನದಿಂದಲೂ ತಡೆಯಲಾಗದು ಎಂಬ ಸತ್ಯ ನಮ್ಮ ಅರಿವಿಗೆ ಇನ್ನೂ ಬಂದಿಲ್ಲ. ಈ ಭೂಮಿಯಲ್ಲಿ ಉಸಿರಾಡಲು ಯೋಗ್ಯವಾದ ಪ್ರಾಣವಾಯು ಮತ್ತು ಬದುಕಲು ಸಹನೀಯ ಎನಿಸುವ ವಾತಾವರಣವನ್ನು ಉಳಿಸಿಕೊಳ್ಳುವುದು ನಮ್ಮ ಹೊಣೆ ಎಂಬುದು ನಾವೆಲ್ಲರೂ ಕಡ್ಡಾಯವಾಗಿ ಅರಿತುಕೊಳ್ಳಬೇಕಾದ ಸಂಗತಿ. ಕಾನೂನಾತ್ಮಕವಾಗಿ ಮತ್ತು ನೈತಿಕವಾಗಿ ನಾವು ಇದಕ್ಕೆ ಬದ್ಧರಾಗಿರಬೇಕು.

ಚೆನ್ನೈ ಹೈಕೋರ್ಟ್‌ನ ಮದುರೆ ಪೀಠದ ನ್ಯಾಯಮೂರ್ತಿ ಶ್ರೀಮತಿ ಅವರು ಒಂದು ಐತಿಹಾಸಿಕ ತೀರ್ಪನ್ನು ನೀಡುವ ಮೂಲಕ ಗಮನ ಸೆಳೆದಿದ್ದಾರೆ. ಭೂಮಿತಾಯಿ ಮತ್ತು ಆಕೆಯ ಪ್ರಮುಖ ಘಟಕಗಳನ್ನು ನಮ್ಮ ಸಂವಿಧಾನದ 21ನೇ ವಿಧಿಯ ವ್ಯಾಪ್ತಿಗೆ ತರಬೇಕು. ಭೂಮಿತಾಯಿ ಕೂಡ ಒಂದು ಜೀವಂತ ಘಟಕ, ಆಕೆಗೂ ಬದುಕುವ ಹಕ್ಕಿದೆ ಎಂದು ಅವರು ಹೇಳಿದ್ದಾರೆ. ಮಾಲಿನ್ಯ ನಿಯಂತ್ರಣ ಮಂಡಳಿಗಳು ಮಾಲಿನ್ಯ ತಡೆಯುವಲ್ಲಿ ವಿಫಲವಾಗಿರುವ, ಕುಡಿಯುವ ನೀರಿಗೆ ವಿಷಕಾರಕಗಳು ಸೇರಿಕೊಂಡಾಗ ಆದ ಅನಾಹುತಗಳನ್ನು ತಡೆಯುವಲ್ಲಿ ಸಾಂಸ್ಥಿಕ ವೈಫಲ್ಯ ಕಂಡುಬಂದಿರುವ ಸಂದರ್ಭದಲ್ಲಿ ಇಂತಹದ್ದೊಂದು ತೀರ್ಪು ಹೊರಬಂದಿದೆ.

ಮುಂದಿನ ಪೀಳಿಗೆಯವರ ಬದುಕು ಸಹನೀಯವಾಗಿ ಇರಬೇಕಾದಲ್ಲಿ, ಇಂದಿನ ಪೀಳಿಗೆಯವರ ನಡವಳಿಕೆ ಹೇಗಿರಬೇಕು ಎಂಬುದರ ಬಗೆಗಿನ ನಮ್ಮ ನಿಲುವುಗಳು ಅಪಕ್ವವಾಗಿವೆ ಮತ್ತು ಅಸ್ಪಷ್ಟವಾಗಿವೆ. ಜಾಗತಿಕವಾಗಿ ಎಲ್ಲೆಡೆ ಆಗಿರುವ ಪ್ರಾಕೃತಿಕ ದುರಂತಗಳು ಮಾನವನಿರ್ಮಿತ ಕೃತ್ಯಗಳೇ ಆಗಿವೆ. ಕೆಲವೇ ಮಂದಿ ಇದರ ದುರ್ಲಾಭ ಪಡೆದುಕೊಂಡು ಸ್ವಂತ ಜೋಳಿಗೆ ತುಂಬಿಸಿಕೊಳ್ಳುತ್ತಿರುವುದು ಎಲ್ಲೆಡೆ ಕಾಣುತ್ತದೆ. ನಮ್ಮ ಸರ್ಕಾರಗಳು, ಕಾರ್ಪೊರೇಟ್ ಕಂಪನಿಗಳು, ಬಹುರಾಷ್ಟ್ರೀಯ ಕಂಪನಿಗಳು ಇಂದಿನ ಲಾಭವೊಂದನ್ನೇ ಗುರಿಯಾಗಿಸಿ ಕೆಲಸ ಮಾಡುತ್ತಿವೆಯೇ ವಿನಾ ಭವಿಷ್ಯದ ಬಗೆಗಿನ ಚಿಂತನೆ ಅವಕ್ಕೆ ಇಲ್ಲವೇ ಇಲ್ಲ. ಉದಾಹರಣೆಗೆ, ನಮ್ಮ ಕೃಷ್ಣರಾಜಸಾಗರ ಜಲಾಶಯದ ಕೆಳಭಾಗದಲ್ಲಿನ ಪ್ರದೇಶದಲ್ಲಿ ಮೂರು ಸಾವಿರ ಕೋಟಿ ರೂಪಾಯಿಗೂ ಹೆಚ್ಚು ಹಣ ವೆಚ್ಚ ಮಾಡಿ ಮನರಂಜನಾ ಪಾರ್ಕ್ ನಿರ್ಮಿಸುವ ಕೆಲಸಕ್ಕೆ ಸರ್ಕಾರ ಮುಂದಾಗಿದೆ. ಜನರ ತೆರಿಗೆ ದುಡ್ಡನ್ನು ಈ ರೀತಿಯ ಅಪಕ್ವವಾದ ಉದ್ದೇಶಕ್ಕೆ ವಿನಿಯೋಗಿಸುವುದು, ಪ್ರವಾಸೋದ್ಯಮದ ಅಭಿವೃದ್ಧಿಯ ದೃಷ್ಟಿಯಿಂದ ಹೀಗೆ ಮಾಡಲಾಗುತ್ತಿದೆ ಎಂದು ಹೇಳಿಕೊಳ್ಳುವುದು ಮೂರ್ಖತನದ ಪರಮಾವಧಿ. ನಾಳೆ ಏನಾದರೂ ಅನಾಹುತವಾದರೆ ಸಂಭವಿಸಬಹುದಾದ ಪ್ರಾಣಹಾನಿ, ಆಸ್ತಿಪಾಸ್ತಿ ಹಾನಿಯ ಅಂದಾಜನ್ನು ಯಾರೂ ಮಾಡಿದಂತಿಲ್ಲ.



ನೀತಿ ಆಯೋಗವಾಗಲೀ ಸರ್ಕಾರದ ಉನ್ನತ ಸ್ತರದಲ್ಲಿರುವ ನೀತಿ ನಿರೂಪಕರಾಗಲೀ ಪರಿಸರ ಪ್ರದೇಶಗಳ ಬಗ್ಗೆ ಕಿಂಚಿತ್ತೂ ಚಿಂತನೆ ಮಾಡುತ್ತಿಲ್ಲ. ಹಿಮಾಲಯ, ಲಕ್ಷದ್ವೀಪ, ಪಶ್ಚಿಮ- ಪೂರ್ವಘಟ್ಟವು ನೈಸರ್ಗಿಕವಾಗಿ ಅತಿಸೂಕ್ಷ್ಮ ಪ್ರದೇಶಗಳು. ಇಂತಹ ಜಾಗಗಳಲ್ಲಿ ರಸ್ತೆಗಳು, ಹೆದ್ದಾರಿಗಳು, ಸುರಂಗಮಾರ್ಗಗಳು ನಿರ್ಮಾಣವಾಗುತ್ತಿವೆ. ಪಶ್ಚಿಮಘಟ್ಟಗಳಲ್ಲಿ ವಿವಿಧ ಬಗೆಯ ಗಣಿಗಾರಿಕೆಗಳಿಗೆ ಅವಕಾಶ ಕೊಡಲಾಗಿದೆ. ಮಾರ್ಬಲ್, ಗ್ರ್ಯಾನೈಟ್‌ಗಳಿಗಾಗಿ ಭೂಮಿತಾಯಿಯ ಒಡಲು ಬಗೆಯಲಾಗುತ್ತಿದೆ. ಕಟ್ಟಡಗಳ ನಿರ್ಮಾಣಕ್ಕಾಗಿ ಎಂ. ಸ್ಯಾಂಡ್ ತಯಾರಿಸಲು ನಮ್ಮ ಕಲ್ಲು-ಬೆಟ್ಟಗಳನ್ನು ಪುಡಿ ಮಾಡಲಾಗುತ್ತಿದೆ.

ಪರ್ವತಗಳು ಹಾಗೂ ಬೆಟ್ಟಗುಡ್ಡಗಳು ಭೂಮಿಯ ಸ್ಥಿರತೆ, ಭದ್ರತೆಯನ್ನು ದೃಢಪಡಿಸುವ ಪ್ರಾಕೃತಿಕ ನಿರ್ಮಿತಿಗಳು. ಆದರೆ ಈಗ ಆಗುತ್ತಿರುವುದೇನು? ಎಲ್ಲೆಡೆ ವಿಧ್ವಂಸಕತೆ, ಭೂಮಾತೆಯನ್ನು ತುಂಡರಿಸಿ ಗಾಸಿ ಮಾಡುವ ಕೆಲಸ ನಡೆಯುತ್ತಿದೆ. ನಮ್ಮ ಪುರಾತನ ಗ್ರಂಥಗಳಾದ ಋಗ್ವೇದ ಮತ್ತು ಉಪನಿಷತ್ತುಗಳಲ್ಲಿ, ಭೂಮಿತಾಯಿಯ ಆರೋಗ್ಯವನ್ನು ಕಾಪಾಡುವ ದಿಸೆಯಲ್ಲಿ ನಾವೇನು ಮಾಡಬೇಕು ಎಂಬ ತತ್ವಗಳು ಉಲ್ಲೇಖವಾಗಿವೆ. ಎಲ್ಲ ಜೀವಜೀವಿಗಳ ಉಗಮವಾದಾಗಿನಿಂದಲೂ ಪರಸ್ಪರ ಅವಲಂಬನೆ ಮತ್ತು ನೆಮ್ಮದಿಯ ಬದುಕಿಗೆ ಬೇಕಾದ ಸರಳಸೂತ್ರಗಳ ಅನುಸರಣೆ ಎಲ್ಲೆಡೆ ಇತ್ತು. ಯಾರೂ ಪ್ರಕೃತಿಹನನ ಮಾಡುವಂತಹ ದುಷ್ಕೃತ್ಯಗಳನ್ನು ಮಾಡುತ್ತಿರಲಿಲ್ಲ. ಅಂತಹದ್ದೊಂದು ಆಧ್ಯಾತ್ಮಿಕ ಚಿಂತನೆ ಜನರಲ್ಲಿತ್ತು.

ಪೀಳಿಗೆಗಳ ನಡುವೆ ಪಾರಿಸರಿಕ ಐಕಮತ್ಯ ಸಾಧಿಸುವ ದಿಸೆಯಲ್ಲಿ ಕೊಲಂಬಿಯಾದಲ್ಲಿ ತೆಗೆದುಕೊಳ್ಳಲಾದ ಐತಿಹಾಸಿಕ ನಿರ್ಣಯ ನಮ್ಮ ಮುಂದಿದೆ. ಎಲ್ಲ ಸರ್ಕಾರಗಳು, ನ್ಯಾಯಾಲಯಗಳು ಭೂಮಿತಾಯಿಯನ್ನು ರಕ್ಷಿಸುವ ದಿಸೆಯಲ್ಲಿ ಕೆಲಸ ಮಾಡುವುದಕ್ಕೆ ಕಟಿಬದ್ಧವಾದಾಗ ಮಾತ್ರ ಬದಲಾವಣೆ ಸಾಧ್ಯ. ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಕೂಡ ಇಂತಹ ತತ್ವ ಮತ್ತು ಸೂತ್ರಗಳನ್ನು ಒಪ್ಪಿಕೊಂಡಿದೆ. ಪರಿಸರದ ವಿಚಾರದಲ್ಲಿ ಕಾನೂನಾತ್ಮಕವಾಗಿ ತೀರ್ಮಾನ ತೆಗೆದುಕೊಳ್ಳುವಲ್ಲಿ ಹಿಂದೆಬಿದ್ದಿಲ್ಲ.

ಪರಿಸರದ ಆರೋಗ್ಯ ಎಲ್ಲಕ್ಕಿಂತ ಪರಮೋಚ್ಚವಾದ ಸಂಗತಿ. ಮುಂದಿನ ಪೀಳಿಗೆಯ ಭವಿಷ್ಯತ್ತು ಕರಾಳವಾಗದಂತೆ ಇಂದು ನಾವು ನಮ್ಮ ವರ್ತನೆಗಳನ್ನು ರೂಪಿಸಿಕೊಳ್ಳಬೇಕು. ಮಾನವ ಸಂಬಂಧಗಳಲ್ಲಿರುವ ಸ್ವಾರ್ಥಪರ ಮನೋಭಾವವನ್ನು ತೊಡೆಯಬೇಕು, ಭೂಮಿತಾಯಿಯ ಗರ್ಭದಲ್ಲಿರುವ ಸಮಗ್ರ ಆಸ್ತಿ ನಮಗೆ ಮಾತ್ರವಲ್ಲ, ಮುಂದಿನ ಪೀಳಿಗೆಗಳಿಗೂ ಒಟ್ಟು ಸಮಷ್ಟಿಗೂ ಸೇರಿದ್ದು ಎಂಬ ಆಧ್ಯಾತ್ಮಿಕ ಚಿಂತನೆ ನಮ್ಮಲ್ಲಿ ಬೇರೂರಬೇಕು. ಆಗ ಮಾತ್ರ ಇವೆಲ್ಲವೂ ಸಾಧ್ಯ. ಇಂದು ಸರ್ಕಾರದ ಮತ್ತು ಖಾಸಗಿ ಮಾಲೀಕತ್ವದ ಎಲ್ಲ ಸಂಘಟನೆಗಳು ಒಂದಾಗಿ, ಭೂಮಿಯ ಸುಸ್ಥಿರತೆ ಹಾಗೂ ಆರೋಗ್ಯವನ್ನು ಕಾಪಾಡುವ ದಿಸೆಯಲ್ಲಿ ಒಗ್ಗಟ್ಟಿನ ತೀರ್ಮಾನ ತೆಗೆದುಕೊಳ್ಳಬೇಕು.

ಈ ಭೂಮಿ ನಮ್ಮೆಲ್ಲರ ಆಸ್ತಿ. ನಮ್ಮ ಮುಂದಿನ ಪೀಳಿಗೆಗಳಿಗೂ ಅದರ ಮೇಲೆ ಹಕ್ಕುಸ್ವಾಮ್ಯವಿದೆ. ಭೂಮಿತಾಯಿಯ ಒಡಲನ್ನು ಬಗೆದು ಖಾಲಿ ಮಾಡಿ, ಅವಳನ್ನು ಇಂದೇ ದಿವಾಳಿ ಮಾಡುವ ಕೃತ್ಯಕ್ಕೆ ಕೈ ಹಾಕುವುದು ಅಕ್ಷಮ್ಯ ಅಪರಾಧ.

ಚುರುಮುರಿ



ಆಕಾಂಕ್ಷಿಯ ಆಕಾಂಕ್ಷೆ!

• ಗುರು ಪಿ.ಎಸ್.

‘ಯಾಕ್ ಸರ್ ತಲೆ ಮೇಲೆ ಕೈ ಹೊತ್ಕೊಂಡು ಕೂತಿದೀರ?’ ಕೇಳಿದ ಮುದ್ದಣ್ಣ.

‘ಏನ್ ಹೇಳೋದು ಬಿಡು ಮುದ್ದಣ್ಣ, ಯಾರ್ ನಮ್ಮೋರು, ಯಾರು ಹೊರಗಿನೋರು, ಮತ್ತ್ಯಾರು ಹಿತಶತ್ರುಗಳು ಅಂತಾನೇ ಗೊತ್ತಾಗ್ತಿಲ್ಲ’ ಬೇಸರದಲ್ಲಿ ಹೇಳಿದರು ಪಂಚಾಯಿತಿ ಅಧ್ಯಕ್ಷ ವಿಜಿ.

‘ಕೆಲವರು ಹಾಗೇ ಇರ್ತಾರೆ ಸರ್, ನಿಮ್ಮ ಪದವಿ ಮೇಲೆ ಒಬ್ಬಿಬ್ಬರ ಕಣ್ಣಾ ಇರುತ್ತೆ?’

‘ಅದು ನಂಗೂ ಗೊತ್ತು. ಆದರೆ, ಯಾರು ಹೆಂಗೆ ಅಂತಾನೇ ಗೊತ್ತಾಗ್ತಿಲ್ಲ’.

‘ಅದಕ್ಯಾಕೆ ಯೋಚನೆ ಮಾಡ್ತೀರಿ ಸರ್, ನನಗೆ ಅಂಜನ ಪ್ರಯೋಗ ಗೊತ್ತು. ಯಾರ ಮನದಲ್ಲೇನಿದೆ ಅಂತ ಅಂಜನ ಹಾಕಿ ನೋಡಿ ಹೇಳ್ಲಾ?’ ಕೇಳಿದ ಮುದ್ದಣ್ಣ.

‘ಸರಿ, ಒಬ್ಬೊಬ್ಬರದೇ ಫೋಟೊ ಕೊಡ್ತೀನಿ, ಅವರು ಹೆಂಗೆಂಗೆ ಅಂತ ನೋಡಿ ಹೇಳು’.

‘ಸರ್, ಇವರು ಮಹಾ ಮಹತ್ವಾಕಾಂಕ್ಷಿ. ನಿಮ್ಮ ಪದವಿ ಎಂಬ ಕೈಲಾಸದ ಮೇಲೆ ಈ ಶಿವನದೂ ಕಣ್ಣಿದೆ. ಆದರೆ, ಮನದಲ್ಲಿರೋದನ್ನ ಆಡಂಗಿಲ್ಲ, ಅನುಭವಿಸಂಗಿಲ್ಲ ಅನ್ನೋ ಸ್ಥಿತಿಯಲ್ಲಿದ್ದಾರೆ’.

‘ಇನ್ನು ಇವರು, ಅವಕಾಶವಿದ್ದರೆ ಕುಮಾರ ಪರ್ವತವನ್ನೇ ಕೊಟ್ಟರೂ ಬೇಡ ಎನ್ನುವವರಲ್ಲ. ಅದೇ ರೀತಿ, ನೀವೆಂದರೆ ಸ್ವಲ್ಪವೂ ಇಷ್ಟವಿಲ್ಲ. ಆದರೆ, ನೀವು ಹೋಗಿ ಬೇರೆಯವರು ಬಂದರೆ ಊದುವುದು ಕೊಟ್ಟು, ಬಾರಿಸುವುದನ್ನು ತೆಗೆದುಕೊಂಡಂತಾಗುತ್ತದೆ ಎಂಬ ಕಾರಣಕ್ಕೆ, ನಿಮ್ಮ ರಾಜೀನಾಮೆಗೆ ಇವರು ಒತ್ತಾಯಿಸುತ್ತಿಲ್ಲ’.

‘ಈ ಫೋಟೊ ನೋಡಿ ಹೇಳು’.

‘ಈಗ ಅನಿವಾರ್ಯ ಕರ್ಮ ಎಂಬಂತೆ ತಮ್ಮ ಹುದ್ದೆ ನಿಭಾಯಿಸುತ್ತಿರುವ ಇವರಿಗೆ ತಮ್ಮ ಪಕ್ಷದೊಳಗಿನ ಶೋಕವನ್ನು ಕಡಿಮೆ ಮಾಡುವುದೇ ಸವಾಲಾಗಿದೆ. ನೀವು ಜಾಗ ಖಾಲಿ ಮಾಡಿ, ಅವರ ಸಮುದಾಯದವರೇ ಪದವಿಗೇರುವುದು ಇವರಿಗೆ ಎಳ್ಳಷ್ಟೂ ಇಷ್ಟವಿಲ್ಲ. ಹೀಗಾಗಿ, ಮೇಲ್ನೋಟಕ್ಕೆ ಇವರ ವಿರೋಧವಷ್ಟೇ’.

‘ಅಂದ್ರೆ, ವಿರೋಧಪಕ್ಷದ ಯಾರಿಗೂ ನನ್ನ ಬಗ್ಗೆ ವಿರೋಧವಿಲ್ಲ ಅಂತಾಯ್ತು’ ಖುಷಿಪಟ್ಟರು ಅಧ್ಯಕ್ಷರು.

‘ಆದರೆ, ನನಗಿದೆಯಲ್ಲ ಸರ್...’

‘ಹಾಂ! ನಿನಗಾ?’

‘ನಾನೂ ಅಧ್ಯಕ್ಷ ಹುದ್ದೆ ಆಕಾಂಕ್ಷಿ!’

ಸಂಗತ

ಮಾತು ಆಡುವ ಮುನ್ನ...

ಸಲ್ಲದ ಮಾತುಗಳನ್ನಾಡಿ, ಬಳಿಕ ಹಾಗೆ ಹೇಳಿಯೇ ಇಲ್ಲವೆಂದರೆ ಎರಡು ಬಾರಿ ಪ್ರಮಾದವನ್ನು ಎಸಗಿದಂತೆ ಅಲ್ಲವೆ?

• ಯೋಗಾನಂದ

ಜನಪ್ರತಿನಿಧಿಗಳು ನಮ್ಮ ಪರಂಪರೆ, ಸಂಸ್ಕೃತಿಯನ್ನು ಜನಮಾನಸದಲ್ಲಿ ಬಿಂಬಿಸುತ್ತಾರೆ ಎನ್ನುವುದು ನಿರೀಕ್ಷೆ. ಆದರೆ ಅವರು ವಾಕ್‌ಶುದ್ಧಿ ಕಾಪಿಟ್ಟುಕೊಳ್ಳದೆ ವಿನಾಕಾರಣ ಜನಾಕ್ರೋಶಕ್ಕೆ ಗುರಿಯಾಗುವುದನ್ನು ಕಾಣುತ್ತಿದ್ದೇವೆ. ನಾವು ಆಡುವ ಮಾತುಗಳು ನಮ್ಮ ಅಸ್ಮಿತೆ, ಮನೋಭಾವದ ಪ್ರತೀಕ. ಮಾತಿಗೆ ಆಯ್ಕೆ ಮಾಡಿಕೊಳ್ಳುವ ಪದಗಳು ಕೇಳುಗರಿಗೆ ನಮ್ಮ ಬುದ್ಧಿವಂತಿಕೆ ಅಥವಾ ದಡ್ಡತನದ ಸೂಚಕ. ಪದಗಳು ಒಮ್ಮೆ ಬಾಯಿಂದ ಹೊರಬಂದ ನಂತರ ಎಷ್ಟೇ ಪರಿಪರಿಯಾಗಿ ಕ್ಷಮೆ ಯಾಚಿಸಿದರೂ ತೊಡೆದು ಹಾಕಲಾಗದು. ಚಿಂತಿಸದೆ ಎಡವಿದೆನಲ್ಲ ಎಂಬ ಅಪರಾಧಪ್ರಜ್ಞೆ ಕ್ಷಮಾಪಣೆಯ ಹಿಂದೆ ಇದ್ದೇ ಇರುತ್ತದೆ.

ಸಂಯಮದಿಂದ ಆಲಿಸದಿರುವುದೇ ತರಾತುರಿಯ ಮಾತಿಗೆ ಮೂಲ. ಆತುರದ ಮಾತಿನಲ್ಲಿ ಪರನಿಂದೆಗಳು ನುಸುಳಿರುತ್ತವೆ. ಶಬ್ದಗಳು ಕಣ್ಣಿಗೆ ಕಾಣವು, ಆದರೆ ಅವು ಅಳಿಸಲಾಗದ ಗಾಯದ ಕಲೆಗಳನ್ನು ಉಳಿಸಿಬಿಟ್ಟಿರುತ್ತವೆ. ಮಾತು ಬಲ್ಲವನಿಗೆ ಜಗಳದ ಹಂಗಿರದು. ಮಾತು ಮುತ್ತಾಗಬಹುದು, ಅದು ಮೃತ್ಯುವಿಗೂ ಮೂಲವಾಗಬಹುದು. ಗೌತಮ ಬುದ್ಧ ‘ಪ್ರತಿ ಮನುಷ್ಯನೂ ತನ್ನ ಬಾಯಲ್ಲಿ ಕೊಡಲಿಯಿಟ್ಟುಕೊಂಡೇ ಜನಿಸುತ್ತಾನೆ. ದಡ್ಡನು ನಿಂದನೀಯ ಮಾತಿನಿಂದ ತನ್ನನ್ನು ಮತ್ತು ಪರರನ್ನು ಕೊಯ್ಯುತ್ತಾನೆ’ ಎಂದಿದ್ದಾನೆ. ಬೇಜವಾಬ್ದಾರಿಯುತವಾದ ಒಂದೇ ಒಂದು ಪದಪ್ರಯೋಗವು ಸಮಾಜದ ಶಾಂತಿ, ಸಾಮರಸ್ಯವನ್ನು ಕಲಕಬಹುದು. ಅದರ ಪರ ಮತ್ತು ವಿರುದ್ಧದ ಚಳವಳಿಗಳಿಂದ ಅಮಾಯಕರೇ ಹೆಚ್ಚು ಬವಣೆಪಡುವವರು. ಸಲ್ಲದ ಮಾತುಗಳನ್ನಾಡಿ, ಬಳಿಕ ಹಾಗೆ ಹೇಳಿಯೇ ಇಲ್ಲವೆಂದರೆ ಎರಡು ಬಾರಿ ಪ್ರಮಾದವನ್ನು ಎಸಗಿದಂತೆ ಅಲ್ಲವೆ? ನಿಮ್ಮ ಮಾತನ್ನು ನೀವೇ ಆಲಿಸಿದಾಗ ಅದು ಸಿಹಿಯಾಗಿರಲಿ ಎನ್ನುವುದು ಪ್ರಖರ ಹಿತೋಕ್ತಿ.

ಕುಹಕ ಮಾತು ವೈರತ್ವವನ್ನು ಹೆಚ್ಚಿಸುತ್ತದೆ. ಹಾಗಾದಾಗ ಇನ್ನೆಲ್ಲಿಯ ಸಾಂಘಿಕ ಬದುಕು, ಸಮಾಜವಾದ? ನಯವಾದ ನುಡಿ ಒಂದು ಸಾಮಾಜಿಕ ಕೌಶಲ. ಮುನಿಸಿಕೊಂಡರೆ ಸಾಕುಪ್ರಾಣಿಗಳೂ ವೇದನೆ ಪಡುತ್ತವೆ. ಬಹುಜನ ಬಳಸುವರೆ, ಸರ್ವಸಮ್ಮತವೆ, ವಿವಾದಾತೀತವೆ ಎಂದು ಖಾತರಿಪಡಿಸಿಕೊಂಡೇ ನಿಘಂಟು ರಚನೆಕಾರರು ಶಬ್ದಗಳನ್ನು ಸೇರಿಸುತ್ತಾರೆ. ಮಹಾಕವಿ ಭಾರವಿ ‘ಹಿತವೂ ಮನೋಹರವೂ ಆದ ಮಾತು ವಿರಳ’ ಎನ್ನುತ್ತಾನೆ. ಶರಣರು ಮಾತನ್ನು ಜ್ಯೋತಿರ್ಲಿಂಗವಾಗಿ ಕಂಡಿದ್ದಾರೆ. ಮಾತಾಡುವ ಮುನ್ನ ಆಲೋಚಿಸಿದರೆ, ಬಳಸುವ ಪದಗಳ ಪರಿಣಾಮ ತಿಳಿಯಲು ಸಮಯ ಲಭಿಸುತ್ತದೆ. ಕಟುಪದಗಳು ಭೌತಿಕ ಥಳಿತಕ್ಕಿಂತ ಹೆಚ್ಚು ನೋವುಕಾರಕಗಳು.

ಚೆನ್ನಾಗಿ ಚಿಂತಿಸಿದ ಬಳಿಕ ಮೂಡಿಬರುವ ಮಾತನ್ನು ಮಂದಿ ಮೆಚ್ಚುತ್ತಾರೆ. ವಿವಾದಕ್ಕೆ ಆಸ್ಪದವಾಗದ ಪದಗಳ ಬಳಕೆ ಸಂಭಾವ್ಯ ಗೊಂದಲವನ್ನು ತಪ್ಪಿಸುವುದು. ಯಾರೇ ಒಬ್ಬರನ್ನು ನಿಂದಿಸುವುದು ತರವಾಗದು. ‘ಊಟ ವಿತರಣೆಯಲ್ಲಿ ಜಿಪುಣತನ’ ಎಂಬ ಕಟಕಿ ಅನಿವಾರ್ಯ ಆಗಬಾರದು. ಬದಲಿಗೆ, ‘ಧಾರಾಳವಾಗಿ ಬಡಿಸಿದಿರಿ, ಆದರೆ ಸೌಟು ಚಿಕ್ಕದು’ ಎನ್ನಬಹುದಲ್ಲ! ‘ಛೇ! ಹಾಳೆ ಹರಿದಿದೆಯಲ್ಲ, ಈಗ ಯಾವುದರ ಮೇಲೆ ಬರೆಯುತ್ತೀ?’ ಎಂದು ಲೋಪದ ಪರಿಣಾಮವನ್ನು ವಿವರಿಸಿದರಾಯಿತು. ಮಗು ಕೂಡ ವಿಶ್ವಾಸಕ್ಕೆ ಮಣಿಯುತ್ತದೆ. ಅಂತೆಯೇ ‘ನಿಮ್ಮ ಪೈಕಿ ಅರ್ಧದಷ್ಟು ಮೂರ್ಖರಿದ್ದಾರೆ’ ಎನ್ನುವ ಬದಲು ‘ಅರ್ಧದಷ್ಟು ಬುದ್ಧಿವಂತರು’ ಎನ್ನಬಹುದಲ್ಲ! ಮಾತಿಗೆ ತಿಳಿವಿನೋದದ ಸ್ಪರ್ಶವಿದ್ದರೆ ಬಂಗಾರಕ್ಕೆ ಕಳಶವಿಟ್ಟಂತೆ.

ನಾವು ತಮಾಷೆ, ಹುಡುಗಾಟಿಕೆ ಎಂದು ಭಾವಿಸುವುದು ಇತರರ ಮನಸ್ಸನ್ನು ತೀವ್ರವಾಗಿ ಬಾಧಿಸಬಹುದು. ನಮ್ಮ ಉದ್ದೇಶ ಒಳ್ಳೆಯದೇ ಇದ್ದರೂ ಅದನ್ನು ಯಾರಾದರೂ ಅಪವ್ಯಾಖ್ಯಾನಿಸಿದರೆ, ಅದಕ್ಕೆ ತರಾವರಿ ಬಣ್ಣ ಹಚ್ಚಿದರೆ ಪರಿಸ್ಥಿತಿ ಘೋರ. ಕೋಲು, ಕಲ್ಲು ಮೂಳೆ ಮುರಿಯಬಹುದು, ಆದರೆ ಒರಟು ಶಬ್ದಗಳು ಸರ್ವದಾ ಪರರನ್ನು ನೋಯಿಸುತ್ತವೆ. ನಾವು ಉದ್ಗರಿಸುವ ಶಬ್ದಗಳು ಜಗತ್ತನ್ನು ಹೇಗೆ ನಿರೂಪಿಸುತ್ತೇವೆ ಎನ್ನುವುದನ್ನು ಸಾದರಪಡಿಸುತ್ತವೆ. ಶಬ್ದಗಳು ಎಲ್ಲ ಬಗೆಯ ಹಿಂಸೆಯಿಂದ ಮುಕ್ತವಾದ, ಎಲ್ಲ ಜೀವಿಗಳನ್ನೂ ಗೌರವಿಸುವ, ಎಲ್ಲ ಜನರನ್ನೂ ಮಾನ್ಯ ಮಾಡುವ ಸಮಾಜವನ್ನು ಕಟ್ಟುತ್ತವೆ. ಹಾಗಾಗಿ ಒಂದೊಂದೂ ಶಬ್ದವನ್ನು ಅಳೆದು, ತೂಗಿಯೇ ಪ್ರಯೋಗಿಸಬೇಕು.



ಭಾಷೆ ಒಂದು ದಿವ್ಯ ಶಕ್ತಿ. ನಾವು ನುಡಿಯುವಾಗ ವಾಸ್ತವವನ್ನು ರೂಪಾಂತರಿಸಲು ಭಾಷೆಯ ಸಾಮರ್ಥ್ಯವನ್ನು ಚಲಾಯಿಸುತ್ತೇವೆ. ಕಡಲಿಗೆ ಕಲ್ಲು ಒಗೆದಾಗ ಅದು ತಳಕ್ಕೆ ಹೋಗುವುದು ಸರಿ. ಆದರೆ ಅದು ಎಷ್ಟು ಆಳಕ್ಕೆ, ಎಷ್ಟು ವೇಗವಾಗಿ ಮುಳುಗುತ್ತದೆ ಎನ್ನುವುದನ್ನು ತಿಳಿಯಲಾಗದು. ಒರಟು ಶಬ್ದಗಳ ಬಳಕೆಯೂ ಅಂತೆಯೆ. ಅವು ಯಾರ ಮನಸ್ಸನ್ನು ಹೇಗೆ ಪೀಡಿಸುತ್ತವೊ ಗೊತ್ತಾಗದು. ಹರಿಯಬಿಟ್ಟ ಒಂದೇ ಒಂದು ಒಕ್ಕಣೆಯು ಅತಿ ಪ್ರೀತಿ, ವಿಶ್ವಾಸವನ್ನೂ ಕಸಿದು ಸ್ನೇಹ, ಸಂಬಂಧಗಳಿಗೆ ಭಂಗ ತರಬಹುದು. ಹಾಗಾಗಿ, ಶಬ್ದಗಳಿಗೆ ಅರ್ಥ ತುಂಬುವಾಗ ಬಲು ಎಚ್ಚರ ಬೇಕು.

ಮನಸ್ಸಿಗೆ ಬಂದ ಎಲ್ಲ ಆಲೋಚನೆಗಳನ್ನೂ ವ್ಯಕ್ತಪಡಿಸಬೇಕಿಲ್ಲ. ಸಿಟ್ಟು ಬಂದಾಗ ತುಸು ಮಾತು ನಿಲ್ಲಿಸಿ, ಆಡಹೊರಟ ಕಠೋರ ಪದಗಳನ್ನು ನಿವಾರಿಸಿಕೊಳ್ಳುವುದು ಜಾಣತನ. ವೀರಾವೇಶದಿಂದ ಕಟುವಾಗಿ ಮಾತನಾಡುವವರು ಮೇಲ್ನೋಟಕ್ಕೆ ಬಲಾಢ್ಯರಂತೆ ತೋರಿಯಾರು. ಆದರೆ ಅದು ಅಹಮಿಕೆಯನ್ನಷ್ಟೇ ಹೆಚ್ಚಿಸುವ ಹುಸಿ ಸಾಮರ್ಥ್ಯ. ಯಾರನ್ನೂ ದೂಷಿಸದ, ಕಣ್ಣಲ್ಲಿ ಕಣ್ಣಿಟ್ಟು ಆಡುವ ನುಡಿಗಳು ಮೆಚ್ಚುಗೆ ಗಳಿಸುತ್ತವೆ. ಸ್ಪಷ್ಟವಾಗಿ, ಸಂಕ್ಷಿಪ್ತವಾಗಿ ಮಾತನಾಡಿದರೆ ಕಟುವಾದ ಒಕ್ಕಣೆಗಳು ಇಣುಕವು.

ವಾಚಕರ ವಾಣಿ

ಸತ್ಯಾಸತ್ಯತೆ ತೆರೆದಿಡಲು ಅವಕಾಶ

ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ತಮ್ಮ ವಿರುದ್ಧ ತನಿಖೆಗೆ ರಾಜ್ಯಪಾಲರು ನೀಡಿದ್ದ ಅನುಮತಿಯನ್ನು ಪ್ರಶ್ನಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿರುವುದು ಸ್ವಾಗತಾರ್ಹ. ಪ್ರಕರಣದ ಬಗೆಗಿನ ಸತ್ಯಾಸತ್ಯತೆಯನ್ನು ಪಾರದರ್ಶಕವಾಗಿ ಜನರ ಮುಂದೆ ತೆರೆದಿಡಲು ಅನುವಾಗುವ ತನಿಖೆಗೆ ಈ ತೀರ್ಪು ಅವಕಾಶ ಮಾಡಿಕೊಟ್ಟಿದೆ.

ಕೆ.ಎನ್.ರಂಗಸ್ವಾಮಿ, ಉಜಿರೆ

ತಿನ್ನುವ ರೊಟ್ಟಿಯೇ ಪ್ರಸಾದ...

‘ಏನಾದರೂ ಆಗು ಮೊದಲು ಮಾನವನಾಗು’ ಎಂಬ ಪದ್ಯ ಬರೆದ ಸಿದ್ಧಯ್ಯ ಪುರಾಣಿಕ ಅವರು ತಮ್ಮ ಇನ್ನೊಂದು ಕವಿತೆಯಲ್ಲಿ ‘...ತಿನ್ನುವ ರೊಟ್ಟಿಯೇ ಪ್ರಸಾದ, ಕುಡಿಯುವ ನೀರೇ ತೀರ್ಥ...’ ಎಂದೂ ಬರೆದಿದ್ದಾರೆ. ಬಸವಾದಿ ಶರಣರ, ಎಲ್ಲ ಮಹಾತ್ಮರ ಸಂದೇಶವೂ ಇದೇ ಆಗಿದೆ. ಅಂದರೆ ಯಾವುದೋ ದೇವಸ್ಥಾನದಲ್ಲಿ ಪಡೆಯುವ ಪ್ರಸಾದವಷ್ಟೇ ಪ್ರಸಾದವಲ್ಲ, ನಾವು ಪ್ರತಿನಿತ್ಯ ಸೇವಿಸುವ ಆಹಾರವೂ ನಾವು ನಂಬಿದ ದೇವರ ‘ಪ್ರಸಾದ’ವೇ ಆಗಿರುತ್ತದೆ. ಇದನ್ನರಿತು ನಡೆದರೆ ನಿಜವಾದ ಭಕ್ತರಿಗೆ ಯಾವ ಸಮಸ್ಯೆಯೂ ಇರುವುದಿಲ್ಲ. ತಿರುಪತಿಯ ಲಾಡುವಿನಲ್ಲಿ ಪ್ರಾಣಿಗಳ ಕೊಬ್ಬಿನ ಅಂಶ ಬೆರೆತಿದೆ ಎಂಬ ಆರೋಪವು ವಿವಾದ ಸೃಷ್ಟಿಸಿರುವುದನ್ನು ಕಂಡಾಗ ಇವೆಲ್ಲ ನೆನಪಾದವು.

ಶಿವಕುಮಾರ ಬಂಡೋಳಿ, ಹುಣಸಗಿ, ಯಾದಗಿರಿ

ಕುಲಕಸುಬಿನಿಂದ ಹೊಟ್ಟೆ ತುಂಬದು

ತೆಲಂಗಾಣದ ಮೆದಕ್ ಜಿಲ್ಲೆಯ ಗ್ರಾಮವೊಂದರಲ್ಲಿ, ಅಂತ್ಯಸಂಸ್ಕಾರದಲ್ಲಿ ತಮಟೆ ಬಾರಿಸಲಿಲ್ಲ ಎನ್ನುವ ಕಾರಣಕ್ಕೆ ಮಾದಿಗ ಸಮುದಾಯವನ್ನು ಬಹಿಷ್ಕರಿಸಿರುವ ಬಗ್ಗೆ ವರದಿಯಾಗಿದೆ (ಪ್ರ.ವಾ., ಸೆ. 25). ಈ ಬಹಿಷ್ಕಾರ ಅತ್ಯಂತ ಅಮಾನವೀಯವೂ ನಾಗರಿಕ ಸಮಾಜ ತಲೆ ತಗ್ಗಿಸುವಂಥದ್ದೂ ಆಗಿದೆ. ಬಹಿಷ್ಕರಿಸಿದವರಿಗೆ ಉಗ್ರ ಶಿಕ್ಷೆ ವಿಧಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಬೇಕಿದೆ.

ಕುಲಕಸುಬುಗಳು ಪಲ್ಲಟಗೊಂಡು ಬಹಳ ಕಾಲವಾಯಿತು. ಇಂದು ನೇಕಾರನ ಮಗ ನೇಕಾರನಾಗಿ, ಕುಂಬಾರನ ಮಗ ಕುಂಬಾರನಾಗಿ ಉಳಿದಿಲ್ಲ. ಹೀಗೆಯೇ ಎಲ್ಲ ಕುಲಕಸುಬುಗಳ ಹಣೆಬರಹವೂ. ಕುಲಕಸುಬುಗಳನ್ನು ನೆಚ್ಚಿಕೊಂಡರೆ ಹೊಟ್ಟೆ ತುಂಬುವುದಿಲ್ಲ. ನೇಕಾರಿಕೆ ಕಸುಬಿಗೂ ನನಗೂ ಹೊಕ್ಕುಳಬಳ್ಳಿ ಸಂಬಂಧವಿದೆ. ಆ ಕಸುಬಿನ ಪ್ರಗತಿ ಮತ್ತು ಅವನತಿ ಎರಡನ್ನೂ ಅನುಭವಿಸಿ ಬಂದಿದ್ದೇನೆ. ನೇಕಾರಿಕೆ ಕಸುಬಿನಿಂದಲೇ ತಮ್ಮ ಬದುಕನ್ನು ಕಟ್ಟಿಕೊಂಡಿದ್ದ ನಮ್ಮ ಜನ ಎಚ್ಚೆತ್ತುಕೊಂಡು, ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಲು ಮುಂದಾದರು. ಇದರ ಫಲವಾಗಿ ಇಂದು ಅವರು ನೆಮ್ಮದಿಯ ಬದುಕು ನಡೆಸುತ್ತಿದ್ದಾರೆ. ಅಪ್ಪ ಹಾಕಿದ ಆಲದ ಮರ ಎಂದು ಆ ಕಸುಬುಗಳನ್ನೇ ನಂಬಿಕೊಂಡಿದ್ದರೆ ಎಷ್ಟೋ ಜನ ಶಂಖ, ಜಾಗಟೆ, ಬವನಾಸಿಗಳನ್ನು ಭುಜಕ್ಕೆ ನೇತುಹಾಕಿಕೊಂಡು, ‘ಶ್ರೀಮದ್ ರಮಾರಮಣ ಗೋವಿಂದಾ ಗೋವಿಂದ’ ಎಂದು ಹೇಳುತ್ತಾ ಮನೆ ಮನೆಗೆ ಧಾರ್ಮಿಕ ಭಿಕ್ಷೆಗೆ ಹೋಗಬೇಕಿತ್ತು. ಹಾಗಾಗಿ, ಯಾವುದೇ ಕುಲಕಸುಬಿನ ಮುಂದುವರಿಕೆಗೆ ಒತ್ತಡ ಹಾಕುವುದು ಅಮಾನವೀಯ ನಡೆಯಾಗುತ್ತದೆ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಯಾರು ನತದೃಷ್ಟ?

ಚುನಾವಣಾ ರಾಜಕೀಯದಲ್ಲಿ
ಹರಿಶ್ಚಂದ್ರರಿರಲು ಸಾಧ್ಯವಿಲ್ಲ–
ಕಂದಾಯ ಸಚಿವರ ಈ
ಹೇಳಿಕೆ ದುರದೃಷ್ಟಕರ,
ಈಗ ಉಳಿದಿರುವ
ಪ್ರಶ್ನೆಯೆಂದರೆ
ಯಾರು ಭ್ರಷ್ಟ,
ಯಾರು ಕಡುಭ್ರಷ್ಟ,
ಒಟ್ಟಿನಲ್ಲಿ ಮತದಾರ
ಮಾತ್ರ ನತದೃಷ್ಟ.

ಮಲ್ಲಿಕಾರ್ಜುನ, ಸುರಧೇನುಪುರ

ನೆಲದ ಕಾನೂನಿಗೆ ತೋರಿದ ಗೌರವ

‘ಸಿದ್ದರಾಮಯ್ಯ ರಾಜೀನಾಮೆ ಕೊಡಲಿ ಎಂದು ಒತ್ತಾಯ ಮಾಡುವುದಿಲ್ಲ. ಕಾನೂನಿನ ರಕ್ಷಣೆ ಪಡೆಯಲು ಅವಕಾಶ ಇದೆ. ಕಾನೂನುಬಾಹಿರ ಚಟುವಟಿಕೆ ಮಾಡಿದ್ದರೆ, ಕೋರ್ಟ್ ತೀರ್ಪು ಕೊಡುತ್ತದೆ’ ಎಂದಿದ್ದಾರೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ (ಪ್ರ.ವಾ., ಸೆ. 25). ಅವರ ಈ ನಿಲುವು ಓದಿ ಆಶ್ಚರ್ಯವಾಯಿತು. ಏಕೆಂದರೆ, ಅವರ ದೋಸ್ತಿ ಪಕ್ಷವಾದ ಬಿಜೆಪಿಯ ನಾಯಕರು ಈ ಬಗೆಯ ತಾಳ್ಮೆ ಪ್ರದರ್ಶಿಸದೆ, ಸಿದ್ದರಾಮಯ್ಯ ಅವರ ರಾಜೀನಾಮೆಗಾಗಿ ಆಗ್ರಹಿಸುತ್ತಿದ್ದಾರೆ. ಆದರೆ ಕುಮಾರಸ್ವಾಮಿ ಕಾನೂನಿನ ರಕ್ಷಣೆ ಪಡೆಯಲು ಸಿದ್ದರಾಮಯ್ಯ ಅವರಿಗೆ ಅವಕಾಶ ಇರುವುದನ್ನು ಗುರುತಿಸಿ, ನ್ಯಾಯಾಲಯದ ತೀರ್ಪಿಗಾಗಿ ಕಾಯಬೇಕೆಂದಿದ್ದಾರೆ. ಇದು ಸರಿ. ಅವರ ಈ ನಿಲುವು ಮಾಗುತ್ತಿರುವ ಅವರ ರಾಜಕೀಯ ವ್ಯಕ್ತಿತ್ವದ ಸಂಕೇತವಾಗಿರಬಹುದು. ನಿಜ, ರಾಜಕೀಯ ಜಿದ್ದಾಜಿದ್ದಿ ಬಿಟ್ಟು ಈ ರೀತಿ ನೆಲದ ಕಾಯ್ದೆ ಕಾನೂನನ್ನು ಅನುಲಕ್ಷಿಸಿ ರಾಜಕಾರಣಿಗಳು ವರ್ತಿಸಬೇಕು. ಅದು ನಾವು ನೆಲದ ಕಾನೂನಿಗೆ ತೋರಿಸುವ ಗೌರವ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಶ್ರೀಲಂಕಾದಲ್ಲಿ ಕಮ್ಯುನಿಸಂ ತಲೆ ಎತ್ತಿದೆ


ಇತ್ತೀಚಿನ ವರ್ಷಗಳಲ್ಲಿ ಜಗತ್ತಿನಲ್ಲಿ ಕಮ್ಯುನಿಸಂ ಅವಸಾನಗೊಳ್ಳುತ್ತಿದೆ, ಭಾರತದಲ್ಲಂತೂ ತ್ರಿಪುರಾ ಮತ್ತು ಪಶ್ಚಿಮ ಬಂಗಾಳದಲ್ಲಿ ಅವಸಾನಗೊಂಡು, ಕೇರಳದಲ್ಲಿ ಮಾತ್ರ ಜೀವ ಹಿಡಿದುಕೊಂಡು ಉಳಿದುಕೊಂಡಿದೆ ಎನ್ನುವ ಮಾತು ಕೇಳಿಬರುತ್ತಿರುವಾಗ, ಆಶ್ಚರ್ಯಕರ ರೀತಿಯಲ್ಲಿ ಶ್ರೀಲಂಕಾದಲ್ಲಿ ಕಮ್ಯುನಿಸಂ ತಲೆ ಎತ್ತಿದೆ. ಇದು, ವಿಶ್ವದಾದ್ಯಂತ ರಾಜಕೀಯ ವಿಶ್ಲೇಷಕರನ್ನು ಚಿಂತಿಸುವಂತೆ ಮಾಡಿದೆ.

ಕಮ್ಯುನಿಸಂ ತತ್ವ, ಆದರ್ಶಗಳು ನೆಲೆ ಕಳೆದುಕೊಳ್ಳುತ್ತಿದ್ದು, ಇಂದಿನ ಯುವಪೀಳಿಗೆಯನ್ನು ಆಕರ್ಷಿಸಲು ವಿಫಲವಾಗಿವೆ ಎನ್ನುವ ಚರ್ಚೆ ನಡೆಯುತ್ತಿರುವಾಗ, ಶ್ರೀಲಂಕಾದ ಬೆಳವಣಿಗೆ ರಾಜಕೀಯ ವಲಯದಲ್ಲಿ ಕುತೂಹಲ ಮೂಡಿಸಿದೆ. ಎಡಪಂಥೀಯ ಚಿಂತನೆಯನ್ನು ಆಮೂಲಾಗ್ರವಾಗಿ ವಿರೋಧಿಸುವ ಬಲಪಂಥೀಯರಿಗೆ ಇದು ನುಂಗಲಾರದ ತುತ್ತಾಗಿದೆ.

ರಮಾನಂದ ಶರ್ಮಾ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಒಳ ಮೀಸಲಾತಿ 'ದತ್ತಾಂಶ'ಕ್ಕೆ ದಾರಿ ಯಾವುದು?



ಕರ್ನಾಟಕವೂ ಸೇರಿದಂತೆ ಎಲ್ಲ ರಾಜ್ಯಗಳಲ್ಲೂ ಒಳ ಮೀಸಲು ಪರವಾಗಿ ಇರುವಷ್ಟೇ ಪ್ರಬಲವಾದ ಒತ್ತಡ ವಿರುದ್ಧವಾಗಿಯೂ ಇದೆ. ಹೀಗಾಗಿ ಒಳ ಮೀಸಲು ಕಲ್ಪಿಸಲು ಮಾನದಂಡವಾಗಿ ಬಳಸುವ ದತ್ತಾಂಶದಲ್ಲಿ ಸಣ್ಣ ಪ್ರಮಾಣದ ಲೋಪಗಳಿದ್ದರೂ ಸರ್ಕಾರ ಕೈಗೊಳ್ಳುವ ತೀರ್ಮಾನವು ವಿವಾದಕ್ಕೆ ಈಡಾಗಬಹುದು

• ವಿ.ಎಸ್.ಸುಬ್ರಹ್ಮಣ್ಯ

ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿರುವ ಜಾತಿಗಳಿಗೆ ಹಿಂದುಳಿದಿರುವಿಕೆಯ ಆಧಾರದಲ್ಲಿ ಒಳ ಮೀಸಲಾತಿ ಕಲ್ಪಿಸುವ ಅಧಿಕಾರ ರಾಜ್ಯ ಸರ್ಕಾರಗಳಿಗೆ ಇದೆ ಎಂದು ಸುಪ್ರೀಂ ಕೋರ್ಟ್‌ನ ಏಳು ಸದಸ್ಯರ ನ್ಯಾಯಪೀಠವು ಹೇಳಿದ ಬೆನ್ನಲ್ಲೇ ಒಳ ಮೀಸಲು ಅನುಷ್ಠಾನದ ಮಾನದಂಡಗಳ ಬಗ್ಗೆಯೂ ಚರ್ಚೆಗಳು ಆರಂಭವಾಗಿವೆ. ಆದರೆ, ಯಾವುದೇ ಗೊಂದಲಕ್ಕೆ ಎಡೆ ಇಲ್ಲದಂತೆ ತನ್ನ ತೀರ್ಪಿನಲ್ಲೇ ಸ್ಪಷ್ಟತೆ ಒದಗಿಸಿರುವ ಸುಪ್ರೀಂ ಕೋರ್ಟ್, 'ವೈಜ್ಞಾನಿಕವಾಗಿ ಸಂಗ್ರಹಿಸಿದ ದತ್ತಾಂಶದ (ಎಂಪಿರಿಕ್ ಡೇಟಾ) ಆಧಾರದಲ್ಲೇ ಪರಿಶಿಷ್ಟ ಜಾತಿಗಳ ಹಿಂದುಳಿದಿರುವಿಕೆಯನ್ನು ಗುರುತಿಸಬೇಕು' ಎಂದು ಹೇಳಿದೆ. ಈಗ ಒಳ ಮೀಸಲು ಅನುಷ್ಠಾನಕ್ಕೆ ಆಧಾರವಾಗಿ ಬಳಸಬಹುದಾದ ದತ್ತಾಂಶಕ್ಕಾಗಿ ಶೋಧ ನಡೆಯಬೇಕಿದೆ. ಪರಿಶಿಷ್ಟ ಜಾತಿಗಳಲ್ಲೇ ಅತ್ಯಂತ ಹಿಂದುಳಿದ ಸಮುದಾಯಗಳನ್ನು ಗುರುತಿಸಲು ಆಧಾರವಾಗಬಲ್ಲ ನಿಖರ ದತ್ತಾಂಶ ಯಾವುದು ಎಂಬ ಪ್ರಶ್ನೆ ಎಲ್ಲ ರಾಜ್ಯ ಸರ್ಕಾರಗಳ ಮುಂದೆಯೂ ಇದೆ.

ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ ವಿವಿಧ ಜಾತಿಗಳ ಜನರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ದೊರಕಿರುವ ಅವಕಾಶಗಳು, ಆರ್ಥಿಕ ಸ್ಥಿತಿಗತಿ, ರಾಜಕೀಯ ಸ್ಥಾನಮಾನಗಳ ನಿಖರ ಅಂಕಿಅಂಶಗಳನ್ನು ಒಳಗೊಂಡ ದತ್ತಾಂಶವನ್ನು ಆಧರಿಸಿಯೇ ಒಳ ಮೀಸಲು ಹಂಚಿಕೆಯ ನಿರ್ಧಾರ ಕೈಗೊಳ್ಳಬೇಕಾದ ಗುರುತರ ಹೊಣೆಗಾರಿಕೆ ರಾಜ್ಯ ಸರ್ಕಾರಗಳ ಮೇಲಿದೆ. ಕರ್ನಾಟಕವೂ ಸೇರಿದಂತೆ ಎಲ್ಲ ರಾಜ್ಯಗಳಲ್ಲೂ ಒಳ ಮೀಸಲು ಪರವಾಗಿ ಇರುವಷ್ಟೇ ಪ್ರಬಲವಾದ ಒತ್ತಡ ವಿರುದ್ಧವಾಗಿಯೂ ಇದೆ. ಹೀಗಾಗಿ ಒಳ ಮೀಸಲು ಕಲ್ಪಿಸಲು ಮಾನದಂಡವಾಗಿ ಬಳಸುವ ದತ್ತಾಂಶದಲ್ಲಿ ಸಣ್ಣ ಪ್ರಮಾಣದ ಲೋಪಗಳಿದ್ದರೂ ಸರ್ಕಾರ ಕೈಗೊಳ್ಳುವ ತೀರ್ಮಾನವು ವಿವಾದಕ್ಕೆ ಈಡಾಗಬಹುದು.

ಒಳ ಮೀಸಲಿನ ಒಡಲಾಳ

ದೇಶದಲ್ಲಿ 2011ರ ನಂತರ ಜನಗಣತಿ ನಡೆದಿಲ್ಲ. ಜನಗಣತಿಯ ದತ್ತಾಂಶವು ಜನಸಂಖ್ಯೆ ಎಷ್ಟು ಎಂಬುದನ್ನು ಅರಿಯುವುದನ್ನೇ ಕೇಂದ್ರೀಕರಿಸಿರುತ್ತದೆ. ಜಾತಿವಾರು, ಶೈಕ್ಷಣಿಕ, ಔದ್ಯೋಗಿಕ, ಆರ್ಥಿಕ ಮತ್ತು ರಾಜಕೀಯ ಸ್ಥಾನಮಾನಗಳ ಕುರಿತು ನಿಖರವಾದ ಮಾಹಿತಿ ಜನಗಣತಿಯ ದತ್ತಾಂಶದಲ್ಲಿ ದೊರಕುವುದಿಲ್ಲ. ಜನಗಣತಿಯಲ್ಲಿ ಸಂಗ್ರಹಿಸುವ ಸಾಮಾನ್ಯ ದತ್ತಾಂಶದ ಆಧಾರದಲ್ಲಿ ಯಾವುದೇ ಸಮುದಾಯವೊಂದರ ಹಿಂದುಳಿದಿರುವಿಕೆಯನ್ನು ನಿಖರವಾಗಿ ಗುರುತಿಸುವುದು ಕಷ್ಟವೂ ಆಗಬಹುದು. ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲು ಕಲ್ಪಿಸುವುದಕ್ಕಾಗಿಯೇ ಧರ್ಮಸಿಂಗ್ ನೇತೃತ್ವದ ಸರ್ಕಾರವು ನಿವೃತ್ತ ನ್ಯಾಯಮೂರ್ತಿ ಎ.ಜೆ.ಸದಾಶಿವ ನೇತೃತ್ವದ ಆಯೋಗವನ್ನು ನೇಮಿಸಿತ್ತು. 2012ರಲ್ಲಿ ಆಯೋಗ ತನ್ನ ವರದಿಯನ್ನು ಸಲ್ಲಿಸಿತ್ತು. ಈ ವರದಿಯ ಅಧ್ಯಯನಕ್ಕಾಗಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರವು, ಅಂದಿನ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಅಧ್ಯಕ್ಷತೆಯಲ್ಲಿ ಸಂಪುಟ ಉಪಸಮಿತಿಯನ್ನು ರಚಿಸಿತ್ತು. ಸಂಪುಟ ಉಪಸಮಿತಿ ನೀಡಿದ್ದ ಶಿಫಾರಸುಗಳ ಆಧಾರದಲ್ಲಿ ಆಗಿನ ಸರ್ಕಾರವು ಒಳ ಮೀಸಲು ಅನುಷ್ಠಾನಕ್ಕೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿತ್ತು. ಈ ಎಲ್ಲ ವರದಿಗಳು, ಶಿಫಾರಸುಗಳು ಇದ್ದರೂ ಸುಪ್ರೀಂ ಕೋರ್ಟ್ ವ್ಯಾಖ್ಯಾನಿಸಿದಂತೆ ನಿಖರ ದತ್ತಾಂಶಕ್ಕಾಗಿ ಅವುಗಳನ್ನು ಬಳಸಲಾಗದು ಎಂಬ ವಾದವೂ ಇದೆ.

ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ನಡೆಸಿದ 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ–2015'ರ (ಜಾತಿವಾರು ಜನಗಣತಿ) ವರದಿಯಲ್ಲಿನ ದತ್ತಾಂಶಗಳೇ ವಿವಿಧ ಜಾತಿಗಳ ಹಿಂದುಳಿದಿರುವಿಕೆಯನ್ನು ನಿಖರವಾಗಿ ಗುರುತಿಸಲು ಸೂಕ್ತ ಎಂಬ ಚರ್ಚೆ ಸರ್ಕಾರ ಮತ್ತು ಸಾರ್ವಜನಿಕ ವಲಯದಲ್ಲಿದೆ. ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ಮತ್ತು ಹಿಂದುಳಿದ ವರ್ಗಗಳು ಸೇರಿದಂತೆ ಎಲ್ಲ 1,351 ಜಾತಿಗಳನ್ನೂ ಒಳಗೊಂಡಂತೆ ಈ ಜಾತಿವಾರು ಜನಗಣತಿ ನಡೆಸಲಾಗಿತ್ತು. 55 ಮಾನದಂಡಗಳ ಆಧಾರದಲ್ಲಿ ನಡೆದ ವಿಸ್ತೃತವಾದ ಸಮೀಕ್ಷೆಯ ವರದಿಯನ್ನು ಎಚ್.ಕಾಂತರಾಜ ನೇತೃತ್ವದ ಆಯೋಗ ಸಿದ್ಧಪಡಿಸಿತ್ತು. ಕೆ.ಜಯಪ್ರಕಾಶ್ ಹೆಗ್ಡೆ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗವು ಕೆಲವು ಪರಿಷ್ಕರಣೆಗಳೊಂದಿಗೆ ರಾಜ್ಯ ಸರ್ಕಾರಕ್ಕೆ ಸಲ್ಲಿಸಿತ್ತು. ರಾಜ್ಯದ ಯಾವುದೇ ಜಾತಿಯ ಜನರ ಹಿಂದುಳಿದಿರುವಿಕೆಯನ್ನು ಗುರುತಿಸಲು 'ಜಾತಿವಾರು ಜನಗಣತಿ' ವರದಿಯಷ್ಟು ನಿಖರವಾಗಿ ದತ್ತಾಂಶ ಒದಗಿಸುವ ಮೂಲ ಬೇರೊಂದಿಲ್ಲ ಎಂಬುದು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರಾಗಿ ಕಾರ್ಯನಿರ್ವಹಿಸಿದ್ದ ಅನೇಕರ ಅಭಿಪ್ರಾಯ.

'ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ 101 ಜಾತಿಗಳಿವೆ. ಆದರೆ, ಹಿಂದುಳಿದ ವರ್ಗಗಳ ಆಯೋಗವು ನಡೆಸಿದ ಜಾತಿವಾರು ಜನಗಣತಿಯಲ್ಲಿ ಉಪಜಾತಿಗಳನ್ನೂ ಪ್ರತ್ಯೇಕವಾಗಿ ಗುರುತಿಸಿ 180 ಜಾತಿಗಳ ದತ್ತಾಂಶ ಸಂಗ್ರಹಿಸಲಾಗಿದೆ. ಈಗ ಸರ್ಕಾರದ ಬಳಿ ಇರಬಹುದಾದ ಅತ್ಯಂತ ನಿಖರವಾದ ವರದಿ ಇದು. ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲು ಕಲ್ಪಿಸುವ ಹೆಜ್ಜೆಯನ್ನು ರಾಜ್ಯ ಸರ್ಕಾರ ಇಡುವುದಾದರೆ ಜಾತಿವಾರು ಜನಗಣತಿಯ ವರದಿಯ ಆಧಾರದಲ್ಲೇ ತೀರ್ಮಾನಕ್ಕೆ ಬರಬಹುದು' ಎನ್ನುತ್ತಾರೆ ಸಮೀಕ್ಷೆಯ ಸಂದರ್ಭದಲ್ಲಿ ಹಿಂದುಳಿದ ವರ್ಗಗಳ ಆಯೋಗದ ಸದಸ್ಯರಾಗಿದ್ದ ಕೆ.ಎನ್. ಲಿಂಗಪ್ಪ.

ಸರ್ಕಾರದ ಎದುರು ಸವಾಲಿನ ಹಾದಿ: ಒಳ ಮೀಸಲು ಕಲ್ಪಿಸುವ ವಿಷಯದಲ್ಲಿ ಪರಿಶಿಷ್ಟ ಜಾತಿಗಳ ಮಧ್ಯೆ ಇರುವ ಪರ–ವಿರೋಧದ ಹಗ್ಗ ಜಗ್ಗಾಟವನ್ನು ನಿಯಂತ್ರಣಕ್ಕೆ ತರುವ ಸವಾಲಿನ ಜತೆಯಲ್ಲೇ ನಿಖರ ದತ್ತಾಂಶಕ್ಕಾಗಿ 'ಜಾತಿವಾರು ಜನಗಣತಿ' ವರದಿಯನ್ನು ಬಳಸಿಕೊಳ್ಳುವುದೂ ರಾಜ್ಯ ಸರ್ಕಾರಕ್ಕೆ ಒಂದು ಸವಾಲಾಗಿ ಪರಿಣಮಿಸುವುದು ನಿಶ್ಚಿತ. ತ್ವರಿತವಾಗಿ ಒಳ ಮೀಸಲು ಕಲ್ಪಿಸಬೇಕಾದರೆ ಸರ್ಕಾರ ಜಾತಿವಾರು ಜನಗಣತಿಯ ದತ್ತಾಂಶದ ಮೊರೆ ಹೋಗುವುದೊಂದೇ ದಾರಿ. ಆದರೆ, ಅದು ಸಾಧ್ಯವಾಗಬೇಕಾದರೆ ಹಿಂದುಳಿದ ವರ್ಗಗಳ ಆಯೋಗ ಸಲ್ಲಿಸಿರುವ ವರದಿಯನ್ನು ಸ್ವೀಕರಿಸುವ ಧೈರ್ಯವನ್ನು ಮೊದಲು ತೋರಬೇಕಾಗುತ್ತದೆ.

ಜಾತಿವಾರು ಜನಗಣತಿಯ ವರದಿಯನ್ನು ಸ್ವೀಕರಿಸದಂತೆ ಪ್ರಬಲ ಸಮುದಾಯಗಳಾದ ಲಿಂಗಾಯತರು ಮತ್ತು ಒಕ್ಕಲಿಗರು ಸರ್ಕಾರದ ಮೇಲೆ ಒತ್ತಡ ಹೇರುತ್ತಿದ್ದಾರೆ. ವರದಿ ಬಹಿರಂಗಗೊಂಡರೆ ರಾಜ್ಯದಲ್ಲಿ ಶೈಕ್ಷಣಿಕ, ಔದ್ಯೋಗಿಕ ಮೀಸಲಾತಿ ಮತ್ತು ರಾಜಕೀಯ ಪ್ರಾತಿನಿಧ್ಯಕ್ಕೆ ಸಂಬಂಧಿಸಿದಂತೆ ಸೃಷ್ಟಿಯಾಗಬಹುದಾದ ಅಲ್ಲೋಲ ಕಲ್ಲೋಲವನ್ನು ಗಮನದಲ್ಲಿ ಇರಿಸಿಕೊಂಡು ಈ ಎರಡೂ ಸಮುದಾಯಗಳು ಬಿಗಿ ನಿಲುವು ತಳೆದಿವೆ. ರಾಜಕೀಯ ವಿರೋಧವನ್ನು ಸಂಭಾಳಿಸಿಕೊಂಡು ಜಾತಿವಾರು ಜನಗಣತಿ ವರದಿಯನ್ನು ಸ್ವೀಕರಿಸಿ, ದತ್ತಾಂಶವನ್ನು ಬಹಿರಂಗಪಡಿಸುವ ದಿಟ್ಟತನವನ್ನು ರಾಜ್ಯ ಸರ್ಕಾರ ಪ್ರದರ್ಶಿಸಿದರೆ ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲು ಕಲ್ಪಿಸುವ ಐತಿಹಾಸಿಕ ನಿರ್ಧಾರಕ್ಕೆ ನಾಂದಿ ಹಾಡಿದಂತಾಗುತ್ತದೆ. ❖

'ಕರ್ನಾಟಕದಲ್ಲಷ್ಟೇ ನಿಖರ ದತ್ತಾಂಶವಿದೆ'



'ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲು ಕಲ್ಪಿಸಲು ಪೂರಕವಾಗಿ ಸುಪ್ರೀಂ ಕೋರ್ಟ್ ಸೂಚಿಸಿರುವ ನಿಖರ ದತ್ತಾಂಶ ಕರ್ನಾಟಕದಲ್ಲಷ್ಟೇ ಲಭ್ಯವಿದೆ. ಹಿಂದುಳಿದ ವರ್ಗಗಳ ಆಯೋಗವು ನಡೆಸಿರುವ ಜಾತಿವಾರು ಜನಗಣತಿ ವರದಿಯಂತಹ ದತ್ತಾಂಶ ಬೇರೆ ಯಾವ ರಾಜ್ಯದಲ್ಲೂ ಇಲ್ಲ. ಈ ವರದಿಯ ಆಧಾರದಲ್ಲೇ ಪರಿಶಿಷ್ಟ ಜಾತಿಗಳ ಹಿಂದುಳಿದಿರುವಿಕೆಯನ್ನು ಗುರುತಿಸಿ, ಒಳ ಮೀಸಲು ಕಲ್ಪಿಸುವ ನಿರ್ಧಾರವನ್ನು ರಾಜ್ಯ ಸರ್ಕಾರ ಸುಸೂತ್ರವಾಗಿ ಮಾಡಬಹುದು' ಎನ್ನುತ್ತಾರೆ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಸಿ.ಎಸ್. ದ್ವಾರಕಾನಾಥ್.

'ಎಸ್‌ಎಸ್‌ಎಲ್‌ಸಿವರೆಗಿನ ಶಿಕ್ಷಣ ಪಡೆದಿರುವುದು ಹಾಗೂ ನಂತರದ ಶೈಕ್ಷಣಿಕ ಅವಕಾಶಗಳನ್ನು ಆಧರಿಸಿ ಹಿಂದುಳಿದಿರುವಿಕೆಯನ್ನು ಗುರುತಿಸಬೇಕಾಗುತ್ತದೆ. ಈಗ ರಾಜ್ಯ ಸರ್ಕಾರವು ದಿಟ್ಟತನ ಪ್ರದರ್ಶಿಸಿದರೆ ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲು ಕಲ್ಪಿಸುವುದರಲ್ಲಿ ದೇಶದಲ್ಲೇ ಮುಂದಡಿ ಇಟ್ಟ ಕೀರ್ತಿ ದೊರಕುತ್ತದೆ' ಎಂದು ಅವರು ಹೇಳುತ್ತಾರೆ.

'ಜಾತಿವಾರು ಜನಗಣತಿ ವರದಿಯೇ ಸೂಕ್ತ'



'ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲು ಕಲ್ಪಿಸಲು ಹೊಸದಾಗಿ ದತ್ತಾಂಶ ಕಲೆಹಾಕಲು ಸಮೀಕ್ಷೆ ಆರಂಭಿಸಿದರೆ ಹಲವು ವರ್ಷಗಳು ಬೇಕಾಗುತ್ತವೆ. ಈಗ ಎಲ್ಲ ಜಾತಿಗಳ ಜನರ ಸಮಗ್ರ ಮಾಹಿತಿಯುಳ್ಳ ಜಾತಿವಾರು ಜನಗಣತಿಯ ವರದಿ ಸರ್ಕಾರದ ಬಳಿ ಇದೆ. ವ್ಯಾಪಕವಾದ ದತ್ತಾಂಶಗಳುಳ್ಳ ಈ ವರದಿಯ ಆಧಾರದಲ್ಲೇ ಒಳ ಮೀಸಲು ಕಲ್ಪಿಸುವ ನಿರ್ಧಾರ ಕೈಗೊಳ್ಳುವುದು ಸೂಕ್ತ' ಎಂದು ರಾಜ್ಯ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ ಕೆ.ರತ್ನಪ್ರಭಾ ಹೇಳಿದರು.


'ಶಿಕ್ಷಣ, ಉದ್ಯೋಗ ಮತ್ತು ರಾಜಕೀಯ ಮೀಸಲಾತಿಯಲ್ಲಿ ಒಳ ಮೀಸಲು ಕಲ್ಪಿಸಲು ಕಾನೂನು ತಿದ್ದುಪಡಿ ಬೇಕಾಗುತ್ತದೆ. ಆದರೆ, ಕಲ್ಯಾಣ ಕಾರ್ಯಕ್ರಮಗಳಲ್ಲಿ ಒಳ ಮೀಸಲಾತಿ ಒದಗಿಸಲು ಕಾನೂನು ತಿದ್ದುಪಡಿಯ ಅಗತ್ಯವಿಲ್ಲ. ಸರ್ಕಾರದ ಆದೇಶವೊಂದರ ಮೂಲಕವೇ ಅನುಷ್ಠಾನಕ್ಕೆ ತರಬಹುದು' ಎಂದರು.

'ಬದಲಾವಣೆಗಳೊಂದಿಗೂ ಬಳಸಬಹುದು'



'2015ರಲ್ಲಿ ಜಾತಿವಾರು ಜನಗಣತಿ ನಡೆಸಲಾಗಿತ್ತು. ಆ ವರದಿಯಲ್ಲಿ ರಾಜ್ಯದ ಎಲ್ಲ ಜಾತಿಗಳ ಜನಸಂಖ್ಯೆ ಮತ್ತು ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಸ್ಥಿತಿಗತಿಯ ವಿಸ್ತೃತ ಚಿತ್ರಣ ಇದೆ. ರಾಷ್ಟ್ರೀಯ ಸರಾಸರಿ ಆಧಾರದಲ್ಲಿ ದತ್ತಾಂಶಗಳನ್ನು ಪರಿಷ್ಕರಿಸಿಕೊಂಡು ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲು ಕಲ್ಪಿಸಲು ಆಧಾರವಾಗಿ ಬಳಸಬಹುದು' ಎನ್ನುತ್ತಾರೆ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯ ಕೆ.ಎನ್. ಲಿಂಗಪ್ಪ.

ಸಿನಿ ಬಿಟ್ಸ್



ಶಿವರಾಜ್‌ಕುಮಾರ್

45 ಚಿತ್ರೀಕರಣ ಪುನರಾರಂಭ

ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಆ್ಯಕ್ಷನ್ ಕಟ್ ಹೇಳುತ್ತಿರುವ ಶಿವರಾಜ್‌ಕುಮಾರ್, ಉಪೇಂದ್ರ ಹಾಗೂ ರಾಜ್ ಬಿ.ಶೆಟ್ಟಿ ಜೊತೆಯಾಗಿ ಕಾಣಿಸಿಕೊಳ್ಳಲಿರುವ '45' ಸಿನಿಮಾದ ಚಿತ್ರೀಕರಣ ಬೆಂಗಳೂರಿನ ಕಂಠೀರವ ಸ್ಟುಡಿಯೊದಲ್ಲಿ ಪುನರಾರಂಭವಾಗಿದೆ.

2023ರ ಏಪ್ರಿಲ್‌ನಲ್ಲಿ ಸೆಟ್ಟೇರಿದ್ದ ಈ ಸಿನಿಮಾದ ಕ್ಲೈಮ್ಯಾಕ್ಸ್ ದೃಶ್ಯಗಳ ಚಿತ್ರೀಕರಣ ನಡೆಯುತ್ತಿದ್ದು ಮೂವರೂ ನಾಯಕರು ಭಾಗವಹಿಸಿದ್ದಾರೆ. ಅದ್ದೂರಿಯಾಗಿ ಕ್ಲೈಮ್ಯಾಕ್ಸ್ ದೃಶ್ಯಗಳ ಚಿತ್ರೀಕರಣ ನಡೆಯುತ್ತಿದೆ. ಸೂರಜ್ ಪ್ರೊಡಕ್ಷನ್ಸ್ ಲಾಂಛನದಲ್ಲಿ ಉಮಾ ರಮೇಶ್ ರೆಡ್ಡಿ ಅವರು ನಿರ್ಮಿಸುತ್ತಿರುವ ಈ ಸಿನಿಮಾ ಕನ್ನಡ, ತಮಿಳು, ತೆಲುಗು, ಹಿಂದಿ ಹಾಗೂ ಮಲಯಾಳದಲ್ಲಿ ತೆರೆಕಾಣಲಿದೆ. ಅರ್ಜುನ್ ಜನ್ಯ ಚೊಚ್ಚಲ ನಿರ್ದೇಶನದ ಚಿತ್ರ ಇದಾಗಿದ್ದು, ಅವರೇ ಕಥೆ-ಚಿತ್ರಕಥೆ ಬರೆದು ಸಂಗೀತ ಸಂಯೋಜಿಸಿದ್ದಾರೆ. ಸತ್ಯ ಹೆಗಡೆ ಛಾಯಾಚಿತ್ರಗ್ರಹಣ, ರವಿ ವರ್ಮ ಅವರ ಸಾಹಸ ನಿರ್ದೇಶನ ಚಿತ್ರಕ್ಕಿದೆ. 'ಒಂದು ದೊಡ್ಡ ಫಿಲಾಸಫಿಯನ್ನು ಸರಳ ರೀತಿಯಲ್ಲಿ, ಕ್ಲಾಸ್ ಮತ್ತು ಮಾಸ್ ಆಗಿ ಹೇಳುವ ಪ್ರಯತ್ನವಿದು' ಎನ್ನುತ್ತಾರೆ ಅರ್ಜುನ್ ಜನ್ಯ. ಈಗಾಗಲೇ ಶಿವರಾಜ್‌ಕುಮಾರ್ ಹಾಗೂ ಉಪೇಂದ್ರ ಅವರ ಲುಕ್ ಪೋಸ್ಟರ್ ಬಿಡುಗಡೆಯಾಗಿದ್ದು, ಚಿತ್ರದ ನಿರೀಕ್ಷೆ ಹೆಚ್ಚಿಸಿದೆ. ❖

ವೈದ್ಯಕೀಯ ವಿಜ್ಞಾನದ 'ಕಂಟೈನರ್'



ಪುಣ್ಯಗೌಡ

ವೈದ್ಯಕೀಯ ವಿಜ್ಞಾನದ ಕಥೆಯನ್ನು ಹೊಂದಿರುವ 'ಕಂಟೈನರ್' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಎಸ್. ನರಸಿಂಹಮೂರ್ತಿ ಚಿತ್ರವನ್ನು ನಿರ್ದೇಶಿಸುವುದರ ಜೊತೆಗೆ ನಿರ್ಮಾಣವನ್ನೂ ಮಾಡುತ್ತಿದ್ದಾರೆ.

'ಚಿತ್ರ ಸೆನ್ಸಾರ್ ಮುಗಿಸಿ ಬಿಡುಗಡೆಗೆ ಸಿದ್ಧವಿದೆ. ದಸರಾ ವೇಳೆಗೆ ತೆರೆಗೆ ತರುವ ಆಲೋಚನೆಯಿದೆ. ನಾನು ವಿಜ್ಞಾನದಲ್ಲಿ ಪದವಿ ಪಡೆದುಕೊಂಡಿರುವುದರಿಂದ ವೈದ್ಯಕೀಯ ವಿಜ್ಞಾನಕ್ಕೆ ಸಂಬಂದಪಟ್ಟಂತೆ ಕಥೆಯನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಕ್ಯಾನ್ಸರ್ ಸುಡುವ ಬೃಹತ್ ಯಂತ್ರವನ್ನು ಹಡಗಿನ ಕಂಟೈನರ್‌ನಲ್ಲಿ ಸಾಗಿಸುವಾಗ ನಡೆಯುವ ಘಟನೆಯೇ ಚಿತ್ರದ ಕಥಾವಸ್ತು' ಎಂದು ಮಾಹಿತಿ ನೀಡಿದರು ನಿರ್ದೇಶಕರು.

ದತ್ತಾತ್ರೇಯ ಪೂಜಾರಿ, ಪುಣ್ಯ ಗೌಡ ಪ್ರಮುಖ ಪಾತ್ರದಲ್ಲಿದ್ದಾರೆ. ಅಲಂಕಾರ್ ಸಂಗೀತ, ಶ್ರೀನಿವಾಸ್ ಛಾಯಾಚಿತ್ರಗ್ರಹಣ, ಭಾರ್ಗವ ಸಂಕಲನ ಚಿತ್ರಕ್ಕಿದೆ. ಬೆಂಗಳೂರು, ಮಂಗಳೂರಿನಲ್ಲಿ ಚಿತ್ರೀಕರಣಗೊಂಡಿದೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net


ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ **ತಿರುಪತಿ ದೇವಾಲಯಕ್ಕೆ** ಲಾಡು ತಯಾರಿಸಲು ತುಪ್ಪ ಪೂರೈಸುತ್ತಿದ್ದ ತಮಿಳುನಾಡಿನ ಕಂಪನಿಯ ಆಡಳಿತ ಮಂಡಳಿಯ ಅತ್ಯುನ್ನತ ಸ್ಥಾನಗಳಲ್ಲಿ ಮುಸ್ಲಿಮರು ಇದ್ದಾರೆ ಎಂಬರ್ಥದ ಪೋಸ್ಟ್‌ಗಳು 'ಎಕ್ಸ್', ಫೇಸ್‌ಬುಕ್‌ಗಳಲ್ಲಿ ಹರಿದಾಡುತ್ತಿವೆ. ಎ.ಆರ್.ಫುಡ್ಸ್ (ಪ್ರೈವೆಟ್) ಲಿಮಿಟೆಡ್ ಎಂಪ್ಲಾಯೀಸ್ ಮತ್ತು ಕಂಪನಿಯ ಉನ್ನತ ಹುದ್ದೆಗಳಲ್ಲಿರುವ ಐವರ ಹೆಸರುಗಳು ಮತ್ತು ಫೋಟೊಗಳು ಇರುವ ಸ್ಕ್ರೀನ್‌ಶಾಟ್ ಅನ್ನೂ ಪೋಸ್ಟ್‌ನೊಂದಿಗೆ ಹಂಚಿಕೊಳ್ಳಲಾಗುತ್ತಿದೆ. 'ತಿರುಪತಿ ಬಾಲಾಜಿಯ ಲಾಡು ಪ್ರಸಾದಕ್ಕೆ ತುಪ್ಪ ಪೂರೈಸುತ್ತಿದ್ದ ಕಂಪನಿಯ ಆಡಳಿತ ಮಂಡಳಿಯ ಉನ್ನತ ಹುದ್ದೆಗಳಲ್ಲಿ ಈ ಕೆಳಗಿನವರು ಇದ್ದಾರೆ ಎಂದು ಹೇಳಿಕೊಳ್ಳುವ ಹಲವು ಪೋಸ್ಟ್‌ಗಳು ಹರಿದಾಡುತ್ತಿವೆ. ಇದು ನಿಜವೇ' ಎಂದು ಬಳಕೆದಾರರೊಬ್ಬರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದರು. ಆದರೆ, ಇದು ನಿಜವಲ್ಲ.

✓ **ಪೋಸ್ಟ್‌ನಲ್ಲಿದ್ದ** ಎ.ಆರ್.ಫುಡ್ಸ್ (ಪ್ರೈವೆಟ್) ಲಿಮಿಟೆಡ್ ಎಂಬ ಹೆಸರನ್ನು ಇಂಟರ್‌ನೆಟ್‌ನಲ್ಲಿ ಜಾಲಾಡಿದಾಗ, ಅದರ ಲಿಂಕ್ಡ್ ಇನ್ ಪ್ರೊಫೈಲ್ ಸಿಕ್ಕಿತು. ಅದು ಪಾಕಿಸ್ತಾನದ ಇಸ್ಲಾಮಾಬಾದ್‌ನಲ್ಲಿರುವ ಆಹಾರ ಮತ್ತು ಪಾನೀಯ ಕಂಪನಿ. ಗಮನಿಸಬೇಕಾದ ಮತ್ತೊಂದು ಸಂಗತಿ ಎಂದರೆ, ಪೋಸ್ಟ್‌ನಲ್ಲಿರುವ ಸ್ಕ್ರೀನ್‌ಶಾಟ್‌ನಲ್ಲಿ ಇರುವ ಹೆಸರುಗಳ ಜೊತೆಗೆ ಪಾಕಿಸ್ತಾನ ಎಂಬ ಉಲ್ಲೇಖವೂ ಇದೆ. ಲಾಡು ತಯಾರಿಕೆಗೆ ತುಪ್ಪ ಪೂರೈಸಿದ ಕಂಪನಿಯ ಬಗ್ಗೆಯೂ ಮಾಧ್ಯಮಗಳಲ್ಲಿ ವರದಿಯಾಗಿದ್ದು, ಕಂಪನಿಯ ಹೆಸರನ್ನು ಎ.ಆರ್.ಡೈರಿ ಫುಡ್ (ಪ್ರೈವೆಟ್) ಲಿಮಿಟೆಡ್ ಎಂದು ಬರೆಯಲಾಗಿದೆ. ಕಂಪನಿಯ ವೆಬ್‌ಸೈಟ್‌ಗೆ ಭೇಟಿ ನೀಡಿ ಪರಿಶೀಲಿಸಿದಾಗ ಅದು ತಮಿಳುನಾಡಿನ ದಿಂಡಿಗಲ್‌ನ ಕಂಪನಿ ಎಂದು ಗೊತ್ತಾಗಿದೆ ಎಂದು ಆಲ್ಟ್‌ನ್ಯೂಸ್‌ನ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ವ್ಯಾವಹಾರಿಕ ಭಕ್ತಿ!

ನುಡಿ ಬೆಳಗು



ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

31

ಒಂದು ಮನ್ಯಾಗ ಕುರಿಮರಿ ಒಂದಿತ್ತು. ಆ ಮನೆಯವರು ಅದನ್ನು ಭಾಳ ಪ್ರೀತಿ ಮಾಡ್ತಿದ್ರು. ತಲಿ ಮ್ಯಾಲ ಕೈಯಾಡಸ್ತಿದ್ರು. ಇದನ್ನು ನೋಡಿದ ಕೊಟ್ಟಿಗೆಯಲ್ಲಿದ್ದ ಆಕಳ ಕರು ತಾಯಿಗೆ, 'ಆ ಕುರಿ ಮರಿಗೆ ಈ ಮನೆಯವರು ಎಷ್ಟೊಂದು ಪ್ರೀತಿ ಮಾಡ್ತಾರ, ಆದರೆ ನನಗ ಏನೂ ಕಾಳಜಿ ಮಾಡೋದಿಲ್ಲ ಯಾಕ?' ಎಂದು ಕೇಳಿತಂತೆ. ಅದಕ್ಕೆ ತಾಯಿ ಆಕಳು, 'ಈಗ ನಿನಗೆ ಗೊತ್ತಾಗಂಗಿಲ್ಲ ಸುಮ್ಮನಿರು' ಎಂದು ಹೇಳಿ ಹೊರಗೆ ಮೇಯಲು ಹೋಯಿತು. ಆಕಳ ವಾಪಸ್ ಬಂದಾಗ ಕರು ನಡುಗುತ್ತಾ ನಿಂತಿತ್ತು. 'ಯಾಕ ಏನಾತು' ಎಂದು ಕೇಳಿತು ತಾಯಿ ಆಕಳ. 'ಈ ಮನುಷ್ಯರು ಹೆಗಲ ಮೇಲೆ ಕೈಹಾಕ್ತಾರ ಅಂದರ ಅವರನ್ನು ಉಳುಸೋದಿಲ್ಲ ಎನ್ನೋದು ಈಗ ನನಗ ಗೊತ್ತಾಗೈತಿ' ಅಂತು.

ಗಿಡ ಹಣ್ಣು ಕೊಡತೈತಿ ಅಂದರ ಅದಕ್ಕೆ ನೀರು ಹಾಕ್ತೀವಿ. ಇಲ್ಲವಾದರೆ ಒಣಗಲಿ ಬಿಡು ಅಂತೇವಿ. ಆಕಳ ಹಾಲು ಕೊಡುತ್ತಿದ್ದರೆ ಇಟಕೋತೀವಿ ಇಲ್ಲ ಅಂದರ ಕಟುಕರಿಗೆ ಕೊಡ್ತೀವಿ. ಒಂದು ಸಲ ಒಂದು ಮುದಿ ಆಕಳ, 'ಯಾಕ ನನ್ನನ್ನು ಕಟುಕರಿಗೆ ಕೊಡ್ತಿ. ನನ್ನ ಹಾಲು ಕುಡದಾ ನೀನು ಕಟುಕರಿಗೆ ಕೊಡ್ತಿಯಲ್ಲ ಯಾಕ?' ಎಂದು ಕೇಳಿತು. ಅದಕ್ಕೆ ಯಜಮಾನ, 'ನೀ ಮುದುಕಿಯಾದೆಲ್ಲ ಅದಕ್ಕ' ಎಂದು ಉತ್ತರಿಸಿದ. 'ನಿನ್ನ ತಾಯಿನೂ ಮುದುಕಿಯಾಗ್ಯಾಳ, ಆಕಿನೂ ಕೊಡ್ತಿಯೇನು? ನನ್ನ ಒಯ್ದು ಕೊಲೆ ಮಾಡೋರು ಕಟುಕರಲ್ಲ. ನನ್ನ ಹಾಲುಂಡು ಕಟುಕರಿಗೆ ಕೊಡ್ತಿಯಲ್ಲ ನೀನು ಕಟುಕ' ಎಂದು ಮುದಿ ಆಕಳ ಹೇಳಿತಂತೆ. ಅಂದರೆ ನಮಗೆ ಲಾಭ ಇದ್ದರಷ್ಟೇ ನಾವು ಪ್ರೀತಿ ಮಾಡೋದು.

ನೀವು ಸಾಕಷ್ಟು ಸಂಪತ್ತು ಸಂಪಾದಿಸ್ತೀರಿ. ಆ ಸಂಪತ್ತನ್ನು ಎಲ್ಲಿಡ್ತೀರಿ? ಎಲ್ಲ ಹಣ, ಆಭರಣಗಳನ್ನು ಬೀರು ಒಳಗೆ ಇಟ್ಟು ಲಾಕ್ ಮಾಡ್ತೀರಿ. ಅದಕ್ಕೆ ಕೋಡ್ ವರ್ಡ್, ಪಾಸ್ ವರ್ಡ್ ಎಲ್ಲಾ ಮಾಡಿಸಿರುತ್ತೀರಿ. ಅದರ ಮೇಲೆ ಅಷ್ಟ ಪ್ರೀತಿ ನಿಮಗ. ಸಂಪತ್ತು ಲಾಕ್ ಮಾಡಿಟ್ಟು ನೀವು ಚಾಪೆ ಹಾಸಿಕೊಂಡು ಪಕ್ಕದಲ್ಲಿ ಬ್ಯಾಟರಿ, ಕೋಲು ಇಟ್ಟುಕೊಂಡು ಮಲಗ್ತೀರಿ. ಕಳ್ಳಗ ಗೊತ್ತಾಗಲ್ಲೇನು? ಅವ ಪಿಸ್ತೂಲ ಹಿಡಕಂಡು ಬಂದು ನಿಮ್ಮ ಹಣೆಗೆ ಇಟ್ಟು 'ಎಲ್ಲೈತಿ ಹಣ, ಒಡವಿ ಕೊಡು, ಬೀರು ಬೀಗ ಕೊಡು' ಎಂದು ಅಬ್ಬರಿಸಿದರೆ 'ಅಲ್ಲೈತಿ ನೋಡು' ಅಂತೀರಿ. ನೀವು ಸಂಪತ್ತನ್ನು ಬಹಳ ಪ್ರೀತಿ ಮಾಡುತ್ತಿದ್ದರೆ ಕಳ್ಳರಿಗೆ 'ನನಗ ಹೊಡೆದರೆ ಹೊಡೀರಿ. ಸಂಪತ್ತು ಮಾತ್ರ ಮುಟ್ಟಬೇಡಿ, ಬಿಟ್ಟುಬಿಡಿ' ಅನಬೇಕಿತ್ತು. ಆದರೆ ನೀವು ಹಾಂಗೆ ಹೇಳಲ್ಲ ಯಾಕ? ಯಾಕಂದರೆ ನೀವು ಪ್ರೀತಿ ಮಾಡಿದ್ದು ನಿಮ್ಮನ್ನ. ಜೀವಕ್ಕೆ ಕುತ್ತು ಬರ್ತದೆ ಎಂದರೆ ಸಂಪತ್ತು ಹೋದರೆ ಹೋಗಲಿ ಅಂತೀರಿ.

ಒಂದು ಮುದುಕಿ ಏಪ್ರಿಲ್ ತಿಂಗಳ ಮಟಮಟ ಮಧ್ಯಾಹ್ನ ದೇವರ ಗುಡಿಗೆ ಹೋಗಿ 'ಇಗಾ ನಿನಗೆ ಎರಡು ಕಾಯಿ ಒಡೆಸ್ತೀನಿ, ನನ್ನ ಎಮ್ಮಿ ಕರು ಕಳದಾವು ಅದನ್ನು ಹುಡುಕಿಕೊಡು' ಅಂತ ದೇವರನ್ನು ಕೇಳಿತು. ಬಿಸಿಲಿನಲ್ಲಿ ದೇವರು ಅಡ್ಡಾಡಿ ಈಕಿ ಎಮ್ಮಿ ಕರು ಹುಡುಕಬೇಕು. ಈಕಿ ಗುಡಿಯ ನೆರಳಿನಲ್ಲಿ ಕುಂದ್ರಾಕಿ. ಅಂದರೆ ದೇವರಿಗೆ ಕಾಣಿಕೆ ಯದಕ್ಕ ಕೊಟ್ಟೀವಿ ಅಂದರೆ ಆತ ನಮಗೇನೋ ಕೊಡ್ತಾನಂತ. ನಮ್ಮ ಭಕ್ತಿ ಕೂಡಾ ವ್ಯವಹಾರವಾಗೈತಿ. ಇದು ಸಲ್ಲ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಸೆಪ್ಟೆಂಬರ್ 26, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ನವಮಿ ಗಂ. 12-26 ನಕ್ಷತ್ರ: ಪುನರ್ವಸು ಗಂ. 23-34 ಯೋಗ: ಪರಿಘ ಗಂ. 23-41 ಕರಣ: ಗರ ಗಂ. 12-26, ಕನ್ಯಾ ಮಾಸದ 10 ನೇ ದಿನ, ಮಳೆನಕ್ಷತ್ರ: ಉತ್ತರಫಲ್ಗುಣಿ 4.
ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 06-23 ಸೂರ್ಯಾಸ್ತ : 06-20
ಮುಸ್ಲಿಂ ದಿನಾಂಕ : 22 ರಬಿಉಲ್ಲಾವಲ್
ಅದೃಷ್ಟ ಸಂಖ್ಯೆ : 7, 5

ಮೇಷ: ಮಕ್ಕಳು ಜೀವನದಲ್ಲಿ ಒಂದು ಉತ್ತಮ ಹಂತವನ್ನು ತಲುಪಿರುವುದನ್ನು ಯೋಚಿಸಿಕೊಂಡು ಸಂತಸಪಡುವಂತಾಗುವುದು. ಸಹೋದ್ಯೋಗಿಗಳೊಂದಿಗಿನ ಭಿನ್ನಾಭಿಪ್ರಾಯಗಳು ನಿವಾರಣೆಯಾಗುವಂತೆ ವರ್ತಿಸಿ.

ವೃಷಭ: ಮನಸ್ಸಿನ ದುಗುಡಗಳು ಕಡಿಮೆಯಾಗಿ ಸಹಾಯ ಮಾಡಿದ ಸ್ನೇಹಿತರ ಪಾತ್ರವೇ ಜೀವನದಲ್ಲಿ ಮುಖ್ಯವೆನಿಸಲಿದೆ. ಹಣಕಾಸಿನ ವ್ಯವಹಾರದಲ್ಲಿ ಪಾಲುದಾರಿಕೆಯನ್ನು ಪಡೆಯುವಿರಿ.

ಮಿಥುನ: ಆದಾಯಕ್ಕೇನೂ ಕೊರತೆಯಿರದು. ಖರ್ಚು-ವೆಚ್ಚದಲ್ಲಿ ಮಿತವ್ಯಯ ಸಾಧಿಸಲು ಪ್ರಯತ್ನಿಸಿ. ಮುಂಬರುವ ಶುಭ ಕಾರ್ಯಕ್ಕೆ ತಯಾರಿಯನ್ನು ನಡೆಸಿಕೊಳ್ಳಬೇಕಾಗಬಹುದು. ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಆಸಕ್ತಿ ಮೂಡಲಿದೆ.

ಕರ್ಕಾಟಕ: ಚಾಲಕ ವೃತ್ತಿಯವರು ನಿಯಮಬದ್ಧವಾಗಿ ವಾಹನ ಚಾಲನೆ ಮಾಡುವುದು ಒಳ್ಳೆಯದು. ನಾಲ್ಕಾರು ಜನರಿಂದ ಜ್ಞಾನಾರ್ಜನೆಯಾಗುವುದು. ಷೇರುಪೇಟೆಯ ವಹಿವಾಟಿನಲ್ಲಿ ಪ್ರಗತಿ ಕಂಡುಬರಲಿದೆ.

ಸಿಂಹ: ಸ್ವತಂತ್ರವಾಗಿರಲು ಇಚ್ಛಿಸಿದವರಿಗೆ ಉತ್ತಮ ಅವಕಾಶಗಳು ಎದುರಾಗಲಿವೆ. ಸ್ವಂತ ಉದ್ಯೋಗದವರು ಅಧಿಕ ಬಂಡವಾಳ ಹಾಕುವುದರಿಂದ ಕೈ ಸುಡುವಂತಾಗುವುದು. ಸಂಬಂಧಿಗಳು ಮತ್ತೆ ಹತ್ತಿರದವರಾಗುವರು.

ಕನ್ಯಾ: ಪದೇ ಪದೇ ತೋರಿಬರುವ ಋಣಾತ್ಮಕ ಚಿಂತನೆಯು ಕಾರ್ಯಸಾಧನೆಗೆ ಅಡ್ಡಿ ಮಾಡುತ್ತದೆ. ಪ್ರಾಮಾಣಿಕವಾಗಿ ನಡೆಯುವ ವ್ಯವಹಾರಗಳಲ್ಲಿ ಉತ್ತಮ ಆದಾಯ ಇರುವುದು. ಮಕ್ಕಳಿಂದ ಸಂತೋಷ ನೆಮ್ಮದಿ ಇರುವುದು.

ತುಲಾ: ಬದುಕಿನ ತಿರುವಿಗೆ ಸ್ನೇಹಿತರ ಕೊಡುಗೆ ಬಹಳ ಎಂದು ನೆನಪಿನಲ್ಲಿದ್ದು ಸ್ನೇಹಿತರಲ್ಲಿ ವ್ಯವಹರಿಸಿ. ಆಲೋಚನೆಗಳನ್ನು ಕಾರ್ಯರೂಪಕ್ಕೆ ಇಳಿಸಲು ಸೂಕ್ತ ಸಮಯವಲ್ಲ. ಹಳದಿ ಬಣ್ಣ ಅಶುಭವನ್ನು ನೀಡುವುದು.

ವೃಶ್ಚಿಕ: ಚಿನ್ನ, ಬೆಳ್ಳಿ ವ್ಯಾಪಾರಿಗಳಿಗೆ ವ್ಯಾಪಾರದ ಜತೆಗೆ ಅಂಗಡಿಯಲ್ಲಿ ಬೆಲೆ ಬಾಳುವ ವಸ್ತುಗಳು ಕಾಣೆಯಾಗಬಹುದು. ಯಂತ್ರೋಪಕರಣಗಳ ಸಹಾಯದಿಂದ ಕೆಲಸ ಮಾಡುವ ವೇಳೆಯಲ್ಲಿ ಅಪಾಯ ಸಂಭವಿಸಬಹುದು.

ಧನು: ಸ್ನೇಹಿತರ ಅನಿವಾರ್ಯ ಸ್ಥಿತಿಗಳನ್ನು ಮನಗಂಡ ನೀವು ಅವರ ಜಮೀನಿನ ಕೆಲಸಗಳನ್ನು ನೋಡಿಕೊಳ್ಳಬೇಕಾಗುವುದು. ಜೀವನದಲ್ಲಿ ಮಹತ್ತರ ಬದಲಾವಣೆಯಾಗುವ ಸೂಚನೆಗಳು ಗಮನಕ್ಕೆ ಬರಲಿವೆ.

ಮಕರ: ಜವಾಬ್ದಾರಿಯಲ್ಲಿ ಇರುವ ತಮ್ಮಂದಿರ ಓದಿನಲ್ಲಿ ಉತ್ತಮ ಪ್ರಗತಿ ಕಾಣುವಿರಿ. ಉನ್ನತ ಶಿಕ್ಷಣದವರಿಗೆ ಕೀರ್ತಿ ಮತ್ತು ಸಾಮಾಜಿಕ ಗೌರವ ಪ್ರಾಪ್ತಿಯಾಗುವುದು. ಮಹಾಗಣಪತಿಯನ್ನು ಆರಾಧಿಸಿ.

ಕುಂಭ: ಮಕ್ಕಳಿಗೆ ಸಾಮಾಜಿಕ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿಕೊಡಿ. ಮನೆಯ ಕೆಲಸಗಳಿಗಾಗಿ ಸರ್ಕಾರಿ ಕಚೇರಿಗಳಿಗೆ ಓಡಾಟ ನಡೆಸಿ. ಕೆಲಸಗಳನ್ನು ಸಂಪೂರ್ಣಗೊಳಿಸಿಕೊಳ್ಳುವಿರಿ. ವ್ಯಾಪಾರದಲ್ಲಿ ಲಾಭ.


ಮೀನ: ಗೆಳೆಯನೊಬ್ಬನ ಬಹುದಿನಗಳ ನಂತರದ ಭೇಟಿಯಿಂದಾಗಿ ಸಂತೋಷ ಮತ್ತು ಸಲಹೆಗಳಿಂದ ಜೀವನ ಮಹತ್ವದ ತಿರುವೊಂದನ್ನು ಪಡೆದುಕೊಳ್ಳಲಿದೆ. ವಿದ್ಯಾರ್ಥಿಗಳಿಗೆ ಓದಿನಲ್ಲಿ ಅಗಾಧ ಪ್ರಯತ್ನ ಮಾಡಬೇಕಾಗುವುದು.

ಪದಬಂಧ 5814

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಈತನೇ ನೆಲೆಗೊಳಿಸುವವನು (3)
4.ಮನ ಕೊನೆಗಿಟ್ಟಾಗಿನ ಲಕ್ಷ್ಯ (3)
5. ಒಂದು ಸಂಖ್ಯೆಯನ್ನು ಇನ್ನೊಂದರಿಂದ ಗುಣಿಸುವಿಕೆ (4)
6.ಉತ್ತರ ದಿಕ್ಕಿದು (4)
8.ತೆಪರ ಕಟ್ಟಿರುವ ಸುಂಕ (2)
10.ತರತಮ ತೋರಿದಾತನ ಅಜ್ಞಾನ (2)
13.ದಾರದಲ್ಲಿ ಗೋಚರಿಸಿದ ಶ್ರೀಕೃಷ್ಣ! (4)
14.ದಿನದ ಕೆಲಸ (4)
15.ದಿಟ್ಟತನ ಇಲ್ಲಿ ಕಾಣುತ್ತಿದೆ (3)
16.ಅವನಿರುವ ಭೂಮಿ! (3)

ಮೇಲಿಂದ ಕೆಳಕ್ಕೆ
1. ಹಣಕಾಸಿನ ಲೆಕ್ಕಾಚಾರವನ್ನು ಬರೆದಿಡುವ ಪುಸ್ತಕ (6)
2.ಬೇರೆಡೆಗೆ ಹೋಗದಂತೆ ತಡೆಹಿಡಿಯುವಿಕೆ (5)
3.ನಶೆಯಲ್ಲಿ ಭೂಪಟ ಕಾಣುತ್ತಿದೆಯೇ? (3)
5.ಒಳ್ಳೆಯ ಗುಣಗಳಿಂದ ಕೂಡಿರುವವನು (4)
7. ಹಿಂದಾದುದನ್ನು ಮತ್ತೊಮ್ಮೆ ವಿವರವಾಗಿ ನೋಡುವುದು (6)
9.ದಾರಿಯಲ್ಲಿ ಪಡೆದಿರುವ ಅಪ್ಪಣೆ ಚೀಟಿ (4)
11.ಉತ್ತರದವರ ಸೊಳ್ಳೆಪರದೆ (5)
12.ನರಿ ಹತ್ತಿರವಿರುವ ಹೆಣ್ಣು ಮಂಗ (3)



5813ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಆಲೆ 3.ಸರ್ವನಾಶ 5.ಸಹಾಯ 6.ವರ್ತಮಾನ 8.ಯಮಭಾರ 11.ಅಂತರಂಗ 14.ಅನುರಾಗ 15.ಬಿಕರಿ 16.ಸಭಾತ್ಯಾಗ 17.ಜಾಡಿ

ಮೇಲಿಂದ ಕೆಳಕ್ಕೆ:
1.ರಾಸಲೀಲೆ 2.ಆಯವ್ಯಯ 3.ಸರೋವರ 4.ಶಮನ 7.ಮಾರ್ನುಡಿ 9.ಭಾರತ 10.ಕಮಾನು 11.ಅಂಗರಾಗ 12.ಗಡಿಬಿಡಿ 13. ನಾಗರಿಕ 14.ಅಗಸ

ಸುಡೊಕು 6199

3			7		2		8	
						3		4
	7	8	3		9		1	
1		4			5		2	3
	2			3				
8		7	6					9
		3	9		6	5		8
5	4					1		
	8		5		4		3	2


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6198 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ


ಹಿಂದಿನ ಅಂತ್ಯ	25,940
ಇಂದಿನ ಅಂತ್ಯ	26,004
▲	63
ದಿನದ ಗರಿಷ್ಠ	26,032

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹225
ಆರ್‌ಎಸ್‌ಎಸ್-5	₹221
ಗುಡ್ ಲಾಟ್ (ಪ್ರತಿ ಕೆ.ಜಿಗೆ)	₹206

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹550
12 ಕ್ಕೆ	₹75
ಮೈಸೂರು	
100ಕ್ಕೆ	₹555

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹390-566
ದ್ವಿತಳಿ (ಬಿ.ವಿ)	₹349-722

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹18300
ಎಸಿ	₹11205
ಆರ್‌ಪಿ	₹20250
ಆರ್‌ಸಿ	₹10375

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	18000-28500
ಹೊಸತು	28500-40500
ಹಳತು	40500-48000
ಕಾರ್ಕಳ	
ಹೊಸತು	25000-40500
ಹಳತು	30000-48000
ಕುಮಟ	
ಚಿಪ್ಪು	21869-24899
ಕೋಕ	7099-22569
ಫ್ಯಾಕ್ಟರಿ	6019-16829
ಹಳೆಚಾಲಿ	35009-39399
ಹೊಸಚಾಲಿ	29629-34599
ಪುತ್ತೂರು	
ಹೊಸತು	26000-40500
ಶಿವಮೊಗ್ಗ	
ಬೆಟ್ಟೆ	42009-55840
ಗೊರಬಲು	15111-33409
ರಾಶಿ	30059-49299
ಸರಕು	54400-88986
ಸಿದ್ದಾಪುರ	
ಬಿಳಿಗೋಟು	24109-26419
ಚಾಲಿ	31009-33799
ಕೋಕ	21989-24209
ಕೆಂಪುಗೋಟು	17109-17109
ರಾಶಿ	40089-45399
ತಟ್ಟಿಬೆಟ್ಟೆ	34889-34889
ಶಿರಸಿ	
ಬೆಟ್ಟೆ	25099-36155
ಬಿಳಿಗೋಟು	22199-29699
ಚಾಲಿ	32310-36279
ಕೆಂಪುಗೋಟು	13905-18899
ರಾಶಿ	41100-46699

ಸಹಕಾರ ಸಂಘಗಳಲ್ಲಿ ಲಕ್ಷಾಂತರ ಕ್ವಿಂಟಲ್ ಸಂಗ್ರಹ: ವಿದೇಶಿ ಸರಕು ಹಾವಳಿ

ಅಡಿಕೆ ದಾಸ್ತಾನು: ನಷ್ಟದ ಆತಂಕ

• ರಾಜೇಂದ್ರ ಹೆಗಡೆ

ಶಿರಸಿ: ಭೂತಾನ್ ಅಡಿಕೆ ಆಮದು ಹಾಗೂ ಬರ್ಮಾದ ಅಡಿಕೆ ಕಲಬೆರಕೆಯಿಂದಾಗಿ ಮಾರುಕಟ್ಟೆಯಲ್ಲಿ ದರ ಇಳಿಕೆಯ ಹಾದಿಯಲ್ಲಿದೆ. ಇದರಿಂದ ಲಾಭದ ಉದ್ದೇಶಕ್ಕಾಗಿ ಅಡಿಕೆ ಖರೀದಿಸಿ, ದಾಸ್ತಾನಿಟ್ಟುಕೊಂಡಿರುವ ಸಹಕಾರ ಸಂಘಗಳಿಗೆ ಆತಂಕ ಎದುರಾಗಿದೆ.

ಅಡಿಕೆ ಧಾರಣೆಯ ಏರಿಕೆಯಿಂದಾಗಿ ಸಹಕಾರ ಸಂಘಗಳಲ್ಲಿ ಅಡಿಕೆ ವಹಿವಾಟು ಹೆಚ್ಚಿತ್ತು. ಕಳೆದ ಏಳೆಂಟು ವರ್ಷದ ಹಿಂದೆ ಶಿರಸಿಯ ಎಲ್ಲ ಸಹಕಾರ ಸಂಘಗಳ ಒಟ್ಟು ಅಡಿಕೆ ವಹಿವಾಟು 1.80 ಲಕ್ಷ ಕ್ವಿಂಟಲ್‌ನಷ್ಟಿತ್ತು. 2023ನೇ ಸಾಲಿನಲ್ಲಿ 2.90 ಲಕ್ಷ ಕ್ವಿಂಟಲ್‌ಗೆ ವಹಿವಾಟು ಏರಿಕೆಯಾಗಿತ್ತು. ರಾಜ್ಯದ ವಿವಿಧ ಸಹಕಾರ ಸಂಸ್ಥೆಗಳಲ್ಲಿ ಅಂದಾಜು 45 ಲಕ್ಷ ಕ್ವಿಂಟಲ್‌ಗೂ ಹೆಚ್ಚು ವಹಿವಾಟು ನಡೆದಿದೆ.

ದರ ಕುಸಿತವಾದಾಗ ಸಹಕಾರ ಸಂಘಗಳು ಹೆಚ್ಚಿನ ದರದಲ್ಲಿ ಅಡಿಕೆ ಖರೀದಿಸಿ ರೈತರ ಹಿತ ಕಾಯ್ದುಕೊಂಡು ಬಂದಿವೆ. ಈ ಬಾರಿ ಕೂಡ ರಾಜ್ಯದ ವಿವಿಧ ಸಹಕಾರ ಸಂಘಗಳು ಅಂದಾಜು 2 ಲಕ್ಷ ಕ್ವಿಂಟಲ್‌ಗೂ ಹೆಚ್ಚು ಅಡಿಕೆ ಖರೀದಿಸಿ ದಾಸ್ತಾನು ಮಾಡಿವೆ. ಆದರೆ, ಈ ವರ್ಷ ಅಡಿಕೆ ಕಲಬೆರಕೆ ಪ್ರಕರಣ, ವಿದೇಶಿ ಅಡಿಕೆ ಹಾವಳಿ, ವರ್ತಕರಿಂದ ದರ ಇಳಿಕೆ ತಂತ್ರದ ಕಾರಣಕ್ಕೆ ಅಡಿಕೆಯ ದರ ಇಳಿಮುಖವಾಗಿದೆ.



ಶಿರಸಿಯ ಸಹಕಾರ ಸಂಘದ ಗೋದಾಮಿನಲ್ಲಿ ದಾಸ್ತಾನಿರುವ ಅಡಿಕೆ

ಅಡಿಕೆ ಮಾರುಕಟ್ಟೆಯಲ್ಲಿ ಪ್ರಸಕ್ತ ವರ್ಷದ ಮೇ ತಿಂಗಳ ಕೊನೆಯವರೆಗೂ ಕ್ವಿಂಟಲ್ ರಾಶಿ ಅಡಿಕೆ ಸರಾಸರಿ ₹50 ಸಾವಿರ, ಚಾಲಿ ಅಡಿಕೆಗೆ ₹48 ಸಾವಿರದಿಂದ ₹49 ಸಾವಿರ ದರ ಇತ್ತು.

ಆದರೆ, ಜೂನ್ ಮತ್ತು ಜುಲೈ ತಿಂಗಳಿನಲ್ಲಿ ಮಾರುಕಟ್ಟೆಯಲ್ಲಿ ಹಂಗಾಮಿನ ಅಡಿಕೆಯ ಆವಕ ಹೆಚ್ಚಿದ ಕಾರಣ ದರ ಗಣನೀಯವಾಗಿ ಕುಸಿದಿದೆ.

ಮುಂದುವರಿದ ದರ ಕುಸಿತ

‘ಬಹುತೇಕ ಸಹಕಾರ ಸಂಸ್ಥೆಗಳು ಸ್ಥಿರ ಧಾರಣೆ ನೀಡುವ ಉದ್ದೇಶದಿಂದ ಅಡಿಕೆ ಖರೀದಿ ಮಾಡಿದ್ದವು. ಆಗಸ್ಟ್ ಅಂತ್ಯದ ವೇಳೆಗೆ ರಾಶಿ ಅಡಿಕೆ ಕ್ವಿಂಟಲ್‌ಗೆ ₹45 ಸಾವಿರ, ಚಾಲಿ ಅಡಿಕೆ ₹37 ಸಾವಿರಕ್ಕೆ ಕುಸಿತವಾಗಿತ್ತು. ಕಳೆದ ಒಂದು ವಾರದಿಂದ ಮಾರುಕಟ್ಟೆಯಲ್ಲಿ ದರ ಕುಸಿತ ಜಾಸ್ತಿಯಾಗಿದೆ. ಬುಧವಾರ ಶಿರಸಿ ಮಾರುಕಟ್ಟೆಯಲ್ಲಿ ರಾಶಿ ಅಡಿಕೆಗೆ ಸರಾಸರಿ ದರ ಕ್ವಿಂಟಲ್‌ಗೆ ₹39,737 ಆಗಿದ್ದರೆ, ಚಾಲಿ ಅಡಿಕೆಯ ಸರಾಸರಿ ದರ ₹33,958 ಆಗಿದೆ’ ಎನ್ನುತ್ತಾರೆ ಮಾರುಕಟ್ಟೆ ವಿಶ್ಲೇಷಕ ಶಿರಸಿಯ ಸೀತಾರಾಮ ಹೆಗಡೆ.

> **ಅಡಿಕೆ ದರ ಇಳಿಯುವ ಸಂದರ್ಭದಲ್ಲಿ ದಾಸ್ತಾನಿಟ್ಟ ಉತ್ಪನ್ನ ಮಾರುವುದರಿಂದ ದೊಡ್ಡ ನಷ್ಟದಿಂದ ತಪ್ಪಿಸಿಕೊಳ್ಳಬಹುದು. ಪ್ರಸ್ತುತ ಸಹಕಾರ ಸಂಘಗಳು 2–3 ತಿಂಗಳಷ್ಟು ದಾಸ್ತಾನಿಟ್ಟುಕೊಳ್ಳುವ ಆರ್ಥಿಕ ಸಾಮರ್ಥ್ಯ ಹೊಂದಿವೆ**
> **ಗೋಪಾಲಕೃಷ್ಣ ವೈದ್ಯ,** ಟಿಎಸ್‌ಎಸ್ ಅಧ್ಯಕ್ಷ, ಶಿರಸಿ

‘ಕಳೆದ ಎರಡು ತಿಂಗಳಿನಿಂದ ಬಹುತೇಕ ಸಹಕಾರ ಸಂಘಗಳು ಸರಾಸರಿ ₹40 ಸಾವಿರದಿಂದ ₹45 ಸಾವಿರ ನೀಡಿ ರಾಶಿ ಹಾಗೂ ಚಾಲಿ ಅಡಿಕೆ ಖರೀದಿಸಿ ದಾಸ್ತಾನಿಟ್ಟಿವೆ. ಈಗ ದರ ತೀವ್ರ ಇಳಿಕೆಯಾಗಿದ್ದು, ಮಾರಿದರೆ ನಷ್ಟವಾಗುವ ಆತಂಕ ಎದುರಾಗಿದೆ. ಖರೀದಿಸಿದ ದರ ಬಂದರಷ್ಟೇ ದಾಸ್ತಾನಿಟ್ಟಿರುವ ಅಡಿಕೆ ಮಾರಲು ಸಾಧ್ಯ. ಇಲ್ಲವಾದರೆ ಕೋಟ್ಯಂತರ ರೂಪಾಯಿ ನಷ್ಟವಾಗುತ್ತದೆ’ ಎಂದು ಸಂಘಗಳ ಪ್ರಮುಖರು ಹೇಳುತ್ತಾರೆ.

‘ಸ್ಯಾಮ್ಸಂಗ್ ಕಾರ್ಮಿಕರ ಸಮಸ್ಯೆ ಪರಿಹರಿಸಿ’

ನವದೆಹಲಿ (ಪಿಟಿಐ): ತಮಿಳುನಾಡಿನ ಶ್ರೀಪೆರಂಬದೂರು ಬಳಿಯ ಸ್ಯಾಮ್ಸಂಗ್ ಎಲೆಕ್ಟ್ರಾನಿಕ್ಸ್ ಉತ್ಪನ್ನಗಳ ತಯಾರಿಕಾ ಘಟಕದ ಕಾರ್ಮಿಕರ ಸಮಸ್ಯೆ ಪರಿಹರಿಸಲು ತಮಿಳುನಾಡು ಸರ್ಕಾರ ತಕ್ಷಣವೇ ಮಧ್ಯಪ್ರವೇಶಿಸಬೇಕಿದೆ ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವ ಮನ್ಸುಖ್ ಮಾಂಡವೀಯ ಹೇಳಿದ್ದಾರೆ.



ಮನ್ಸುಖ್ ಮಾಂಡವೀಯ

ಈ ಕುರಿತು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರಿಗೆ ಪತ್ರ ಬರೆದಿದ್ದಾರೆ.

ಕಾರ್ಮಿಕರ ಪ್ರತಿಭಟನೆಯಿಂದ ತಯಾರಿಕಾ ವಲಯದ ಮೇಲೆ ಪರಿಣಾಮ ಬೀರಲಿದೆ. ರಾಜ್ಯ ಸರ್ಕಾರವು ಸಮಸ್ಯೆಯನ್ನು ಸೌಹಾರ್ದಯುತವಾಗಿ ಬಗೆಹರಿಸಿ ತಯಾರಿಕೆಗೆ ಅನುಕೂಲಕರ ವಾತಾವರಣವನ್ನು ಸೃಷ್ಟಿಸಬೇಕಿದೆ ಎಂದು ಹೇಳಿದ್ದಾರೆ.

ಸಮಸ್ಯೆಯ ಪರಿಹಾರಕ್ಕೆ ಸಚಿವಾಲಯವು ಸಂಪೂರ್ಣ ಸಹಕಾರ ನೀಡಲಿದೆ ಎಂದು ತಿಳಿಸಿದ್ದಾರೆ.

ವೇತನ ಪರಿಷ್ಕರಣೆ ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಸೆಪ್ಟೆಂಬರ್ 9ರಿಂದ ಸ್ಯಾಮ್ಸಂಗ್ ನೌಕರರು ಹೋರಾಟ ನಡೆಸುತ್ತಿದ್ದಾರೆ.

ಗೋಧಿ, ಅಕ್ಕಿ ಉತ್ಪಾದನೆ ಏರಿಕೆ: ಬೇಳೆಕಾಳು, ಎಣ್ಣೆಕಾಳು ಇಳಿಕೆ

ಆಹಾರಧಾನ್ಯ ಉತ್ಪಾದನೆ ದಾಖಲೆ

ನವದೆಹಲಿ (ಪಿಟಿಐ): ಜೂನ್ ಅಂತ್ಯಕ್ಕೆ ಕೊನೆಗೊಂಡ 2023–24ನೇ ಸಾಲಿನ ಬೆಳೆ ವರ್ಷದಲ್ಲಿ ದೇಶದಲ್ಲಿ 332.22 ದಶಲಕ್ಷ ಟನ್ ಆಹಾರಧಾನ್ಯಗಳು ಉತ್ಪಾದನೆಯಾಗಿದ್ದು, ದಾಖಲೆಯಾಗಿದೆ. ಈ ಪೈಕಿ ಗೋಧಿ ಮತ್ತು ಅಕ್ಕಿ ಉತ್ಪಾದನೆಯಲ್ಲಿ ಹೆಚ್ಚಳವಾಗಿದೆ ಎಂದು ಕೇಂದ್ರ ಕೃಷಿ ಸಚಿವಾಲಯ ಬುಧವಾರ ತಿಳಿಸಿದೆ.



2022–23ನೇ ಸಾಲಿನ ಬೆಳೆ ವರ್ಷದಲ್ಲಿ 329.6 ದಶಲಕ್ಷ ಟನ್ ಉತ್ಪಾದನೆಯಾಗಿತ್ತು. ಇದಕ್ಕೆ ಹೋಲಿಸಿದರೆ 26.1 ಲಕ್ಷ ಟನ್ ಹೆಚ್ಚು ಉತ್ಪಾದನೆಯಾಗಿದೆ ಎಂದು ಹೇಳಿದೆ.

2022–23ರಲ್ಲಿ 135.75 ದಶಲಕ್ಷ ಟನ್ ಅಕ್ಕಿ ಉತ್ಪಾದನೆಯಾಗಿತ್ತು. ಈ ಬಾರಿ 137.82 ದಶಲಕ್ಷ ಟನ್ ಉತ್ಪಾದನೆಯಾಗಿದೆ. 113.29 ದಶಲಕ್ಷ ಟನ್ ಗೋಧಿ ಉತ್ಪಾದನೆಯಾಗಿದೆ ಎಂದು ತಿಳಿಸಿದೆ.


ಆದರೆ, ಬೇಳೆಕಾಳುಗಳ ಉತ್ಪಾದನೆಯಲ್ಲಿ ಇಳಿಕೆಯಾಗಿದೆ. 2022–23ರಲ್ಲಿ 26.05 ದಶಲಕ್ಷ ಟನ್ ಉತ್ಪಾದನೆ ಆಗಿತ್ತು. ಈ ಬಾರಿ 24.24 ದಶಲಕ್ಷ ಟನ್ ಉತ್ಪಾದನೆಯಾಗಿದೆ. ಎಣ್ಣೆಕಾಳುಗಳ ಉತ್ಪಾದನೆಯಲ್ಲೂ ಕುಸಿತವಾಗಿದೆ. ಹಿಂದಿನ ಬೆಳೆ ವರ್ಷದಲ್ಲಿ 41.35 ದಶಲಕ್ಷ ಟನ್ ಉತ್ಪಾದನೆಯಾಗಿತ್ತು. ಈ ಬಾರಿ 39.66 ದಶಲಕ್ಷ ಟನ್‌ಗೆ ಕುಗ್ಗಿದೆ ಎಂದು ವಿವರಿಸಿದೆ.

ದಕ್ಷಿಣ ರಾಜ್ಯಗಳಲ್ಲಿ ಬರದ ಛಾಯೆ ಕಾಣಿಸಿಕೊಂಡಿತ್ತು. ಹಾಗಾಗಿ, ಬೇಳೆಕಾಳು, ಒರಟು ಧಾನ್ಯಗಳು, ಸೋಯಾಬಿನ್ ಮತ್ತು ಹತ್ತಿ ಉತ್ಪಾದನೆಯಲ್ಲಿ ಕುಸಿತವಾಗಿದೆ. ಆಗಸ್ಟ್‌ನಲ್ಲಿ ರಾಜಸ್ಥಾನದಲ್ಲಿ ಒಣಹವೆ ಇತ್ತು. ಹಾಗಾಗಿ, ಉತ್ಪಾದನೆ ಮೇಲೆ ಪರಿಣಾಮ ಬೀರಿದೆ ಎಂದು ಸಚಿವಾಲಯ ತಿಳಿಸಿದೆ.

ಹಿಂದಿನ ಬೆಳೆ ವರ್ಷದಲ್ಲಿ ಸಕ್ಕರೆ ಉತ್ಪಾದನೆಯು 490.53 ದಶಲಕ್ಷ ಟನ್‌ನಷ್ಟಿತ್ತು. ಈ ಬೆಳೆ ವರ್ಷದಲ್ಲಿ 453.15 ದಶಲಕ್ಷ ಟನ್‌ಗೆ ಇಳಿಕೆಯಾಗಿದೆ. ಹತ್ತಿ ಉತ್ಪಾದನೆಯು 33.66 ದಶಲಕ್ಷ ಬೇಲ್ಸ್‌ನಿಂದ 32.52 ದಶಲಕ್ಷ ಬೇಲ್ಸ್‌ಗೆ ಇಳಿಕೆಯಾಗಿದೆ (ಒಂದು ಬೇಲ್ ಎಂದರೆ 170 ಕೆ.ಜಿ) ಎಂದು ತಿಳಿಸಿದೆ.

ಅಕ್ಕಿ, ಗೋಧಿ, ಒರಟು ಧಾನ್ಯಗಳು, ಸಿರಿಧಾನ್ಯಗಳು ಮತ್ತು ಬೇಳೆಕಾಳುಗಳು ಆಹಾರಧಾನ್ಯಗಳ ಪಟ್ಟಿಯಲ್ಲಿವೆ. ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಸಲ್ಲಿಸಿರುವ ಮಾಹಿತಿ ಅನ್ವಯ ಈ ಉತ್ಪಾದನೆ ಪ್ರಮಾಣವನ್ನು ಅಂದಾಜಿಸಲಾಗಿದೆ ಎಂದು ಸಚಿವಾಲಯ ವಿವರಿಸಿದೆ.

ಈರುಳ್ಳಿ (ಕ್ವಿಂಟಲ್‌ಗೆ)



ದಪ್ಪ	₹3500-4500
ಮಧ್ಯಮ	₹3000-3500
ಸಣ್ಣ	₹1500-3000

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಅರಸೀಕೆರೆ	₹15000-15500
ತಿಪಟೂರು	₹16200-17000
ದಾವಣಗೆರೆ	₹16200-16200

ಸೆನ್ಸೆಕ್ಸ್, ನಿಫ್ಟಿ ಸಾರ್ವಕಾಲಿಕ ಗರಿಷ್ಠ

ಮುಂಬೈ (ಪಿಟಿಐ): ಷೇರುಪೇಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಷೇರು ಸೂಚ್ಯಂಕಗಳಾದ ಸೆನ್ಸೆಕ್ಸ್ ಮತ್ತು ನಿಫ್ಟಿ ಗರಿಷ್ಠ ಮಟ್ಟಕ್ಕೆ ಜಿಗಿದಿವೆ.



ಬ್ಯಾಂಕಿಂಗ್ ಮತ್ತು ಇಂಧನ ಷೇರುಗಳ ಖರೀದಿಯಲ್ಲಿನ ಹೆಚ್ಚಳವು ಸೂಚ್ಯಂಕಗಳ ಏರಿಕೆಗೆ ನೆರವಾಯಿತು.

ಸೆನ್ಸೆಕ್ಸ್ 255 ಅಂಶ ಏರಿಕೆಯಾಗಿ, 85,169ಕ್ಕೆ ಸ್ಥಿರಗೊಂಡಿದೆ. ನಿಫ್ಟಿ 63 ಅಂಶ ಹೆಚ್ಚಳವಾಗಿ 26,004ಕ್ಕೆ ಅಂತ್ಯಗೊಂಡಿತು.

ಪವರ್ ಗ್ರಿಡ್, ಎಕ್ಸಿಸ್ ಬ್ಯಾಂಕ್, ಎನ್‌ಟಿಪಿಸಿ, ಬಜಾಜ್ ಫಿನ್‌ಸರ್ವ್, ಬಜಾಜ್ ಫೈನಾನ್ಸ್, ಟಾಟಾ ಸ್ಟೀಲ್, ಮಹೀಂದ್ರ ಆ್ಯಂಡ್ ಮಹೀಂದ್ರ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್‌ನ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ. ಟೆಕ್ ಮಹೀಂದ್ರ, ಟಾಟಾ ಮೋಟರ್ಸ್, ಟೈಟನ್, ಕೋಟಕ್ ಮಹೀಂದ್ರ ಬ್ಯಾಂಕ್, ಎಸ್‌ಬಿಐ ಮತ್ತು ಜೆಎಸ್‌ಡಬ್ಲ್ಯು ಸ್ಟೀಲ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಬೆಳ್ಳಿ ದರ ಕೆ.ಜಿಗೆ ₹3 ಸಾವಿರ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ಚಿನ್ನ ಮತ್ತು ಬೆಳ್ಳಿ ಧಾರಣೆಯಲ್ಲಿ ಭಾರಿ ಏರಿಕೆಯಾಗಿದೆ.

ಬೆಳ್ಳಿ ಧಾರಣೆಯು ಕೆ.ಜಿಗೆ ₹3 ಸಾವಿರ ಏರಿಕೆಯಾಗಿ ₹93 ಸಾವಿರಕ್ಕೆ ಮುಟ್ಟಿದೆ. ಚಿನ್ನದ ದರವು 10 ಗ್ರಾಂಗೆ ₹900 ಹೆಚ್ಚಳವಾಗಿ ₹77,850ರಂತೆ ಮಾರಾಟವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ದರ ಹೆಚ್ಚಳಕ್ಕೆ ಕಾರಣ ಏನು?: ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿದರವನ್ನು ಕಡಿತಗೊಳಿಸಿದೆ. ಮತ್ತೊಂದೆಡೆ ಡಾಲರ್ ಮೌಲ್ಯ ಇಳಿಕೆಯಾಗಿದೆ. ವಿವಿಧ ದೇಶದ ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿದರ ಕಡಿತಗೊಳಿಸುವ ನಿರೀಕ್ಷೆಯಿದೆ. ಜಾಗತಿಕ ಬಿಕ್ಕಟ್ಟಿನಿಂದಾಗಿ ಹೂಡಿಕೆದಾರರು ಸುರಕ್ಷಿತ ಹೂಡಿಕೆಯಾದ ಹಳದಿ ಲೋಹದತ್ತ ದೃಷ್ಟಿ ನೆಟ್ಟಿದ್ದಾರೆ. ಇದರಿಂದ ಬೆಲೆ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಹಬ್ಬದ ಋತುವಿನ ಅಂಗವಾಗಿ ದೇಶೀಯ ಆಭರಣ ತಯಾರಕರು ಮತ್ತು ಗ್ರಾಹಕರಿಂದ ಬೇಡಿಕೆ ಹೆಚ್ಚಿರುವುದು ಕೂಡ ಚಿನ್ನದ ದರ ಹೆಚ್ಚಳಕ್ಕೆ ಕಾರಣವಾಗಿದೆ ಎಂದು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಮುಕ್ತ ವ್ಯಾಪಾರದಡಿ ಹೈನುಗಾರಿಕೆ ಒಳಪಡಿಸಲ್ಲ: ಗೋಯಲ್

ನವದೆಹಲಿ (ಪಿಟಿಐ): ‘ಮುಕ್ತ ವ್ಯಾಪಾರ ಒಪ್ಪಂದದಡಿ ಹೈನು ಉತ್ಪನ್ನಗಳ ಮೇಲಿನ ಆಮದು ಸುಂಕವನ್ನು ಕಡಿತಗೊಳಿಸುವ ಯಾವುದೇ ಯೋಜನೆ ಸರ್ಕಾರದ ಮುಂದಿಲ್ಲ’ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಸ್ಪಷ್ಟಪಡಿಸಿದ್ದಾರೆ.

ಆಸ್ಟ್ರೇಲಿಯಾ ಪ್ರವಾಸ ಕೈಗೊಂಡಿರುವ ಅವರು ಬುಧವಾರ ಅಲ್ಲಿನ ವ್ಯಾಪಾರ ಸಚಿವ ಡಾನ್ ಫಾರೆಲ್ ಅವರೊಟ್ಟಿಗೆ ನಡೆಸಿದ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಭಾರತದಲ್ಲಿ ಹೈನುಗಾರಿಕೆ ಸೂಕ್ಷ್ಮ ವಿಚಾರವಾಗಿದೆ. ಈ ವಲಯದಲ್ಲಿ ತೊಡಗಿಸಿಕೊಂಡಿರುವ ಸಣ್ಣ ರೈತರ ಸಂಖ್ಯೆ ಹೆಚ್ಚಿದೆ’ ಎಂದು ಹೇಳಿದರು.



ಮಾರ್ಚ್‌ನಲ್ಲಿ ಭಾರತವು ಯುರೋಪಿಯನ್ ಮುಕ್ತ ವ್ಯಾಪಾರ ಸಂಘದೊಟ್ಟಿಗೆ ಸ್ವಿಟ್ಜರ್ಲೆಂಡ್ ಮತ್ತು ನಾರ್ವೆ ಜೊತೆಗೆ ಒಪ್ಪಂದಕ್ಕೆ ಸಹಿ ಹಾಕಿದೆ. ಆದರೆ, ಹೈನುಗಾರಿಕೆ ವಲಯಕ್ಕೆ ಸಂಬಂಧಿಸಿದ ಆಮದು ಸುಂಕದಲ್ಲಿ ವಿನಾಯಿತಿ ನೀಡುವುದಿಲ್ಲ ಎಂದರು.

‘ಆಸ್ಟ್ರೇಲಿಯಾಕ್ಕೂ ಈ ವಲಯದ ಸೂಕ್ಷ್ಮತೆಗಳ ಬಗ್ಗೆ ಮನವರಿಕೆ ಮಾಡಿಕೊಡಲಾಗಿದೆ’ ಎಂದು ಹೇಳಿದರು.

‘ಭಾರತದಲ್ಲಿ ಸಣ್ಣ ಹಿಡುವಳಿದಾರರ ಸಂಖ್ಯೆ ಹೆಚ್ಚಿದೆ. 2ರಿಂದ 3 ಎಕರೆ ಜಮೀನು ಹೊಂದಿದ್ದು, ಮೂರ್‍ನಾಲ್ಕು ಜಾನುವಾರು ಸಾಕುತ್ತಾರೆ. ಆಸ್ಟ್ರೇಲಿಯಾದ ಹೈನು ಉದ್ಯಮ ದೊಡ್ಡದು. ದೊಡ್ಡ ರೈತರು ಹೈನುಗಾರಿಕೆ ಮಾಡುತ್ತಾರೆ. ಈ ರೈತರೊಟ್ಟಿಗೆ ಭಾರತದ ಸಣ್ಣ ಹಿಡುವಳಿದಾರರು ಸ್ಪರ್ಧೆ ಮಾಡಲು ಆಗುವುದಿಲ್ಲ’ ಎಂದರು.

ಜಿಡಿಪಿ ಶೇ 7ರಷ್ಟು ಪ್ರಗತಿ: ಎಡಿಬಿ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದಲ್ಲಿ ಭಾರತದ ಜಿಡಿಪಿಯು ಶೇ 7ರಷ್ಟು ಪ್ರಗತಿ ಸಾಧಿಸಲಿದೆ ಎಂದು ಏಷ್ಯಾ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ತಿಳಿಸಿದೆ.

‘ದೇಶದ ಕೃಷಿ ಉತ್ಪಾದನೆಯಲ್ಲಿ ಹೆಚ್ಚಳವಾಗಲಿದೆ. ಜೊತೆಗೆ, ಕೇಂದ್ರ ಸರ್ಕಾರವು ಸಾರ್ವಜನಿಕ ವೆಚ್ಚದ ಪ್ರಮಾಣವನ್ನು ಹೆಚ್ಚಿಸಲಿದೆ. ಇದು ಆರ್ಥಿಕ ಚಟುವಟಿಕೆಗೆ ಬಲ ನೀಡಲಿದೆ’ ಎಂದು ಬುಧವಾರ ಬಿಡುಗಡೆಯಾಗಿರುವ ಆರ್ಥಿಕ ಮುನ್ನೋಟದ ವರದಿ ತಿಳಿಸಿದೆ.


2025–26ನೇ ಆರ್ಥಿಕ ವರ್ಷದಲ್ಲಿ ಜಿಡಿಪಿಯು ಶೇ 7.2ರಷ್ಟು ಬೆಳವಣಿಗೆ ಕಾಣಲಿದೆ ಎಂದು ಅಂದಾಜಿಸಿದೆ.

‘ಜಾಗತಿಕ ಬಿಕ್ಕಟ್ಟಿನ ನಡುವೆಯೂ ಭಾರತದ ಆರ್ಥಿಕ ಸ್ಥಿತಿಯು ಚೇತರಿಕೆ ಕಂಡಿದ್ದು, ಸ್ಥಿರ ಬೆಳವಣಿಗೆ ಸಾಧಿಸಿದೆ’ ಎಂದು ಎಡಿಬಿಯ ಭಾರತದ ನಿರ್ದೇಶಕ ಮಿಯೋ ಓಕಾ ತಿಳಿಸಿದ್ದಾರೆ.

ಹುಂಡೈ, ಸ್ವಿಗ್ಗಿ ಐಪಿಒಗೆ ಸೆಬಿ ಅಸ್ತು

ನವದೆಹಲಿ (ಪಿಟಿಐ): ಹುಂಡೈ ಮೋಟರ್ ಇಂಡಿಯಾ ಲಿಮಿಟೆಡ್ ಮತ್ತು ಸ್ವಿಗ್ಗಿ ಕಂಪನಿಯು ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ) ಮೂಲಕ ಬಂಡವಾಳ ಸಂಗ್ರಹಿಸುವುದಕ್ಕೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಅನುಮತಿ ನೀಡಿದೆ ಎಂದು ಬುಧವಾರ ಮೂಲಗಳು ತಿಳಿಸಿವೆ.

ಹುಂಡೈ ₹25 ಸಾವಿರ ಕೋಟಿ ಬಂಡವಾಳ ಸಂಗ್ರಹಕ್ಕೆ ನಿರ್ಧರಿಸಿದೆ. ದೇಶದಲ್ಲಿ ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಐಪಿಒ ಮೂಲಕ ₹21 ಸಾವಿರ ಕೋಟಿ ಸಂಗ್ರಹಿಸಿತ್ತು.



ದೇಶದಲ್ಲಿ ಐಪಿಒ ಮಾರುಕಟ್ಟೆಯು ವೇಗವಾಗಿ ಬೆಳೆಯುತ್ತಿದೆ. ಪ್ರಸಕ್ತ ವರ್ಷದಲ್ಲಿ ಇಲ್ಲಿಯವರೆಗೆ 60ಕ್ಕೂ ಹೆಚ್ಚು ಕಂಪನಿಗಳು ಐಪಿಒ ಮೂಲಕ ಬಂಡವಾಳ ಸಂಗ್ರಹಿಸಿವೆ.

ಹುಂಡೈ ಕಂಪನಿಯು ಜೂನ್‌ನಲ್ಲಿ ಸಲ್ಲಿಸಿರುವ ಕರಡು ದಾಖಲೆ ಪತ್ರಗಳ (ಡಿಆರ್‌ಎಚ್‌ಪಿ) ಪ್ರಕಾರ ಆಫರ್ ಫಾರ್ ಸೇಲ್ ಮೂಲಕ 14.21 ಕೋಟಿ ಈಕ್ವಿಟಿ ಷೇರುಗಳನ್ನು ಮಾರಾಟ ಮಾಡಲಿದೆ.

2003ರಲ್ಲಿ ಜಪಾನ್‌ನ ಕಾರು ತಯಾರಿಕಾ ಕಂಪನಿ ಮಾರುತಿ ಸುಜುಕಿ ಐಪಿಒ ಮೂಲಕ ಬಂಡವಾಳ ಸಂಗ್ರಹಿಸಿತ್ತು.

ಎರಡು ದಶಕದ ಬಳಿಕ ಹುಂಡೈ ಐಪಿಒದಡಿ ಬಂಡವಾಳ ಸಂಗ್ರಹಿಸುತ್ತಿದೆ. ಹಾಗಾಗಿ, ದೇಶದ ಆಟೊಮೊಬೈಲ್ ವಲಯದಲ್ಲಿ ಇದು ಮಹತ್ವದ ಮೈಲಿಗಲ್ಲು ಆಗಿದೆ.

ಸ್ವಿಗ್ಗಿಯಿಂದ ಎಷ್ಟು ಸಂಗ್ರಹ?: ಸ್ವಿಗ್ಗಿ ಕಂಪನಿಯು ಈಕ್ವಿಟಿ ಷೇರುಗಳ ಮಾರಾಟದಿಂದ ₹3,750 ಕೋಟಿ ಹಾಗೂ ಆಫರ್ ಫಾರ್ ಸೇಲ್ ಮೂಲಕ ಹೆಚ್ಚುವರಿಯಾಗಿ ₹6,664 ಕೋಟಿ ಬಂಡವಾಳ ಸಂಗ್ರಹಿಸಲಿದೆ. ಐಪಿಒಗೂ ಮೊದಲು ಆರಂಭಿಕ ಹೂಡಿಕೆದಾರರಿಂದ (ಆ್ಯಂಕರ್ ಇನ್‌ವೆಸ್ಟರ್) ₹750 ಕೋಟಿ ಬಂಡವಾಳ ಸಂಗ್ರಹಿಸಲು ತೀರ್ಮಾನಿಸಿದೆ.

ಪೆಸಿಫಿಕ್ ಸಾಗರದಲ್ಲಿ ಖಂಡಾಂತರ ಕ್ಷಿಪಣಿ ಪರೀಕ್ಷೆ ನಡೆಸಿದ ಚೀನಾ

ಬೀಜಿಂಗ್(ಎಎಫ್‌ಪಿ): ಪೆಸಿಫಿಕ್ ಸಾಗರದಲ್ಲಿ ಖಂಡಾಂತರ ಗುರಿ ನಿರ್ದೇಶಿತ ಕ್ಷಿಪಣಿಯ (ಐಸಿಬಿಎಂ) ಪರೀಕ್ಷಾರ್ಥ ಉಡಾವಣೆಯನ್ನು ಬುಧವಾರ ನೆರವೇರಿಸಿದ್ದಾಗಿ ಚೀನಾ ಹೇಳಿದೆ.

ಅಪರೂಪವೆಂಬಂತೆ, ದಶಕಗಳಲ್ಲಿ ಇದೇ ಮೊದಲ ಬಾರಿಗೆ ಪೆಸಿಫಿಕ್ ಸಾಗರದಲ್ಲಿ ಚೀನಾ ಈ ಉಡ್ಡಯನ ಮಾಡಿದೆ.

‘ಚೀನಾ ಸೇನೆಯ ರಾಕೆಟ್‌ಗಳ ಪಡೆಯು, ಸೆ.25ರ ಬೆಳಿಗ್ಗೆ 8.44ಕ್ಕೆ ನಕಲಿ ಸಿಡಿತಲೆ ಹೊತ್ತ ಖಂಡಾಂತರ ಗುರಿ ನಿರ್ದೇಶಿತ ಕ್ಷಿಪಣಿಯನ್ನು ಪೆಸಿಫಿಕ್ ಸಾಗರದಲ್ಲಿ ಉಡಾಯಿಸಿತು. ಕ್ಷಿಪಣಿಯು ಸಾಗರದಲ್ಲಿನ ನಿರ್ದಿಷ್ಟ ಪ್ರದೇಶದಲ್ಲಿ ಬಿತ್ತು’ ಎಂದು ಸೇನೆ ಪ್ರಕಟಣೆಯಲ್ಲಿ ತಿಳಿಸಿದೆ.

ಚೀನಾದ ಈ ನಡೆಗೆ, ಪೆಸಿಫಿಕ್ ಸಾಗರ ಪ್ರದೇಶದ ರಾಷ್ಟ್ರಗಳು ಆಕ್ಷೇಪಿಸಿದ್ದು, ಪ್ರತಿಭಟನೆಯನ್ನೂ ದಾಖಲಿಸಿವೆ.


‘ಕ್ಷಿಪಣಿ ಪರೀಕ್ಷೆ ಕುರಿತಂತೆ ತನಗೆ ಮುಂಚಿತವಾಗಿ ಮಾಹಿತಿ ನೀಡಿರಲಿಲ್ಲ. ಈ ಕಡಲ ಪ್ರದೇಶದಲ್ಲಿ ಚೀನಾ ತನ್ನ ಸೇನೆ ಸಾಮರ್ಥ್ಯ ವೃದ್ಧಿಸಿಕೊಳ್ಳಲು ಯತ್ನಿಸುತ್ತಿರುವುದು ಕಳವಳಕಾರಿ’ ಎಂದು ಜಪಾನ್ ಹೇಳಿದೆ.

‘ಇದು ಬಹಳ ಅಸಹಜ ಮತ್ತು ದಶಕಗಳಲ್ಲಿಯೇ ಮೊದಲ ಬಾರಿಗೆ ಕೈಗೊಂಡಿರುವ ಪರೀಕ್ಷೆಯಾಗಿರುವ ಸಾಧ್ಯತೆ ಇದೆ’ ಎಂದು ಕಾರ್ನಿಗಿ ಎಂಡೋಮೆಂಟ್ ಫಾರ್ ಇಂಟರ್‌ನ್ಯಾಷನಲ್ ಪೀಸ್‌ನಲ್ಲಿ ಹಿರಿಯ ಫೆಲೊ ಆಗಿರುವ ಅಂಕಿತ್ ಪಾಂಡಾ ಪ್ರತಿಕ್ರಿಯಿಸಿದ್ದಾರೆ.

ಈ ಪರೀಕ್ಷೆ ಕುರಿತು ಪ್ರತಿಕ್ರಿಯಿಸಿರುವ ಚೀನಾದ ರಕ್ಷಣಾ ಸಚಿವಾಲಯ, ‘ಸೇನೆ ವಾರ್ಷಿಕವಾಗಿ ಕೈಗೊಳ್ಳುವ ತರಬೇತಿಯಡಿ ಈ ಪರೀಕ್ಷೆ ನಡೆಸಲಾಗಿದೆ. ಅಂತರರಾಷ್ಟ್ರೀಯ ನಿಯಮದ ಪ್ರಕಾರವೇ ಈ ಪರೀಕ್ಷೆ ನಡೆಸಲಾಗಿದ್ದು, ಯಾವುದೇ ದೇಶವನ್ನು ಗುರಿಯಾಗಿಸಿ ನಡೆಸಿದ್ದಲ್ಲ’ ಎಂದಿದೆ.

ಶಾಂತಿ ಪ್ರಕ್ರಿಯೆಯಲ್ಲಿ ಭಾಗಿಯಾಗಿ; ಝೆಲೆನ್‌ಸ್ಕಿ

ವಿಶ್ವಸಂಸ್ಥೆ (ಪಿಟಿಐ): ‘ರಷ್ಯಾ– ಉಕ್ರೇನ್ ನಡುವಿನ ಯುದ್ಧವನ್ನು ಸಂಪೂರ್ಣವಾಗಿ ಕೊನೆಗೊಳಿಸಲು ನಾವು ಎರಡನೇ ಶಾಂತಿ ಶೃಂಗಸಭೆಯನ್ನು ಆಯೋಜಿಸಲು ಸಿದ್ಧರಿದ್ದೇವೆ. ಈ ಶಾಂತಿ ಪ್ರಕ್ರಿಯೆಯಲ್ಲಿ ಭಾಗಿಯಾಗಿ ಎಂದು ಭಾರತ ಸೇರಿದಂತೆ ಇತರ ದೇಶಗಳಿಗೆ ಈಗಾಗಲೇ ಆಹ್ವಾನವನ್ನೂ ನೀಡಿದ್ದೇವೆ’ ಎಂದು ಉಕ್ರೇನ್‌ನ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಗೆ ತಿಳಿಸಿದ್ದಾರೆ.



‘ರಷ್ಯಾ, ಯುದ್ಧವನ್ನು ನಿಲ್ಲಿಸಲು ಬಯಸಿದರೆ ಏನು ಮಾಡಬೇಕೆಂಬುದು ನಮಗೆಲ್ಲರಿಗೂ ತಿಳಿದಿದೆ. ಜಗತ್ತಿನಲ್ಲಿ ಹೊಸ ಬಣಗಳು, ಪ್ರಾದೇಶಿಕ ಗುಂಪುಗಳು ರಚನೆಯಾಗದೆ ಎಲ್ಲರೂ ಒಟ್ಟಾಗಿ ಸಾಗಬೇಕಿದೆ’ ಎಂದು ಉಕ್ರೇನ್ ಸಂಘರ್ಷದ ಕುರಿತಂತೆ ಝೆಲೆನ್‌ಸ್ಕಿ ಮಂಗಳವಾರ ನಡೆದ ಭದ್ರತಾ ಮಂಡಳಿಯ ಸಭೆಯಲ್ಲಿ ಹೇಳಿದ್ದಾರೆ.

‘ಟ್ರಂಪ್ ಮೇಲೆ ಗುಂಡಿನ ದಾಳಿಗೆ ಗುಪ್ತಚರ ಸಂಸ್ಥೆ ವೈಫಲ್ಯ ಕಾರಣ’

ವಾಷಿಂಗ್ಟನ್ (ಎಪಿ): ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹತ್ಯೆ ಯತ್ನ ಪ್ರಕರಣದಲ್ಲಿ ಗುಪ್ತಚರ ಸಂಸ್ಥೆಯ ವೈಫಲ್ಯ ಎದ್ದುಕಾಣುತ್ತಿದೆ. ಗುಪ್ತಚರ ಸಂಸ್ಥೆ ಸರಿಯಾಗಿ ಕಾರ್ಯನಿರ್ವಹಿಸಿದ್ದರೆ, ಇದನ್ನು ತಡೆಯಬಹುದಿತ್ತು ಎಂದು ಸೆನೆಟ್ ಸಮಿತಿಯ ತನಿಖಾ ವರದಿಯಲ್ಲಿ ಉಲ್ಲೇಖಿಸಲಾಗಿದೆ.



ಜುಲೈನಲ್ಲಿ ನಡೆದ ರ‍್ಯಾಲಿ ವೇಳೆ ತಮ್ಮ ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಡೊನಾಲ್ಡ್ ಟ್ರಂಪ್ ಅವರನ್ನು ಹತ್ಯೆ ಮಾಡಲು ಬಂದೂಕುಧಾರಿಯೊಬ್ಬ ಅವರ ಮೇಲೆ ಗುಂಡು ಹಾರಿಸಿದ್ದ.

ಗುಂಡಿನ ದಾಳಿಗೂ ಮೊದಲು, ಟ್ರಂಪ್ ಅವರ ಭದ್ರತೆಗೆ ನಿಯೋಜಿಸಿದ್ದ ಭದ್ರತಾ ಸಿಬ್ಬಂದಿ ಮತ್ತು ಗುಪ್ತಚರ ಸೇವೆ ನಡುವಿನ ಸಂವಹನ, ಯೋಜನೆ... ಹೀಗೆ ಪ್ರತಿ ಹಂತದಲ್ಲೂ ಹಲವು ವೈಫಲ್ಯಗಳು ಆಗಿರುವುದನ್ನು ಸಮಿತಿ ಪತ್ತೆ ಮಾಡಿದೆ. ಸೆನೆಟ್ ಸಮಿತಿಯ ತನಿಖಾ ವರದಿಯಲ್ಲಿ ಹೇಳಿರುವ ಅಂಶಗಳನ್ನೇ ತನಿಖಾ ಸಂಸ್ಥೆಯ ಆಂತರಿಕ ತನಿಖೆ, ಸೆನೆಟ್ ಹೋಮ್‌ಲ್ಯಾಂಡ್ ಸೆಕ್ಯುರಿಟಿ ಮತ್ತು ಗವರ್ನಮೆಂಟ್ ಅಫೇರ್ಸ್ ಕಮಿಟಿಯ ಮಧ್ಯಂತರ ವರದಿಯಲ್ಲೂ ಹೇಳಲಾಗಿತ್ತು.

‘ಆ ವೈಫಲ್ಯಗಳ ಪರಿಣಾಮಗಳು ಭೀಕರವಾಗಿವೆ’ ಎಂದು ಹೋಮ್‌ಲ್ಯಾಂಡ್ ಪ್ಯಾನೆಲ್‌ನ ಡೆಮಾಕ್ರಟಿಕ್ ಅಧ್ಯಕ್ಷರಾದ ಮಿಷಿಗನ್ ಸೆನ್ ಗ್ಯಾರಿ ಪೀಟರ್ಸ್ ಹೇಳಿದ್ದಾರೆ.

ಕಮಾಂಡರ್‌ಗಳ ಹತ್ಯೆ, ಪೇಜರ್, ವಾಕಿಟಾಕಿಗಳ ಸ್ಫೋಟಕ್ಕೆ ಪ್ರತ್ಯುತ್ತರವೆಂದ ಲೆಬನಾನ್‌ನ ಬಂಡುಕೋರ ಸಂಘಟನೆ

ಟೆಲ್ ಅವಿವ್ ಮೇಲೆ ಕ್ಷಿಪಣಿ ಉಡಾಯಿಸಿದ ಹಿಜ್ಬುಲ್ಲಾ

ಬೈರೂತ್ (ಎಪಿ): ಲೆಬನಾನ್ ಮೇಲೆ ಇಸ್ರೇಲ್ ಬಾಂಬ್ ದಾಳಿ ನಡೆಸಿ ನೂರಾರು ಜನರನ್ನು ಹತ್ಯೆ ಮಾಡಿದ ಬೆನ್ನಲ್ಲೇ ಹಿಜ್ಬುಲ್ಲಾ ಬಂಡುಕೋರರ ಸಂಘಟನೆಯು ಬುಧವಾರ ನಸುಕಿನಲ್ಲಿ ಇಸ್ರೇಲ್‌ನ ಕೇಂದ್ರ ಭಾಗವನ್ನು ಗುರಿಯಾಗಿಸಿ ಟೆಲ್ ಅವಿವ್ ನಗರದ ಮೇಲೆ ಕ್ಷಿಪಣಿ ಉಡಾಯಿಸಿದೆ.

‘ಟೆಲ್ ಅವಿವ್ ಮತ್ತು ಕೇಂದ್ರ ಇಸ್ರೇಲ್‌ನಾದ್ಯಂತ ವಾಯುದಾಳಿ ಸೈರನ್‌ಗಳು ಮೊಳಗಿದ್ದು, ಮೇಲ್ಮೈ ಮಾರ್ಗದಲ್ಲೇ ಕ್ಷಿಪಣಿ ಪತ್ತೆಮಾಡಿ ಅದನ್ನು ನಾಶಪಡಿಸಲಾಗಿದೆ. ಯಾವುದೇ ಸಾವುನೋವು ಅಥವಾ ಹಾನಿ ಆಗಿರುವ ವರದಿಯಾಗಿಲ್ಲ. ಕ್ಷಿಪಣಿ ಉಡಾಯಿಸಿರುವ ದಕ್ಷಿಣ ಲೆಬನಾನ್‌ನ ತಾಣವನ್ನು ಪತ್ತೆಹಚ್ಚಿ ಅದನ್ನೂ ಧ್ವಂಸಗೊಳಿಸಲಾಗಿದೆ’ ಎಂದು ಇಸ್ರೇಲ್ ಸೇನೆ ಹೇಳಿದೆ.

‘ಇಸ್ರೇಲ್‌ನ ಮೊಸ್ಸಾದ್ ಗುಪ್ತಚರ ಸಂಸ್ಥೆಯ ಪ್ರಧಾನ ಕಚೇರಿ ಗುರಿಯಾಗಿಸಿ ‘ಖಾದರ್ 1’ ಹೆಸರಿನ ಗುರಿ ನಿರ್ದೇಶಿತ ಕ್ಷಿಪಣಿಯನ್ನು ಹಾರಿಸಲಾಯಿತು. ಇದು ತನ್ನ ಉನ್ನತ ಕಮಾಂಡರ್‌ಗಳ ಇತ್ತೀಚಿನ ಹತ್ಯೆಗಳಿಗೆ ಮತ್ತು ಕಳೆದ ವಾರ ಪೇಜರ್‌ಗಳು ಹಾಗೂ ವಾಕಿ-ಟಾಕಿಗಳಲ್ಲಿ ಅಡಗಿಸಿಟ್ಟಿದ್ದ ಸ್ಫೋಟಕಗಳನ್ನು ಸ್ಫೋಟಿಸಿ ಹಲವು ಮಂದಿಯನ್ನು ಹತ್ಯೆಗೈದ ದಾಳಿಗೆ ಪ್ರತ್ಯುತ್ತರ’ ಎಂದು ಇರಾನ್ ಬೆಂಬಲಿತ, ಲೆಬನಾನ್‌ನ ಹಿಜ್ಬುಲ್ಲಾ ಸಂಘಟನೆ ಹೇಳಿದೆ.



ಲೆಬನಾನ್ ಟೆಲ್ ಅವಿವ್ ನಗರದ ಮೇಲೆ ಕ್ಷಿಪಣಿ ದಾಳಿ ನಡೆಸಿದ ಹಿನ್ನೆಲೆಯಲ್ಲಿ ಸುರಕ್ಷಿತ ದೃಷ್ಟಿಯಿಂದ ಮಕ್ಕಳಿಗೆ ನಿರಾಶ್ರಿತರ ಶಿಬಿರದಲ್ಲಿ ಆಶ್ರಯ ಕಲ್ಪಿಸಲಾಗಿದೆ–ಎಎಫ್‌ಪಿ ಚಿತ್ರ

‘ಲೆಬನಾನ್‌ನಿಂದ ಉಡಾಯಿಸಿರುವ ಕ್ಷಿಪಣಿಯು ಇಸ್ರೇಲ್‌ನ ಕೇಂದ್ರ ಭಾಗಕ್ಕೆ ಬಂದಿರುವುದು ಇದೇ ಮೊದಲು’ ಎಂದು ಇಸ್ರೇಲ್ ಸೇನೆ ಹೇಳಿದೆ.

ಹಿಜ್ಬುಲ್ಲಾ ಬುಧವಾರ ಉಡಾಯಿಸಿರುವ ಕ್ಷಿಪಣಿಯು ಭಾರಿ ಸಿಡಿತಲೆಯನ್ನು ಹೊಂದಿತ್ತು ಎಂದು ಇಸ್ರೇಲ್ ಸೇನಾ ವಕ್ತಾರ ಲೆಫ್ಟಿನೆಂಟ್ ಕರ್ನಲ್ ನದಾವ್ ಶೋಶಾನಿ ಹೇಳಿದ್ದಾರೆ. ಆದರೆ, ಅವರು ಟೆಲ್ ಅವಿವ್‌ನ ಉತ್ತರ ಭಾಗದಲ್ಲಿರುವ ಮೊಸ್ಸಾದ್ ಪ್ರಧಾನ ಕಚೇರಿಯನ್ನು ಗುರಿಯಾಗಿಸಿದ್ದಾಗಿ ಹಿಜ್ಬುಲ್ಲಾ ಹೇಳಿಕೊಂಡಿರುವುದನ್ನು ತಳ್ಳಿಹಾಕಿದ್ದಾರೆ.

ಕಳೆದ ತಿಂಗಳು ವೈಮಾನಿಕ ದಾಳಿ ನಡೆಸಿದಾಗ ಹಿಜ್ಬುಲ್ಲಾ ಸಂಘಟನೆ, ಟೆಲ್ ಅವಿವ್ ಬಳಿಯ ಗುಪ್ತಚರ ನೆಲೆ ಗುರಿಯಾಗಿಸಿಕೊಂಡಿದ್ದಾಗಿ ಹೇಳಿಕೊಂಡಿತ್ತು. ಗಾಜಾದಲ್ಲಿ ಪ್ಯಾಲೆಸ್ಟೀನ್‌ನ ಹಮಾಸ್ ಬಂಡುಕೋರರ ಗುಂಪು ಯುದ್ಧದ ಆರಂಭದಲ್ಲಿ ಟೆಲ್ ಅವಿವ್ ಅನ್ನೇ ಪದೇ ಪದೇ ಗುರಿಯಾಗಿಸಿ ದಾಳಿಗೆ ಯತ್ನಿಸಿತ್ತು.

ಗಾಜಾ ಪಟ್ಟಿಯಲ್ಲಿ ಇಸ್ರೇಲ್ ಹಮಾಸ್ ವಿರುದ್ಧ ಹೋರಾಡುತ್ತಿರುವಾಗಲೇ, ಈ ಪ್ರದೇಶವು ಮತ್ತೊಂದು ಸಂಪೂರ್ಣ ಯುದ್ಧದತ್ತ ಸಾಗುತ್ತಿರುವಂತೆ ಕಾಣಿಸುತ್ತಿದೆ. ಹಿಜ್ಬುಲ್ಲಾ ನಡೆಸಿರುವ ಕ್ಷಿಪಣಿ ಉಡಾವಣೆಯು ಉದ್ವಿಗ್ನತೆಯನ್ನು ಮತ್ತಷ್ಟು ಹೆಚ್ಚಿಸುವ ಸಾಧ್ಯತೆ ಇದೆ.

ಸೋಮವಾರ ಮತ್ತು ಮಂಗಳವಾರ ಇಸ್ರೇಲ್ ಪಡೆಗಳು ನಡೆಸಿದ ವೈಮಾನಿಕ ದಾಳಿಗಳಿಂದ ಲೆಬನಾನ್‌ನಲ್ಲಿ ಸುಮಾರು 560 ಜನರು ಹತರಾಗಿದ್ದು, ಸಾವಿರಾರು ಜನರು ನೆಲೆ ಕಳೆದುಕೊಂಡು, ಆಶ್ರಯಕ್ಕಾಗಿ ಸುರಕ್ಷಿತ ಸ್ಥಳಗಳಿಗೆ ವಲಸೆ ಹೋಗುವಂತೆ ಮಾಡಿದೆ.

ಇಬ್ರಾಹಿಂ ಹತ್ಯೆ ಖಚಿತಪಡಿಸಿದ ಹಿಜ್ಬುಲ್ಲಾ

ಬೈರೂತ್ (ಎಪಿ): ದಕ್ಷಿಣ ಬೈರೂತ್ ನಗರದ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ ಕಮಾಂಡರ್ ಇಬ್ರಾಹಿಂ ಖುಬೈಸಿ ಮೃತಪಟ್ಟಿರುವುದಾಗಿ ಹಿಜ್ಬುಲ್ಲಾ ಬಂಡುಕೋರ ಸಂಘಟನೆಯು ಖಚಿತಪಡಿಸಿದೆ.

ಇಸ್ರೇಲ್ ದಾಳಿ: ಮತ್ತೆ 51 ಮಂದಿ ಹತ್ಯೆ

ಇಸ್ರೇಲ್ ಬುಧವಾರ ನಡೆಸಿದ ದಾಳಿಯಲ್ಲಿ 51 ಮಂದಿ ಮೃತಪಟ್ಟಿದ್ದು, 223 ಮಂದಿ ಗಾಯಗೊಂಡಿದ್ದಾರೆ ಎಂದು ಲೆಬನಾನ್‌ನ ಆರೋಗ್ಯ ಸಚಿವರು ಬುಧವಾರ ಹೇಳಿದ್ದಾರೆ.

ಕಳೆದ ಎರಡು ದಿನಗಳಲ್ಲಿ ಇಸ್ರೇಲ್ ನಡೆಸಿದ ದಾಳಿಯಲ್ಲಿ ಒಟ್ಟು 564 ಮಂದಿ ಮೃತಪಟ್ಟಿದ್ದು, 1800ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ. ಇದರಲ್ಲಿ 150 ಮಂದಿ ಮಕ್ಕಳು, ಮಹಿಳೆಯರು ಸೇರಿದ್ದಾರೆ.

ಜಮ್ಮು–ಕಾಶ್ಮೀರದ 26 ಕ್ಷೇತ್ರಗಳಲ್ಲಿ 2ನೇ ಹಂತದ ಚುನಾವಣೆ ● 15 ವಿದೇಶಿ ರಾಯಭಾರಿಗಳಿದ್ದ ನಿಯೋಗ ಭೇಟಿ

ಶೇ 56 ಮತದಾನ; ಯುವ ಜನರ ಉತ್ಸಾಹ

ಪ್ರಜಾವಾಣಿ ವಾರ್ತೆ/ಪಿಟಿಐ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದಲ್ಲಿ ಬುಧವಾರ ಎರಡನೇ ಹಂತದಲ್ಲಿ ವಿಧಾನಸಭೆಯ 26 ಕ್ಷೇತ್ರಗಳಲ್ಲಿ ಚುನಾವಣೆ ನಡೆದಿದ್ದು, ಸರಾಸರಿ ಶೇ 56.05ರಷ್ಟು ಮತದಾನವಾಗಿದೆ. ಮತದಾನ ಪ್ರಕ್ರಿಯೆ ಶಾಂತಿಯುತವಾಗಿದ್ದು, ಬಿಗಿ ಭದ್ರತೆ ಏರ್ಪಡಿಸಲಾಗಿತ್ತು.

ಮೊದಲ ಬಾರಿಯ ಮತದಾರರು ಉತ್ಸಾಹದಿಂದ ಭಾಗವಹಿಸಿದ್ದರು. ವಿವಿಧ ಮತಗಟ್ಟೆಗಳಲ್ಲಿ ಉದ್ದನೆ ಸಾಲು ಕಂಡುಬಂತು. ವಾಗ್ವಾದದ ಕೆಲ ಘಟನೆ ಹೊರತುಪಡಿಸಿ, ಮತದಾನ ಸುಗಮವಾಗಿ ನಡೆದಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಪಿ.ಕೆ. ಪೋಲೆ ತಿಳಿಸಿದರು.

‘ರಾಜ್ಯದಲ್ಲಿ ಶಾಂತಿ ಸ್ಥಾಪನೆಯಷ್ಟೇ ಅಲ್ಲ. ಯುವಜನರಿಗೆ ಉದ್ಯೋಗ, ಕೌಶಲಯುಕ್ತ ಶಿಕ್ಷಣ ನೀಡುವ ಸರ್ಕಾರ ಅಗತ್ಯ’ ಎಂದು ಮೊದಲ ಬಾರಿಗೆ ಮತಹಕ್ಕು ಚಲಾಯಿಸಿದ ಅನನ್ಯಾ ಮತ್ತು ವಿದ್ಯಾರ್ಥಿ ಸಾರ್ವರ್ ಅವರು ಪ್ರತಿಕ್ರಿಯಿಸಿದರು.

ಮೂರು ವರ್ಷಗಳಲ್ಲಿ ಭಯೋತ್ಪಾದನಾ ಚಟುವಟಿಕೆಗಳು ಹೆಚ್ಚಾಗಿ ಬಾಧಿಸಿದ್ದ ಗಡಿಭಾಗದ ರಜೌರಿ ಮತ್ತು ಪೂಂಛ್ ಜಿಲ್ಲೆಗಳಲ್ಲಿಯೂ ಮತದಾರರು ಹೆಚ್ಚು ಉತ್ಸಾಹದಿಂದ ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದು ಗಮನಸೆಳೆಯಿತು.

ಪೀರ್ ಪಾಂಜಲ್ ವಲಯ ಎಂದೇ ಈ ಜಿಲ್ಲೆಗಳನ್ನು ಗುರುತಿಸಲಾಗುತ್ತದೆ.



ಚುನಾವಣೆ ಪ್ರಕ್ರಿಯೆ ವೀಕ್ಷಿಸಲು ಬುಧವಾರ ಜಮ್ಮು ಮತ್ತು ಕಾಶ್ಮೀರಕ್ಕೆ ಭೇಟಿ ನೀಡಿದ್ದ ವಿದೇಶಿ ರಾಯಭಾರಿಗಳ ನಿಯೋಗದ ಸದಸ್ಯರು ದಾಲ್ ಲೇಕ್‌ನ ಮತಗಟ್ಟೆಯಲ್ಲಿ ಸ್ಥಳೀಯರ ಜೊತೆ ಸೆಲ್ಫಿ ಕ್ಲಿಕ್ಕಿಸಿಕೊಂಡರು ಪಿಟಿಐ ಚಿತ್ರ

ಕಾಂಗ್ರೆಸ್ ಮೈತ್ರಿಕೂಟ ಅಧಿಕಾರಕ್ಕೆ ಬಂದರೆ ಸ್ಥಳೀಯ ಸೊಪೋರ್ ತಳಿಯ ಸೇಬಿಗೆ ಅಂತರರಾಷ್ಟ್ರೀಯ ಮಾರುಕಟ್ಟೆ ಒದಗಿಸಲು ಒತ್ತು ನೀಡಲಿದೆ

ರಾಹುಲ್‌ಗಾಂಧಿ
ಲೋಕಸಭೆಯ ವಿರೋಧಪಕ್ಷದ ನಾಯಕ

ವಿದೇಶಿ ರಾಯಭಾರಿಗಳ ನಿಯೋಗ ಏಕೆ ಬಂದಿದೆಯೊ ನನಗೆ ತಿಳಿದಿಲ್ಲ. ಚುನಾವಣೆ ನಮ್ಮ ಆಂತರಿಕ ವ್ಯವಸ್ಥೆ. ನಮಗೆ ಅವರ ಪ್ರಮಾಣಪತ್ರ ಅಗತ್ಯವಿಲ್ಲ

ಒಮರ್ ಅಬ್ದುಲ್ಲಾ
ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ಮುಖ್ಯಸ್ಥ

ಗಡಿನಿಯಂತ್ರಣ ರೇಖೆಗೆ (ಎಲ್‌ಒಸಿ) ಹೊಂದಿಕೊಂಡಂತೆ ಮತಗಟ್ಟೆಗಳಿದ್ದ ಕಡೆಯೂ ಶಾಂತಿಯುತವಾಗಿ ಮತದಾನ ಜರುಗಿದೆ. ಈ ಭಾಗದಲ್ಲಿ ಹೆಚ್ಚಿನ ಭದ್ರತೆ ನಿಯೋಜಿಸಲಾಗಿತ್ತು.

ಜಮ್ಮು ವಲಯದ ಶ್ರೀಮಾತಾ ವೈಷ್ಣೋದೇವಿ ಕ್ಷೇತ್ರದಲ್ಲಿ ಗರಿಷ್ಠ, ಅಂದರೆ ಶೇ 75.29ರಷ್ಟು ಮತದಾನವಾಗಿದೆ. ಪೂಂಛ್ ಹವೇಲಿ (ಶೇ 72.71), ಗುಲಾಬ್‌ಗಢ (ಶೇ 72.19), ಸುರಾನ್‌ಕೋಟ (ಶೇ 72.18) ಕ್ಷೇತ್ರಗಳಲ್ಲಿ ಉತ್ತಮ ಮತದಾನವಾಗಿದೆ.

ಪ್ರಜಾಪ್ರಭುತ್ವ ಕ್ರಮದಲ್ಲಿ ಮತದಾನ: ಆಂಡ್ರ್ಯೂಸ್

ಕೇಂದ್ರ ಸರ್ಕಾರದ ಆಹ್ವಾನದಂತೆ ಜಮ್ಮು ಮತ್ತು ಕಾಶ್ಮೀರಕ್ಕೆ ಭೇಟಿ ನೀಡಿದ್ದ 15 ದೇಶಗಳ ರಾಯಭಾರಿಗಳಿದ್ದ ನಿಯೋಗವು ವಿವಿಧ ಮತಗಟ್ಟೆಗಳಿಗೆ ಭೇಟಿ ನೀಡಿ ಮತದಾನ ಪ್ರಕ್ರಿಯೆ ವೀಕ್ಷಿಸಿತು. ನಿಯೋಗದ ಜೊತೆ ವಿದೇಶಾಂಗ ಸಚಿವಾಲಯದ ಪ್ರತಿನಿಧಿಗಳೂ ಇದ್ದರು.

ನಿಯೋಗದಲ್ಲಿ ಅಮೆರಿಕ, ಮೆಕ್ಸಿಕೊ, ಗಯಾನಾ, ದಕ್ಷಿಣ ಕೊರಿಯಾ, ಸೊಮಾಲಿಯಾ, ಪನಾಮಾ, ಸಿಂಗಪುರ, ನೈಜಿರಿಯಾ, ಸ್ಪೇನ್, ದಕ್ಷಿಣ ಆಫ್ರಿಕಾ, ನಾರ್ವೆ, ತಾಂಜಾನಿಯಾ, ರುವಾಂಡಾ, ಅಲ್ಜೀರಿಯಾ, ಫಿಲಿಪ್ಪೀನ್ಸ್ ಪ್ರತಿನಿಧಿಗಳಿದ್ದರು. ಶ್ರೀನಗರ, ಬಡಗಾಮ್ ಜಿಲ್ಲೆಗಳಿಗೆ ಭೇಟಿ ನೀಡಿದ್ದರು.

ನಿಯೋಗದ ನೇತೃತ್ವ ವಹಿಸಿದ್ದ ಅಮೆರಿಕ ರಾಯಭಾರ ಕಚೇರಿಯ ಉಪ ಮುಖ್ಯಸ್ಥ ಜೋರ್ಗನ್ ಕೆ. ಆಂಡ್ರ್ಯೂಸ್, ‘ಮತದಾನ ಪ್ರಕ್ರಿಯೆ ಆರೋಗ್ಯಕರ ಮತ್ತು ಪ್ರಜಾಪ್ರಭುತ್ವ ಕ್ರಮದಲ್ಲಿದೆ. ಹೆಚ್ಚಿನ ಉತ್ಸಾಹ ಕಂಡುಬರುತ್ತಿದೆ’ ಎಂದು ತಿಳಿಸಿದರು.

‘ಸಿಂಗಪುರದಲ್ಲಿದ್ದಂತೆ ಹೆಚ್ಚಿನ ಹಬ್ಬದ ಸಂಭ್ರಮ ಕಾಣಲಿಲ್ಲ’ ಎಂದು ಸದಸ್ಯೆ, ಸಿಂಗಪುರದ ಅಲ್ಲೈಸ್ ಚೇನ್ ಪ್ರತಿಕ್ರಿಯಿಸಿದರು.

‘20 ದೇಶಗಳ ಪ್ರತಿನಿಧಿಗಳನ್ನು ಆಹ್ವಾನಿಸಿದ್ದು, 15 ಮಂದಿ ಭೇಟಿ ನೀಡಿದ್ದಾರೆ. 3ನೇ ಹಂತದ ಮತದಾನದ ವೇಳೆ ಉಳಿದವರು ಭೇಟಿ ನೀಡಬಹುದು’ ಎಂದು ಅಧಿಕಾರಿಯೊಬ್ಬರು ಪ್ರತಿಕ್ರಿಯಿಸಿದರು.

ಇತಿಹಾಸ ನಿರ್ಮಾಣ ಆಗುತ್ತಿದೆ –ಸಿಇಸಿ

ನವದೆಹಲಿ (ಪಿಟಿಐ): ‘ಹಿಂದೆ, ಮತದಾನ ಬಹಿಷ್ಕರಿಸುತ್ತಿದ್ದವರು ಇಂದು ಸಾಲಿನಲ್ಲಿ ನಿಂತು ಮತಹಕ್ಕು ಚಲಾಯಿಸುತ್ತಿದ್ದಾರೆ. ಇತಿಹಾಸ ನಿರ್ಮಾಣವಾಗುತ್ತಿದೆ’ ಎಂದು ಮುಖ್ಯ ಚುನಾವಣಾ ಆಯುಕ್ತರು ಹೇಳಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಸಿಇಸಿ ರಾಜೀವ್ ಕುಮಾರ್, ‘ಎರಡು ಹಂತದ ಮತದಾನ ಸಿಸಿಟಿವಿ ದೃಶ್ಯಗಳಿವೆ. ಯುವಜನರು, ಮಹಿಳೆಯರು, ಹಿರಿಯರು ಸಾಲಿನಲ್ಲಿ ನಿಂತು ಹಕ್ಕುಚಲಾಯಿಸಿದ್ದಾರೆ’ ಎಂದರು.

‘ಇದು, ಜನತಂತ್ರದ ಹಬ್ಬ. ಹಿಂದೆ ಮತದಾನ ಬಹಿಷ್ಕರಿಸುತ್ತಿದ್ದ ಕಡೆಯೂ ಮತದಾನ ಜರುಗುತ್ತಿದೆ. ಇದು, ಪ್ರಜಾಪ್ರಭುತ್ವಕ್ಕೆ ಸಲ್ಲುವ ಗೌರವ’ ಎಂದು ಆಯುಕ್ತರಾದ ಗ್ಯಾನೇಶ್ ಕುಮಾರ್, ಸುಖ್‌ಬೀರ್ ಸಿಂಗ್ ಸಂಧು ಹೇಳಿದರು.

ಪ್ರಜಾ ಮತ
ಜನತಂತ್ರದ ಹಬ್ಬ

ಚುನಾವಣೆ ನಡೆದ 26 ಕ್ಷೇತ್ರಗಳ ಪೈಕಿ 20ರಲ್ಲಿ 2014ರ ಚುನಾವಣೆಗಿಂತಲೂ ಕಡಿಮೆ ಪ್ರಮಾಣದ ಮತದಾನವಾಗಿದೆ. ಚುನಾವಣಾ ಆಯೋಗದ ಅಂಕಿ–ಅಂಶಗಳ ಪ್ರಕಾರ, 2014ರಲ್ಲಿ ಈ ಕ್ಷೇತ್ರದಲ್ಲಿ ಸರಾಸರಿ ಶೇ 60ಕ್ಕಿಂತಲೂ ಅಧಿಕ ಮತದಾನವಾಗಿತ್ತು.

ಕಾಶ್ಮೀರ ವಲಯದಲ್ಲಿ ಖಾನ್‌ಸಾಹಿಬ್ ಕ್ಷೇತ್ರದಲ್ಲಿ ಗರಿಷ್ಠ ಶೇ 67.70ರಷ್ಟು ಮತದಾನವಾಗಿದ್ದರೆ, ಕಂಗನ್ (ಶೇ 67.60), ಛಾರ್ ಐ ಶರೀಫ್ ಕ್ಷೇತ್ರದಲ್ಲಿ ಶೇ 66ರಷ್ಟು ಮತದಾನವಾಗಿತ್ತು. ಹಬ್ಬ ಕದಲ್ ಕ್ಷೇತ್ರದಲ್ಲಿ ಕನಿಷ್ಠ ಶೇ 15.80ರಷ್ಟು ಮತದಾನವಾಗಿದೆ.

ಲಖನೌ: ಎಚ್‌ಡಿಎಫ್‌ಸಿ ಬ್ಯಾಂಕ್ ಮಹಿಳಾ ಅಧಿಕಾರಿ ಸಾವು

ಪ್ರಜಾವಾಣಿ ವಾರ್ತೆ

ಲಖನೌ: ನಗರದಲ್ಲಿರುವ ಎಚ್‌ಡಿಎಫ್‌ಸಿ ಬ್ಯಾಂಕ್ ಶಾಖೆಯ ಹಿರಿಯ ಮಹಿಳಾ ಅಧಿಕಾರಿಯೊಬ್ಬರು ‘ನಿಗೂಢ ಪರಿಸ್ಥಿತಿ’ಯಲ್ಲಿ ಮಂಗಳವಾರ ಮೃತಪಟ್ಟಿದ್ದಾರೆ.

45 ವರ್ಷದ ಸದಾಫ್ ಫಾತಿಮಾ ಮೃತಪಟ್ಟ ಅಧಿಕಾರಿ. ಅವರು ಬ್ಯಾಂಕಿನ ಸಹಾಯಕ ಉಪಾಧ್ಯಕ್ಷೆಯಾಗಿ ಕೆಲಸ ಮಾಡುತ್ತಿದ್ದರು.

ಬ್ಯಾಂಕ್ ಶಾಖೆ ಇರುವ ಕಟ್ಟಡದ ಎರಡನೇ ಮಹಡಿಯಲ್ಲಿರುವ ಕ್ಯಾಂಟೀನ್‌ನಲ್ಲಿ ಸಹೋದ್ಯೋಗಿಗಳ ಜೊತೆ ಊಟ ಮಾಡುತ್ತಿದ್ದ ವೇಳೆ ಅವರು ಕುರ್ಚಿಯಿಂದ ಕುಸಿದು ಬಿದ್ದಿದ್ದಾರೆ. ತಕ್ಷಣ ಅವರನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅವರು ಮಾರ್ಗ ಮಧ್ಯೆಯೇ ಮೃತಪಟ್ಟಿದ್ದಾಗಿ ವೈದ್ಯರು ಘೋಷಿಸಿದರು ಎಂದು ಮೂಲಗಳು ಹೇಳಿವೆ.

ಮರಣೋತ್ತರ ಪರೀಕ್ಷೆ ವರದಿಯನ್ನು ಪರಿಶೀಲಿಸಿದ ನಂತರವೇ ಸಾವಿಗೆ ನಿಖರ ಕಾರಣ ಗೊತ್ತಾಗಲಿದೆ ಎಂದು ಪೊಲೀಸರು ಹೇಳಿದ್ದಾರೆ.

ಸದಾಫ್ ಫಾತಿಮಾ ಸಾವಿಗೆ ಕೆಲಸದ ಒತ್ತಡವೇ ಕಾರಣ ಎಂದು ಸಹೋದ್ಯೋಗಿಗಳು ದೂರಿದ್ದಾರೆ.

ಪುಣೆಯಲ್ಲಿ, ಇ ಅಂಡ್ ವೈ ಕಂಪನಿಯಲ್ಲಿ ನೌಕರಿ ಮಾಡುತ್ತಿದ್ದ 26 ವರ್ಷದ ಮಹಿಳೆ ಇತ್ತೀಚೆಗೆ ಮೃತಪಟ್ಟಿದ್ದರು. ಆಕೆ, ಕೆಲಸದ ಒತ್ತಡದಿಂದಾಗಿಯೇ ಮೃತಪಟ್ಟಿದ್ದಾರೆ ಎನ್ನಲಾಗಿದೆ. ಈ ಘಟನೆ ಜನರ ಮನದಿಂದ ಮರೆಯಾಗುವ ಮುನ್ನವೇ, ಎಚ್‌ಡಿಎಫ್‌ಸಿ ಬ್ಯಾಂಕ್ ಉದ್ಯೋಗಿಯೊಬ್ಬರು ಮೃತಪಟ್ಟಿದ್ದಾರೆ.

‘ಅನಾರೋಗ್ಯ ಕಾರಣದಿಂದಾಗಿ ರಜೆಯಲ್ಲಿದ್ದ ಸದಾಫ್, ಮೂರು ದಿನಗಳ ನಂತರ ಕರ್ತವ್ಯಕ್ಕೆ ಹಾಜರಾಗಿದ್ದಳು’ ಎಂಬ ಆಕೆಯ ಸಂಬಂಧಿಕರ ಹೇಳಿಕೆ ಉಲ್ಲೇಖಿಸಿ ಮೂಲಗಳು ಹೇಳಿವೆ.

‘ಮೂರು ದಿನದ ಹಿಂದೆ, ರಕ್ತದೊತ್ತಡ ಹೆಚ್ಚಾಗಿ ಸದಾಫ್ ಅಸ್ವಸ್ಥಗೊಂಡಿದ್ದರು. ಅವರನ್ನು ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ನಂತರ ಮನೆಗೆ ಕಳುಹಿಸಲಾಗಿತ್ತು’ ಎಂದು ಮೂಲಗಳು ಹೇಳಿವೆ.

ಕಳವಳ: ಈ ಘಟನೆ ಕುರಿತು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಕಳವಳ ವ್ಯಕ್ತಪಡಿಸಿದ್ದಾರೆ.

‘ಉದ್ಯೋಗಿಗಳ ಮೇಲೆ ಕೆಲಸದ ಒತ್ತಡ ಹೆಚ್ಚಾಗುತ್ತಿದೆ. ಈ ವಿದ್ಯಮಾನ ಕುರಿತು ಕಂಪನಿಗಳು ಹಾಗೂ ಸರ್ಕಾರ ಗಂಭೀರ ಚಿಂತನೆ ನಡೆಸಬೇಕು’ ಎಂದಿದ್ದಾರೆ.

‘ಇಂತಹ ಘಟನೆಗಳು, ಪ್ರಸಕ್ತ ಆರ್ಥಿಕತೆಯಿಂದಾಗಿ ಕಂಡುಬರುತ್ತಿರುವ ಒತ್ತಡವನ್ನು ಸೂಚಿಸುತ್ತವೆ’ ಎಂದೂ ಹೇಳಿದ್ದಾರೆ.

ನಟ ಬಾಬು ಬಂಧನ, ಬಿಡುಗಡೆ

ಕೊಚ್ಚಿ (ಪಿಟಿಐ): ನಟಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪಕ್ಕೆ ಸಂಬಂಧಿಸಿದಂತೆ ಮಲಯಾಳ ನಟ ಇಡವೇಲ ಬಾಬು ಅವರನ್ನು ಬುಧವಾರ ಬಂಧಿಸಿದ ಪೊಲೀಸರು, ನಂತರ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ.

ಕೊಚ್ಚಿಯಲ್ಲಿ ಎಸ್‌ಐಟಿ ಎದುರು ಬೆಳಿಗ್ಗೆ 10 ಗಂಟೆಗೆ ಹಾಜರಾದ ಬಾಬು ಅವರನ್ನು ವಿಚಾರಣೆಗೊಳಪಡಿಸಿದ ತಂಡವು, ಮಧ್ಯಾಹ್ನ 1 ಗಂಟೆಗೆ ಬಂಧಿಸಿತು. ನ್ಯಾಯಾಲಯವು ಈ ಹಿಂದೆಯೇ ನಿರೀಕ್ಷಣಾ ಜಾಮೀನು ನೀಡಿದ್ದರಿಂದ, ವೈದ್ಯಕೀಯ ಪರೀಕ್ಷೆಯ ನಂತರ ಅವರನ್ನು ಬಿಡುಗಡೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನ್ಯಾಯಮೂರ್ತಿ ಹೇಮಾ ಸಮಿತಿ ಕೇರಳ ಸರ್ಕಾರಕ್ಕೆ ಸಲ್ಲಿಸಿದ್ದ ವರದಿಯ ಕೆಲವು ಭಾಗಗಳು ಬಹಿರಂಗಗೊಂಡ ಬಳಿಕ, ಮಲಯಾಳ ಚಿತ್ರೋದ್ಯಮದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳ ತನಿಖೆ ನಡೆಸುತ್ತಿರುವ ಎಸ್‌ಐಟಿಯು ಚಲನಚಿತ್ರ ನಟರೊಬ್ಬರನ್ನು ಬಂಧಿಸಿದ ಎರಡನೇ ಪ್ರಕರಣವಿದು.

‘ಮಲಯಾಳ ಚಲನಚಿತ್ರ ಕಲಾವಿದರ ಸಂಘದ ಸದಸ್ಯತ್ವಕ್ಕಾಗಿ ಅರ್ಜಿ ಹಾಕಿದ್ದ ನನ್ನನ್ನು, ದಾಖಲೆ ಭರ್ತಿ ಮಾಡಲು ತಮ್ಮ ಮನೆಗೆ ಬರುವಂತೆ ಬಾಬು ಹೇಳಿದ್ದರು. ಅಲ್ಲಿಗೆ ಹೋದಾಗ ಲೈಂಗಿಕ ಕಿರುಕುಳ ನೀಡಿದ್ದರು’ ಎಂದು ಎರ್ನಾಕುಲಂ ಉತ್ತರ ಪೊಲೀಸ್ ಠಾಣೆಯಲ್ಲಿ ಆ. 28ರಂದು ನಟಿ ದೂರು ದಾಖಲಿಸಿದ್ದರು.

‘ಕರ್ನಾಟಕ ಕಾಂಗ್ರೆಸ್‌ನಲ್ಲಿ ಆಂತರಿಕ ಕಲಹ’

ಹರಿಯಾಣದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಅಸ್ಥಿರತೆ ● ರ್‍ಯಾಲಿಯಲ್ಲಿ ಪ್ರಧಾನಿ ಮೋದಿ ವಾಗ್ದಾಳಿ

ಸೋನಿಪತ್ (ಪಿಟಿಐ): ‘ಕರ್ನಾಟಕದಲ್ಲಿ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ನಡುವೆ ಅಧಿಕಾರಕ್ಕಾಗಿ ಆಂತರಿಕ ಕಲಹ ನಡೆಯುತ್ತಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಬುಧವಾರ ಹೇಳಿದರು.

ಹರಿಯಾಣದ ಸೋನಿಪತ್ ಜಿಲ್ಲೆಯ ಗೊಹಾನಾದಲ್ಲಿ ನಡೆದ ಚುನಾವಣಾ ರ್‍ಯಾಲಿಯಲ್ಲಿ ಮಾತನಾಡಿದ ಅವರು, ‘ಎಲ್ಲೆಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತದೆಯೋ ಅಲ್ಲೆಲ್ಲ ಅಧಿಕಾರಕ್ಕಾಗಿ ಆಂತರಿಕ ಕಲಹ ನಡೆಯುತ್ತಲೇ ಇವೆ. ಇದಕ್ಕೆ ಕಾಂಗ್ರೆಸ್ ಆಡಳಿತದಲ್ಲಿರುವ ಕರ್ನಾಟಕವೇ ನಿದರ್ಶನ. ತೆಲಂಗಾಣ ಮತ್ತು ಹಿಮಾಚಲ ಪ್ರದೇಶದಲ್ಲೂ ಇದೇ ಕತೆ’ ಎಂದರು.

ರಾಜಸ್ಥಾನ ಮತ್ತು ಛತ್ತೀಸಗಢದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದಾಗಲೂ ಆಂತರಿಕ ಕಲಹ ಜೋರಾಗಿತ್ತು ಎಂದ ಅವರು, ‘ಹರಿಯಾಣದ ಜನರು ಎಚ್ಚರದಿಂದ ಇರಬೇಕು. ಇಲ್ಲೇನಾದರೂ ತಪ್ಪಾಗಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಅಂತಃ ಕಲಹಗಳ ಮೂಲಕ ಅಸ್ಥಿರತೆ ಮೂಡುತ್ತದೆ. ಅದು ಈಗಾಗಲೇ ಹರಿಯಾಣ ಕಾಂಗ್ರೆಸ್‌ನಲ್ಲಿ ಗೋಚರಿಸುತ್ತಿದೆ’ ಎಂದು ಆರೋಪಿಸಿದರು.

‘ಕಾಂಗ್ರೆಸ್‌ಗೆ ಮತ ಹಾಕುವುದು ಎಂದರೆ ಸ್ಥಿರತೆ ಮತ್ತು ಅಭಿವೃದ್ಧಿಯನ್ನು ಪಣಕ್ಕಿಟ್ಟಂತೆ. ಅದರಿಂದ ರಾಜ್ಯವೇ ಹಾಳಾಗುತ್ತದೆ’ ಎಂದ ಅವರು, ಅದಕ್ಕೆ ಅವಕಾಶ ನೀಡಬೇಡಿ ಎಂದರು.



ಹರಿಯಾಣದ ಸೋನಿಪತ್‌ನಲ್ಲಿ ನಡೆದ ಚುನಾವಣಾ ರ್‍ಯಾಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಹರಿಯಾಣ ಮುಖ್ಯಮಂತ್ರಿ ನಾಯಬ್ ಸಿಂಗ್ ಸೈನಿ ಅವರು ಗದೆ ನೀಡಿ ಗೌರವಿಸಿದರು ಪಿಟಿಐ ಚಿತ್ರ

‘ಕಾಂಗ್ರೆಸ್ ಅಧಿಕಾರದಿಂದ ಹೊರಗುಳಿದಾಗೆಲ್ಲ ಬಡವರು, ಎಸ್‌.ಸಿ, ಎಸ್‌.ಟಿ ಮತ್ತು ಒಬಿಸಿ ಸಮುದಾಯದವರಿಗೆ ಅವರ ಹಕ್ಕುಗಳು ದೊರೆತಿವೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗೆಲ್ಲ ದಲಿತರು ಮತ್ತು ತಳವರ್ಗದವರ ಹಕ್ಕುಗಳನ್ನು ಕಸಿದಿದೆ’ ಎಂದು ಹೇಳಿದರು.

ಮೀಸಲಾತಿಯನ್ನು ವಿರೋಧಿಸುವುದು ಮತ್ತು ದ್ವೇಷಿಸುವುದು ಕಾಂಗ್ರೆಸ್‌ನ ಡಿಎನ್‌ಎಯಲ್ಲಿಯೇ ಇದೆ ಎಂದು ಮೋದಿ ಟೀಕಿಸಿದರು.

ಹರಿಯಾಣ ವಿಧಾನಸಭೆಯ 90 ಕ್ಷೇತ್ರಗಳಿಗೆ ಅಕ್ಟೋಬರ್ 5ರಂದು ಮತದಾನ ನಡೆಯಲಿದ್ದು, ಅಕ್ಟೋಬರ್ 8ರಂದು ಮತ ಎಣಿಕೆ ನಡೆಯಲಿದೆ.

ನೂಹ್: ಮೊದಲ ಮಹಿಳಾ ಅಭ್ಯರ್ಥಿ ಕಣಕ್ಕೆ

ನೂಹ್ (ಪಿಟಿಐ): ದೇಶದ ಅತ್ಯಂತ ಹಿಂದುಳಿದ ಪ್ರದೇಶಗಳಲ್ಲಿ ಒಂದಾದ ನೂಹ್ ಮುಸ್ಲಿಂ ಪ್ರಾಬಲ್ಯವುಳ್ಳ ಕ್ಷೇತ್ರ. ಇಲ್ಲಿ ಮಹಿಳೆಯರು ಶಿರವಸ್ತ್ರ ಧರಿಸದೇ ನಡೆದಾಡುವುದೇ ಅಪರೂಪ. ಇದೇ ಮೊದಲ ಬಾರಿಗೆ ಇಲ್ಲಿ ಮಹಿಳೆಯೊಬ್ಬರು ವಿಧಾನಸಭಾ ಚುನಾವಣೆಯ ಅಖಾಡಕ್ಕೆ ಇಳಿದಿದ್ದು, ಚುನಾವಣಾ ಪ್ರಚಾರದಲ್ಲಿ ತೊಡಗಿದ್ದಾರೆ.



ರಬಿಯಾ

ಗುರುಗ್ರಾಮದ ಉದ್ಯಮಿ ರಬಿಯಾ ಕಿದ್ವಾಯಿ (34) ಇಲ್ಲಿ ಚುನಾವಣಾ ಸ್ಪರ್ಧೆಗಿಳಿದಿರುವ ಮಹಿಳೆ. ಕ್ಷೇತ್ರದಲ್ಲಿ ತನಗೆ ಎದುರಾಗಲಿರುವ ಸವಾಲುಗಳ ಬಗ್ಗೆ ಅರಿವಿರುವ ಅವರು, ಮತದಾರರು ತನ್ನನ್ನು ಬೆಂಬಲಿಸುತ್ತಾರೆ ಎಂಬ ವಿಶ್ವಾಸದಲ್ಲಿದ್ದಾರೆ.

ಮಾಜಿ ರಾಜ್ಯಪಾಲ ಅಖ್ಲಾಕ್ ಉರ್ ರೆಹಮಾನ್ ಕಿದ್ವಾಯಿ ಅವರ ಮೊಮ್ಮಗಳಾದ ರಬಿಯಾ, ಆಮ್ ಆದ್ಮಿ ಪಕ್ಷದಿಂದ (ಎಎಪಿ) ಕಣಕ್ಕಿಳಿದಿದ್ದಾರೆ.

‘ರೈತರಿಗೆ ಬಿಜೆಪಿ ಮೇಲೆ ನಂಬಿಕೆಯಿಲ್ಲ’

ನವದೆಹಲಿ (ಪಿಟಿಐ): ಬಿಜೆಪಿ ಮೇಲಿನ ನಂಬಿಕೆಯನ್ನು ಹರಿಯಾಣದ ರೈತರು ಸಂಪೂರ್ಣವಾಗಿ ಕಳೆದುಕೊಂಡಿದ್ದಾರೆ ಎಂದಿರುವ ಕಾಂಗ್ರೆಸ್, ರಾಜ್ಯದ ಕೃಷಿಕರಿಗೆ ಯೋಗ್ಯವಾದ ಜೀವನ ಖಚಿತಪಡಿಸಲು ಬಿಜೆಪಿ ಏನು ಮಾಡುತ್ತದೆ ಎಂಬುದನ್ನು ಪ್ರಧಾನಿ ನರೇಂದ್ರ ಮೋದಿ ತಿಳಿಸಬೇಕು ಎಂದು ಒತ್ತಾಯಿಸಿದರು.

ಹರಿಯಾಣದಲ್ಲಿ ಚುನಾವಣಾ ಪ್ರಚಾರದಲ್ಲಿ ಪ್ರಧಾನಿ ಅವರು ಈ ಕುರಿತು ವಿವರಿಸಬೇಕು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಬುಧವಾರ ಆಗ್ರಹಿಸಿದರು.

ರೈತರ ಪ್ರತಿಭಟನೆಗಳ ಬಳಿಕ ಮೂರು ಕೃಷಿ ಕಾನೂನುಗಳನ್ನು ರದ್ದುಪಡಿಸಿದ ಪ್ರಧಾನಿ ಅವರು, ಆ ವೇಳೆ ರೈತರಿಗೆ ನೀಡಿದ್ದ ಭರವಸೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಯಾವ ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎಂದು ಅವರು ಪ್ರಶ್ನಿಸಿದರು.

ಸಂಸದ ನೂರುಲ್ ಇಸ್ಲಾಂ ನಿಧನ

ಕೋಲ್ಕತ್ತ (ಪಿಟಿಐ): ಟಿಎಂಸಿಯ ಬಸೀರ್‌ಹಾತ್ ಸಂಸದ ಹಾಜಿ ಶೇಖ್ ನೂರುಲ್ ಇಸ್ಲಾಂ (61) ಬುಧವಾರ ನಿಧನರಾದರು. ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅವರು ಉತ್ತರ 24 ಪರಗಣದ ತಮ್ಮ ನಿವಾಸದಲ್ಲಿ ಕೊನೆಯುಸಿರೆಳೆದರು ಎಂದು ಪಕ್ಷದ ಮೂಲಗಳು ತಿಳಿಸಿವೆ.

ಕೃಷಿ ಕಾಯ್ದೆ: ಅಂತರ ಕಾಯ್ದುಕೊಂಡ ಬಿಜೆಪಿ

ಹೇಳಿಕೆ ಹಿಂಪಡೆದ ಕಂಗನಾ

ಶಿಮ್ಲಾ (ಪಿಟಿಐ): ರೈತರ ಪ್ರತಿಭಟನೆಗಳ ಕಾರಣ 2021ರಲ್ಲಿ ರದ್ದಾಗಿರುವ ಮೂರು ಕೃಷಿ ಕಾಯ್ದೆಗಳನ್ನು ಮರಳಿ ತರುವಂತೆ ಆಗ್ರಹಿಸಿದ್ದ ಬಿಜೆಪಿ ಸಂಸದೆ ಕಂಗನಾರನೌತ್ ಅವರು ಬುಧವಾರ ತಮ್ಮ ಈ ಹೇಳಿಕೆಯನ್ನು ವಾಪಸ್ ಪಡೆದು, ವಿಷಾದ ವ್ಯಕ್ತಪಡಿಸಿದ್ದಾರೆ.



ಕಂಗನಾ ರನೌತ್

ಮಂಡಿಯಲ್ಲಿ ಮಂಗಳವಾರ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ್ದ ಅವರು, ‘ಮೂರು ಕೃಷಿ ಕಾಯ್ದೆಗಳನ್ನು ಆಕ್ಷೇಪಿಸಿ ದೇಶದ ಕೆಲವೇ ರಾಜ್ಯಗಳಲ್ಲಿ ರೈತರ ಪ್ರತಿಭಟನೆ ನಡೆದಿತ್ತು. ಹೀಗಾಗಿ ಹಿಂಪಡೆಯಲಾಗಿರುವ ಈ ಮೂರು ಕೃಷಿ ಕಾನೂನುಗಳನ್ನು ರೈತರ ಹಿತಕ್ಕಾಗಿ ಮತ್ತೆ ತರುವಂತೆ’ ಒತ್ತಾಯಿಸಿದ್ದರು.

ಮಂಡಿಯ ಸಂಸದೆ ಮತ್ತು ನಟಿ ಕಂಗನಾ ಅವರ ಈ ಹೇಳಿಕೆಯಿಂದ ಹಿಮಾಚಲ ಪ್ರದೇಶದ ಬಿಜೆಪಿ ಘಟಕ ಅಂತರ ಕಾಯ್ದುಕೊಂಡಿತ್ತು.

ತನ್ನ ಮಾತುಗಳಿಗೆ ವಿರೋಧ ಪಕ್ಷಗಳು, ರೈತರ ಮುಖಂಡರಿಂದ ವ್ಯಾಪಕ ವಿರೋಧ ವ್ಯಕ್ತವಾದ ಬೆನ್ನಲ್ಲೇ, ‘ಎಕ್ಸ್’ನಲ್ಲಿ 68 ಸೆಕೆಂಡ್‌ಗಳ ವಿಡಿಯೊ ಪೋಸ್ಟ್ ಮಾಡಿರುವ ಅವರು, ‘ಕೃಷಿ ಕಾಯ್ದೆಗಳಿಗೆ ಸಂಬಂಧಿಸಿದಂತೆ ನನ್ನ ಅಭಿಪ್ರಾಯಗಳು ವೈಯಕ್ತಿಕವಾದವು. ಇವು ಈ ಕಾಯ್ದೆಗಳ ಕುರಿತ ಬಿಜೆಪಿ ನಿಲುವಲ್ಲ’ ಎಂದು ಹೇಳಿದ್ದಾರೆ.

ಉಚ್ಚಾಟನೆಗೆ ಆಗ್ರಹ: ‘ರದ್ದಾಗಿರುವ ಕೃಷಿ ಕಾಯ್ದೆಗಳನ್ನು ಮತ್ತೆ ತರುವ ಯೋಜನೆ ವ್ಯಕ್ತಪಡಿಸಿರುವ ಬಿಜೆಪಿ ಸಂಸದೆಯನ್ನು ಪಕ್ಷದಿಂದ ಉಚ್ಚಾಟಿಸಬೇಕು’ ಎಂದು ಕಾಂಗ್ರೆಸ್ ಆಗ್ರಹಿಸಿದೆ. ಅಲ್ಲದೆ ಈ ಕಾಯ್ದೆಗಳು ಮರು ಜಾರಿಯಾಗಲು ಕಾಂಗ್ರೆಸ್ ಬಿಡುವುದಿಲ್ಲ ಎಂದಿದೆ.

ಬಿಜೆಪಿ ನೇತೃತ್ವದ ಸರ್ಕಾರವೇ ರದ್ದುಪಡಿಸಿದ್ದ ಕೃಷಿ ಕಾಯ್ದೆಗಳ ಬಗ್ಗೆ ಮಾತನಾಡುತ್ತಿರುವ ಅದರ ಸಂಸದೆ ವಿರುದ್ಧ ಅದು ಕ್ರಮ ತೆಗೆದುಕೊಳ್ಳಬೇಕು

ಸರ್ವಾನ್ ಸಿಂಗ್ ಪಂಧೇರ್
ಕಿಸಾನ್ ಮಜ್ದೂರ್ ಮೋರ್ಚಾದ ನಾಯಕ

ಬಿಜೆಪಿಯವರು ತಮ್ಮ ವಿಚಾರಗಳನ್ನು ಈ ರೀತಿ ಪರೀಕ್ಷೆ ಮಾಡುತ್ತಿದ್ದಾರೆ. ಕಂಗನಾ ಹೇಳಿಕೆಗಳನ್ನು ಪ್ರಧಾನಿ ಮೋದಿ ವಿರೋಧಿಸುತ್ತಾರೆಯೇ ಎಂಬುದನ್ನು ಸ್ಪಷ್ಟಪಡಿಸಲಿ

ರಾಹುಲ್ ಗಾಂಧಿ
ಲೋಕಸಭಾ ವಿರೋಧ ಪಕ್ಷದ ನಾಯಕ

ಕಂಗನಾ ಹೇಳಿಕೆ ಖಂಡನೀಯ. ಹರಿಯಾಣ ಸೇರಿದಂತೆ ದೇಶದಲ್ಲಿ ಚುನಾವಣೆಗಳು ನಡೆಯುತ್ತಿರುವ ರಾಜ್ಯಗಳ ಜನರು ಬಿಜೆಪಿಗೆ ತಕ್ಕ ಪಾಠ ಕಲಿಸಲಿದ್ದಾರೆ

ಮಲ್ಲಿಕಾರ್ಜುನ ಖರ್ಗೆ
ಎಐಸಿಸಿ ಅಧ್ಯಕ್ಷ



ಜಂಗಿ ನಿಕಾಲಿ ಕುಸ್ತಿ ಬಾಗಲಕೋಟೆ ಜಿಲ್ಲೆಯ ರಬಕವಿ ಬನಹಟ್ಟಿಯಲ್ಲಿ ಕಾಡಸಿದ್ಧೇಶ್ವರ ಜಾತ್ರೆ ಅಂಗವಾಗಿ ಬುಧವಾರ ನಡೆದ ರಾಷ್ಟ್ರ ಮಟ್ಟದ ಜಂಗಿ ನಿಕಾಲಿ ಕುಸ್ತಿ ಸ್ಪರ್ಧೆಯಲ್ಲಿ ಪೈಲ್ವಾನರು ಸೆಣಸಿದರು -ಪ್ರಜಾವಾಣಿ ಚಿತ್ರ

ಐಒಎ ಸಭೆ ಕಾವೇರುವ ಸಾಧ್ಯತೆ

ನವದೆಹಲಿ (ಪಿಟಿಐ): ಗುರುವಾರ ನಿಗದಿಯಾಗಿರುವ ಭಾರತ ಒಲಿಂಪಿಕ್ ಸಂಸ್ಥೆಯ (ಐಒಎ) ಕಾರ್ಯಕಾರಿ ಸಮಿತಿ ಸಭೆಯು ಕಾವೇರುವ ಸಾಧ್ಯತೆಯಿದೆ. ಸಮಿತಿ ಸದಸ್ಯರು ತಮಗೆ ಅಧ್ಯಕ್ಷೆ ಪಿ.ಟಿ. ಉಷಾ ಬರೆದಿರುವ ‘ಎಚ್ಚರಿಕೆಯ ಪತ್ರ’ ಸೇರಿದಂತೆ ವಿವಾದಾತ್ಮಕ ವಿಷಯಗಳನ್ನು ಕಾರ್ಯಸೂಚಿಯಲ್ಲಿ ಸೇರಿಸಿದ್ದಾರೆ.

ಪಿ.ಟಿ.ಉಷಾ ಮತ್ತು ಐಒಎ ಖಜಾಂಚಿ ಸಹದೇವ ಯಾದವ್ ಮಧ್ಯೆ ಅಂತಃಕಲಹ ಉಲ್ಬಣಗೊಂಡಿರುವ ಸಮಯದಲ್ಲೇ ಈ ಸಭೆ ನಡೆಯುತ್ತಿದೆ.

ಖಜಾಂಚಿ ಹುದ್ದೆಗೆ ತಮ್ಮ ಅರ್ಹತೆ ಪ್ರಶ್ನಿಸಿ ಪತ್ರವೊಂದರ ದೂರಿನ ಆಧಾರದಲ್ಲಿ ಅಧ್ಯಕ್ಷೆಯು ತಮಗೆ ಷೋಕಾಸ್ ನೋಟಿಸ್ ಕಳುಹಿಸಿದ್ದಕ್ಕೆ ಕೆಂಡಾಮಂಡಲಗೊಂಡಿರುವ ಸಹದೇವ್, ತಮ್ಮ ವ್ಯಕ್ತಿತ್ವಕ್ಕೆ ಕಳಂಕ ತಂದಿದ್ದಾರೆಂದು ಆರೋಪಿಸಿ ಉಷಾ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಾಗಿ ಮಂಗಳವಾರ ಎಚ್ಚರಿಕೆ ನೀಡಿದ್ದಾರೆ.

ಐಒಎ ಸಂವಿಧಾನದಡಿ ಅಧ್ಯಕ್ಷರ ಅಧಿಕಾರದ ಕುರಿತೂ ಚರ್ಚೆ ನಡೆಯಲಿದೆ. ಅಧ್ಯಕ್ಷರ ವರ್ತನೆಯ ಕುರಿತು ಐಒಎ ಎಥಿಕ್ಸ್ ಕಮಿಷನ್‌ಗೆ ವರದಿ ಮಾಡುವ ಅಗತ್ಯದ ವಿಷಯದಲ್ಲೂ ನಿರ್ಧಾರ ಕೈಗೊಳ್ಳಲಿದೆ.

ಭಾರತಕ್ಕೆ ಮಣಿದ ಮಂಗೋಲಿಯಾ

ವಿಯೆನ್‌ಟೇನ್ (ಲಾವೋಸ್), (ಪಿಟಿಐ): ಭಾರತ ತಂಡ, ಎಎಫ್‌ಸಿ 20 ವರ್ಷದೊಳಗಿನವರ ಏಷ್ಯನ್ ಕಪ್ ಕ್ವಾಲಿಫೈರ್ಸ್ ಫುಟ್‌ಬಾಲ್ ಟೂರ್ನಿಯಲ್ಲಿ ಬುಧವಾರ 4–1 ಗೋಲುಗಳಿಂದ ಮಂಗೋಲಿಯಾ ತಂಡವನ್ನು ಸೋಲಿಸಿ ತನ್ನ ಅಭಿಯಾನ ಆರಂಭಿಸಿತು.

ಕೆಲ್ವಿನ್ ಸಿಂಗ್ ತಾವೊರೆಮ್ (20ನೇ ನಿಮಿಷ), ಮಂಗ್ಲೆನ್‌ಥಾಂಗ್ ಕಿಪ್ಜೆನ್ (51, 54ನೇ) ಮತ್ತು ಕೊರೊವು ಸಿಂಗ್ ಥಿಂಗುಜಮ್ (85ನೇ) ಭಾರತದ ಪರ ಗೋಲು ಹೊಡೆದರು. ಮಂಗೋಲಿಯಾ ಕಡೆ ತೆಮುಲೆನ್ ಉಗನ್‌ಬಾತ್ (45ನೇ) ತಂಡದ ಏಕೈಕ ಗೋಲನ್ನು ಗಳಿಸಿದರು.

ಇರಾನ್ ಮತ್ತು ಆತಿಥೇಯ ಲಾವೋಸ್ ‘ಜಿ’ ಗುಂಪಿನಲ್ಲಿರುವ ಇತರ ಎರಡು ತಂಡಗಳಾಗಿವೆ.

ಸಿಬಿಎಸ್‌ಇ ವಲಯ 8 ಕೊಕ್ಕೊ ಟೂರ್ನಿ

ಸಿದ್ಧಗಂಗಾ ಶಾಲಾ ಬಾಲಕಿಯರಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆತಿಥೇಯ ಶ್ರೀಸಿದ್ಧಗಂಗಾ ಹಿರಿಯ ಪ್ರಾಥಮಿಕ ಶಾಲಾ ತಂಡವು ನವದೆಹಲಿಯ ಕೇಂದ್ರೀಯ ಮಾಧ್ಯಮಿಕ ಶಿಕ್ಷಣ ಮಂಡಳಿಯ ಆಶ್ರಯದಲ್ಲಿ ಬುಧವಾರ ಮುಕ್ತಾಯವಾದ ಸಿಬಿಎಸ್‌ಇ ವಲಯ- 8 ಕೊಕ್ಕೊ ಟೂರ್ನಿಯ 19 ವರ್ಷದೊಳಗಿನವರ ಬಾಲಕಿಯರ ವಿಭಾಗದ ಪ್ರಶಸ್ತಿ ಮುಡಿಗೇರಿಸಿಕೊಂಡಿತು.

ತುಮಕೂರು ಮಾರುತಿ ವಿದ್ಯಾ ಕೇಂದ್ರವು ರನ್ನರ್ ಅಪ್ ಆಯಿತು. ಇದೇ ವಯೋಮಾನದ ಬಾಲಕರ ವಿಭಾಗದಲ್ಲಿ ಪೊಲೀಸ್ ಪಬ್ಲಿಕ್ ಸ್ಕೂಲ್ ಪ್ರಥಮ; ಸಿದ್ಧಗಂಗಾ ಶಾಲೆ ದ್ವಿತೀಯ ಸ್ಥಾನ ಪಡೆಯಿತು.

17 ವರ್ಷದೊಳಗಿನವರ ಬಾಲಕರ ವಿಭಾಗದಲ್ಲಿ ಬೆಳಗಾವಿಯ ಎಸ್‌.ಎಂ. ಕಲೂತಿ ಚಂದರಗಿ ಶಾಲೆ ಪ್ರಥಮ; ಮೈಸೂರಿನ ಈಸ್ಟ್ ವೆಸ್ಟ್ ಶಾಲೆ ದ್ವಿತೀಯ; ಬಾಲಕಿಯರ ವಿಭಾಗದಲ್ಲಿ ಚಿತ್ರಕೂಟ ಶಾಲೆ ಪ್ರಥಮ; ಹೊನ್ನಾಳಿ ಶ್ರೀಸಾಯಿ ಗುರುಕುಲ ದ್ವಿತೀಯ ಸ್ಥಾನ ಗಳಿಸಿತು.

14 ವರ್ಷದೊಳಗಿನವರ ಬಾಲಕರ ವಿಭಾಗದಲ್ಲಿ ಚಿತ್ರಕೂಟ ಶಾಲೆ ಪ್ರಥಮ; ಸಿದ್ಧಗಂಗಾ ಶಾಲೆ ದ್ವಿತೀಯ; ಬಾಲಕಿಯರ ಸ್ಪರ್ಧೆಯಲ್ಲಿ ಹೊನ್ನಾಳಿ ಸಾಯಿ ಗುರುಕುಲ ಪ್ರಥಮ; ನಿರ್ವಾಣ ಸ್ವಾಮಿ ಶಾಲೆ ದ್ವಿತೀಯ ಸ್ಥಾನ ಪಡೆಯಿತು.

ಭಾರತೀಯ ಕ್ರೀಡಾ ಪ್ರಾಧಿಕಾರದ ಪ್ರಾದೇಶಿಕ ನಿರ್ದೇಶಕ ವಿಷ್ಣು ಸುಧಾಕರನ್, ಸಿಬಿಎಸ್‌ಇ ಪ್ರಾದೇಶಿಕ ಅಧಿಕಾರಿ ರಮೇಶ್ ಪಿ., ಅಂತರ ರಾಷ್ಟ್ರೀಯ ಕೊಕ್ಕೊ ಆಟಗಾರ್ತಿ ವೀಣಾ ಎಂ., ಸಿದ್ಧಗಂಗಾ ಶ್ರೀಶಿವಕುಮಾರ ಸ್ವಾಮೀಜಿ ವಿದ್ಯಾಪೀಠ ಟ್ರಸ್ಟ್‌ನ ಅಧ್ಯಕ್ಷ ಎಲ್. ರೇವಣಸಿದ್ದಯ್ಯ ಅವರು ವಿಜೇತ ತಂಡಗಳಿಗೆ ಬಹುಮಾನ ವಿತರಿಸಿದರು. ವಿದ್ಯಾಪೀಠ ಟ್ರಸ್ಟ್‌ನ ಜಂಟಿ ಕಾರ್ಯದರ್ಶಿ ಎಸ್. ಮೃತ್ಯುಂಜಯ, ಖಜಾಂಚಿ ಡಾ.ಆರ್. ಲೋಕಪ್ರಕಾಶ್, ಶೈಕ್ಷಣಿಕ ಸಲಹೆಗಾರ ಟಿ.ಎಸ್. ತುಳಸಿಕುಮಾರ್ ಮತ್ತು ಪ್ರಾಂಶುಪಾಲರಾದ ಟಿ.ಎಂ. ಹಂಸಾ ಇದ್ದರು.



ಸಿಬಿಎಸ್‌ಇ ವಲಯ 8 ಕೊಕ್ಕೊ ಟೂರ್ನಿಯ 19 ವರ್ಷದೊಳಗಿನವರ ಬಾಲಕಿಯರ ವಿಭಾಗದ ಪ್ರಶಸ್ತಿಯನ್ನು ಗೆದ್ದ ಬೆಂಗಳೂರು ಚಂದ್ರ ಬಡಾವಣೆಯ ಶ್ರೀಸಿದ್ಧಗಂಗಾ ಹಿರಿಯ ಪ್ರಾಥಮಿಕ ಶಾಲಾ ತಂಡ. ಎಡದಿಂದ (ಕುಳಿತವರು) ನಮ್ರತಾ, ಪ್ರತೀಕ್ಷಾ, ಪ್ರಾರ್ಥನಾ, ಸಿಂಚನಾ, ಪ್ರಮಿತಾ (ನಿಂತವರು) ವೇದಾ, ಭೂಮಿಕಾ, ಮೇನಕಾ, ದಾಕ್ಷಾಯಣಿ, ಮನಸ್ವಿ ಗೌಡ, ಧನ್ಯಾ, ಲೇಖನಾ, ನಾಯಕಿ ಮನಸ್ವಿ ಗೌಡ, ಪ್ರಾಂಶುಪಾಲರಾದ ಟಿ.ಎಂ. ಹಂಸಾ ಮತ್ತು ಕೋಚ್ ಮುರಳೀಧರರಾಮ್ ಚಿತ್ರದಲ್ಲಿದ್ದಾರೆ ಪ್ರಜಾವಾಣಿ ಚಿತ್ರ: ಎಂ.ಎಸ್. ಮಂಜುನಾಥ್

ಭಾರತದ ಪಿಚ್‌ಗಳಲ್ಲಿ ಯಶಸ್ವಿಯಾಗಿರುವ ಮತ್ತೊಬ್ಬ ಪ್ರತಿಭೆ

ವೇಗಿಗಳ ಸಾಲಿಗೆ ಆಕಾಶದೀಪ್

ಪ್ರಜಾವಾಣಿ ವಾರ್ತೆ

ಕಾನ್ಪುರ: ಮಧ್ಯಮ ವೇಗದ ಬೌಲರ್ ಆಕಾಶದೀಪ್ ಇಲ್ಲಿಯವರೆಗೆ ಕೇವಲ ಎರಡು ಟೆಸ್ಟ್ ಪಂದ್ಯಗಳನ್ನು ಆಡಿದ್ದಾರೆ. ಆದರೆ ಭಾರತದ ಪಿಚ್‌ಗಳಲ್ಲಿ ಯಶಸ್ವಿಯಾಗಿರುವ ಅವರು ತಮ್ಮ ಸಾಮರ್ಥ್ಯವನ್ನು ಮೆರೆದಿದ್ದಾರೆ.

ಈಚೆಗೆ ಅವರು ರಾಂಚಿಯಲ್ಲಿ ನಡೆದಿದ್ದ ಇಂಗ್ಲೆಂಡ್ ವಿರುದ್ಧದ ಪಂದ್ಯದಲ್ಲಿ ಪದಾರ್ಪಣೆ ಮಾಡಿದ್ದರು. ಚೊಚ್ಚಲ ಪಂದ್ಯದಲ್ಲಿಯೇ (38ಕ್ಕೆ3) ಗಮನ ಸೆಳೆಯುವಂತಹ ಬೌಲಿಂಗ್ ಮಾಡಿದ್ದರು. 27 ವರ್ಷದ ಆಕಾಶ್, ಚೆನ್ನೈನಲ್ಲಿ ಮುಗಿದ ಬಾಂಗ್ಲಾದೇಶ ವಿರುದ್ಧ ಮೊದಲ ಟೆಸ್ಟ್ ಪಂದ್ಯದಲ್ಲಿಯೂ ಮಿಂಚಿದರು.

ಪಂದ್ಯದಲ್ಲಿ ತಮ್ಮ ಮೊದಲ ಓವರ್‌ನಲ್ಲಿ ಶಿಸ್ತಿನಿಂದ ಬೌಲಿಂಗ್ ಮಾಡಿದರು. ನಂತರದ ಓವರ್‌ನಲ್ಲಿ ಸತತ ಎರಡು ವಿಕೆಟ್ ಗಳಿಸಿ ತಂಡಕ್ಕೆ ಮುನ್ನಡೆ ನೀಡುವಲ್ಲಿ ಯಶಸ್ವಿಯಾದರು. ಅವರು ಪ್ರಯೋಗಿಸಿದ ಇನ್ ಸ್ವಿಂಗ್ ಎಸೆತಗಳಿಗೆ ಜಾಕೀರ್ ಹಸನ್ ಮತ್ತು ಮೊಮಿನುಲ್ ಹಕ್ ವಿಕೆಟ್ ಪತನವಾಗಿದ್ದವು. ಇನಿಂಗ್ಸ್‌ನಲ್ಲಿ 11 ಓವರ್ ಬೌಲಿಂಗ್ ಮಾಡಿದ್ದರು.

ಐತಿಹಾಸಿಕ ನಗರವಾದ ಸಸಾರಾಮ್‌ನಿಂದ ಹೊರಹೊಮ್ಮಿದ ಟೆಸ್ಟ್ ಕ್ರಿಕೆಟಿಗ ಆಕಾಶ್, ಬೆಳೆದ ಹಾದಿ ಸುಲಭವೇನೂ ಆಗಿರಲಿಲ್ಲ. ಕ್ರಿಕೆಟ್ ಆಡಲು ನಿರ್ಧರಿಸಿದ್ದ ಆಕಾಶ್ ಅವರು ತಂದೆ, ತಾಯಿಯ ವಿರೋಧ ಎದುರಿಸಬೇಕಾಯಿತು. ಅಕ್ಕಪಕ್ಕದ ಕುಟುಂಬಗಳು ಮತ್ತು ಸಂಬಂಧಿಕರು ತಮ್ಮ ಮಕ್ಕಳು ಆಕಾಶ್ ಜೊತೆ ಬೆರೆಯದಂತೆ ನೋಡಿಕೊಂಡರು.

2010ರ ಸುಮಾರಿಗೆ 14 ವರ್ಷದವರಾಗಿದ್ದ ಆಕಾಶ್ ತಮ್ಮ ಊರು ಬಿಟ್ಟು ಪಶ್ಚಿಮ ಬಂಗಾಳದ ದುರ್ಗಾಪುರಕ್ಕೆ ಹೋದರು. ಅಲ್ಲಿ ತಮ್ಮ ಕ್ರಿಕೆಟ್ ಕನಸುಗಳನ್ನು ನನಸು ಮಾಡಲು ಪಣತೊಟ್ಟರು. ಅಲ್ಲಿದ್ದ ಚಿಕ್ಕಪ್ಪನ ಬೆಂಬಲ ದೊರೆಯಿತು. ಆಕಾಶ್‌ನನ್ನು ಅಕಾಡೆಮಿಯೊಂದಕ್ಕೆ ಸೇರಿಸಿದರು.


ಇನ್ನೇನು ಎಲ್ಲವೂ ಸರಿಯಾಯಿತು ಎನ್ನುವಷ್ಟರಲ್ಲಿಯೇ ಆಕಾಶ್ ಅವರ ತಂದೆ ನಿಧನರಾದರು. ಇದರಿಂದಾಗಿ ಕುಟುಂಬವು ಆರ್ಥಿಕ ಸಂಕಷ್ಟಕ್ಕೀಡಾಯಿತು. ಇದಾಗಿ ಸ್ವಲ್ಪ ಸಮಯವಾಗಿತ್ತು. ಆಕಾಶ್ ಅವರ ಅಣ್ಣ ಸಾವಿಗೀಡಾದರು. ಈ ಹಂತದಲ್ಲಿ ಆಕಾಶ್ ಕ್ರಿಕೆಟ್‌ನಿಂದ ದೂರವುಳಿಯಬೇಕಾಯಿತು. ತನ್ನ ಇಬ್ಬರು ತಂಗಿಯರ ಪೋಷಣೆಗಾಗಿ ಶ್ರಮಿಸಬೇಕಾಯಿತು. ಆದರೆ ಈ ಕಷ್ಟದ ಪರಿಸ್ಥಿತಿಯಲ್ಲಿಯೂ ತಾವು ಕ್ರಿಕೆಟಿಗನಾಗುವ ಕನಸು ಕಮರಲು ಬಿಡಲಿಲ್ಲ.

ಮೂರು ವರ್ಷಗಳ ನಂತರ ಸಸಾರಾಮ್‌ನಿಂದ ಕೋಲ್ಕತ್ತಕ್ಕೆ ತೆರಳಿದರು. ಹಿತೈಷಿಯೊಬ್ಬರ ನೆರವಿನಿಂದ ಯುನೈಟೆಡ್ ಕ್ಲಬ್ ಸೇರಿಕೊಂಡರು. ಕ್ಲಬ್ ಕ್ರಿಕೆಟ್‌ನಲ್ಲಿ ವೇಗದ ಸರದಾರನಾಗಿ ಗಮನ ಸೆಳೆದರು.

'ಆಕಾಶ್ ಬೆಳವಣಿಗೆಗೆ ತಾವು ಕಾರಣ ಎಂದು ಬಹಳಷ್ಟು ಜನ ಹೇಳಿಕೊಳ್ಳುತ್ತಾರೆ. ಆದರೆ ಅವರನ್ನು ಮೊದಲ ಬಾರಿ ಗುರುತಿಸಿದವರು ಮನೋಜ್ ತಿವಾರಿ. ಕ್ಲಬ್ ಕ್ರಿಕೆಟ್‌ನಲ್ಲಿ ಆಕಾಶ್ ಎದುರು ತಿವಾರಿ ಆಡಿದ್ದರು. ಅವರ ಬೌಲಿಂಗ್ ಬಗ್ಗೆ ಅಪಾರ ಮೆಚ್ಚುಗೆ ವ್ಯಕ್ತಪಡಿಸಿದ್ದರು' ಎಂದು ಸಂಸ್ಥೆಯ ಪದಾಧಿಕಾರಿಯೊಬ್ಬರು ಹೇಳುತ್ತಾರೆ.

ನಂತರ ತಿವಾರಿ ಅವರ ಬೆಂಬಲದಿಂದ ಆಕಾಶ್ ಬೆಳವಣಿಗೆ ಏರುಮುಖವಾಯಿತು. ಲಿಸ್ಟ್ ಎ ಮತ್ತು ಪ್ರಥಮ ದರ್ಜೆ ಕ್ರಿಕೆಟ್‌ಗೆ ಅವರು 2019ರಲ್ಲಿ ಪದಾರ್ಪಣೆ ಮಾಡಿದರು. ಮುಕೇಶ್ ಕುಮಾರ್ ಮತ್ತು ಇಶಾನ್ ಪೊರೆಲ್ ಅವರೊಂದಿಗೆ ಜೊತೆಗೂಡಿದ ಆಕಾಶ್, ಬಂಗಾಳ ಕ್ರಿಕೆಟ್ ತಂಡದ ಬೌಲಿಂಗ್ ಬೆನ್ನೆಲುಬಾಗಿದ್ದಾರೆ.

ಇದೀಗ ಭಾರತ ತಂಡದಲ್ಲಿಯೂ ಆಕಾಶ್ ಅವರ ನಿಖರ ದಾಳಿ ಆರಂಭವಾಗಿದೆ. ಇದರೊಂದಿಗೆ ಭಾರತದ ವೇಗದ ಬೌಲರ್‌ಗಳಾದ ಬೂಮ್ರಾ, ಸಿರಾಜ್, ಶಮಿ, ಮುಕೇಶ್, ಅರ್ಷದೀಪ್, ನವದೀಪ್ ಸಿಂಗ್, ಪ್ರಸಿದ್ಧಕೃಷ್ಣ ಮತ್ತಿತರರ ಸಾಲಿಗೆ ಮತ್ತೊಬ್ಬ ಪ್ರತಿಭಾವಂತನ ಸೇರ್ಪಡೆಯಾದಂತಾಗಿದೆ.


ಆಕಾಶದೀಪ್ –ಪಿಟಿಐ ಫೈಲ್ ಚಿತ್ರ

> **ಕ್ರಿಕೆಟ್‌ನ ದಂತಕಥೆಗಳೇ ಆಗಿರುವ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಅವರು ಈಗಲೂ ಕಠಿಣ ಅಭ್ಯಾಸ ಮಾಡುತ್ತಾರೆ. ಅವರ ಸಖ್ಯ ಲಭಿಸಿರುವುದು ನನ್ನ ಅದೃಷ್ಟ**
> **ಆಕಾಶದೀಪ್,** ವೇಗದ ಬೌಲರ್


ಚೆಸ್ ಚತುರರು

ಪ್ರಧಾನಿ ಅಭಿನಂದನೆ

ಚೆಸ್ ಒಲಿಂಪಿಯಾಡ್‌ನಲ್ಲಿ ಚಿನ್ನದ ಪದಕ ವಿಜೇತ ಭಾರತ ಪುರುಷರ ಮತ್ತು ಮಹಿಳಾ ತಂಡಗಳ ಚೆಸ್‌ಪಟುಗಳನ್ನು ನವದೆಹಲಿಯ ತಮ್ಮ ನಿವಾಸದಲ್ಲಿ ಪ್ರಧಾನಿ ನರೇಂದ್ರ ಮೋದಿ ಬುಧವಾರ ಅಭಿನಂದಿಸಿ ಸಂವಾದ ನಡೆಸಿದರು. ಆರ್.ಪ್ರಜ್ಞಾನಂದ, ಅರ್ಜುನ್ ಇರಿಗೇಶಿ, ವಿದಿತ್ ಗುಜರಾತಿ, ಡಿ.ಗುಕೇಶ್, ದಿವ್ಯಾ ದೇಶಮುಖ್, ವಂತಿಕಾ ಅಗರವಾಲ್, ಆರ್. ವೈಶಾಲಿ, ಡಿ.ಹಾರಿಕಾ, ತಾನಿಯಾ ಸಚ್‌ದೇವ್ ಚಿತ್ರದಲ್ಲಿದ್ದಾರೆ –ಪಿಟಿಐ ಚಿತ್ರ

ಒಲಿಂಪಿಯಾಡ್ ಚಿನ್ನ ವಿಜೇತ ತಂಡಗಳಿಗೆ ₹3.2 ಕೋಟಿ ಬಹುಮಾನ

ನವದೆಹಲಿ (ಪಿಟಿಐ): ಬುಡಾಪೆಸ್ಟ್‌ನಲ್ಲಿ ನಡೆದ 45ನೇ ಒಲಿಂಪಿಯಾಡ್‌ನಲ್ಲಿ ಚಿನ್ನದ ಪದಕಗಳನ್ನು ಗೆದ್ದು ಚಾರಿತ್ರಿಕ ಸಾಧನೆಗೈದ ಭಾರತ ಚೆಸ್ ತಂಡಗಳಿಗೆ ₹3.2 ಕೋಟಿ ನಗದು ಬಹುಮಾನ ನೀಡುವುದಾಗಿ ಅಖಿಲ ಭಾರತ ಚೆಸ್ ಫೆಡರೇಷನ್ (ಎಐಸಿಎಫ್) ಬುಧವಾರ ಇಲ್ಲಿ ಅಭಿನಂದನಾ ಸಮಾರಂಭದಲ್ಲಿ ಘೋಷಿಸಿದೆ.

ಎಐಸಿಎಫ್ ಅಧ್ಯಕ್ಷ ನಿತಿನ್ ನಾರಂಗ್ ಅವರು ಸಮಾರಂಭದಲ್ಲಿ ಈ ಘೋಷಣೆ ಮಾಡಿದರು. ತಂಡದ ಪ್ರತಿಯೊಬ್ಬ ಆಟಗಾರ ಮತ್ತು ಆಟಗಾರ್ತಿಯರು ತಲಾ ₹25 ಲಕ್ಷ ಪಡೆಯಲಿದ್ದಾರೆ. ಪುರುಷರ ಮತ್ತು ಮಹಿಳಾ ತಂಡಗಳ ಕೋಚ್ ಆಗಿದ್ದ (ಕ್ರಮವಾಗಿ) ಶ್ರೀನಾಥ್ ನಾರಾಯಣನ್ ಮತ್ತು ಅಭಿಜಿತ್ ಕುಂಟೆ ಅವರಿಗೆ ₹15 ಲಕ್ಷ ನೀಡಲಾಗುವುದು. ಭಾರತ ನಿಯೋಗದ ನೇತೃತ್ವ ವಹಿಸಿದ್ದ ಗ್ರ್ಯಾಂಡ್‌ಮಾಸ್ಟರ್ ದಿವ್ಯೇಂದು ಬರುವಾ ಅವರು ₹10ಲಕ್ಷ ಪಡೆಯಲಿದ್ದು, ಸಹಾಯಕ ತರಬೇತುದಾರರು ತಲಾ ₹7.5 ಲಕ್ಷ ಮೊತ್ತ ಪಡೆಯಲಿದ್ದಾರೆ.

ಇದಕ್ಕೆ ಮೊದಲು ಒಲಿಂಪಿಯಾಡ್ ತಂಡದ ಆಟಗಾರರು ಪ್ರಧಾನಿ ಮೋದಿ ಅವರನ್ನು ಭೇಟಿಯಾಗಿ ಸಂವಾದದಲ್ಲಿ ಭಾಗಿಯಾದರು. ಆಟಗಾರರ ಶ್ರದ್ಧೆ, ಸಮರ್ಪಣಾ ಭಾವವನ್ನು ಪ್ರಧಾನಿ ಪ್ರಶಂಸಿಸಿದರು.

ಮೋದಿ ಭೇಟಿಗಾಗಿ ಟೂರ್ನಿಯಿಂದ ಹಿಂದೆ ಸರಿದ ವಿದಿತ್ ಗುಜರಾತಿ

ನವದೆಹಲಿ (ಪಿಟಿಐ): ಚೆಸ್ ಒಲಿಂಪಿಯಾಡ್‌ನಲ್ಲಿ ಮೊದಲ ಬಾರಿ ಚಿನ್ನ ಗೆದ್ದ ತಂಡದಲ್ಲಿ ಗಮನ ಸೆಳೆಯುವ ಪ್ರದರ್ಶನ ನೀಡಿದ್ದ ವಿದಿತ್ ಗುಜರಾತಿ, ಅವರು ಪ್ರಧಾನಿ ನರೇಂದ್ರ ಮೋದಿ ಜೊತೆಗೆ ಭೇಟಿಯ ಉದ್ದೇಶದಿಂದ, ಅಜರ್‌ಬೈಜಾನ್‌ನ ಬಾಕುವಿನಲ್ಲಿ ಬುಧವಾರ ಆರಂಭವಾದ 10ನೇ ವುಗರ್ ಗಶಿಮೋವ್ ಮೆಮೋರಿಯಲ್ ಚೆಸ್ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ. ಅವರು ಈ ಟೂರ್ನಿಯಲ್ಲಿ ಹಾಲಿ ಚಾಂಪಿಯನ್ ಆಗಿದ್ದಾರೆ.

ಗುಜರಾತಿ ಅವರು ಹೋದ ವರ್ಷದ ಈ ಟೂರ್ನಿಯಲ್ಲಿ ಅರ್ಜುನ್ ಇರಿಗೇಶಿ ಅವರನ್ನು ಹಿಂದೆ ಹಾಕಿ ಪ್ರಶಸ್ತಿ ಗೆದ್ದಿದ್ದರು. ಒಲಿಂಪಿಯಾಡ್‌ನಲ್ಲಿ ಐತಿಹಾಸಿಕ ಚಿನ್ನ ಗೆದ್ದ ಭಾರತ ಓಪನ್ ವಿಭಾಗದ ತಂಡದಲ್ಲಿ ಡಿ.ಗುಕೇಶ್, ಆರ್.ಪ್ರಜ್ಞಾನಂದ, ಅರ್ಜುನ್ ಇರಿಗೇಶಿ ಜೊತೆ ವಿದಿತ್ ಕೂಡ ಆಡಿದ್ದರು.

ಚಲನವಲನದ ಮಾಹಿತಿ ನೀಡದ ಆರೋಪ

ವಿನೇಶ್‌ಗೆ ನಾಡಾ ನೋಟಿಸ್

ನವದೆಹಲಿ (ಪಿಟಿಐ): ಒಲಿಂಪಿಯನ್ ಕುಸ್ತಿಪಟು ವಿನೇಶ್ ಫೋಗಟ್ ಅವರು ತಮ್ಮ ಚಲನವಲನ ಮಾಹಿತಿಯನ್ನು ನಿಗದಿಯ ಅವಧಿಯಲ್ಲಿ ನೀಡಿಲ್ಲವೆಂಬ ಕಾರಣ ನೀಡಿರುವ ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕ (ನಾಡಾ) ನೋಟಿಸ್ ಜಾರಿಗೊಳಿಸಿದೆ.

ಮುಂದಿನ 14 ದಿನಗಳಲ್ಲಿ ಈ ನೋಟಿಸ್‌ಗೆ ಉತ್ತರಿಸಬೇಕು ಎಂದೂ ಸೂಚಿಸಲಾಗಿದೆ.

ನಾಡಾದಲ್ಲಿ ನೋಂದಾಯಿಸಿಕೊಂಡಿರುವ ಅಥ್ಲೀಟ್‌ಗಳು ತಮ್ಮ ಚಲನವಲನ ಮಾಹಿತಿಯನ್ನು ತಪ್ಪದೇ ನೀಡಬೇಕೆಂಬ ನಿಯಮವಿದೆ.

ಸೆಪ್ಟೆಂಬರ್ 9ರಂದು ವಿನೇಶ್ ಅವರನ್ನು ಉದ್ದೀಪನ ಮದ್ದು ಸೇವನೆ ಪರೀಕ್ಷೆಗೊಳಪಡಿಸಲು ನಾಡಾ ಅಧಿಕಾರಿಯೊಬ್ಬರು ಸೋನಿಪತ್‌ನ ಖಾರ್ಕೋಡಾಗೆ ತೆರಳಿದ್ದರು. ಅಲ್ಲಿ ವಿನೇಶ್ ಅವರು ತಮ್ಮ ಮನೆಯಲ್ಲಿ ಲಭ್ಯವಿರಲಿಲ್ಲ. ಅವರು ತಮ್ಮ ಅಲಭ್ಯತೆ ಕುರಿತೂ ತಿಳಿಸಿರಲಿಲ್ಲ.

'ಚಲನವಲನ ಮಾಹಿತಿಯನ್ನು ನೀಡುವಲ್ಲಿ ವಿನೇಶ್ ಅವರು ವಿಫಲರಾಗಿದ್ದಾರೆ. ಆದ್ದರಿಂದ ಔಪಚಾರಿಕ ನೋಟಿಸ್ ಜಾರಿ ಮಾಡಿದ್ದೇವೆ. 14 ದಿನಗಳೊಳಗೆ ವಿವರಣೆ ನೀಡಬೇಕು. ನಾವು ಅಂತಿಮ ನಿರ್ಧಾರ ಕೈಗೊಳ್ಳುವ ಮುನ್ನ ನಿಮ್ಮ ಹೇಳಿಕೆಗಳನ್ನು ನೀಡಿ' ಎಂದು ನಾಡಾ ನೋಟಿಸ್‌ನಲ್ಲಿ ಉಲ್ಲೇಖಿಸಿದೆ.

'ನಾಡಾ ಅಧಿಕಾರಿಯೊಬ್ಬರು ನಿಮ್ಮ ನಿವಾಸಕ್ಕೆ ಭೇಟಿ ನೀಡಿದ್ದರು. ಆ ಸಂದರ್ಭದಲ್ಲಿ ನೀವು ಪರೀಕ್ಷೆಗೆ ಲಭ್ಯರಾಗಲಿಲ್ಲ' ಎಂದೂ ಉಲ್ಲೇಖ ಮಾಡಲಾಗಿದೆ.

ವಿನೇಶ್ ಅವರು ಈಗ ತಮ್ಮ ಲೋಪವನ್ನು ಒಪ್ಪಿಕೊಳ್ಳಬೇಕು ಅಥವಾ ಅಧಿಕಾರಿ ಭೇಟಿ ನೀಡಿದ ಸ್ಥಳದಲ್ಲಿ ತಾವಿದ್ದ ಕುರಿತು ಸಾಕ್ಷಿ ಒದಗಿಸಬೇಕು.

ಆದರೆ ನಿಯಮದ ಪ್ರಕಾರ ಚಲನವಲನ ಮಾಹಿತಿ ನೀಡುವಿಕೆಯಲ್ಲಿ ಒಂದು ಬಾರಿ ಲೋಪವಾದರೆ ಅದನ್ನು ಉದ್ದೀಪನ ಮದ್ದು ತಡೆ ನಿಯಮ ಉಲ್ಲಂಘನೆ ಎಂದು ಪರಿಗಣಿಸುವುದಿಲ್ಲ. 12 ತಿಂಗಳುಗಳ ಅವಧಿಯಲ್ಲಿ ಮೂರು ಬಾರಿ ಮಾಹಿತಿ ನೀಡುವಿಕೆಯಲ್ಲಿ ಲೋಪ ಮಾಡಿದ್ದರೆ ನಿಯಮ ಉಲ್ಲಂಘನೆಯಾಗುತ್ತದೆ.

ವಿನೇಶ್ ಅವರು ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಮಹಿಳೆಯರ ಫ್ರೀಸ್ಟೈಲ್ ಕುಸ್ತಿ ಫೈನಲ್ ಪ್ರವೇಶಿಸಿದ್ದರು. ಆದರೆ ಚಿನ್ನದ ಪದಕದ ಬೌಟ್‌ಗೂ ಮುನ್ನ ತೂಕ ಪರೀಕ್ಷೆಯಲ್ಲಿ ಅವರು ಅನರ್ಹಗೊಂಡಿದ್ದರು. ಅದರ ಬೆನ್ನಲ್ಲಿಯೇ ಕುಸ್ತಿ ಕ್ರೀಡೆಗೆ ವಿದಾಯ ಘೋಷಿಸಿದ್ದರು. ಈಚೆಗಷ್ಟೇ ಅವರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗಿದ್ದರು.


ವಿನೇಶ್ ಫೋಗಟ್

ಗೆಲುವಿನ ಹೊಸ್ತಿಲಲ್ಲಿ ಬರೋಡಾ

ಪ್ರಜಾವಾಣಿ ವಾರ್ತೆ


ಕೃಣಾಲ್ ಪಾಂಡ್ಯ

ಬೆಂಗಳೂರು: ಕೃಣಾಲ್ ಪಾಂಡ್ಯ (114;141ಎ) ಅವರ ಅಮೋಘ ಶತಕದ ಬಲದಿಂದ ಬರೋಡಾ ತಂಡವು ಕ್ಯಾಪ್ಟನ್ ಕೆ. ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಮಹಾರಾಷ್ಟ್ರ ವಿರುದ್ಧ ಬೃಹತ್ ಮುನ್ನಡೆಯೊಂದಿಗೆ ಗೆಲುವಿನ ಹೊಸ್ತಿಲಲ್ಲಿದೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಎರಡನೇ ದಿನವಾದ ಬುಧವಾರ ಬ್ಯಾಟಿಂಗ್ ಮುಂದುವರಿಸಿದ ಬರೋಡಾ 74.2 ಓವರ್‌ಗಳಲ್ಲಿ 398 ರನ್ ಕಲೆ ಹಾಕಿ, ಮೊದಲ ಇನಿಂಗ್ಸ್‌ನಲ್ಲಿ 271 ರನ್‌ಗಳ ಮುನ್ನಡೆ ಪಡೆದಿದೆ. ಮಂಗಳವಾರ ಔಟಾಗದೇ 24 ರನ್ ಗಳಿಸಿದ್ದ ಕೃನಾಲ್ ಶತಕ ಪೂರೈಸಿದರು. ಅದರಲ್ಲಿ 14 ಬೌಂಡರಿ ಮತ್ತು ಮೂರು ಸಿಕ್ಸರ್‌ಗಳು ಸೇರಿದ್ದವು. ರಾಜ್ ಲಿಂಬಾನಿ (49), ಭಾರ್ಗವ್ ಭಟ್ (37) ಉಪಯುಕ್ತ ಕಾಣಿಕೆ ನೀಡಿದರು. ರಾಮಕೃಷ್ಣ ಘೋಷ್ ಮತ್ತು ರಾಜವರ್ಧನ್ ಹಂಗರಗೇಕರ್ ತಲಾ ನಾಲ್ಕು ವಿಕೆಟ್ ಪಡೆದರು.

ಮೊದಲ ಇನಿಂಗ್ಸ್‌ನಲ್ಲಿ 33.5 ಓವರ್‌ಗಳಲ್ಲಿ 127 ರನ್‌ಗೆ ಕುಸಿದಿದ್ದ ಮಹಾರಾಷ್ಟ್ರ ತಂಡವು ಎರಡನೇ ಇನಿಂಗ್ಸ್‌ನಲ್ಲೂ ಸಂಕಷ್ಟಕ್ಕೆ ಸಿಲುಕಿದ್ದು, ಇನಿಂಗ್ಸ್ ಸೋಲಿನ ಆತಂಕದಲ್ಲಿದೆ. ದಿನದಾಟದ ಅಂತ್ಯಕ್ಕೆ 34 ಓವರ್‌ಗಳಲ್ಲಿ 5 ವಿಕೆಟ್‌ಗೆ 121 ರನ್ ಗಳಿಸಿದ್ದು, ಇನಿಂಗ್ಸ್ ಸೋಲು ತಪ್ಪಿಸಲು ಇನ್ನೂ 150 ರನ್ ಸೇರಿಸಬೇಕಿದೆ.

ಮಹಾರಾಷ್ಟ್ರ ಪರ ಅಂಕೀತ್ ಬವಾನೆ (ಔಟಾಗದೇ 31) ಮತ್ತು ಅಜೀಂ ಕಾಜಿ (33) ಕೊಂಚ ಹೋರಾಟ ತೋರಿದರು. ಮೊದಲ ಇನಿಂಗ್ಸ್‌ನಲ್ಲಿ ತಲಾ ನಾಲ್ಕು ವಿಕೆಟ್ ಪಡೆದಿದ್ದ ಬರೋಡಾದ ಬಾಬಾಸಫಿ ಪಠಾಣ್ (51ಕ್ಕೆ 2) ಮತ್ತು ಲುಕ್ಮಾನ್ ಮೇರಿವಾಲಾ (33ಕ್ಕೆ 3) ಎರಡನೇ ಇನಿಂಗ್ಸ್‌ನಲ್ಲೂ ಎದುರಾಳಿ ತಂಡಕ್ಕೆ ಆಘಾತ ನೀಡಿದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಮಹಾರಾಷ್ಟ್ರ: 33.5 ಓವರ್‌ಗಳಲ್ಲಿ 127. ಬರೋಡಾ: 74.2 ಓವರ್‌ಗಳಲ್ಲಿ 398 (ಮಿತೇಶ್ ಪಟೇಲ್ 77, ಕೃಣಾಲ್ ಪಾಂಡ್ಯ 114, ರಾಜ್ ಲಿಂಬಾನಿ 49, ಭಾರ್ಗವ್ ಭಟ್; ರಾಮಕೃಷ್ಣ ಘೋಷ್ 86ಕ್ಕೆ 4 ಮತ್ತು ರಾಜವರ್ಧನ್ ಹಂಗರಗೇಕರ್ 91ಕ್ಕೆ 4). ಎರಡನೇ ಇನಿಂಗ್ಸ್: ಮಹಾರಾಷ್ಟ್ರ: 34 ಓವರ್‌ಗಳಲ್ಲಿ 5 ವಿಕೆಟ್‌ಗೆ 121 (ಅಕೀತ್ ಬವಾನೆ ಔಟಾಗದೇ 31, ಅಜೀಂ ಕಾಜಿ 33; ಲುಕ್ಮಾನ್ ಮೇರಿವಾಲಾ 33ಕ್ಕೆ 3, ಬಾಬಾಸಫಿ ಪಠಾಣ್ 51ಕ್ಕೆ 2).

50 ನಗರಗಳಲ್ಲಿ ಪ್ರತಿಭಾ ಶೋಧ: ಭುಟಿಯಾ



ನವದೆಹಲಿ (ಪಿಟಿಐ): ಯುವ, ಉತ್ಸಾಹಿ ಫುಟ್‌ಬಾಲ್ ಆಟಗಾರರನ್ನು ಅನ್ವೇಷಿಸಿ, ಪ್ರೋತ್ಸಾಹ ನೀಡುವ ಉದ್ದೇಶದಿಂದ ರಾಷ್ಟ್ರವ್ಯಾಪಿ ಬೃಹತ್ ಅಭಿಯಾನಕ್ಕೆ ಫುಟ್‌ಬಾಲ್ ತಾರೆ ಬೈಚುಂಗ್ ಭುಟಿಯಾ ಚಾಲನೆ ನೀಡಿದ್ದಾರೆ.

ಈ ಅಭಿಯಾನ ಬೆಂಗಳೂರು, ಮೈಸೂರು, ಮಂಗಳೂರು ಹಾಗೂ ಬೆಳಗಾವಿ ಸೇರಿ ದೇಶದ 50 ನಗರಗಳಲ್ಲಿ ನಡೆಯಲಿದೆ.

ಬೈಚುಂಗ್ ಭುಟಿಯಾ ಫುಟ್‌ಬಾಲ್ ಸ್ಕೂಲ್ ನಡೆಸುವ ಈ ಪ್ರತಿಭಾನ್ವೇಷಣೆ ಅಭಿಯಾನದಲ್ಲಿ 9ರಿಂದ 18 ವರ್ಷದೊಳಗಿನ ಆರು ಸಾವಿರ ಯುವ ಕ್ರೀಡಾಪಟುಗಳು ಭಾಗವಹಿಸುವ ನಿರೀಕ್ಷೆ ಹೊಂದಲಾಗಿದೆ.

ರ‍್ಯಾಂಕಿಂಗ್: ಪಂತ್ ಆರನೇ ಸ್ಥಾನಕ್ಕೆ



ದುಬೈ (ಪಿಟಿಐ): ಟೆಸ್ಟ್‌ಗೆ ಪುನರಾಗಮನದ ಆರಂಭದಲ್ಲೇ ಸೊಗಸಾದ ಶತಕ ಬಾರಿಸಿದ ವಿಕೆಟ್ ಕೀಪರ್–ಬ್ಯಾಟರ್ ರಿಷಭ್ ಪಂತ್ ಮತ್ತೆ ಐಸಿಸಿ ಕ್ರಮಾಂಕ ಪಟ್ಟಿಗೆ ಪ್ರವೇಶ ಪಡೆದಿದ್ದು ಆರನೇ ಸ್ಥಾನಕ್ಕೇರಿ ಗಮನ ಸೆಳೆದಿದ್ದಾರೆ. ಆದರೆ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರು ಹಿಂಬಡ್ತಿ ಪಡೆದಿದ್ದಾರೆ.

ಚೆನ್ನೈನಲ್ಲಿ ನಡೆದ ಬಾಂಗ್ಲಾದೇಶ ವಿರುದ್ಧ ಮೊದಲ ಟೆಸ್ಟ್‌ನಲ್ಲಿ ಪಂತ್ ಶತಕ ಬಾರಿಸಿದ್ದರು. ಅವರು 731 ಪಾಯಿಂಟ್ಸ್ ಪಡೆದಿದ್ದಾರೆ. ಆ ಟೆಸ್ಟ್‌ನ ಮೊದಲ ಇನಿಂಗ್ಸ್‌ನಲ್ಲಿ ಅರ್ಧ ಸತಕ ಬಾರಿಸಿದ್ದ ಆರಂಭ ಆಟಗಾರ ಯಶಸ್ವಿ ಜೈಸ್ವಾಲ್ (751) ಐದನೇ ಸ್ಥಾನಕ್ಕೇರಿದ್ದಾರೆ. ಮೊದಲ ಟೆಸ್ಟ್‌ನಲ್ಲಿ ವಿಫಲರಾಗಿದ್ದ ರೋಹಿತ್ ಶರ್ಮಾ ಐದು ಸ್ಥಾನ ಕೆಳಗಿಳಿದಿದ್ದು ಹತ್ತನೇ ಸ್ಥಾನದಲ್ಲಿದ್ದಾರೆ. ಅವರ ಬಳಿ 716 ರೇಟಿಂಗ್ ಪಾಯಿಂಟ್‌ಗಳಿವೆ. ಕೊಹ್ಲಿ ಕೂಡ ಐದು ಸ್ಥಾನ ಹಿಂಬಡ್ತಿ ಪಡೆದಿದ್ದು 12ನೇ ಸ್ಥಾನಕ್ಕಿಳಿದಿದ್ದಾರೆ.

ಟೆಸ್ಟ್ ಬೌಲರ್‌ಗಳ ಪಟ್ಟಿಯಲ್ಲಿ ಆಫ್ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ (854) ಮತ್ತು ವೇಗಿ ಜಸ್‌ಪ್ರೀತ್ ಬೂಮ್ರಾ (847) ಮೊದಲ ಎರಡು ಸ್ಥಾನದಲ್ಲಿದ್ದಾರೆ.


ಬೆಂಗಳೂರು ಯುನೈಟೆಡ್‌ನ ಧನುಷ್ (ಕೆಂಪು) ಮತ್ತು ಇಂಡಿಪೆಂಡೆಂಟ್ಸ್ ತಂಡದ ಪ್ರಶಾಂತ್ (ನೀಲಿ) ಚೆಂಡಿಗಾಗಿ ಸೆಣಸಾಟ ನಡೆಸಿದರು
–ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

ಶ್ರೀಕಾಂತ್, ಆಯುಷ್‌ಗೆ ಸುಲಭ ಜಯ

ಮಕಾವು (ಪಿಟಿಐ): ಭಾರತದ ಪ್ರಮುಖ ಆಟಗಾರ ಕಿದಂಬಿ ಶ್ರೀಕಾಂತ್ ಅವರು ಸ್ವದೇಶದ ಆಯುಷ್ ಶೆಟ್ಟಿ ಮತ್ತು ತಸ್ನಿಮ್ ಮಿರ್ ಜೊತೆ ಮಕಾವು ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಬುಧವಾರ ಪುರುಷರ ಸಿಂಗಲ್ಸ್ ಎರಡನೇ ಸುತ್ತಿಗೆ ಮುನ್ನಡೆದರು.

2021ರ ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ವಿಜೇತ ಶ್ರೀಕಾಂತ್, ಮೇ ತಿಂಗಳಲ್ಲಿ ಗಾಯಾಳಾದ ನಂತರ ಭಾಗವಹಿಸುತ್ತಿರುವ ಮೊದಲ ಟೂರ್ನಿ ಇದಾಗಿದೆ. ಇಲ್ಲಿ ಆರನೇ ಶ್ರೇಯಾಂಕ ಪಡೆದಿರುವ ಶ್ರೀಕಾಂತ್ ಮೊದಲ ಸುತ್ತಿನಲ್ಲಿ 21–14, 21–15 ರಿಂದ ಇಸ್ರೇಲ್‌ನ ಡಾನಿಲ್ ಡುವೊವೆಂಕೊ ಅವರನ್ನು ಸೋಲಿಸಿದರು.

2023ರ ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದಿದ್ದ ಆಯುಷ್ ಮೊದಲ ಸುತ್ತಿನ ಇನ್ನೊಂದು ಪಂದ್ಯದಲ್ಲಿ 21–13, 21–5 ರಿಂದ ಸ್ವದೇಶದ ಆಲಾಪ್ ಮಿಶ್ರಾ ಮೇಲೆ ಜಯಗಳಿಸಲು ಅಷ್ಟೇನೂ ಕಷ್ಟಪಡಲಿಲ್ಲ.

ತಸ್ನಿಮ್ 15–21, 21–18, 22–20 ರಲ್ಲಿ ದೇವಿಕಾ ಶಿಹಾಗ್ ಮೇಲೆ ಜಯಗಳಿಸಿ ಮಹಿಳೆಯರ ಸಿಂಗಲ್ಸ್ ಎರಡನೇ ಸುತ್ತಿಗೆ ತಲುಪಿದರು.

ಎರಡನೇ ಸುತ್ತಿನಲ್ಲಿ ಭಾರತೀಯ ಆಟಗಾರರ ವ್ಯವಹಾರವಾಗಿರುವ ಪಂದ್ಯದಲ್ಲಿ ಶ್ರೀಕಾಂತ್, ಆಯುಷ್ ವಿರುದ್ಧ ಆಡಲಿದ್ದಾರೆ. ತಸ್ನಿಮ್, ನಾಲ್ಕನೇ ಶ್ರೇಯಾಂಕದ ಟೊಮೊಕಾ ಮಿಯಾಝಾಕಿ ಅವರನ್ನು ಎದುರಿಸಲಿದ್ದಾರೆ.

ಡ್ರಾ ಪಂದ್ಯದಲ್ಲಿ ಯುನೈಟೆಡ್–ಇಂಡಿಪೆಂಡೆಂಟ್ ಎಫ್‌ಸಿ

ಬೆಂಗಳೂರು: ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡವು ಸಿ. ಪುಟ್ಟಯ್ಯ ಸ್ಮಾರಕ ಕಪ್ ಟೂರ್ನಿ ಪಂದ್ಯದಲ್ಲಿ ಬೆಂಗಳೂರು ಇಂಡಿಪೆಂಡೆಂಟ್ ಎಫ್‌ಸಿ ಜೊತೆ ಡ್ರಾ ಸಾಧಿಸಿತು.

ಬೆಂಗಳೂರು ಫುಟ್‌ಬಾಲ್ ಮೈದಾನದಲ್ಲಿ ಬುಧವಾರ ನಡೆದ 'ಡಿ' ಗುಂಪಿನ ಪಂದ್ಯವು ಗೋಲುರಹಿತವಾಗಿ ಕೊನೆಗೊಂಡಿತು. ಎರಡೂ ತಂಡಗಳು ಆಕ್ರಮಣಕಾರಿ ಆಟ ಆಡಿದವು.

ಇಂದಿನ ಪಂದ್ಯಗಳು: ರೆಬೆಲ್ಸ್ ಎಫ್‌ಸಿ– ಕೊಡಗು ಎಫ್‌ಸಿ (ಮಧ್ಯಾಹ್ನ 1). ಪರಿಕ್ರಮ ಎಫ್‌ಸಿ– ಎಫ್‌ಸಿ ಅಗ್ನಿಪುತ್ರ (ಸಂಜೆ 4)

ವಿಶ್ವಕಪ್: 18 ವರ್ಷದೊಳಗಿನವರಿಗೆ ಉಚಿತ ಪ್ರವೇಶಕ್ಕೆ ನಿರ್ಧಾರ

ದುಬೈ (ಪಿಟಿಐ): ಮುಂದಿನ ತಿಂಗಳು ಇಲ್ಲಿ ನಡೆಯಲಿರುವ ಮಹಿಳೆಯರ ಟಿ20 ವಿಶ್ವಕಪ್ ಟೂರ್ನಿಯ ಪಂದ್ಯಗಳನ್ನು ವೀಕ್ಷಿಸಲು 18 ವರ್ಷದವರಿಗೆ ಉಚಿತ ಪ್ರವೇಶ ನೀಡಲು ಅಂತರ ರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ನಿರ್ಧರಿಸಿದೆ. ಅಲ್ಲದೇ 18 ವರ್ಷ ಮೇಲಿನವರಿಗಾಗಿ ಇರುವ ಟಿಕೆಟ್‌ಗಳಿಗೆ ಅತ್ಯಂತ ಕಡಿಮೆ ದರ ನಿಗದಿಪಡಿಸಲಾಗಿದೆ.

'ಟಿಕೆಟ್‌ಗಳು ಹೆಚ್ಚು ದುಬಾರಿಯಾಗಿಲ್ಲ. ಎಲ್ಲರ ಕೈಗೆಟುಕುವಂತೆ ದರಗಳನ್ನು ನಿಗದಿ ಮಾಡಲಾಗಿದೆ. ಯುಎಇಯ 5 ದಿರಾಮ್ (₹ 114) ಬೆಲೆಯ ಟಿಕೆಟ್‌ಗಳು ಲಭ್ಯ ಇವೆ. ಡಬಲ್ ಹೆಡರ್ (ಒಂದೇ ದಿನ ಎರಡು ಪಂದ್ಯಗಳು) ಪಂದ್ಯಗಳಿಗೆ 40 ದಿರಾಮ್ (₹910) ನಿಗದಿ ಪಡಿಸಲಾಗಿದೆ. ಒಂದೇ ಟಿಕೆಟ್‌ನಲ್ಲಿ ಎರಡೂ ಪಂದ್ಯಗಳನ್ನು ವೀಕ್ಷಿಸಲು ಸಾಧ್ಯವಿದೆ' ಎಂದು ಐಸಿಸಿ ಪ್ರಕಟಣೆಯಲ್ಲಿ ತಿಳಿಸಿದೆ.

ಇರಾನಿ ಟ್ರೋಫಿಗೆ ಕನ್ನಡಿಗ ಅಭಿಜಿತ್ ಟಿ.ವಿ. ಅಂಪೈರ್



ಬೆಂಗಳೂರು: ಕನ್ನಡಿಗ ಅಭಿಜಿತ್ ಬೆಂಗೇರಿ ಅವರು ಇರಾನಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಟಿ.ವಿ. ಅಂಪೈರ್ ಆಗಿ ಕಾರ್ಯನಿರ್ವಹಿಸುವರು.

ಧಾರವಾಡ ವಲಯದ ಅಭಿಜಿತ್ ಅವರು ಕೆಲವರ್ಷಗಳಿಂದ ಬಿಸಿಸಿಐ ಪ್ಯಾನೆಲ್‌ನಲ್ಲಿ ಸ್ಥಾನ ಪಡೆದಿದ್ದಾರೆ. ಇತ್ತೀಚೆಗೆ ದುಲೀಪ್ ಟ್ರೋಫಿ ಟೂರ್ನಿಯ ಪಂದ್ಯ, ಮಹಿಳಾ ಪ್ರೀಮಿಯರ್ ಲೀಗ್ ಟೂರ್ನಿಗಳಲ್ಲಿ ಅಂಪೈರ್ ಆಗಿ ಕಾರ್ಯನಿರ್ವಹಿಸಿದ್ದರು. ಒಟ್ಟು 22 ಪ್ರಥಮ ದರ್ಜೆ ಪಂದ್ಯಗಳು, 42 ಲಿಸ್ಟ್ ಎ ಹಾಗೂ 57 ಟಿ20 ಪಂದ್ಯಗಳಲ್ಲಿ ಅಂಪೈರ್ ಆಗಿ ಕಾರ್ಯ ನಿರ್ವಹಿಸಿದ್ದಾರೆ.

'ಪ್ರತಿಷ್ಠಿತ ಟೂರ್ನಿಯಲ್ಲಿ ಕಾರ್ಯನಿರ್ವಹಿಸಲು ಅವಕಾಶ ಸಿಕ್ಕಿರುವುದು ಸಂತಸವಾಗಿದೆ. ಇರಾನಿ ಟ್ರೋಫಿ ಟೂರ್ನಿಯಲ್ಲಿ ಟಿ.ವಿ. ಅಂಪೈರ್ ಆಗಿ ಕೆಲಸ ಮಾಡುವುದು ಉತ್ತಮ ಅನುಭವವಾಗಲಿದೆ' ಎಂದು 39 ವರ್ಷದ ಅಭಿಜಿತ್ 'ಪ್ರಜಾವಾಣಿ'ಗೆ ತಿಳಿಸಿದರು.